ಬುಧವಾರ, ಆಗಸ್ಟ್ 28, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 240 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಕೃತಕ ಬುದ್ಧಿಮತ್ತೆಯನ್ನು ಉಪಯೋಗಿಸಿಕೊಂಡು ಹುಡುಕಾಟದ ಫಲಿತಾಂಶಗಳನ್ನು ಹೆಚ್ಚು ನಿಖರವಾಗಿಸುತ್ತದೆ, 'ಗೂಗಲ್ ಎಐ ಓವರ್‌ವ್ಯೂ'

ಆಳ-ಅಗಲ
ಪಿಂಚಣಿ ಯೋಜನೆ: ಬದಲಾಗಿದ್ದೇಕೆ?
ಶಿವಾಜಿ ಪ್ರತಿಮೆ ಕುಸಿತ ರಾಜಕೀಯ ವಾಕ್ಸಮರ 11
ಉಕ್ರೇನ್: ದಾಳಿ ಮುಂದುವರಿಕೆ 10
ರಾಜ್ಯಪಾಲರ ಅನುಮತಿ ವಿರೋಧಿಸಿ ಪ್ರತಿಭಟನೆ 5

ಸೆನ್ಸೆಕ್ಸ್	ನಿಫ್ಟಿ	₹/$
81,711 ▲	25,017 ▲	83.93 ▼

ಕೆಪಿಎಸ್‌ಸಿ ಪರೀಕ್ಷೆ: ಪ್ರಶ್ನೆಗಳ ಕನ್ನಡ ಅನುವಾದದಲ್ಲಿ ಎಡವಟ್ಟು

ಬೆಚ್ಚಿಬಿದ್ದ ಅಭ್ಯರ್ಥಿಗಳು

'ಗುಟೇಶನ್ ಟ್ರಾನ್ಸ್ ಫಿರೇಷನ್ ಪುಲ್ಗೆ ಕಾರಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನೀರಿನ ಸಾಗಣೆಯ ಒಟ್ಟಾರೆ ಪ್ರಕ್ರಿಯೆಯಲ್ಲಿ ರೂಟ್ ಒತ್ತಡವು ಮಧ್ಯಮ ತಳ್ಳುವಿಕೆಯನ್ನು ಒದಗಿಸುತ್ತದೆ', 'ಹೆಚ್ಚಿನ ಸಸ್ಯಗಳು ತಮ್ಮ ನೀರಿನ ಅಗತ್ಯವನ್ನು ಟ್ರಾನ್ಸ್ ಫಿರೇಷನ್ ಪುಲ್ ಮೂಲಕ ಪೂರೈಸುತ್ತದೆ', 'ಕ್ಸೈಲೆಮ್ ವೆಸಲ್ಸ್‌ನಲ್ಲಿ ನೀರಿನ ಅಣುವಿನ ನಿರಂತರ ಸರಪಳಿಗಳನ್ನು ಮರು ಸ್ಥಾಪಿಸುವುದು ಬೇರಿನ ಒತ್ತಡದ ದೊಡ್ಡ ಕೆಲಸವಾಗಿರುತ್ತದೆ. ಇದು ಆಗಾಗ್ಗೆ ಟ್ರಾನ್ಸಿಫಿರೇಷನ್ ಮೂಲಕ ರಚಿಸಲಾದ ಅಗಾಧವಾದ ಒತ್ತಡದಲ್ಲಿ ಒಡೆಯುತ್ತದೆ. ಗುಟೇಶನ್ ಟ್ರಾನ್ಸ್ ಫಿರೇಷನ್ ಪುಲ್ಗೆ ಕಾರಣವಾಗಿದೆ'...

– ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಗೆಜೆಟೆಡ್ ಪ್ರೊಬೇಷನರಿ 384 ಹುದ್ದೆಗಳಿಗೆ ನೇಮಕಾತಿಗೆ ಮಂಗಳವಾರ ನಡೆಸಿದ ಪೂರ್ವಭಾವಿ ಪರೀಕ್ಷೆಯ ಎರಡನೇ ಪತ್ರಿಕೆಯಲ್ಲಿ ಕನ್ನಡದಲ್ಲಿ ಮುದ್ರಿತವಾಗಿದ್ದ ಕೆಲವು ಪ್ರಶ್ನೆಗಳ ಮಾದರಿಗಳಿವು. ಪ್ರಶ್ನೆಪತ್ರಿಕೆಯುದ್ದಕ್ಕೂ 'ಅರ್ಥ'ವಾಗದ ಇಂತಹ ವಾಕ್ಯಗಳೇ ತುಂಬಿವೆ. ಈ ಪ್ರಶ್ನೆಗಳು ಏನೆಂದೂ ಗೊತ್ತಾಗದೇ ಪರೀಕ್ಷಾರ್ಥಿಗಳು ಕಕ್ಕಾಬಿಕ್ಕಿಯಾದರು.

ಅಂಕಿ ಅಂಶ

384 ಒಟ್ಟು ಹುದ್ದೆಗಳು	1,31,885 (ಶೇ 62.52) ಪರೀಕ್ಷೆಗೆ ಹಾಜರು
2,10,916 ಒಟ್ಟು ಅಭ್ಯರ್ಥಿಗಳು	79,031 ಗೈರಾದವರು

ಇಂಗ್ಲಿಷ್ ಪ್ರಶ್ನೆಗಳನ್ನು ಎಐ ತಂತ್ರಜ್ಞಾನದ ನೆರವಿನಿಂದ ಭಾಷಾಂತರಿಸಿದಂತೆ ಇದೆ. ಕನ್ನಡ ಮಾಧ್ಯಮದ ಅನೇಕ ಅಭ್ಯರ್ಥಿಗಳು ಪ್ರಶ್ನೆಗಳನ್ನು ಓದಿ, ಅರ್ಥ ಮಾಡಿಕೊಳ್ಳಲು ಸಾಧ್ಯವಾಗಲಿಲ್ಲ. ಕೆಲವರು, ಇಂಗ್ಲಿಷ್‌ನಲ್ಲಿದ್ದ ಪ್ರಶ್ನೆಗಳನ್ನು ಓದಿ ಉತ್ತರವನ್ನು ಬರೆದಿದ್ದೂ ನಡೆದಿದೆ. ಅರ್ಥವಾಗದೇ ಇದ್ದ ಕನ್ನಡದ ಬಳಕೆಯ ವಿಧಾನದಿಂದ ಸಿಟ್ಟಿಗೆದ್ದ ಗ್ರಾಮೀಣ ಭಾಗದ ಅನೇಕ ಅಭ್ಯರ್ಥಿಗಳು ತಮಗೆ ಅನ್ಯಾಯವಾಗಿದೆ ಎಂದು ಅಲವತ್ತುಕೊಂಡರು.

ಈ ಹಿಂದೆ ನಡೆದ ಪರೀಕ್ಷೆಗಳಲ್ಲಿ ಪಠ್ಯಕ್ರಮದಲ್ಲಿರುವ ಮಾದರಿಯಲ್ಲಿಯೇ ಪ್ರಶ್ನೆಗಳನ್ನು ಕೇಳಲಾಗುತ್ತಿತ್ತು. ಆದರೆ, ಈ ಬಾರಿ ಯುಪಿಎಸ್‌ಸಿ ಮಾದರಿಯಲ್ಲಿ ಪ್ರಶ್ನೆಗಳಿದ್ದವು. ಪ್ರಶ್ನೆಪತ್ರಿಕೆಯ ಸ್ವರೂಪ ಕೂಡಾ ಗೊಂದಲ ಮೂಡಿಸಿತು ಎಂದು ಅಭ್ಯರ್ಥಿಗಳು ಹೇಳಿದರು.

'ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರಾಮುಖ್ಯತೆದ ವಿಷಯಗಳನ್ನು ಒಳಗೊಂಡಂತೆ ಸಾಮಾನ್ಯ ಅಧ್ಯಯನ ಮತ್ತು ಮಾನವಿಕ ಶಾಸ್ತ್ರ ವಿಷಯಕ್ಕೆ ಸಂಬಂಧಿಸಿದ ಪತ್ರಿಕೆ– 1 ಬೆಳಿಗ್ಗೆ 10ರಿಂದ ಮಧ್ಯಾಹ್ನ 12 ರವರೆಗೆ ನಡೆಯಿತು. ಈ ಪತ್ರಿಕೆ ಕ್ಲಿಷ್ಟ-ಕಷ್ಟಕರವಾಗಿತ್ತು. ಪ್ರಶ್ನೆಗಳು ದೀರ್ಘವಾಗಿದ್ದುವು. ಅಲ್ಲದೆ, ಸಂಕೀರ್ಣ, ಗೊಂದಲ ಮೂಡಿಸುವಂಥ ಪ್ರಶ್ನೆಗಳನ್ನು ಕೇಳಿದ್ದರಿಂದ ಕೆಲಹೊತ್ತು ತಬ್ಬಿಬ್ಬಾಗಬೇಕಾಯಿತು. ಕೆಲವು ಪ್ರಶ್ನೆಗಳಲ್ಲಿ ಇಡೀ ಪ್ಯಾರಾ ಒಂದು ವಾಕ್ಯವಾಗಿತ್ತು. ಹೀಗಾಗಿ ಪ್ರಶ್ನೆಗಳನ್ನು ಪೂರ್ತಿಯಾಗಿ ಓದಿ ಅರ್ಥ ಮಾಡಿಕೊಳ್ಳುವುದೇ ದೊಡ್ಡ ಸಾಹಸವಾಯಿತು' ಎಂದು ಕೆಲವು ಅಭ್ಯರ್ಥಿಗಳು ದೂರಿದರು.

7ನೇ ಪುಟ ನೋಡಿ

ಪರೀಕ್ಷಾ ನಿಯಂತ್ರಕರ ಟ್ವೀಟ್; ಡಿಲೀಟ್

'ಪ್ರಶ್ನೆಪತ್ರಿಕೆ ಅತ್ಯಂತ ಕ್ಲಿಷ್ಟಕರವಾಗಿತ್ತು' ಎಂದು ಕನ್ನಡ ತರ್ಜುಮೆಯ ಭಾಗದ ಸಹಿತ ಮತ್ತು ಮೀಮ್‌ಗಳನ್ನೂ ಸೇರಿಸಿ ಕೆಲವು ಅಭ್ಯರ್ಥಿಗಳು ಟ್ವೀಟ್ ಮಾಡಿದ್ದರು. ಅದಕ್ಕೆ ಪ್ರತಿಕ್ರಿಯಿಸಿರುವ ಕೆಪಿಎಸ್‌ಸಿ ಪರೀಕ್ಷಾ ನಿಯಂತ್ರಕ ಗ್ಯಾನೇಂದ್ರ ಗಂಗ್ವಾರ, 'ಅಭ್ಯರ್ಥಿಗಳ ಈ ಪ್ರತಿಕ್ರಿಯೆಗಳು ಮತ್ತು ಈ ರೀತಿಯ ಮೀಮ್‌ಗಳು ವೈಯಕ್ತಿಕವಾಗಿ ನನಗೆ ಇಷ್ಟ. ಕಷ್ಟಪಟ್ಟು ಓದಿದ ಮತ್ತು ಬುದ್ಧಿವಂತ ಅಭ್ಯರ್ಥಿಗಳು ಈ ಪ್ರಶ್ನೆಪತ್ರಿಕೆಯಿಂದ ಸಂತಸಪಟ್ಟಿರಬಹುದು' ಎಂದು ಟ್ವೀಟ್ ಮಾಡಿ, ಕೆಲವೇ ಕ್ಷಣಗಳಲ್ಲಿ ಅದನ್ನು ಡಿಲೀಟ್ ಮಾಡಿದ್ದಾರೆ.

ಸಹಚರರೂ ಬೇರೆ ಕಾರಾಗೃಹಗಳಿಗೆ : ನ್ಯಾಯಾಲಯದ ಆದೇಶ • ಇಂದೇ ಸ್ಥಳಾಂತರ ಸಾಧ್ಯತೆ

ಬಳ್ಳಾರಿ ಜೈಲಿಗೆ ನಟ ದರ್ಶನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಲೆ ಪ್ರಕರಣದಲ್ಲಿ ಪರಪ್ಪನ ಅಗ್ರಹಾರ ಜೈಲಿನಲ್ಲಿದ್ದಾಗ, ನಿಯಮ ಉಲ್ಲಂಘಿಸಿ ವಿಶೇಷ ಆತಿಥ್ಯ ಪಡೆದಿದ್ದ ನಟ ದರ್ಶನ್ ಹಾಗೂ ಅವರ ಸಹಚರರನ್ನು ರಾಜ್ಯದ ಬೇರೆ ಬೇರೆ ಕಾರಾಗೃಹಗಳಿಗೆ ಸ್ಥಳಾಂತರಿಸಲು 24ನೇ ಎಸಿಎಂಎಂ ನ್ಯಾಯಾಲಯ ಮಂಗಳವಾರ ಅನುಮತಿ ನೀಡಿದೆ.

ದರ್ಶನ್ ಅವರನ್ನು ಬಳ್ಳಾರಿ ಜೈಲಿಗೆ ಸ್ಥಳಾಂತರಿಸಲು ನ್ಯಾಯಾಲಯ ಒಪ್ಪಿಗೆ ನೀಡಿದೆ. ಬುಧವಾರ ಬೆಳಿಗ್ಗೆಯೇ ಸ್ಥಳಾಂತರ ಮಾಡುವ ಸಾಧ್ಯತೆ ಇದೆ. ನಟನ ಆಪ್ತೆ ಪವಿತ್ರಾಗೌಡ ಅವರನ್ನು ಪರಪ್ಪನ ಅಗ್ರಹಾರದಲ್ಲೇ ಇರಿಸುವಂತೆ ಸೂಚಿಸಲಾಗಿದೆ.

ಜೈಲಿನ ಬ್ಯಾರಕ್ ಎದುರು ದರ್ಶನ್, ರೌಡಿಶೀಟರ್ ವಿಲ್ಸನ್ ಗಾರ್ಡನ್ ನಾಗ, ಕುಳ್ಳ ಸೀನ ಹಾಗೂ ದರ್ಶನ್ ವ್ಯವಸ್ಥಾಪಕ ನಾಗರಾಜ್ ಅವರು ಕಾಫಿ ಕಪ್ ಹಿಡಿದು, ಸಿಗರೇಟ್ ಸೇದುತ್ತಾ ಹರಟೆ ಹೊಡೆಯುತ್ತಿದ್ದ ಫೋಟೊವೊಂದು ಬಹಿರಂಗವಾಗಿತ್ತು.

ಬಂದಿಗಳಿಗೆ ಜೈಲಿನೊಳಗೆ ವಿಲಾಸಿ ಜೀವನ ನಡೆಸಲು ಅನುವು ಮಾಡಿಕೊಟ್ಟಿದ್ದ ಜೈಲು ಮುಖ್ಯ ಅಧೀಕ್ಷಕ ವಿ.ಶೇಷುಮೂರ್ತಿ ಸೇರಿ ಒಂಬತ್ತು ಮಂದಿ ಅಧಿಕಾರಿಗಳು, ಸಿಬ್ಬಂದಿಯನ್ನು ಅಮಾನತು ಮಾಡಲಾಗಿತ್ತು. ಮೂರು ಎಫ್‌ಐಆರ್ ದಾಖಲಿಸಿ, ಐಪಿಎಸ್ ಅಧಿಕಾರಿ ನೇತೃತ್ವದಲ್ಲಿ ಪ್ರತ್ಯೇಕವಾಗಿ ಉನ್ನತ ಮಟ್ಟದ ತನಿಖೆಗೆ ಆದೇಶಿಸಲಾಗಿತ್ತು.

ಅದರ ಬೆನ್ನಲ್ಲೇ ದರ್ಶನ್ ಮತ್ತು ಸಹಚರರನ್ನು ರಾಜ್ಯದ ವಿವಿಧ ಕಾರಾಗೃಹಗಳಿಗೆ ಸ್ಥಳಾಂತರಿಸಲು ಅನುಮತಿ ಕೋರಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಪ್ರಭಾರ ಮುಖ್ಯ ಅಧೀಕ್ಷಕರು ನ್ಯಾಯಾಲಯಕ್ಕೆ ಮಂಗಳವಾರ ಅರ್ಜಿ ಸಲ್ಲಿಸಿದ್ದರು. ಅರ್ಜಿಯ ತುರ್ತು ವಿಚಾರಣೆ ನಡೆಸಿದ ನ್ಯಾಯಾಲಯ, ದರ್ಶನ್ ಸೇರಿದಂತೆ ಹತ್ತು ಆರೋಪಿಗಳನ್ನು ವಿವಿಧ ಜಿಲ್ಲೆಗಳಲ್ಲಿರುವ ಎಂಟು ಕಾರಾಗೃಹಗಳಿಗೆ ಸ್ಥಳಾಂತರಿಸಲು ಅನುಮತಿ ನೀಡಿ ಆದೇಶ ಹೊರಡಿಸಿದೆ.

'ಬುಧವಾರ ಬೆಳಿಗ್ಗೆಯೇ ಎಲ್ಲ ಆರೋಪಿಗಳನ್ನು ಪೊಲೀಸ್ ಭದ್ರತೆಯಲ್ಲಿ ಸ್ಥಳಾಂತರ ಮಾಡಲಾಗುವುದು' ಎಂದು ಮೂಲಗಳು ತಿಳಿಸಿವೆ.

ಈ ಪ್ರಕರಣದಲ್ಲಿ ನ್ಯಾಯಾಂಗ ಬಂಧನಕ್ಕೆ ಕೋರ್ಟ್ ಆದೇಶಿಸಿದ್ದ ನಂತರ 13 ಆರೋಪಿಗಳನ್ನು ಪರಪ್ಪನ ಅಗ್ರಹಾರ ಕಾರಾಗೃಹದ ವಶಕ್ಕೆ ನೀಡಲಾಗಿತ್ತು. ಜೀವ ಬೆದರಿಕೆಯಿದ್ದ ನಾಲ್ವರನ್ನು ತುಮಕೂರು ಕಾರಾಗೃಹಕ್ಕೆ ಕಳುಹಿಸಲಾಗಿತ್ತು.

ದರ್ಶನ್ ಅವರನ್ನು ಬಳ್ಳಾರಿ ಜೈಲಿಗೆ ಸ್ಥಳಾಂತರಿಸುವ ಸಂಬಂಧ ಅಲ್ಲಿನ ಕಾರಾಗೃಹದ ಅಧೀಕ್ಷಕರಿಂದ ಮಾಹಿತಿ ಪಡೆಯಲಾಗಿದೆ. ಭದ್ರತಾ ವ್ಯವಸ್ಥೆ, ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಸುಸ್ಥಿತಿಯಲ್ಲಿ ಇರಿಸುವಂತೆ ಸೂಚಿಸಲಾಗಿದೆ ಎಂದು ಮೂಲಗಳು ಹೇಳಿವೆ. ದರ್ಶನ್ ಅವರನ್ನು ಇನ್ನು ಮುಂದೆ ಸಿ.ಸಿ.ಟಿ.ವಿ ಕ್ಯಾಮೆರಾಗಳ ಕಣ್ಗಾವಲಿನಲ್ಲಿ ಇರಿಸಲು ಕಾರಾಗೃಹದ ಹಿರಿಯ ಅಧಿಕಾರಿಗಳು ಸೂಚನೆ ನೀಡಿದ್ದಾರೆ.

5ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 5

ಯಾರಿಗೆ, ಯಾವ ಜೈಲು?

ಆರೋಪಿ ಹೆಸರು	ಜಿಲ್ಲೆ
ದರ್ಶನ್	ಬಳ್ಳಾರಿ
ಪವನ್, ರಾಘವೇಂದ್ರ, ನಂದೀಶ್	ಮೈಸೂರು
ಜಗದೀಶ್, ಲಕ್ಷ್ಮಣ್	ಶಿವಮೊಗ್ಗ
ಧನರಾಜ್	ಧಾರವಾಡ
ವಿನಯ್	ವಿಜಯಪುರ
ನಾಗರಾಜ್	ಕಲಬುರಗಿ
ಪ್ರದೂಷ್	ಬೆಳಗಾವಿ
ಪವಿತ್ರಾಗೌಡ, ಅನುಕುಮಾರ್, ದೀಪಕ್	ಪರಪ್ಪನ ಅಗ್ರಹಾರದಲ್ಲೇ ಮುಂದುವರಿಕೆ

ಜೀವ ಬೆದರಿಕೆಯಿದ್ದ ರವಿ, ಕಾರ್ತಿಕ್, ನಿಖಿಲ್, ಕೇಶವಮೂರ್ತಿ ಅವರನ್ನು ಜೂನ್‌ನಲ್ಲೇ ತುಮಕೂರು ಜೈಲಿಗೆ ಸ್ಥಳಾಂತರಿಸಲಾಗಿದೆ

ದರ್ಶನಾತಿಥ್ಯಕ್ಕೆ ಬಣಗಳ ಮಧ್ಯೆ ಗಲಾಟೆ

ಆರೋಪಿ ದರ್ಶನ್ ಅವರಿಗೆ ವಿಶೇಷ ಆತಿಥ್ಯ ಹಾಗೂ ನಟನ ಜತೆಗೆ ಆತ್ಮೀಯತೆ ಬೆಳೆಸುವ ವಿಚಾರಕ್ಕೆ ಎರಡು ರೌಡಿ ಗುಂಪುಗಳ ಮಧ್ಯೆ ಉಂಟಾದ ಗಲಾಟೆಯಿಂದ 'ರೌಂಡ್ ಟೇಬಲ್ ಪಾರ್ಟಿ', ಬ್ಯಾರಕ್ ಒಳಗಿರುವ ಫೋಟೊಗಳು ಬಹಿರಂಗಗೊಂಡಿವೆ ಎಂಬುದು ಗೊತ್ತಾಗಿದೆ.

ದರ್ಶನ್

ಬೇರೆ ಬೇರೆ ಪ್ರಕರಣಗಳಲ್ಲಿ ಜೈಲಿನಲ್ಲಿರುವ ರೌಡಿಗಳಾದ ಬೇಕರಿ ರಘು ಹಾಗೂ ವಿಲ್ಸನ್ ಗಾರ್ಡನ್ ನಾಗ ಮಧ್ಯೆ ಉಂಟಾದ ಗಲಾಟೆಯಿಂದ ದರ್ಶನಾತಿಥ್ಯದ ಫೋಟೊಗಳು ಹೊರಬಂದಿವೆ ಎನ್ನಲಾಗಿದೆ.

'ಸೈಕಲ್ ರವಿಯ ಬಲಗೈ ಬಂಟ ಬೇಕರಿ ರಘು ಪರಿಚಯ ಮೊದಲೇ ದರ್ಶನ್‌ಗಿತ್ತು. ಆದರೆ, ವಿಲ್ಸನ್ ಗಾರ್ಡನ್ ನಾಗ ಪರಿಚಯ ಇರಲಿಲ್ಲ. ದರ್ಶನ್ ಪರಪ್ಪನ ಅಗ್ರಹಾರ ಸೇರಿದ ಬಳಿಕ ರಘು ಉಸ್ತುವಾರಿಯಲ್ಲಿ ವಿಶೇಷ ಆತಿಥ್ಯ ದೊರೆಯುತ್ತಿತ್ತು. ರಘು ತನ್ನ ಪರಿಚಯಸ್ಥರಿಂದ ನಟನಿಗೆ ಕೆಲವು ಸೌಲಭ್ಯಗಳನ್ನು ಒದಗಿಸುತ್ತಿದ್ದ. ದಿನ ಕಳೆದಂತೆ ದರ್ಶನ್ ಅವರು ರಘುವಿನಿಂದ ದೂರವಾದರು ಎನ್ನಲಾಗಿದೆ. ವಿಲ್ಸನ್ ಗಾರ್ಡನ್ ನಾಗನ ಸ್ನೇಹ ಬೆಳೆಸಿದ್ದರು. ನಂತರ, ನಾಗನೇ ದರ್ಶನ್‌ಗೆ ಬೇಕಾದ ಸೌಲಭ್ಯ ಕಲ್ಪಿಸುತ್ತಿದ್ದ. ಜೈಲಿನ ಒಳಗೆ ಇಬ್ಬರೂ ತಮ್ಮ ಸಹಚರರ ಜತೆಗೆ 'ರೌಂಡ್ ಟೇಬಲ್ ಪಾರ್ಟಿ' ನಡೆಸುತ್ತಿದ್ದರು. ಇದು ರಘುಗೆ ಸಿಟ್ಟು ತರಿಸಿತ್ತು. ಇದೇ ವಿಚಾರಕ್ಕೆ ಒಂದು ರೌಡಿ ಗುಂಪು ಫೋಟೊ ತೆಗೆದು ಹೊರಗಿದ್ದ ವ್ಯಕ್ತಿಯೊಬ್ಬರಿಗೆ ಕಳುಹಿಸಿತ್ತು. ಈ ಬಗ್ಗೆಯೂ ಪೊಲೀಸ್ ತನಿಖೆ ಆರಂಭವಾಗಿದೆ. ನಾಗನಿಗೆ ಒಂದು ಬ್ಯಾರಕ್‌ನಿಂದ ಮತ್ತೊಂದು ಬ್ಯಾರಕ್‌ಗೆ ಹೋಗಲು ಜೈಲಿನ ಅಧಿಕಾರಿಗಳೇ ಅನುಮತಿ ನೀಡಿದ್ದರು. ಆಗಾಗ್ಗೆ ದರ್ಶನ್ ಬ್ಯಾರಕ್‌ಗೂ ಹೋಗುತ್ತಿದ್ದ' ಎಂದು ಮೂಲಗಳು ಹೇಳಿವೆ.

ಫೋಟೊ ತೆಗೆದಿದ್ದ ವೇಲುಗೆ ಥಳಿತ?

'ದರ್ಶನ್, ವಿಲ್ಸನ್ ಗಾರ್ಡನ್ ನಾಗ, ಕುಳ್ಳ ಸೀನ ಹಾಗೂ ದರ್ಶನ್ ವ್ಯವಸ್ಥಾಪಕ ನಾಗರಾಜ್ ಅವರು ಸಿಗರೇಟ್ ಸೇದುತ್ತಾ ಕುರ್ಚಿಯಲ್ಲಿ ಕುಳಿತು ಹರಟೆ ಹೊಡೆಯುತ್ತಿರುವ ಫೋಟೊ ತೆಗೆದಿದ್ದ ರೌಡಿ ವೇಲುಗೆ ಹಿಗ್ಗಾಮುಗ್ಗಾ ಥಳಿಸಲಾಗಿದೆ. 'ಫೋಟೊ ತೆಗೆದು ನೀನೇ ಮಾಧ್ಯಮಕ್ಕೆ ಕಳುಹಿಸಿದ್ದೀಯಾ' ಎಂದು ಆಕ್ರೋಶಗೊಂಡ ನಾಗನ ಕಡೆಯವರು ಥಳಿಸಿದ್ದಾರೆ' ಎಂಬ ಮಾಹಿತಿ ಹರಿದಾಡುತ್ತಿದೆ.

ವಿಶೇಷಾತಿಥ್ಯಕ್ಕೆ ಸಚಿವರ ಆದೇಶ?

ದರ್ಶನ್‌ಗೆ ವಿಶೇಷ ಸೌಲಭ್ಯ ಕಲ್ಪಿಸುವಂತೆ ಸಚಿವರೊಬ್ಬರು ಮೌಖಿಕವಾಗಿ ಜೈಲಿನ ಅಧಿಕಾರಿಗಳಿಗೆ ಸೂಚಿಸಿದ್ದರು ಎನ್ನಲಾಗಿದೆ. ಹೀಗಾಗಿ, ಬೇಕರಿ ರಘು ಹಾಗೂ ನಾಗನ ಕಡೆಯವರ ಚಲನವಲನಗಳ ಬಗ್ಗೆ ಜೈಲು ಸಿಬ್ಬಂದಿ ನಿಗಾ ವಹಿಸಿರಲಿಲ್ಲ. ಜೈಲು ಸಿಬ್ಬಂದಿಯೂ ದರ್ಶನ್ ಖ್ಯಾತ ನಟ ಎನ್ನುವ ಕಾರಣಕ್ಕೆ ಜೈಲು ನಿಯಮ ಪಾಲಿಸಿರಲಿಲ್ಲ ಎಂದು ಮೂಲಗಳು ಹೇಳಿವೆ.

ಪ್ರತಿಭಟನಕಾರರನ್ನು ಚದುರಿಸಲು ಪೊಲೀಸರು ಲಾಠಿ ಪ್ರಹಾರ ಮಾಡಿದರು – ಪಿಟಿಐ ಚಿತ್ರ

ನಬನ್ನಾ ಅಭಿಯಾನ್: ಮಮತಾ ರಾಜೀನಾಮೆಗೆ ಆಗ್ರಹ

ಪೊಲೀಸರ ಜೊತೆ ಘರ್ಷಣೆ

ಕೋಲ್ಕತ್ತ (ಪಿಟಿಐ): 'ನಬನ್ನಾ ಅಭಿಯಾನ್' ಪ್ರತಿಭಟನೆಯಲ್ಲಿ ಪಾಲ್ಗೊಂಡವರು ಪಶ್ಚಿಮ ಬಂಗಾಳ ಸರ್ಕಾರದ ಸಚಿವಾಲಯದ ಕಡೆ ನುಗ್ಗಲು ಪ್ರಯತ್ನಿಸಿದಾಗ ಕೋಲ್ಕತ್ತ ಹಾಗೂ ನೆರೆಯ ಹೌರಾದ ಕೆಲವು ಪ್ರದೇಶಗಳಲ್ಲಿ ಪೊಲೀಸರು ಮತ್ತು ಪ್ರತಿಭಟನಕಾರರ ನಡುವೆ ಮಂಗಳವಾರ ಸಂಘರ್ಷ ಉಂಟಾಯಿತು.

ಆರ್.ಜಿ. ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ವೈದ್ಯ ವಿದ್ಯಾರ್ಥಿನಿಯೊಬ್ಬಳ ಮೇಲೆ ನಡೆದ ಅತ್ಯಾಚಾರ ಹಾಗೂ ಆಕೆಯ ಹತ್ಯೆಯ ಕಾರಣಕ್ಕೆ ಮಮತಾ ಬ್ಯಾನರ್ಜಿ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಪ್ರತಿಭಟನಕಾರರು ಒತ್ತಾಯಿಸಿದರು. ಈ ಒತ್ತಾಯದೊಂದಿಗೆ ರಾಜ್ಯದ ಸಚಿವಾಲಯ ತಲುಪಲು ಅವರು ಯತ್ನಿಸಿದರು.

ಎಂ.ಜಿ. ರಸ್ತೆ ಹಾಗೂ ಹೇಸ್ಟಿಂಗ್ಸ್ ರಸ್ತೆಯಲ್ಲಿ, ಪ್ರಿನ್ಸೆಪ್ ಘಾಟ್, ಸಂತರಾಗಾಛಿ ಮತ್ತು ಹೌರಾ ಮೈದಾನದ ಸಮೀಪ ಘರ್ಷಣೆ ನಡೆದಿದೆ. ಈ ವೇಳೆ ಪೊಲೀಸರಿಗೆ ಹಾಗೂ ಪ್ರತಿಭಟನಕಾರರಿಗೆ ಗಾಯಗಳಾಗಿವೆ.

7ನೇ ಪುಟ ನೋಡಿ

> ಮಮತಾ ಬ್ಯಾನರ್ಜಿ ನೇತೃತ್ವದ ಸರ್ಕಾರವು ಶಾಂತಿಯುತ ಪ್ರತಿಭಟನಕಾರರನ್ನು ಈ ರೀತಿ ನಡೆಸಿಕೊಂಡರೆ, ನಾವು ಇಡೀ ರಾಜ್ಯವನ್ನು ಬಂದ್ ಮಾಡಿಸುತ್ತೇವೆ
> **ಸುವೇಂದು ಅಧಿಕಾರಿ**, ಪಶ್ಚಿಮ ಬಂಗಾಳದ ವಿರೋಧ ಪಕ್ಷದ ನಾಯಕ

> ಬುಧವಾರ ಬಂದ್‌ಗೆ ಅವಕಾಶ ಕೊಡುವುದಿಲ್ಲ. ಜನರು ಬಂದ್‌ನಲ್ಲಿ ಭಾಗಿಯಾಗಬಾರದು ಎಂದು ನಾವು ಒತ್ತಾಯಿಸುತ್ತಿದ್ದೇವೆ
> **ಆಲಾಪನ್ ಬಂದೋಪಾಧ್ಯಾಯ**, ಮುಖ್ಯಮಂತ್ರಿಯವರ ಮುಖ್ಯ ಸಲಹೆಗಾರ

ಇಂದು ಬಂಗಾಳ ಬಂದ್‌ಗೆ ಬಿಜೆಪಿ ಕರೆ

ಪ್ರತಿಭಟನೆಯಲ್ಲಿ ಪಾಲ್ಗೊಂಡವರ ಮೇಲೆ ಪೊಲೀಸರು ಕ್ರಮ ಜರುಗಿಸಿರುವುದನ್ನು ಪ್ರತಿಭಟಿಸಿ ಬುಧವಾರ 12 ತಾಸುಗಳ ಪಶ್ಚಿಮ ಬಂಗಾಳ ಬಂದ್ ನಡೆಸಬೇಕು ಎಂದು ಬಿಜೆಪಿ ಕರೆ ನೀಡಿದೆ.

ಅತ್ಯಾಚಾರ ಮತ್ತು ಹತ್ಯೆ ಪ್ರಕರಣದ ವಿಚಾರವಾಗಿ ಜನರಲ್ಲಿ ಇರುವ ನೋವನ್ನು ದುರ್ಬಳಕೆ ಮಾಡಿಕೊಂಡು, ರಾಜ್ಯದಲ್ಲಿ ಅಶಾಂತಿಗೆ ಪ್ರಚೋದನೆ ನೀಡಲು ಬಿಜೆಪಿ ಉದ್ದೇಶಿಸಿದೆ ಎಂಬುದನ್ನು ಬಂದ್ ಕರೆಯು ತೋರಿಸುತ್ತಿದೆ ಎಂದು ಆಡಳಿತಾರೂಢ ಟಿಎಂಸಿ ಆರೋಪಿಸಿದೆ.

ಬುಧವಾರ ಬೆಳಿಗ್ಗೆ 6 ಗಂಟೆಯಿಂದ ಬಂದ್ ಶುರುವಾಗಲಿದೆ. ಜನರಿಗೆ ತೊಂದರೆ ಆಗದಂತೆ ನೋಡಿಕೊಳ್ಳಲಾಗುವುದು ಎಂದು ಸರ್ಕಾರ ಹೇಳಿದೆ.

'ಈ ಸರ್ವಾಧಿಕಾರಿ ಸರ್ಕಾರವು ಜನರ ದನಿಗೆ ಕಿವಿಗೊಡುತ್ತಿಲ್ಲ. ಹೀಗಾಗಿ ಬಂದ್‌ಗೆ ಕರೆ ನೀಡಬೇಕಾಗಿದೆ' ಎಂದು ಬಿಜೆಪಿಯ ಪಶ್ಚಿಮ ಬಂಗಾಳ ಘಟಕದ ಅಧ್ಯಕ್ಷ ಸುಕಾಂತ ಮಜುಮ್‌ದಾರ್ ಹೇಳಿದ್ದಾರೆ.

'ಛಾತ್ರ ಸಮಾಜ ಪ್ರಾಯೋಜಿತ ನಬನ್ನಾ ಅಭಿಯಾನ್‌ಗೆ ಬಿಜೆಪಿಯ ಬೆಂಬಲ ಇದೆ ಎಂಬುದನ್ನು ಹಿಂದಿನಿಂದಲೂ ಹೇಳುತ್ತಿದ್ದೇವೆ. ವಿದ್ಯಾರ್ಥಿಗಳ ವೇಷದಲ್ಲಿದ್ದ ಕಿಡಿಗೇಡಿಗಳು ತೊಂದರೆ ಸೃಷ್ಟಿಸಿದ್ದನ್ನು ಕಂಡಾಗ ಇದು ಗೊತ್ತಾಗುತ್ತದೆ' ಎಂದು ಟಿಎಂಸಿಯ ಕುನಾಲ್ ಘೋಷ್ ಹೇಳಿದ್ದಾರೆ.

ಜಲಧಾರೆಯ ವೈಭವ

ಲಿಂಗನಮಕ್ಕಿ ಜಲಾಶಯದಿಂದ ಮಂಗಳವಾರ 32,980 ಕ್ಯುಸೆಕ್ ನೀರು ಹೊರಬಿಟ್ಟದ್ದರಿಂದ ಜೋಗ ಜಲಪಾತದಲ್ಲಿ ಜಲಧಾರೆಯ ವೈಭವ ಹೆಚ್ಚಿದೆ. ರಾಜಾ, ರೋರರ್, ರಾಕೆಟ್, ರಾಣಿ ಧಾರೆಗಳು ತಮ್ಮ ಕವಲುಗಳನ್ನು ವಿಸ್ತರಿಸಿ ಒಟ್ಟಾಗಿ ಕಣಿವೆಯಾಳಕ್ಕೆ ಧುಮ್ಮಿಕ್ಕುತ್ತಿರುವ ದೃಶ್ಯ ಪ್ರವಾಸಿಗರ ಮನ ತಣಿಸುತ್ತಿದೆ

ಪ್ರಜಾವಾಣಿ ಚಿತ್ರ: ಸಂತೋಷ್ ಕುಮಾರ್ ಕಾರ್ಗಲ್

ಮಂಕಿಪಾಕ್ಸ್: ವಿಮಾನ ನಿಲ್ದಾಣದಲ್ಲಿ ಕಣ್ಗಾವಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೆರೆಯ ಪಾಕಿಸ್ತಾನ ಸೇರಿದಂತೆ ವಿವಿಧ ದೇಶಗಳಲ್ಲಿ ಮಂಕಿಪಾಕ್ಸ್ ಪ್ರಕರಣಗಳು ವರದಿಯಾಗಿರುವುದರಿಂದ ರಾಜ್ಯದ ವಿಮಾನ ನಿಲ್ದಾಣ ಮತ್ತು ಬಂದರುಗಳಲ್ಲಿ ಪ್ರಯಾಣಿಕರ ತಪಾಸಣೆ ನಡೆಸಿ ಮಂಕಿಪಾಕ್ಸ್ ಶಂಕಿತರನ್ನು ಗುರುತಿಸಿ, ಅವರ ಮೇಲೆ ನಿಗಾ ಇರಿಸುವಂತೆ ಆರೋಗ್ಯ ಇಲಾಖೆ ಸೂಚನೆ ನೀಡಿದೆ.

ಕೇಂದ್ರ ಆರೋಗ್ಯ ಸಚಿವಾಲಯದ ಸೂಚನೆಯಂತೆ ಪ್ರಕರಣಗಳು ವರದಿಯಾದ ದೇಶಗಳಿಂದ ಬರುವ ಪ್ರಯಾಣಿಕರ ಮೇಲೆ ನಿಗಾ ಅಗತ್ಯ ಎಂದು ಆರೋಗ್ಯ ಇಲಾಖೆ ಮಂಗಳವಾರ ಹೊರಡಿಸಿರುವ ಸುತ್ತೋಲೆಯಲ್ಲಿ ತಿಳಿಸಿದೆ.

ಈ ರೋಗದ ಶಂಕಿತ ಪ್ರಕರಣಗಳ ನಿರ್ವಹಣೆಗೆ ಬೆಂಗಳೂರಿನ ಇಂದಿರಾ ನಗರದಲ್ಲಿರುವ ಸಾಂಕ್ರಾಮಿಕ ರೋಗಗಳ ಆಸ್ಪತ್ರೆ ಹಾಗೂ ಮಂಗಳೂರಿನ ವೆನ್ಲಾಕ್ ಆಸ್ಪತ್ರೆಗಳನ್ನು ಗುರುತಿಸಲಾಗಿದೆ. ಶಂಕಿತರನ್ನು ಈ ಆಸ್ಪತ್ರೆಗಳಲ್ಲಿ ನಿಗಾದಲ್ಲಿ ಇರಿಸಬೇಕು ಎಂದು ಸೂಚಿಸಲಾಗಿದೆ.

ಶಂಕಿತರಿಂದ ಸಂಗ್ರಹಿಸಿದ ಮಾದರಿಗಳನ್ನು ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಲ್ಲಿರುವ ಪ್ರಯೋಗಾಲಯಕ್ಕೆ ಕಳುಹಿಸಬೇಕು. ಪರೀಕ್ಷೆಯ ವರದಿಯಲ್ಲಿ ರೋಗ ದೃಢಪಟ್ಟರೆ 21 ದಿನಗಳವರೆಗೆ ಅಥವಾ ಗುಳ್ಳೆಗಳು ಸಂಪೂರ್ಣ ನಿವಾರಣೆಯಾಗುವವರೆಗೆ ಪ್ರತ್ಯೇಕವಾಸದಲ್ಲಿ ಇರಿಸಬೇಕು ಎಂದು ತಿಳಿಸಲಾಗಿದೆ.

ಅಬಕಾರಿ ಹಗರಣ: ಕವಿತಾಗೆ ಜಾಮೀನು

ನವದೆಹಲಿ (ಪಿಟಿಐ): ದೆಹಲಿಯ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಆರೋಪದಡಿ ಬಂಧಿಸಲಾಗಿರುವ ಬಿಆರ್‌ಎಸ್ ಪಕ್ಷದ ನಾಯಕಿ ಕೆ.ಕವಿತಾ ಅವರಿಗೆ ಸುಪ್ರೀಂ ಕೋರ್ಟ್ ಮಂಗಳವಾರ ಜಾಮೀನು ಮಂಜೂರು ಮಾಡಿತು.

ಕೆ.ಕವಿತಾ

ಎರಡೂ ಪ್ರಕರಣಗಳಿಗೆ ಸಂಬಂಧಿಸಿ ತಲಾ ₹10 ಲಕ್ಷ ಮೌಲ್ಯದ ಬಾಂಡ್ ನೀಡಬೇಕು. ವಿಚಾರಣಾ ಕೋರ್ಟ್‌ಗೆ ಪಾಸ್‌ಪೋರ್ಟ್ ಒಪ್ಪಿಸಬೇಕು, ಸಾಕ್ಷ್ಯ ನಾಶ ಅಥವಾ ಸಾಕ್ಷಿಗಳ ಮೇಲೆ ಪ್ರಭಾವ ಬೀರಲು ಮುಂದಾಗಬಾರದು ಎಂದೂ ಪೀಠವು ಷರತ್ತು ವಿಧಿಸಿತು.

ಸಂಜೆಯ ವೇಳೆಗೆ ಕವಿತಾ ಅವರು ತಿಹಾರ್ ಜೈಲಿನಿಂದ ಬಿಡುಗಡೆಗೊಂಡಿದ್ದು, ಬೆಂಬಲಿಗರು ಬಾಜಾಬಜಂತ್ರಿಯೊಂದಿಗೆ ಬರಮಾಡಿಕೊಂಡರು. ಕವಿತಾ ಸಹೋದರ, ಬಿಆರ್‌ಎಸ್ ಪಕ್ಷದ ಕಾರ್ಯಾಧ್ಯಕ್ಷ ಕೆ.ಟಿ.ರಾಮರಾವ್ ಅವರೂ ಇದ್ದರು.

> ಸುಪ್ರೀಂ ಕೋರ್ಟ್‌ಗೆ ಕೃತಜ್ಞತೆಗಳು. ನಿರಾಳವಾಗಿದೆ. ನ್ಯಾಯ ದೊರೆತಿದೆ
> **ಕೆ.ಟಿ.ರಾಮರಾವ್,** ಕಾರ್ಯಾಧ್ಯಕ್ಷ, ಬಿಆರ್‌ಎಸ್ ಪಕ್ಷ

7ನೇ ಪುಟ ನೋಡಿ

ರಿಯಲ್ ಎಸ್ಟೇಟ್ ಪಾರದರ್ಶಕ ಸೂಚ್ಯಂಕ: ಭಾರತಕ್ಕೆ 31ನೇ ಸ್ಥಾನ 10
ಮಥುರಾ ಜನ್ಮಾಷ್ಟಮಿ: ಕಲುಷಿತ ಆಹಾರ ಸೇವನೆ– 120 ಮಂದಿ ಆಸ್ಪತ್ರೆಗೆ 11

ಚಿನಕುರುಳಿ

ಪ್ರಕಾಶ್ ಶೆಟ್ಟಿ

ರಾಜಭವನ ವಿರುದ್ಧ 'ಸರ್ಕಾರಿ' ಹೋರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮ್ಮ ಮುಂದೆ ಬಾಕಿ ಇರುವ ಇತರ ಪ್ರಕರಣಗಳಲ್ಲೂ ವಿಚಾರಣೆಗೆ ಅನುಮತಿ ನೀಡುವಂತೆ ರಾಜ್ಯಪಾಲರನ್ನು ಒತ್ತಾಯಿಸಿ ಇದೇ 31ರಂದು ರಾಜಭವನ ಚಲೋ ನಡೆಸಲು ಕಾಂಗ್ರೆಸ್ ನಿರ್ಧರಿಸಿದೆ.

ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ತನಿಖೆಗೆ ಅನುಮತಿ ನೀಡುವ ಹಂತದಲ್ಲಿ ಎದಿರೇಟು ನೀಡಿದ್ದ ಸರ್ಕಾರ ಮತ್ತು ಆಡಳಿತಾರೂಢ ಕಾಂಗ್ರೆಸ್ ಪಕ್ಷವು, ರಾಜಭವನದ ವಿರುದ್ಧ ಮತ್ತೊಂದು ಸುತ್ತಿನ ಸಂಘರ್ಷಕ್ಕೆ ಅಣಿಯಾಗಿದೆ.

ಶಿವಕುಮಾರ್

'ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಮಾಜಿ ಸಚಿವ ಮುರುಗೇಶ್ ನಿರಾಣಿ, ಶಾಸಕರಾದ ಶಶಿಕಲಾ ಜೊಲ್ಲೆ ಮತ್ತು ಜನಾರ್ದನ ರೆಡ್ಡಿ ಅವರಿಗೆ ಸಂಬಂಧಿಸಿದ ಪ್ರಕರಣಗಳಲ್ಲಿಯೂ ರಾಜ್ಯಪಾಲರು ವಿಚಾರಣೆಗೆ ಅನುಮತಿ ನೀಡಬೇಕು' ಎಂದು ಮನವಿ ಮಾಡಲು 31ರಂದು ಬೆಳಿಗ್ಗೆ 10 ಗಂಟೆಗೆ ವಿಧಾನಸೌಧದ ಗಾಂಧಿ ಪ್ರತಿಮೆಯ ಬಳಿಯಿಂದ ರಾಜಭವನಕ್ಕೆ ಹೋಗುತ್ತೇವೆ. ಮುಖ್ಯಮಂತ್ರಿ, ಎಲ್ಲ ಸಚಿವರು, ಪಕ್ಷದ ಶಾಸಕರು, ವಿಧಾನಪರಿಷತ್ ಸದಸ್ಯರು ಮತ್ತು ಸಂಸದರು ಭಾಗವಹಿಸಲಿದ್ದಾರೆ' ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

5ನೇ ಪುಟ ನೋಡಿ

ಮಧ್ಯಪ್ರದೇಶದಿಂದ ಆವಕ ಇಳಿಕೆ: ವರ್ಷದಲ್ಲಿ ಎರಡನೇ ಸಲ ಗ್ರಾಹಕರಿಗೆ ಬೆಲೆ ಏರಿಕೆ ಬಿಸಿ

ಕೆ.ಜಿ ಬೆಳ್ಳುಳ್ಳಿಗೆ ₹400 ಧಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಚಿಲ್ಲರೆ ಮಾರುಕಟ್ಟೆಗಳಲ್ಲಿ ಪ್ರತಿ ಕೆ.ಜಿ ಬೆಳ್ಳುಳ್ಳಿ ಧಾರಣೆಯು ₹400 ದಾಟಿದೆ.

ಫೆಬ್ರುವರಿಯಲ್ಲಿ ಬೆಳ್ಳುಳ್ಳಿ ದರವು ₹500 ದಾಟಿತ್ತು. ಪ್ರಸಕ್ತ ವರ್ಷದಲ್ಲಿ ಸತತ ಎರಡನೇ ಸಲ ಜನರಿಗೆ ಬೆಲೆ ಏರಿಕೆಯ ಬಿಸಿ ತಟ್ಟಿದೆ. ಈಗ ಹಬ್ಬದ ಋತು ಆರಂಭಗೊಂಡಿದೆ. ಮದುವೆ, ಸಭೆ, ಸಮಾರಂಭಗಳು ಹೆಚ್ಚಾಗಿ ನಡೆಯುವ ಕಾರಣ ಬೆಳ್ಳುಳ್ಳಿಗೆ ಬೇಡಿಕೆ ಹೆಚ್ಚಲಿದ್ದು, ಬೆಲೆ ಮತ್ತಷ್ಟು ಏರಿಕೆಯಾಗುವ ಸಾಧ್ಯತೆಯಿದೆ.

ದೇಶದ ಒಟ್ಟು ಬೆಳ್ಳುಳ್ಳಿ ಉತ್ಪಾದನೆಯ ಪೈಕಿ ಮಧ್ಯಪ್ರದೇಶದ ಪಾಲು ಶೇ 70ರಷ್ಟಿದೆ. ಉಳಿದಂತೆ ರಾಜಸ್ಥಾನ, ಗುಜರಾತ್ ಮತ್ತು ಉತ್ತರ ಪ್ರದೇಶದಲ್ಲಿ ಹೆಚ್ಚಾಗಿ ಬೆಳೆಯಲಾಗುತ್ತದೆ. ಮಹಾರಾಷ್ಟ್ರ ಹಾಗೂ ಉತ್ತರ ಕರ್ನಾಟಕದ ಕೆಲವೆಡೆ ರೈತರು ಬೆಳ್ಳುಳ್ಳಿ ಬೆಳೆಯುತ್ತಾರೆ.

ಮಧ್ಯಪ್ರದೇಶ ಮತ್ತು ರಾಜಸ್ಥಾನದಿಂದ ಅತಿಹೆಚ್ಚು ಪ್ರಮಾಣದಲ್ಲಿ ಕರ್ನಾಟಕಕ್ಕೆ ಬೆಳ್ಳುಳ್ಳಿ ಪೂರೈಕೆಯಾಗುತ್ತದೆ. ಆದರೆ, ಭಾರಿ ಮಳೆಯಿಂದಾಗಿ ಈ ಎರಡೂ ರಾಜ್ಯಗಳಲ್ಲಿ ಉತ್ಪಾದನೆಯು ಕುಸಿತ ಕಂಡಿದೆ. ಹಾಗಾಗಿ, ಮಾರುಕಟ್ಟೆಗೆ ಆವಕ ಕಡಿಮೆಯಾಗಿದ್ದು, ದರ ಹೆಚ್ಚಳವಾಗಿದೆ ಎಂದು ವ್ಯಾಪಾರಿಗಳು ಹೇಳುತ್ತಾರೆ.

10ನೇ ಪುಟ ನೋಡಿ

ಸುಂಕ ಏರಿಕೆ: ಆಮದು ಕಷ್ಟಕರ

ಈಜಿಪ್ಟ್ ಮತ್ತು ಇರಾನ್‌ನಲ್ಲಿ ಅತಿಹೆಚ್ಚು ಪ್ರಮಾಣದಲ್ಲಿ ಬೆಳ್ಳುಳ್ಳಿ ಬೆಳೆಯಲಾಗುತ್ತದೆ. ಆದರೆ, ಮಧ್ಯಪ್ರಾಚ್ಯ ಬಿಕ್ಕಟ್ಟಿನಿಂದಾಗಿ ಕೆಂಪುಸಮುದ್ರದಲ್ಲಿ ಹಡಗುಗಳ ಮೂಲಕ ಸರಕು ಸಾಗಣೆಗೆ ತೊಂದರೆಯಾಗಿದೆ. ಇದರಿಂದ ಸಾಗಣೆ ವೆಚ್ಚ ದುಬಾರಿಯಾಗಿದೆ.

'ಕೇಂದ್ರ ಸರ್ಕಾರವು ದೇಶದ ರೈತರ ಹಿತಕಾಯುವ ದೃಷ್ಟಿಯಿಂದ ಬೆಳ್ಳುಳ್ಳಿ ಮೇಲಿನ ಆಮದು ಸುಂಕವನ್ನು ಶೇ 100ರಷ್ಟು ಹೆಚ್ಚಿಸಿದೆ. ಹಾಗಾಗಿ, ಈ ಎರಡು ದೇಶಗಳಿಂದ ವರ್ತಕರು ಬೆಳ್ಳುಳ್ಳಿ ಆಮದು ಮಾಡಿಕೊಂಡರೂ ಸ್ಥಳೀಯವಾಗಿ ಕಡಿಮೆ ಬೆಲೆಗೆ ಮಾರಾಟ ಮಾಡುವುದು ಕಷ್ಟ' ಎನ್ನುತ್ತಾರೆ ವರ್ತಕ ಜುಬೇರ್.

ಈರುಳ್ಳಿ ದರ ಏರುಗತಿ

ರಾಜ್ಯದಲ್ಲಿ ಭಾರಿ ಮಳೆಯಿಂದಾಗಿ ಮಾರುಕಟ್ಟೆಗೆ ಗುಣಮಟ್ಟದ ಈರುಳ್ಳಿ ಪೂರೈಕೆಯಾಗುತ್ತಿಲ್ಲ. ಈ ನಡುವೆಯೇ ಮಹಾರಾಷ್ಟ್ರದಿಂದ ಆವಕ ಕಡಿಮೆಯಾಗಿದೆ. ಹಾಗಾಗಿ, ಚಿಲ್ಲರೆ ಮಾರುಕಟ್ಟೆಯಲ್ಲಿ ಕೆ.ಜಿ ಈರುಳ್ಳಿ ಧಾರಣೆಯು ₹52 ದಾಟಿದ್ದರೆ, ಸೂಪರ್ ಮಾರ್ಕೆಟ್‌ಗಳಲ್ಲಿ ಕೆ.ಜಿಗೆ ₹80 ಮುಟ್ಟಿದೆ.



'ಹೊಸದುರ್ಗ, ಹಿರಿಯೂರು, ಹಗರಿಬೊಮ್ಮನಹಳ್ಳಿ, ಕೂಡ್ಲಿಗಿ, ಜಗಳೂರು, ಹರಪನಹಳ್ಳಿ ಭಾಗದಲ್ಲಿ ಬೆಳೆದಿರುವ ಈರುಳ್ಳಿಯು ಮಳೆಯಿಂದ ಹಾನಿಗೀಡಾಗಿದೆ. ರೈತರು ಅಳಿದುಳಿದ ಈರುಳ್ಳಿಯನ್ನು ಕಟಾವು ಮಾಡಿ ಮಾರುಕಟ್ಟೆಗೆ ಪೂರೈಸುತ್ತಿದ್ದಾರೆ. ಇದು ಗುಣಮಟ್ಟದಿಂದ ಕೂಡಿಲ್ಲ' ಎಂದು ಯಶವಂತಪುರ ಎಪಿಎಂಸಿಯ ಈರುಳ್ಳಿ ವರ್ತಕ ಜಿ. ಲೋಕಪ್ಪ ಹೇಳುತ್ತಾರೆ.

'ಕರ್ನಾಟಕದಲ್ಲಿ ಮಳೆಯಿಂದ ಈರುಳ್ಳಿ ಬೆಳೆ ನಷ್ಟವಾಗಿರುವ ಬಗ್ಗೆ ಮಹಾರಾಷ್ಟ್ರದ ರೈತರು ಮತ್ತು ವರ್ತಕರಿಗೆ ಅರಿವಿದೆ. ಹಾಗಾಗಿ, ರಾಜ್ಯಕ್ಕೆ ಕಳೆದ ಮೂರ್ನಾಲ್ಕು ದಿನಗಳಿಂದ ಪೂರೈಕೆಯನ್ನು ಸ್ಥಗಿತಗೊಳಿಸಿದ್ದಾರೆ. ಮತ್ತಷ್ಟು ಬೆಲೆ ಏರಿಕೆಯಾಗಲಿದೆ ಎಂದು ದಾಸ್ತಾನು ಮಾಡುತ್ತಿದ್ದಾರೆ. ಇದರಿಂದ ಸ್ಥಳೀಯ ಚಿಲ್ಲರೆ ಮಾರುಕಟ್ಟೆಗಳಲ್ಲಿ ಈರುಳ್ಳಿ ಬೆಲೆ ಏರಿಕೆಯಾಗುತ್ತಿದೆ' ಎಂದು ವಿವರಿಸುತ್ತಾರೆ.

केनरा बैंक Canara Bank
भारत सरकार का उपक्रम A Government of India Undertaking
सिंडिकेट Syndicate

Premises & Estate Section, G A Wing, Head Office, No. 112, J C Road, Bangalore – 560002

NOTICE FOR OPERATION AND MAINTENANCE OF ELECTRICAL INSTALLATIONS

Fresh tenders are invited for the Operation and Maintenance of Electrical Installations in Centre of Excellence, Bagaluru, Financial City, Bengaluru-562149.

For further details and other terms and conditions, please visit Bank's website https://canarabank.com/tenders.aspx. For any clarifications contact 080-22238819/22297695 extn 219/214. Last date for submission of tender form is 18.09.2024, 3:00 PM.

Further, all addendum/corrigendum including modification if any, will be hosted at the Bank's website only.

Place : Bengaluru
Date : 28.08.2024

- Sd -
Asst. General Manager

ನೈಋತ್ಯ ರೈಲ್ವೆ

ಅರ್ಜಿ ಅಧಿಸೂಚನೆ ಸಂ.: 565/STBA/08/2024

ಭಾರತದ ರಾಷ್ಟ್ರಪತಿಗಳ ಪರವಾಗಿ ಈ ಕೆಳ ಸಹಿದಾರರು, ನೈಋತ್ಯ ರೈಲ್ವೆಯ ಬೆಂಗಳೂರು ವಿಭಾಗದಲ್ಲಿರುವ ಈ ಕೆಳಗೆ ಸೂಚಿಸಲಾದ ರೈಲು ನಿಲ್ದಾಣಗಳಲ್ಲಿ, ಸ್ಟೇಷನ್ ಟಿಕೇಟು ಬುಕ್ಕಿಂಗ್ ಏಜೆಂಟುಗಳಾಗಿ (ಎಸ್‌ಟಿಬಿಎ) ಕಮೀಷನ್ ಆಧಾರದ ಮೇರೆಗೆ ನಿಲ್ದಾಣದ ಮುಂದೆ ಸೂಚಿಸಲಾದ ಅವಧಿಯ ಮೇರೆಗೆ ಕಾಯ್ದಿರಿಸದ/ಸಾಮಾನ್ಯ ಟಿಕೇಟುಗಳನ್ನು ಅನ್‌ರಿಸರ್ವ್ಡ್ ಟಿಕೆಟ್ ಸಿಸ್ಟಮ್ (ಯುಟಿಎಸ್) ಮೂಲಕ ವಿತರಿಸುವ ಸಲುವಾಗಿ ತಮ್ಮನ್ನು ತೊಡಗಿಸಿಕೊಳ್ಳಲು ಮೊಹರು ಬಂದ್ ಮಾಡಲಾದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರಸಂ.	ನಿಲ್ದಾಣದ ಹೆಸರು	ಸ್ಟೇಷನ್ ಕೋಡ್	ಸ್ಟೇಷನ್ ವರ್ಗ	ಗುತ್ತಿಗೆಯ ಅವಧಿ
1	ಸತ್ಯ ಸಾಯಿ ಪ್ರಶಾಂತಿ ನಿಲಯಂ	ಎಸ್‌ಎಸ್‌ಪಿಎನ್	ಎನ್‌ಎಸ್‌ಜಿ–4	21.02.2025 ರವರೆಗೆ
2	ಮಲ್ಲೇಶ್ವರಂ	ಎಂಡಬ್ಲ್ಯೂಎಂ	ಎನ್‌ಎಸ್‌ಜಿ–5	3 ವರ್ಷಗಳು

ಅರ್ಜಿಗಳನ್ನು ಸಲ್ಲಿಸಬೇಕಾದ ಕೊನೆಯ ದಿನಾಂಕ: 26.09.2024 ರಂದು 10:00 ಗಂಟೆಯಿಂದ 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.swr.indianrailways.gov.in ಗೆ ಲಾಗ್ ಆನ್ ಆಗಿ

PUB/366/AAF/PRB/SWR/2024-25 ವರಿಷ್ಠ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು/ಬೆಂಗಳೂರು

South Western Railway - SWR | SWRRLY | SWRRLY

ಮಹಾನಿರ್ದೇಶನಾಲಯ, ಐ.ಟಿ.ಬಿ. ಪೊಲೀಸ್ (ಐಟಿಬಿಪಿ),
ಗೃಹ ವ್ಯವಹಾರಗಳ ಸಚಿವಾಲಯ, ಭಾರತ ಸರ್ಕಾರ,
ಬ್ಲಾಕ್–2, ಸಿಜಿಒ ಕಾಂಪ್ಲೆಕ್ಸ್, ಲೋಧಿ ರಸ್ತೆ, ನವದೆಹಲಿ–110003

ನಂ. 1–14014/180/2024/ನೇಮಕಾತಿ ಶಾಖೆ–9073 ದಿನಾಂಕ: 22/08/2024

ತಿದ್ದುಪಡಿ

ಜುಲೈ 27 ರಿಂದ ಆಗಸ್ಟ್ 02, 2024ರ ಅವಧಿಯ ಎಂಪ್ಲಾಯ್‌ಮೆಂಟ್ ನ್ಯೂಸ್/ರೋಜಗಾರ್ ಸಮಾಚಾರ್ ಆವೃತ್ತಿಯಲ್ಲಿ ಪ್ರಕಟವಾಗಿದ್ದ ಜಾಹೀರಾತು ಸಂ. 08/2024ಗೆ ಸಂಬಂಧಿಸಿದಂತೆ, ಹೆಡ್ ಕಾನ್ಸ್‌ಟೇಬಲ್ (ಡ್ರೆಸ್ಸರ್ ವೆಟೆರಿನರಿ), ಕಾನ್ಸ್‌ಟೇಬಲ್ (ಅನಿಮಲ್ ಟ್ರಾನ್ಸ್‌ಪೋರ್ಟ್) ಮತ್ತು ಕಾನ್ಸ್‌ಟೇಬಲ್ (ಕೆನ್ನೆಲ್‌ಮನ್) ಹುದ್ದೆಗಳಿಗೆ ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸುವ ದಿನಾಂಕವನ್ನು, ತಾಂತ್ರಿಕ ಕಾರಣಗಳಿಂದಾಗಿ 30/08/2024 ರಿಂದ 29/09/2024 ರವರೆಗೆ ವಿಸ್ತರಿಸಲಾಗಿದೆ.

2. ಈ ಮೇಲ್ಕಂಡ ಹುದ್ದೆಗಳಿಗೆ ಈಗಾಗಲೇ ಅರ್ಜಿ ಸಲ್ಲಿಸಿರುವವರು (12/08/2024ರ ಬಳಿಕ) ಸದರಿ ತಿದ್ದುಪಡಿಗೆ ಪ್ರತಿಯಾಗಿ ಪುನಃ ಅರ್ಜಿ ಸಲ್ಲಿಸುವ ಅಗತ್ಯವಿರುವುದಿಲ್ಲ.
3. ಮೇಲ್ಕಂಡ ಹುದ್ದೆಗಳ ಜಾಹೀರಾತಿಗೆ ಸಂಬಂಧಿತ ಇನ್ನಿತರ ಎಲ್ಲಾ ಷರತ್ತುಗಳು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಡಿಐಜಿ (ನೇಮಕಾತಿ)

CBC 19143/11/0020/2425

ಕರ್ನಾಟಕ ಸರ್ಕಾರ
ಶ್ರೀ ವೇಣುಗೋಪಾಲ ಕೃಷ್ಣ ಸ್ವಾಮಿ ದೇವಾಲಯ ಮತ್ತು ಸಮೂಹ ದೇವಾಲಯಗಳು
ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ
ಕಾರ್ಯನಿರ್ವಾಹಕ ಅಧಿಕಾರಿಗಳ ಕಾರ್ಯಾಲಯ, ಮಲ್ಲೇಶ್ವರಂ, ಬೆಂಗಳೂರು.
ದೂರವಾಣಿ ಸಂಖ್ಯೆ: 080–23313339 Email:samuhadevalya12@gmail.com

ಸಂಖ್ಯೆ: ಕಾ.ನಿ.ಅ/ಸಿಆರ್–12/2024–25 ದಿನಾಂಕ: 28.08.2024

ಸಂಕ್ಷಿಪ್ತ ಟೆಂಡರ್ ಅಧಿಸೂಚನೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಬೆಂಗಳೂರು ನಗರ ಮಲ್ಲೇಶ್ವರಂ, ಶ್ರೀ ವೇಣುಗೋಪಾಲ ಕೃಷ್ಣ ಸ್ವಾಮಿ ಮತ್ತು ಸಮೂಹ ದೇವಾಲಯಗಳಲ್ಲಿ ಈ ಕೆಳಕಂಡ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಪ್ರಕಟಣೆ ಹೊರಡಿಸಲಾಗಿರುತ್ತದೆ. ಟೆಂಡರ್ ಸಲ್ಲಿಸುವ ಟೆಂಡರ್‌ದಾರರು ಹೆಚ್ಚಿನ ಮಾಹಿತಿಗಾಗಿ (https://eproc.karnataka.gov.in) ಅಥವಾ ದೇವಾಲಯದ ದೂರವಾಣಿ ಸಂ: 080–23313339 ಅನ್ನು ಸಂಪರ್ಕಿಸಲು ಕೋರಿದೆ.

ಟೆಂಡರ್‌ನ ಹೆಸರು	ಕಡತ ಸಂಖ್ಯೆ	ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸುವ ದಿನಾಂಕ		ಆನ್‌ಲೈನ್ ಮೂಲಕ ಟೆಂಡರ್ ತೆರೆಯುವ ದಿನಾಂಕ
		ರಿಂದ	ವರೆಗೆ	
ಬೆಂಗಳೂರು ನಗರ ಮಲ್ಲೇಶ್ವರಂ, ಶ್ರೀ. ವೇಣುಗೋಪಾಲ ಕೃಷ್ಣ ಸ್ವಾಮಿ ಮತ್ತು ಸಮೂಹ ದೇವಾಲಯಗಳಿಗೆ ಅವಶ್ಯಕವಾದ ಹುದ್ದೆಗಳ ಸೇವೆಯನ್ನು ಹೊರ ಗುತ್ತಿಗೆ ಆಧಾರದಲ್ಲಿ ಪಡೆಯುವ ಬಗ್ಗೆ.	ಕಾ.ನಿ.ಅ/ಸಿಆರ್–12/2024–25	28.08.2024	11.09.2024	13.09.2024

ಸಹಿ/–
ಕಾರ್ಯನಿರ್ವಾಹಕ ಅಧಿಕಾರಿ
ಶ್ರೀ ವೇಣುಗೋಪಾಲ ಕೃಷ್ಣ ಸ್ವಾಮಿ ಮತ್ತು ಸಮೂಹ ದೇವಾಲಯಗಳು, ಮಲ್ಲೇಶ್ವರಂ, ಬೆಂಗಳೂರು

ವಾಸಸಂಇ/ವಾ.ಪ್ರ/1654/ಎಸ್‌ಎಸ್‌ಸಿ/2024–25

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಕೋಲಾರ ವಿಭಾಗ, ಕೋಲಾರ

ಸಂ: ಕರಾಸಾ/ಕೋವಿ/ಸಂಚಾರ/ವಾಣಿಜ್ಯ/873/2024–25 ದಿನಾಂಕ: 22–08 2024

ಸಂಧಾನ/ಮಾತುಕತೆ ಪ್ರಕಟಣೆ ಸಂ.06/2024 (ವಾಣಿಜ್ಯ ಮಳಿಗೆಗಳು)

(ಸಾ.ಸ್ಥಾ.ಆದೇಶ ಸಂಖ್ಯೆ: 787/17 ಹಾಗೂ ಪೂರಕ ಆದೇಶಗಳಂತೆ) ಹಾಗೂ
ಸಂಧಾನ/ಮಾತುಕತೆ ಪ್ರಕಟಣೆ ಸಂ.06/2024 (ಹೋರ್ಡಿಂಗ್ಸ್)
(ಸಾ.ಸ್ಥಾ.ಆದೇಶ ಸಂಖ್ಯೆ: 788/17 ಹಾಗೂ ಪೂರಕ ಆದೇಶಗಳಂತೆ)

* * * *

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಕೋಲಾರ ವಿಭಾಗದ ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ ವಾಣಿಜ್ಯ ಮಳಿಗೆಗಳಿಗೆ ಉಲ್ಲೇಖಿತ ಪತ್ರದಡಿಯಲ್ಲಿ ಸಂಧಾನ/ಮಾತುಕತೆ ಪ್ರಕಟಣೆ 06/2024 ಹೊರಡಿಸಿದ್ದು, ದಿನಾಂಕ: 10–09–2024 ರಂದು 12.00 ಗಂಟೆಗೆ ಸಂಧಾನ/ಮಾತುಕತೆ ನಿಗದಿಪಡಿಸಿದೆ. ಅದೇ ರೀತಿ ಕೋಲಾರ ವಿಭಾಗದ ಬಸ್ ನಿಲ್ದಾಣಗಳಲ್ಲಿ ಮತ್ತು ಘಟಕದಲ್ಲಿ ಖಾಲಿ ಇರುವ ಹೋರ್ಡಿಂಗ್ಸ್‌ಗಳಿಗೆ ಪರವಾನಗಿ ದಾರರನ್ನು ಆಯ್ಕೆ ಮಾಡಲು ಸಂಧಾನ/ಮಾತುಕತೆ ಪ್ರಕಟಣೆ 06/2024 ಹೊರಡಿಸಿದ್ದು ದಿನಾಂಕ: 10–09–2024ರಂದು 12.00 ಗಂಟೆಗೆ ಸಂಧಾನ/ಮಾತುಕತೆ ನಿಗದಿಪಡಿಸಿದೆ. ಆಸಕ್ತಿದಾರರು ಕಛೇರಿ ವೇಳೆಯಲ್ಲಿ ಸೂಚಿತ ಅರ್ಜಿ ಶುಲ್ಕ ಪಾವತಿಸಿ ದಿನಾಂಕ: 09–09–2024ರ 12.00 ಗಂಟೆಯವರೆಗೆ ರಾಷ್ಟ್ರೀಕೃತ/ಶೆಡ್ಯೂಲ್ ಬ್ಯಾಂಕ್‌ನಿಂದ ನಿಗದಿತ ಅರ್ಜಿ ಶುಲ್ಕದ ಡಿಡಿ ಸಲ್ಲಿಸಿ ಅಥವಾ ಈ ಕಛೇರಿಯಲ್ಲಿ ನಗದು ಪಾವತಿಸಿ ಅರ್ಜಿಗಳನ್ನು ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ವಿಭಾಗೀಯ ಕಛೇರಿ ಕ.ರಾ.ರ.ಸಾ. ನಿಗಮ ಕೋಲಾರ ವಿಭಾಗದಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ಮೊಬೈಲ್ ಸಂಖ್ಯೆ 7760990602 (ವಿಭಾಗೀಯ ಸಂಚಲನಾಧಿಕಾರಿಗಳು), 7760990620 (ಸಹಾಯಕ ಸಂಚಾರ ವ್ಯವಸ್ಥಾಪಕರು), 9448316268 (ವಿಷಯ ನಿರ್ವಾಹಕರು).

ಯಾವುದೇ ಕಾರಣ ನೀಡದೆ ಸಂಧಾನ/ಮಾತುಕತೆ ಪುರಸ್ಕರಿಸುವ ಹಾಗೂ ತಿರಸ್ಕರಿಸುವ, ಮುಂದೂಡುವ ಮತ್ತು ರದ್ದು ಮಾಡುವ ಹಕ್ಕನ್ನು ನಿಗಮವು ಕಾಯ್ದಿರಿಸಿಕೊಂಡಿದೆ.

ಸಹಿ/– ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ರಾ.ರ.ಸಾ. ನಿಗಮ, ಕೋಲಾರ.

ವಾ.ಸಾ.ಸಂ.ಇ/ವಾಪ್ರ/1682/ಆಕಾರ್/2024–25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮುಖ್ಯ ಆರೋಗ್ಯಾಧಿಕಾರಿ (ಸಾರ್ವಜನಿಕ ಆರೋಗ್ಯ) ರವರ ಕಛೇರಿ,
ಅನೆಕ್ಸ್ ಕಟ್ಟಡ–2, ಬಿಬಿಎಂಪಿ ಕೇಂದ್ರ ಕಛೇರಿ, ಎನ್.ಆರ್. ಚೌಕ, ಬೆಂಗಳೂರು–560002.

ಸಂಖ್ಯೆ:ಸಿ.ಪಿ.ಎಂ.ಓ/ಎನ್.ಯು.ಹೆಚ್.ಎಂ/ಪಿ.ಆರ್/ಎನ್.ಸಿ–03/2024–25 ದಿನಾಂಕ: 27–08–2024

ಪ್ರಕಟಣೆ

PM-ABHIM ಯೋಜನೆಯಡಿ ಪಾಲಿಕೆ ವ್ಯಾಪ್ತಿಯ ನಮ್ಮ ಕ್ಲಿನಿಕ್‌ಗಳಿಗೆ **ಅನುಮೋದನೆಗೊಂಡಿರುವ 243 ಕಿರಿಯ ಆರೋಗ್ಯ ಸಹಾಯಕರ ಹುದ್ದೆಗಳಿಗೆ** ಮೆರಿಟ್ ಕಂ ರೋಸ್ಟರ್ ಆಧಾರದ ಮೇಲೆ 1 ವರ್ಷದ ಅವಧಿಗೆ ಸಂಪೂರ್ಣ ಗುತ್ತಿಗೆ ಆಧಾರದ ಮೇಲೆ ವಾಕ್ ಇನ್ ಪ್ರಕ್ರಿಯೆ ಮೂಲಕ ನೇಮಕಾತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ವಿದ್ಯಾರ್ಹತೆ: SSLC or equivalent qualification and Health Worker Training from SIHFW Or SSLC or equivalent qualification with 3 years of Diploma in Health Inspector from State Paramedical Board Or PUC Science with 2 years of Diploma in Health Inspector from State Paramedical Board Must be registered in State Paramedical Board.

ವೇತನ / ತಿಂಗಳು: 18,523.70/-

ವಯಸ್ಸಿನ ಮಾನದಂಡ: GM (18 to 35 yrs), 2A, 2B, 3A,3B (18 to 38 yrs), SC, ST, CAT-1 (18 to 40 yrs)

ವಾಕ್ ಇನ್ ಪ್ರಕ್ರಿಯೆ ಸ್ಥಳ, ದಿನಾಂಕ ಮತ್ತು ಸಮಯ: 04–09–2024 ರಂದು ಬೆಳಿಗ್ಗೆ 10.30 ರಿಂದ ಸಂಜೆ 4.30 ಗಂಟೆವರೆಗೆ ಡಾ॥ ರಾಜ್‌ಕುಮಾರ್ ಗ್ಲಾಸ್ ಹೌಸ್, ಬಿಬಿಎಂಪಿ ಕೇಂದ್ರ ಕಛೇರಿ, ಎನ್.ಆರ್. ಚೌಕ, ಬೆಂಗಳೂರು – 560002.

ಅಭ್ಯರ್ಥಿಗಳಿಗೆ ಕನ್ನಡ ಭಾಷಾ ಜ್ಞಾನದ ಅವಶ್ಯಕತೆ ಕಡ್ಡಾಯವಾಗಿರುತ್ತದೆ. ಆಸಕ್ತರು ಬಿಬಿಎಂಪಿ ವೆಬ್‌ಸೈಟ್‌ನಲ್ಲಿರುವ ಅರ್ಜಿ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿದ ಅರ್ಜಿಯೊಂದಿಗೆ 2 ಪ್ರತಿ ಚೆಕ್‌ಲೀಸ್ಟ್ ಹಾಗೂ ಸಂಬಂಧಿಸಿದ ವಿದ್ಯಾರ್ಹತೆಯ ಮೂಲ ದಾಖಲೆಗಳನ್ನು, ಒಂದು ಸ್ವಯಂ ದೃಢೀಕೃತ ಜೆರಾಕ್ಸ್ ಪ್ರತಿ ಹಾಗೂ ಎರಡು ಭಾವಚಿತ್ರಗಳೊಂದಿಗೆ ಮೇಲೆ ಸೂಚಿಸಿರುವ ಸ್ಥಳ ಮತ್ತು ದಿನಾಂಕದಂದು ವಾಕ್ ಇನ್ ಪ್ರಕ್ರಿಯೆಗೆ ಹಾಜರಾಗಲು ಸೂಚಿಸಲಾಗಿದೆ. ಸದರಿ ಹುದ್ದೆಯ ಸಂಖ್ಯೆಯನ್ನು ಹೆಚ್ಚಿಸುವ ಅಥವಾ ಕಡಿಮೆಗೊಳಿಸುವ ಅಧಿಕಾರವನ್ನು ಪಾಲಿಕೆಯು ಹೊಂದಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೆಬ್‌ಸೈಟ್: **www.bbmp.gov.in** ನ್ನು ಸಂಪರ್ಕಿಸಲು ಸೂಚಿಸಲಾಗಿದೆ.

ಸಹಿ/–
ಮುಖ್ಯ ಆರೋಗ್ಯಾಧಿಕಾರಿ (ಸಾ.ಆ.), ಬಿಬಿಎಂಪಿ.

ಕಾಡಾನೆ ದಾಳಿ: ಹಾಡಿ ರೈತ ಸಾವು

ಎಚ್.ಡಿ.ಕೋಟೆ (ಮೈಸೂರು ಜಿಲ್ಲೆ): ಡಿ.ಬಿ.ಕುಪ್ಪೆ ಗ್ರಾಮ ಪಂಚಾಯಿತಿಯ ಗೋಳೂರು ಹಾಡಿಯಲ್ಲಿ ಮಂಗಳವಾರ ಬೆಳಗಿನ ಜಾವ ಕಾಡಾನೆ ದಾಳಿಗೆ ಸಿಲುಕಿ ಗಾಯಗೊಂಡಿದ್ದ ನಿವಾಸಿ ಕಾಳ (53) ಅವರು ಮೈಸೂರಿನ ಕೆ.ಆರ್ ಆಸ್ಪತ್ರೆಯಲ್ಲಿ ಮೃತಪಟ್ಟರು.

PUBLIC NOTICE

Our Client would like to inform the General Public that they are intending to purchase the Schedule Property described infra from its owners Sri. Narasappa Son of Late Sri. Lakshmaiah; family members of Late Sri. Chikka Revanna Siddaiah alias Revanasiddapa Son of Late Sri. Lakshmaiah; and family members of Late Sri. Narasamma Daughter of Late Sri. Lakshmaiah.

If anybody has any charge, lien, interest or title or claim or agreement on the Schedule Property, they should come forth with copies of documents in support of such claim and produce the same to the undersigned within 7 (seven) days from the date of publication of this notice. In the event no such legally tenable claim is received within the above period, our Client shall proceed with the transaction as if no such claims exist or that they have been waived or abandoned.

SCHEDULE PROPERTY

All that piece and parcel of the land bearing New Survey No. 65/4 (Old Survey No.65/1A) measuring 1 Acre 30 Guntas situated at Kakolu Village, Hesaraghatta 2 Hobli, Yalahanka Taluk and bounded on the :-

East by : Road, West by : Land bearing Sy. No. 65/1A, North by : Land bearing Sy.No. 65/1A & 65/1B, South by : Land bearing Sy.No. 65/2 & 65/3.

Signed/- **Mr. Varun Pai**, Advocate
AKS LAW ASSOCIATES
301, Sunrise Chambers,
Ulsoor Rd, Bengaluru - 560042.
August 27, 2024, Bengaluru

ಹಿಂದಿನ ಜಿಲ್ಲಾಧಿಕಾರಿಗೆ ವಿವರಣೆ ಕೇಳಿದ ಹೈಕೋರ್ಟ್

ಮತ ಎಣಿಕೆ ವಿಡಿಯೊ ನಾಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾಲೂರು ವಿಧಾನಸಭಾ ಕ್ಷೇತ್ರದ ಮತ ಎಣಿಕೆ ಕಾರ್ಯದ ಸಂಪೂರ್ಣ ವಿಡಿಯೊ ನಾಪತ್ತೆ ಯಾಗಿರುವ ಬಗ್ಗೆ ವಿವರಣೆ ನೀಡಿ ಪ್ರಮಾಣಪತ್ರ ಸಲ್ಲಿಸಿ' ಎಂದು ಚುನಾವಣೆ ಸಂದರ್ಭದಲ್ಲಿ ಕೋಲಾರ ಜಿಲ್ಲಾ ಚುನಾವಣಾಧಿಕಾರಿ ಆಗಿದ್ದ ಹಾಗೂ ಸದ್ಯ ಕೊಡಗು ಜಿಲ್ಲಾಧಿಕಾರಿ ಆಗಿರುವ ವೆಂಕಟರಾಜ್ ಅವರಿಗೆ ಹೈಕೋರ್ಟ್ ಸೂಚಿಸಿದೆ.

ಈ ಸಂಬಂಧ ಬಿಜೆಪಿಯ ಪರಾಜಿತ ಅಭ್ಯರ್ಥಿ ಕೆ.ಎಸ್. ಮಂಜುನಾಥ್ ಗೌಡ ಸಲ್ಲಿಸಿರುವ ಚುನಾವಣಾ ತಕರಾರು ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಆರ್.ದೇವದಾಸ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಮತ ಎಣಿಕೆ ಕಾರ್ಯದ ಸಂಪೂರ್ಣ ವಿಡಿಯೊ ದೃಶ್ಯಾವಳಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕು. ತಪ್ಪಿದರೆ ಕೋಲಾರ ಜಿಲ್ಲಾ ಚುನಾವಣಾಧಿಕಾರಿ ಇದೇ 27ರಂದು ನ್ಯಾಯಾಲಯಕ್ಕೆ ಖುದ್ದು ವಿಚಾರಣೆಗೆ ಹಾಜರಾಗಬೇಕು' ಎಂದು ಪೀಠ ಈ ಹಿಂದಿನ ವಿಚಾರಣೆ ವೇಳೆ ಸೂಚಿಸಿತ್ತು.

ಅದರಂತೆ ಸದ್ಯ ಜಿಲ್ಲಾ ಚುನಾವಣಾಧಿಕಾರಿಯೂ ಆಗಿರುವ ಹಾಲಿ ಕೋಲಾರ ಜಿಲ್ಲಾಧಿಕಾರಿ ಅಕ್ರಂ ಪಾಷಾ ಮಂಗಳವಾರ ನ್ಯಾಯಪೀಠದ ಮುಂದೆ ಹಾಜರಾಗಿದ್ದರು.

ಈ ವೇಳೆ ಜಿಲ್ಲಾ ಚುನಾವಣಾಧಿಕಾರಿ ಪರ ವಕೀಲ ಶರತ್ ದೊಡವಾಡ ಹಾಜರಾಗಿ, 'ಮತ ಎಣಿಕೆ ಕಾರ್ಯದ ವಿಡಿಯೊ ದೃಶ್ಯಾವಳಿಗಳು ನಾಪತ್ತೆಯಾಗಿವೆ. ಅವುಗಳ ಪತ್ತೆಗೆ ಪ್ರಯತ್ನಿಸಲಾಯಿತು. ಚುನಾವಣೆ, ಮತ ಎಣಿಕೆ ನಡೆದಾಗ ಈಗಿನ ಜಿಲ್ಲಾ ಚುನಾವಣಾಧಿಕಾರಿ ಅಕ್ರಂ ಪಾಷಾ ಕೋಲಾರ ಜಿಲ್ಲಾಧಿಕಾರಿ ಆಗಿರಲಿಲ್ಲ. ಚುನಾವಣೆ, ಮತ ಎಣಿಕೆಯು ಎಲ್ಲ ಕಾರ್ಯವೂ ಈ ಹಿಂದಿನ ಜಿಲ್ಲಾ ಚುನಾವಣಾಧಿಕಾರಿ ವೆಂಕಟರಾಜ್ ಅವರ ಅವಧಿಯಲ್ಲಿ ನಡೆದಿದೆ. ಸ್ಟ್ರಾಂಗ್ ರೂಂ ತೆರೆಯುವ ಪ್ರಕ್ರಿಯೆಯೂ ಹಿಂದಿನ ಜಿಲ್ಲಾ ಚುನಾವಣಾಧಿಕಾರಿ ಸಮ್ಮುಖದಲ್ಲೇ ನಡೆದಿದೆ. ಆಗಿನ ಮತ ಎಣಿಕೆಯ ವಿಡಿಯೊ ಚಿತ್ರೀಕರಣ, ಸಿ.ಸಿ. ಟಿ.ವಿ ಕ್ಯಾಮರಾ ದೃಶ್ಯಾವಳಿಗಳ ಬಗ್ಗೆ ಈಗಿನ ಜಿಲ್ಲಾ ಚುನಾವಣಾಧಿಕಾರಿಗೆ ಮಾಹಿತಿ ಇಲ್ಲ. ಈ ವಿಚಾರವನ್ನು ರಾಜ್ಯ ಮುಖ್ಯ ಚುನಾವಣಾ ಅಧಿಕಾರಿಗೂ ತಿಳಿಸಲಾಗಿದೆ. ಸಿ.ಸಿ. ಟಿ.ವಿ ಕ್ಯಾಮರಾಗಳನ್ನು ಪೂರೈಸಿದ ಖಾಸಗಿ ಕಂಪೆನಿಯಿಂದಲೂ ಮಾಹಿತಿ ಕೇಳಲಾಗಿತ್ತು' ಎಂದು ಪೀಠಕ್ಕೆ ತಿಳಿಸಿದರು.

ಇದನ್ನು ದಾಖಲಿಸಿಕೊಂಡ ನ್ಯಾಯಪೀಠ, 'ಮತ ಎಣಿಕೆ ಕಾರ್ಯದ ವಿಡಿಯೊ ರೆಕಾರ್ಡಿಂಗ್ ನಾಪತ್ತೆಯಾಗಿರುವ ಕುರಿತು ವಿವರಣೆ ನೀಡಿ ಚುನಾವಣೆ ನಡೆದಾಗ ಜಿಲ್ಲಾ ಚುನಾವಣಾಧಿಕಾರಿ ಆಗಿದ್ದ, ಸದ್ಯ ಕೊಡಗು ಜಿಲ್ಲಾಧಿಕಾರಿಯಾಗಿ ವೆಂಕಟರಾಜ್ ಅವರು ಪ್ರಮಾಣಪತ್ರ ಸಲ್ಲಿಸಬೇಕು. ಜೊತೆಗೆ, ಈ ಬಗ್ಗೆ ವೆಂಕಟರಾಜ್ ತಮ್ಮದೇ ಆದ ತನಿಖೆ ಸಹ ನಡೆಸಬಹುದು' ಎಂದು ಸೂಚಿಸಿ ವಿಚಾರಣೆಯನ್ನು ಸೆಪ್ಟೆಂಬರ್ 10ಕ್ಕೆ ಮುಂದೂಡಿದೆ.

ಚುನಾವಣಾ ಅಕ್ರಮ ಆರೋಪ: ಸಂಸದೆ ಪ್ರಭಾಗೆ ನೋಟಿಸ್



ಬೆಂಗಳೂರು: ಚುನಾವಣಾ ಅಕ್ರಮ ಆರೋಪಕ್ಕೆ ಸಂಬಂಧಿಸಿದಂತೆ ದಾವಣಗೆರೆ ಕ್ಷೇತ್ರದ ಕಾಂಗ್ರೆಸ್ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ಚುನಾವಣೆಯಲ್ಲಿ ಪರಾಭವ ಹೊಂದಿದ ಜಿ.ಎಸ್.ಗಾಯಿತ್ರಿ ಸಿದ್ದೇಶ್ವರ್ ಹಾಗೂ ದಾವಣಗೆರೆಯ ಸುಭಾನ್ ಖಾನ್ ಸಲ್ಲಿಸಿರುವ ಈ ಚುನಾವಣಾ ತಕರಾರು ಅರ್ಜಿಯನ್ನು ನ್ಯಾಯಮೂರ್ತಿ ಎಂ.ಐ. ಅರುಣ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಕೆಲ ಕಾಲ ವಾದ ಆಲಿಸಿದ ನ್ಯಾಯಪೀಠ, ಪ್ರಭಾ ಮಲ್ಲಿಕಾರ್ಜುನ್ ಸೇರಿದಂತೆ ದಾವಣಗೆರೆ ಲೋಕಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದ ಇತರ ಅಭ್ಯರ್ಥಿಗಳು ಹಾಗೂ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ಅರ್ಜಿಗೆ ಸಂಬಂಧಿಸಿ ಆಕ್ಷೇಪಣೆ ಸಲ್ಲಿಸಲು ಪ್ರತಿವಾದಿಗಳಿಗೆ ಸೂಚಿಸಿದ ನ್ಯಾಯಪೀಠ ವಿಚಾರಣೆಯನ್ನು ಸೆಪ್ಟೆಂಬರ್ 19ಕ್ಕೆ ಮುಂದೂಡಿತು.'ಪ್ರಭಾ ಮಲ್ಲಿಕಾರ್ಜುನ್ ಗ್ಯಾರಂಟಿ ಕಾರ್ಡ್ ವಿತರಿಸಿ ಮತದಾರರಿಗೆ ಆಮಿಷವೊಡ್ಡಿದ್ದಾರೆ. ಮಹಿಳೆಯರಿಗೆ ₹1 ಲಕ್ಷ ಕೊಡುವುದಾಗಿ ಭರವಸೆ ನೀಡಿದ್ದರು. ಅಲ್ಲದೆ, ಹಲವು ಚುನಾವಣಾ ಅಕ್ರಮ ನಡೆಸಿ ಆಯ್ಕೆಯಾಗಿದ್ದಾರೆ. ಇದು ಜನಪ್ರಾತಿನಿಧ್ಯ ಕಾಯ್ದೆಗೆ ವಿರುದ್ಧವಾಗಿರುವ ಕಾರಣ ಅವರ ಆಯ್ಕೆಯನ್ನು ಅನೂರ್ಜಿತಗೊಳಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

'ಜಿಂದಾಲ್‌ಗೆ ಜಮೀನು ಮಾರಾಟ ನ್ಯಾಯಸಮ್ಮತ'

ಬಳ್ಳಾರಿ: 'ಸಂಡೂರು ತಾಲ್ಲೂಕಿನ ತೋರಣಗಲ್‌ನಲ್ಲಿ ಇರುವ ಜಿಂದಾಲ್ ಉಕ್ಕು ಕಂಪನಿಗೆ 3,677 ಎಕರೆ ಜಮೀನು ಮಾರಿದ್ದು, ನ್ಯಾಯಕ್ಕೆ ಸಿಕ್ಕ ಜಯ' ಎಂದು ಕಾಂಗ್ರೆಸ್ ನಾಯಕ ಕೆ.ಸಿ. ಕೊಂಡಯ್ಯ ಸುದ್ದಿಗಾರರಿಗೆ ತಿಳಿಸಿದರು.

'ಜಿಂದಾಲ್ ಕಂಪನಿಗೆ ಜಮೀನನ್ನು ಗುತ್ತಿಗೆ ಆಧಾರದಲ್ಲಿ ನೀಡಲಾಗಿತ್ತು. ಗುತ್ತಿಗೆ ಅವಧಿ ಮುಗಿದ ಬಳಿಕ ಮಾರಾಟ ಮಾಡಬೇಕಿತ್ತು. ಪ್ರಕ್ರಿಯೆ ವಿಳಂಬವಾದ ಕಾರಣ ಕಂಪನಿ ನ್ಯಾಯಾಲಯದ ಮೆಟ್ಟಿಲೇರಿತ್ತು. ಈಚೆಗೆ ನ್ಯಾಯಾಲಯವು ಕಂಪನಿ ಪರ ತೀರ್ಪು ನೀಡಿದ್ದು, ಅದರಂತೆ ಮಾರಾಟ ಮಾಡಲು ತೀರ್ಮಾನಿಸಲಾಗಿದೆ' ಎಂದು ಹೇಳಿದರು.

'ಮಾರಾಟ ಪ್ರಕ್ರಿಯೆಯಲ್ಲಿ ಅವ್ಯವಹಾರ ಆಗಿದೆಯೆಂದು ಶಾಸಕ ಅರವಿಂದ ಬೆಲ್ಲದ್ ಸೇರಿ ಸಂಘಸಂಸ್ಥೆಗಳು, ಹೊರಗಿನವರು ಬಳ್ಳಾರಿ ಜನರ ದಾರಿತಪ್ಪಿಸುತ್ತಿದ್ದಾರೆ. ದಾಖಲೆಗಳನ್ನು ನೋಡಿ ಮಾತನಾಡಬೇಕು' ಎಂದರು.

'ಜಿಂದಾಲ್ ಕಂಪನಿಯ ವಾರ್ಷಿಕ ಉತ್ಪಾದನೆ 1.5 ಲಕ್ಷ ಟನ್‌ನಿಂದ 27 ಲಕ್ಷ ಟನ್‌ಗೆ ಏರಿಕೆಯಾಗಿದೆ. ಬಳ್ಳಾರಿ ಜೀವನಾಡಿಯಾದ ಈ ಕಂಪನಿ ನಂಬಿ 30 ಸ್ಪಾಂಜ್ ಐರನ್ ಕಂಪನಿಗಳಿವೆ. ಬೇರೆ ಕಾರ್ಖಾನೆಗಳು ಬರಲು ಇಲ್ಲಿ ಪೂರಕ ವ್ಯವಸ್ಥೆ ಇಲ್ಲ. ಹೀಗಾಗಿ ನಾವು ಜಿಂದಾಲ್‌ಗೆ ಬೆಂಬಲಿಸಬೇಕು' ಎಂದರು.

‘ಉಪನಗರ ರೈಲು: ವಿಳಂಬ ಸಲ್ಲ’

‘ವಿಳಂಬವಾದರೆ ಗುತ್ತಿಗೆದಾರ ಸಂಸ್ಥೆಯಿಂದಲೇ ವೆಚ್ಚ ವಸೂಲಿ’: ಸಚಿವ ಎಂ.ಬಿ. ಪಾಟೀಲ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚಿಕ್ಕಬಾಣಾವರ–ಬೈಯ್ಯಪ್ಪನಹಳ್ಳಿ ಉಪನಗರ ರೈಲು ಯೋಜನೆ ತೀರಾ ವಿಳಂಬವಾಗುತ್ತಿದ್ದು, ಅದರಿಂದಾಗುವ ಹೆಚ್ಚುವರಿ ವೆಚ್ಚವನ್ನು ಗುತ್ತಿಗೆದಾರ ಸಂಸ್ಥೆಯಿಂದಲೇ ವಸೂಲಿ ಮಾಡಬೇಕಾಗುತ್ತದೆ’ ಎಂದು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ.ಪಾಟೀಲ ಎಚ್ಚರಿಕೆ ನೀಡಿದರು.

ಯೋಜನೆಯ ಅನುಷ್ಠಾನದಲ್ಲಿ ನಿರೀಕ್ಷಿತ ಪ್ರಗತಿ ಸಾಧಿಸದೇ ಇರುವ ಬಗ್ಗೆ ಅವರು, ಮಂಗಳವಾರ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಎಂ.ಬಿ.ಪಾಟೀಲ

ಗುತ್ತಿಗೆದಾರ ಕಂಪನಿ ಎಲ್ ಅಂಡ್ ಟಿಯ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

‘2025ರ ಆಗಸ್ಟ್ ವೇಳೆಗೆ ಮೊದಲ ರೈಲು ಸಂಚಾರ ಆರಂಭಿಸುವುದಾಗಿ ಜನರಿಗೆ ಮಾತು ಕೊಟ್ಟಿದ್ದೇವೆ. ಇದುವರೆಗೂ ಒಟ್ಟು ₹459 ಕೋಟಿ ವೆಚ್ಚದ ಆರ್ಥಿಕ ಪ್ರಗತಿ ಸಾಧಿಸಬೇಕಾಗಿತ್ತು. ಆದರೆ, ಆಗಿರುವುದು ಕೇವಲ ₹86 ಕೋಟಿ. ಇದೇ ಪರಿಸ್ಥಿತಿ ಮುಂದುವರಿದರೆ ಗುತ್ತಿಗೆದಾರ ಸಂಸ್ಥೆ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ’ ಎಂದು ಎಚ್ಚರಿಸಿದರು.

‘ಕಾಮಗಾರಿ ಕುಂಠಿತವಾಗಿದೆ. ವಾರ ಮತ್ತು ತಿಂಗಳ ಆಧಾರದಲ್ಲಿ ಪ್ರಗತಿಯನ್ನು ಪರಿಶೀಲಿಸಬೇಕು. ಯಾವುದೇ ಕಾರಣಕ್ಕೂ ಕಾಮಗಾರಿ ಅವಧಿಯನ್ನು ವಿಸ್ತರಿಸುವುದಿಲ್ಲ. ಗಡುವಿನೊಳಗೇ ಮುಗಿಸುವ ಹಾಗೆ ರಾತ್ರಿ-ಹಗಲು ಕೆಲಸ ಮಾಡಬೇಕು’ ಎಂದು ಕೆ-ರೈಡ್ ಅಧಿಕಾರಿಗಳಿಗೆ ಸೂಚಿಸಿದರು.

ಹೀಲಲಗಿ- ರಾಜಾನುಕುಂಟೆ ಯೋಜನೆಯ ಗುತ್ತಿಗೆಯನ್ನೂ ಎಲ್ ಆಂಡ್ ಟಿ ಪಡೆದಿದ್ದು, ಆ ಕಾಮಗಾರಿಯನ್ನು ಇನ್ನಷ್ಟು ಚುರುಕುಗೊಳಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಮೂಲಸೌಕರ್ಯ ಇಲಾಖೆ ಕಾರ್ಯದರ್ಶಿ ಮತ್ತು ಕೆ-ರೈಡ್ ವ್ಯವಸ್ಥಾಪಕ ನಿರ್ದೇಶಕಿ ಎನ್.ಮಂಜುಳಾ, ಸಚಿವರ ತಾಂತ್ರಿಕ ಸಲಹೆಗಾರ ಅರವಿಂದ ಗಲಗಲಿ ಸಭೆಯಲ್ಲಿ ಇದ್ದರು.

ರೈಲು ಯೋಜನೆಗಳ ಪರಿಶೀಲನೆ

ರೈಲ್ವೆ ಜತೆ ವೆಚ್ಚ ಹಂಚಿಕೆ ಆಧಾರದಲ್ಲಿ ಕೈಗೊಂಡಿರುವ ರಾಜ್ಯದ ರೈಲು ಯೋಜನೆಗಳಿಗೆ ಎದುರಾಗಿರುವ ಭೂಸ್ವಾಧೀನಕ್ಕೆ ತೊಡಕು ಸೇರಿ ವಿವಿಧ ಸಮಸ್ಯೆಗಳ ಕುರಿತು ಎಂ.ಬಿ.ಪಾಟೀಲ ನೈರುತ್ಯ ರೈಲ್ವೆ ಅಧಿಕಾರಿಗಳ ಜತೆ ಸಭೆ ನಡೆಸಿದರು.

ಬೆಂಗಳೂರು–ವಿಜಯಪುರ ಮಾರ್ಗದಲ್ಲಿ ಬಾಕಿ ಇರುವ ಕಿರುಸೇತುವೆಗಳ ಕಾಮಗಾರಿಗಳನ್ನು ತ್ವರಿತವಾಗಿ ಮುಗಿಸಬೇಕು. ಇದರಿಂದ ಪ್ರಯಾಣದ ಅವಧಿ 14–15 ಗಂಟೆಯಿಂದ 10–11 ಗಂಟೆಗೆ ಇಳಿಕೆಯಾಗಲಿದೆ ಎಂದರು.

ಗದಗ- ವಾಡಿ, ಧಾರವಾಡ-ಬೆಳಗಾವಿ, ತುಮಕೂರು- ದಾವಣಗೆರೆ, ತುಮಕೂರು- ರಾಯದುರ್ಗ ರೈಲು ಯೋಜನೆಗಳ ಪ್ರಗತಿ ಪರಿಶೀಲಿಸಿದರು. ಕಾಮಗಾರಿಗಳನ್ನು ನಿಗದಿತ ಅವಧಿಯೊಳಗೆ ಮುಗಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ವೈಜ್ಞಾನಿಕ ಸಮ್ಮೇಳನ ಡಿ. 28ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತಿನಿಂದ ಡಿಸೆಂಬರ್ 28 ಮತ್ತು 29ರಂದು ಬಾಗಲೂರಿನ ವಿ.ಜೆ. ಇಂಟರ್‌ನ್ಯಾಷನಲ್ ಸ್ಕೂಲ್ ಮೈದಾನದಲ್ಲಿ ‘ರಾಜ್ಯಮಟ್ಟದ ನಾಲ್ಕನೇ ವೈಜ್ಞಾನಿಕ ಸಮ್ಮೇಳನ’ ನಡೆಯಲಿದೆ ಎಂದು ಪರಿಷತ್ತಿನ ಸಂಸ್ಥಾಪಕ ಅಧ್ಯಕ್ಷ ಹುಲಿಕಲ್ ನಟರಾಜ್ ತಿಳಿಸಿದರು.

ಇತ್ತೀಚೆಗೆ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ‘ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವನೆಯನ್ನು ಮೂಡಿಸುವ ಉದ್ದೇಶದಿಂದ ನಾಲ್ಕು ವರ್ಷಗಳಿಂದ ನಿರಂತರವಾಗಿ ವೈಜ್ಞಾನಿಕ ಸಮ್ಮೇಳನ ಆಯೋಜಿಸಲಾಗುತ್ತಿದೆ. ಸರ್ಕಾರ ಹಾಗೂ ಅನೇಕ ಸಂಘ–ಸಂಸ್ಥೆಗಳು ಸಮ್ಮೇಳನದ ಯಶಸ್ವಿಗೆ ಕೈಜೋಡಿಸುತ್ತಿವೆ. ಎರಡು ದಿನ ನಡೆಯುವ ಸಮ್ಮೇಳನದಲ್ಲಿ ಜನಪ್ರತಿನಿಧಿಗಳು, ಸಂಪನ್ಮೂಲ ವ್ಯಕ್ತಿಗಳು, ಚಿಂತಕರು, ಸಾಹಿತಿಗಳು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಪಾಲ್ಗೊಳ್ಳಲಿದ್ದಾರೆ. ಈಗಾಗಲೆ ಸಮ್ಮೇಳನದ ಯಶಸ್ವಿಗೆ ಹಲವಾರು ಸಮಿತಿಗಳನ್ನು ರಚಿಸಲಾಗಿದೆ’ ಎಂದು ಮಾಹಿತಿ ನೀಡಿದರು.

‘ಸಮ್ಮೇಳನದಲ್ಲಿ ಗೋಷ್ಠಿಗಳು, ಆಹಾರ ಮೇಳ, ವಸ್ತು ಪ್ರದರ್ಶನ, ಸ್ಮರಣ ಸಂಚಿಕೆ ಬಿಡುಗಡೆ, ಎಚ್.ಎನ್. ಪ್ರಶಸ್ತಿ ಹಾಗೂ ಸಾಧಕ ಪ್ರಶಸ್ತಿಗೆ ಆಹ್ವಾನ ಮೊದಲಾದ ವಿಷಯಗಳ ಕುರಿತು ಚರ್ಚೆ ನಡೆದಿದೆ’ ಎಂದರು.



ಶಿಖರ್ ಧವನ್ ಕ್ರಿಕೆಟ್‌ನಿಂದ ನಿವೃತ್ತಿ ಪಡೆದಿದ್ದಾರೆ !

‘ಪಿಎಂಸಿ ಹೆಸರಲ್ಲಿ ಅಧಿಕಾರಿಗಳಿಂದ ಅಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ(ಬಿಬಿಎಂಪಿ) ವ್ಯಾಪ್ತಿಯಲ್ಲಿ ಮುಖ್ಯ ಎಂಜಿನಿಯರ್‌ಗಳು ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಕನ್ಸಲ್ಟೆನ್ಸಿ (ಪಿಎಂಸಿ) ಹೆಸರಲ್ಲಿ ಲಕ್ಷಾಂತರ ರೂಪಾಯಿ ಹಣ ದೋಚುತ್ತಿದ್ದಾರೆ ಎಂದು ಬಿಜೆಪಿ ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದ ಅಧ್ಯಕ್ಷ ಎನ್.ಆರ್. ರಮೇಶ್ ಆರೋಪಿಸಿದ್ದಾರೆ.

ಬಿಬಿಎಂಪಿ ಆಡಳಿತಾಧಿಕಾರಿ ಎಸ್.ಆರ್. ಉಮಾಶಂಕರ್, ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಪತ್ರ ಬರೆದಿರುವ ಅವರು, ‘ಬಿಬಿಎಂಪಿ ವ್ಯಾಪ್ತಿಯಲ್ಲಿ ಕೈಗೊಳ್ಳುವ ಪ್ರತಿ ಕಾಮಗಾರಿಯ ಪಿಎಂಸಿ ಕಾರ್ಯವನ್ನು ಆಯಾ ಮುಖ್ಯ ಎಂಜಿನಿಯರ್‌ಗಳೇ ಕಾನೂನು ಬಾಹಿರವಾಗಿ ನಿರ್ವಹಿಸುತ್ತಿದ್ದಾರೆ. ಪ್ರತಿ ಕಾಮಗಾರಿಯ ಒಟ್ಟು ಮೊತ್ತದ ಶೇ 2ರಷ್ಟನ್ನು ಪಿಎಂಸಿ ಹೆಸರಲ್ಲಿ ಕಡಿತಗೊಳಿಸುತ್ತಿದ್ದಾರೆ. ಪಿಎಂಸಿ ಕೆಲಸಗಳನ್ನು ತಮ್ಮ ಸಂಬಂಧಿಕರು ಅಥವಾ ಹಿಂಬಾಲಕರ ಮೂಲಕ ನಡೆಸುತ್ತಿದ್ದಾರೆ. ಈ ಮೂಲಕ ಪ್ರತಿ ಕಾಮಗಾರಿಯಲ್ಲಿ ಲಕ್ಷಾಂತರ ರೂಪಾಯಿ ದೋಚುತ್ತಿದ್ದಾರೆ’ ಎಂದು ದೂರಿದ್ದಾರೆ.

ನಿಯಮಾನುಸಾರ ಟೆಂಡರ್ ಆಹ್ವಾನಿಸಿ ಅರ್ಹ ಸಂಸ್ಥೆಗಳಿಗಷ್ಟೇ ಪಿಎಂಸಿ ಕೆಲಸ ನೀಡುವಂತೆ ಕಟ್ಟುನಿಟ್ಟಿನ ಆದೇಶ ನೀಡಬೇಕು. 10 ವರ್ಷಗಳಿಂದ ಈ ರೀತಿಯ ಕಾನೂನುಬಾಹಿರ ಕಾರ್ಯದಲ್ಲಿ ತೊಡಗಿಕೊಂಡಿರುವ ಎಲ್ಲಾ ಮುಖ್ಯ ಎಂಜಿನಿಯರ್‌ಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು. ಅಕ್ರಮದ ತನಿಖೆಯನ್ನು ಸಿಐಡಿಗೆ ವಹಿಸಲು ಸರ್ಕಾರಕ್ಕೆ ಪತ್ರ ಬರೆಯಬೇಕು ಎಂದು ಆಗ್ರಹಿಸಿದ್ದಾರೆ.

ಇದೇ 30ರಿಂದ ಅಕ್ಕ ಸಮ್ಮೇಳನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೆರಿಕಾ ಕನ್ನಡ ಕೂಟಗಳ ಆಗರವು (ಅಕ್ಕ) ಇದೇ 30ರಿಂದ ಸೆಪ್ಟೆಂಬರ್ 1ರವರೆಗೆ ಅಮೆರಿಕದ ವರ್ಜೀನಿಯಾದ ರಿಚ್‌ಮಂಡ್ ನಗರದಲ್ಲಿ ‘ಅಕ್ಕ’ ವಿಶ್ವ ಕನ್ನಡ ಸಮ್ಮೇಳನ ಹಮ್ಮಿಕೊಂಡಿದೆ.

‘ಅಮೆರಿಕದಲ್ಲಿನ 50ಕ್ಕೂ ಅಧಿಕ ಕನ್ನಡ ಸಂಘಗಳು ಸೇರಿ ಈ ಸಮ್ಮೇಳನ ಆಯೋಜಿಸುತ್ತಿವೆ. ಎರಡು ವರ್ಷಗಳಿಗೊಮ್ಮೆ ನಡೆಯಬೇಕಾದ ಈ ಸಮ್ಮೇಳನ, ಕೋವಿಡ್ ಕಾರಣದಿಂದ ಮುಂದೂಡಿಕೆಯಾಗಿತ್ತು. ಸಮ್ಮೇಳನಕ್ಕೆ ಭರದಿಂದ ಸಿದ್ಧತೆ ನಡೆದಿದ್ದು, ಈಗಾಗಲೇ ಆರು ಸಾವಿರಕ್ಕೂ ಅಧಿಕ ಕನ್ನಡಿಗರು ನೋಂದಾಯಿಸಿಕೊಂಡಿದ್ದಾರೆ. ಮೂರು ದಿನಗಳು ರಿಚ್‌ಮಂಡ್ ನಗರದಲ್ಲಿ ಕನ್ನಡ ಡಿಂಡಿಮಿಸಲಿದೆ’ ಎಂದು ಅಕ್ಕದ ಅಧ್ಯಕ್ಷ ರವಿ ಬೋರೇಗೌಡ ತಿಳಿಸಿದ್ದಾರೆ.

‘ಸಮ್ಮೇಳನದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು, ಸ್ಪರ್ಧೆಗಳು, ಫ್ಯಾಶನ್ ಶೋ, ಸಾಹಿತ್ಯ ಗೋಷ್ಠಿ, ಬಿಸಿನೆಸ್ ಫೋರಂ, ನಾಡಿನ ವಿಶಿಷ್ಟ ಖಾದ್ಯಗಳ ಭೋಜನ, ನಟ ಪುನೀತ್ ರಾಜ್‌ಕುಮಾರ್ ಅವರಿಗೆ ನಮನ ಸಲ್ಲಿಸುವ ಸಂಗೀತ ಸಂಜೆ, ನಾಡಿನ ಪಾರಂಪರಿಕ ನೃತ್ಯ ಶೈಲಿಗಳಾದ ಡೊಳ್ಳು ಕುಣಿತ, ಯಕ್ಷಗಾನ ಪ್ರದರ್ಶನ, ಕನ್ನಡ ನಾಟಕಗಳ ಪ್ರದರ್ಶನ ಹೀಗೆ ವಿವಿಧ ಕಾರ್ಯಕ್ರಮಗಳನ್ನು ಒಕ್ಕೂಟ ಆಯೋಜಿಸಿದೆ’ ಎಂದು ಹೇಳಿದ್ದಾರೆ.

‘ಸಮ್ಮೇಳನಕ್ಕೆ ರಾಜ್ಯದಿಂದ ವಿಶೇಷ ಆಹ್ವಾನಿತರಾಗಿ ನಿರ್ಮಲಾನಂದನಾಥ ಸ್ವಾಮೀಜಿ, ವಚನಾನಂದ ಸ್ವಾಮೀಜಿ, ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ, ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ’ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ ಪ್ರಕಾಶ ಪಾಟೀಲ ಭರವಸೆ

‘ಮಹಿಳಾ ವೈದ್ಯರ ಸುರಕ್ಷತೆಗೆ ಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವೈದ್ಯಕೀಯ ಕಾಲೇಜುಗಳು ಹಾಗೂ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ನುರಿತ ಭದ್ರತಾ ಸಿಬ್ಬಂದಿ ನಿಯೋಜನೆ, ಸಿಸಿಟಿವಿ ಕ್ಯಾಮೆರಾಗಳ ಸಂಖ್ಯೆ ಹೆಚ್ಚಳ ಸೇರಿ ವಿವಿಧ ಕ್ರಮಗಳ ಮೂಲಕ ಮಹಿಳಾ ವೈದ್ಯರಿಗೆ ಅಗತ್ಯ ಸುರಕ್ಷತೆ ಒದಗಿಸಲಾಗುವುದು’ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ ಪ್ರಕಾಶ ಪಾಟೀಲ ತಿಳಿಸಿದರು.

ಡಾ. ಶರಣ ಪ್ರಕಾಶ ಪಾಟೀಲ

ವೈದ್ಯಕೀಯ ಸಂಸ್ಥೆಗಳಲ್ಲಿ ಭದ್ರತೆ ಹೆಚ್ಚಿಸುವ ಬಗ್ಗೆ ವೈದ್ಯಾಧಿಕಾರಿಗಳೊಂದಿಗೆ ಮಂಗಳವಾರ ಸಭೆ ನಡೆಸಿದ ಅವರು, ‘ಲೈಂಗಿಕ ದೌರ್ಜನ್ಯದಂಥ ಪ್ರಕರಣಗಳ ವಿರುದ್ಧ ಸರ್ಕಾರ ಕಠಿಣ ಕ್ರಮ ಕೈಗೊಳ್ಳಲಿದೆ. ಮಹಿಳಾ ವೈದ್ಯರ ಸುರಕ್ಷತೆಗೆ ನಾವು ಬದ್ಧವಾಗಿದ್ದೇವೆ. ವೈದ್ಯ ಸಿಬ್ಬಂದಿಯ ವಸತಿ ನಿಲಯಗಳ ಸುರಕ್ಷತೆಗೂ ಆದ್ಯತೆ ನೀಡುತ್ತಿದ್ದೇವೆ. ಈ ಕ್ರಮಗಳು ಕೇಂದ್ರ ಸರ್ಕಾರ ಮತ್ತು ಸುಪ್ರೀಂ ಕೋರ್ಟ್ ನಿಗದಿಪಡಿಸಿದ ಮಾರ್ಗಸೂಚಿಗಳಿಗೆ ಅನುಗುಣವಾಗಿರಲಿವೆ’ ಎಂದು ಹೇಳಿದರು.

ಉದ್ಯೋಗದ ಸ್ಥಳದಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ (ತಡೆ, ನಿರ್ಬಂಧ ಮತ್ತು ಪರಿಹಾರ) ಕಾಯ್ದೆಯಡಿ ಸ್ಥಾಪಿಸಲಾದ ಆಂತರಿಕ ದೂರುಗಳ ಸಮಿತಿಯ ಪ್ರಾಮುಖ್ಯತೆ ವಿವರಿಸಿದ ಸಚಿವರು, ‘ಈ ಸಮಿತಿಯ ಎದುರು ಹೇಳಿಕೊಳ್ಳುವ ಎಲ್ಲ ಸಮಸ್ಯೆಗಳನ್ನು ಕಟ್ಟುನಿಟ್ಟಾಗಿ ಪರಿಹರಿಸಲಾಗುತ್ತದೆ’ ಎಂದು ತಿಳಿಸಿದರು.

ಸಭೆಯಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆ ನಿರ್ದೇಶಕಿ ಡಾ. ಸುಜಾತಾ ರಾಥೋಡ್, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ (ಬಿಎಂಸಿಆರ್‌ಐ) ಡೀನ್ ಮತ್ತು ನಿರ್ದೇಶಕ ಡಾ. ರಮೇಶ್ ಕೃಷ್ಣ, ಪ್ರಾಂಶುಪಾಲೆ ಡಾ. ಅಸಿಮಾ ಬಾನು ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಆರೋಪ

‘ರಾಹುಲ್ ಖರ್ಗೆ ಟ್ರಸ್ಟ್‌ಗೆ ಅಕ್ರಮವಾಗಿ ಜಾಗ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಎಲ್ಲ ನಿಯಮಗಳನ್ನು ಗಾಳಿಗೆ ತೂರಿ ತರಾತುರಿಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರ ಪುತ್ರ ರಾಹುಲ್ ಖರ್ಗೆ ಅವರ ಸಿದ್ಧಾರ್ಥ ವಿಹಾರ ಶಿಕ್ಷಣ ಟ್ರಸ್ಟ್‌ಗೆ ಏರೋಸ್ಪೇಸ್ ಪಾರ್ಕ್‌ನಲ್ಲಿ ನಾಗರಿಕ ಸೌಲಭ್ಯಗಳಿಗೆ (ಸಿ.ಎ) ಮೀಸಲಾದ ನಿವೇಶನ ಹಂಚಿಕೆ ಮಾಡಲಾಗಿದೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಆರೋಪಿಸಿದರು.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಸಿ.ಎ ನಿವೇಶನ ಮಂಜೂರು ಮಾಡುವ ಮೊದಲು ಜಾಹೀರಾತು ನೀಡಬೇಕು. ಆದರೆ, ಕದ್ದು ಮುಚ್ಚಿ ನಿವೇಶನ ಮಂಜೂರು ಮಾಡಿದೆ. ಈ ನಿವೇಶನಕ್ಕಾಗಿ ಎಷ್ಟು ಮಂದಿ ಅರ್ಜಿ ಸಲ್ಲಿಸಿದ್ದರು ಎಂಬ ಮಾಹಿತಿ ಹಾಗೂ ನಿವೇಶನ ಹಂಚಿಕೆಯ ಪ್ರಕ್ರಿಯೆಗಳ ವಿವರಗಳನ್ನು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಬಹಿರಂಗಪಡಿಸಬೇಕು’ ಎಂದು ಆಗ್ರಹಿಸಿದರು.

‘ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿಗೆ ನಿವೇಶನ ನೀಡುವ ಸಂಬಂಧ ಮುಡಾದ ಯಾವುದೇ ಸಭೆಯಲ್ಲಿ ಚರ್ಚೆ ಆಗಿಲ್ಲ. ಯಾವುದೇ ನಿರ್ಣಯ ಆಗಿಲ್ಲ. ರಾಜ್ಯ ಸರ್ಕಾರ ಸಹ ಅನುಮತಿ ನೀಡಿಲ್ಲ. ಸಿದ್ದರಾಮಯ್ಯ ಅವರು 14 ನಿವೇಶನಗಳನ್ನು ಹಿಂತಿರುಗಿಸಬೇಕಾದ ಸ್ಥಿತಿ ನಿರ್ಮಾಣವಾಗಲಿದೆ. ಸಿದ್ದರಾಮಯ್ಯ ಅವರು ಯಾವುದೇ ಕ್ಷಣದಲ್ಲಿ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡಬಹುದು’ ಎಂದು ಅವರು ತಿಳಿಸಿದರು.

‘ಕಾಂಗ್ರೆಸ್ ಅಧಿಕಾರಕ್ಕೆ ಬಂದ ಬಳಿಕ ರಾಜ್ಯದಲ್ಲಿ ಅಭಿವೃದ್ಧಿ ಕೆಲಸಗಳು ಆರಂಭವಾಗಿಲ್ಲ. ಎರಡು ತಿಂಗಳುಗಳಿಂದ ಆಡಳಿತ ಸಂಪೂರ್ಣವಾಗಿ ಕುಸಿದಿದೆ. ಉಚಿತ ಬಸ್ ಪ್ರಯಾಣಕ್ಕಾಗಿ ಕೆಎಸ್‌ಆರ್‌ಟಿಸಿಗೆ ₹4,500 ಕೋಟಿಯನ್ನು ರಾಜ್ಯ ಸರ್ಕಾರ ಕೊಡಬೇಕಿದೆ. ಪರಿಸ್ಥಿತಿ ಇದೇ ರೀತಿ ಮುಂದುವರಿದರೆ 3–4 ತಿಂಗಳಲ್ಲಿ ಕೆಎಸ್‌ಆರ್‌ಟಿಸಿ ಸಂಸ್ಥೆ ಮುಚ್ಚಬೇಕಾಗುತ್ತದೆ. ರಾಜ್ಯ ಸರ್ಕಾರದ ಬಳಿ ವೇತನ ಪಾವತಿಗೂ ದುಡ್ಡಿಲ್ಲ ಎಂದರು.

‘ಅಲ್ಲೊಬ್ಬರು ಇಲ್ಲೊಬ್ಬರ ಹೇಳಿಕೆಗೆ ತಲೆ ಕೆಡಿಸಿಕೊಳ್ಳಲ್ಲ’: ‘ಪಕ್ಷದೊಳಗೆ ಅಲ್ಲೊಬ್ಬರು ಇಲ್ಲೊಬ್ಬರು ನೀಡುತ್ತಿರುವ ಹೇಳಿಕೆಗಳ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ’ ಎಂದು ವಿಜಯೇಂದ್ರ ಹೇಳಿದರು.

‘ರಾಜ್ಯ ಘಟಕದ ಅಧ್ಯಕ್ಷ ಸ್ಥಾನವನ್ನು ನಾನು ನಿರೀಕ್ಷೆ ಮಾಡಿರಲಿಲ್ಲ. ಪಕ್ಷದ ವರಿಷ್ಠರು ವಿಶ್ವಾಸವಿಟ್ಟು ನೀಡಿದ್ದಾರೆ. ಈ ಆಯ್ಕೆಯನ್ನು ಒಪ್ಪಲು ಪಕ್ಷದ ಕೆಲವರಿಗೆ ಕಾಲಾವಕಾಶ ಬೇಕಾಗುತ್ತದೆ. ಬಹುಶಃ ಮುಂದಿನ ದಿನಗಳಲ್ಲಿ ಎಲ್ಲ ನಾಯಕರು ಸಹಕಾರ ನೀಡಲಿದ್ದಾರೆ ಎಂಬ ವಿಶ್ವಾಸ ಇದೆ. ಪಕ್ಷದೊಳಗಿನ ಎಲ್ಲ ಬೆಳವಣಿಗೆಗಳನ್ನು ಪಕ್ಷದ ವರಿಷ್ಠರು ಗಮನಿಸುತ್ತಿದ್ದಾರೆ’ ಎಂದರು.

‘ಯತ್ನಾಳ ಅಥವಾ ಇನ್ಯಾರದೋ ವಿರುದ್ಧ ದೆಹಲಿಯಲ್ಲಿ ದೂರು ಕೊಡಲು ನನ್ನನ್ನು ರಾಜ್ಯ ಘಟಕದ ಅಧ್ಯಕ್ಷನನ್ನಾಗಿ ಮಾಡಿಲ್ಲ. ಪಕ್ಷದ ಅಧ್ಯಕ್ಷರ ಭೇಟಿಯಲ್ಲಿ ಯತ್ನಾಳ್ ಕುರಿತು ಪ್ರಸ್ತಾಪಿಸಿಲ್ಲ. ಅದರ ಅವಶ್ಯಕತೆಯೂ ಇಲ್ಲ’ ಎಂದರು.

‘ದೆಹಲಿಯಲ್ಲಿ ಪ್ರತಿಭಟನೆ: ಚರ್ಚಿಸಿ ತೀರ್ಮಾನ’

‘ಮುಡಾ ಹಗರಣ ಸಂಬಂಧ ಮುಖ್ಯಮಂತ್ರಿ ರಾಜೀನಾಮೆಗೆ ಒತ್ತಾಯಿಸಿ ರಾಷ್ಟ್ರ ರಾಜಧಾನಿಯಲ್ಲಿ ಪ್ರತಿಭಟನಾ ಹೋರಾಟ ನಡೆಸಬೇಕು ಎಂದು ಪಕ್ಷದ ಕೆಲವು ನಾಯಕರು ಸಲಹೆ ನೀಡಿದ್ದಾರೆ. ಈ ಬಗ್ಗೆ ಪಕ್ಷದ ಮುಖಂಡರ ಬಗ್ಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಲಾಗುವುದು’ ಎಂದು ವಿಜಯೇಂದ್ರ ತಿಳಿಸಿದರು.

‘ಚನ್ನಪಟ್ಟಣ ಸೇರಿದಂತೆ ಮೂರು ಕ್ಷೇತ್ರಗಳ ಉಪಚುನಾವಣೆಗೆ ಅಭ್ಯರ್ಥಿಗಳ ಆಯ್ಕೆ ಸಂಬಂಧ ಪಕ್ಷದ ವರಿಷ್ಠರ ಜತೆಗೆ ಸಮಾಲೋಚಿಸಲಾಗಿದೆ. ಎಲ್ಲರ ಜತೆಗೆ ಚರ್ಚಿಸಿ ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ ಎಂದು ಭರವಸೆ ನೀಡಿದ್ದಾರೆ’ ಎಂದರು.

ಸನ್ಮಾನ... ಪ್ಯಾರಿಸ್‌ನ ಪ್ಯಾರಾ ಒಲಿಂಪಿಕ್ ಕ್ರೀಡಾಕೂಟದಲ್ಲಿ 1,500 ಮೀಟರ್ ಟಿ.11ರ ವಿಭಾಗದಲ್ಲಿ ಭಾರತವನ್ನು ಪ್ರತಿನಿಧಿಸುತ್ತಿರುವ ಕೆ.ಆರ್.ಪುರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ದ್ವಿತೀಯ ಬಿ.ಎ.ವಿದ್ಯಾರ್ಥಿನಿ ರಕ್ಷಿತರಾಜು ಅವರನ್ನು ಕಾಲೇಜಿನ ಪ್ರಾಂಶುಪಾಲರಾದ ಪ್ರತಿಭಾ ಪಾರ್ಶ್ವನಾಥ್, ದೈಹಿಕ ಶಿಕ್ಷಣ ನಿರ್ದೇಶಕರಾದ ಚಂದ್ರಿಕಾ, ಎಚ್.ಆರ್.ಸಣ್ಣಚಿಕ್ಕಯ್ಯ ಸನ್ಮಾನಿಸಿದರು

ಮಾಹಿತಿ ಆಯುಕ್ತರ ಆಯ್ಕೆ: ಅರ್ಹತಾ ಪಟ್ಟಿ ಸಿದ್ಧಪಡಿಸಲು ಸಿ.ಎಂ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಹಿತಿ ಆಯುಕ್ತರ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ ಅರ್ಹತೆಯನ್ನು ಆಧರಿಸಿ ಪಟ್ಟಿ ಸಿದ್ಧಪಡಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದರು.

ಮಾಹಿತಿ ಆಯುಕ್ತರ ಹುದ್ದೆಗಳ ನೇಮಕಾತಿ ಕುರಿತು ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಮಾಹಿತಿ ಆಯುಕ್ತರ ಆರು ಹುದ್ದೆಗಳು ಖಾಲಿ ಇದ್ದು, 586 ಅರ್ಜಿಗಳು ಸಲ್ಲಿಕೆಯಾಗಿವೆ ಎಂದು ಅಧಿಕಾರಿಗಳು ವಿವರಿಸಿದರು.

ಈ ಬಗ್ಗೆ ಮಾತನಾಡಿದ ಸಿದ್ದರಾಮಯ್ಯ, ‘ಅರ್ಜಿಗಳನ್ನು ಪರಿಶೀಲಿಸಬೇಕು. ಮಾನದಂಡ ಅನ್ವಯಿಸಿ, ಅರ್ಹತಾ ಪಟ್ಟಿ ಸಿದ್ಧಪಡಿಸಬೇಕು’ ಎಂದು ನಿರ್ದೇಶನ ನೀಡಿದರು.

ಮಾಹಿತಿ ಆಯುಕ್ತರ ನೇಮಕಾತಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಕಳೆದ ವರ್ಷ ಕೆಲ ಮಾರ್ಗಸೂಚಿಗಳನ್ನು ನಿಗದಿ ಮಾಡಿದೆ. ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ ಅರ್ಹತೆಯನ್ನು ಕೋರ್ಟ್ ನಿರ್ದೇಶನದಂತೆ ಅಂತಿಮಗೊಳಿಸಬೇಕಿದೆ ಎಂದು ಅಧಿಕಾರಿಗಳು ಸಭೆಗೆ ವಿವರಿಸಿದರು.

ಈ ಎಲ್ಲ ಅಂಶಗಳನ್ನು ಪರಿಶೀಲಿಸಿ, ಅತ್ಯಂತ ಅರ್ಹತಾ ಅಂಶಗಳನ್ನು ಹೊಂದಿರುವ 20 ಅಭ್ಯರ್ಥಿಗಳ ಪಟ್ಟಿ ಸಿದ್ಧಪಡಿಸಬೇಕು. ಸೆ. 5ಕ್ಕೆ ಮತ್ತೆ ಸಭೆ ನಿಗದಿ ಮಾಡಬೇಕು ಎಂದು ಸಿದ್ದರಾಮಯ್ಯ ಸೂಚಿಸಿದರು.

ಸಿದ್ದರಾಮಯ್ಯ ಬೆರಳಿಗೆ ಚುಚ್ಚಿದ ಪಿನ್

ಮಾಹಿತಿ ಆಯುಕ್ತರ ಆಯ್ಕೆ ಕುರಿತ ಸಭೆಯಲ್ಲಿ ಮೈಸೂರಿನ ವ್ಯಕ್ತಿಯೊಬ್ಬರು ಸಲ್ಲಿಸಿದ ಅರ್ಜಿಯನ್ನು ಸ್ವೀಕರಿಸಿದ ಸಿದ್ದರಾಮಯ್ಯ ಎಡಗೈ ಬೆರಳಿಗೆ ಗುಂಡುಪಿನ್ ಚುಚ್ಚಿ ರಕ್ತ ಜಿನುಗಿತು. ಅಲ್ಲೇ ಇದ್ದ ವೈದ್ಯರು ತಕ್ಷಣ ಹ್ಯಾಂಡಿಪ್ಲಾಸ್ಟ್ ಹಚ್ಚಿದರು.

ಬ್ಯಾರಿ ಅಕಾಡೆಮಿ ಗೌರವ ಪ್ರಶಸ್ತಿಗೆ ಸಾಧಕರ ಆಯ್ಕೆ

ಮಂಗಳೂರು: ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿಯ 2022 ಮತ್ತು 2023ನೇ ಸಾಲಿನ ‘ಗೌರವ ಪ್ರಶಸ್ತಿ’ಗೆ ಆರು ಮಂದಿ ಸಾಧಕರನ್ನು ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯು ತಲಾ ₹50ಸಾವಿರ ನಗದು ಹಾಗೂ ಪ್ರಶಸ್ತಿ ಫಲಕ ಒಳಗೊಂಡಿದೆ.

2022ನೇ ಸಾಲಿನ ಗೌರವ ಪ್ರಶಸ್ತಿಗೆ ಬೆಂಗಳೂರಿನ ಹಂಝುತ್ ಉಲ್ಲಾ ಕುವೇಂಡ (ಬ್ಯಾರಿ ಭಾಷೆ ಮತ್ತು ಸಂಘಟನೆ), ಮರಿಯಮ್ ಇಸ್ಮಾಯಿಲ್ ಉಳ್ಳಾಲ (ಬ್ಯಾರಿ ಸಾಹಿತ್ಯ) ಮತ್ತು ಎಂ.ಜಿ. ಶಾಹುಲ್ ಹಮೀದ್ ಗುರುಪುರ (ಬ್ಯಾರಿ ಸಂಸ್ಕೃತಿ ಮತ್ತು ಕಲೆ), 2023ನೇ ಸಾಲಿನ ಪ್ರಶಸ್ತಿಗೆ ಟಿ.ಎ. ಆಲಿಯಬ್ಬ ಜೋಕಟ್ಟೆ (ಬ್ಯಾರಿ ಭಾಷೆ ಮತ್ತು ಸಂಘಟನೆ), ಅಶ್ರಫ್ ಅಪೋಲೊ ಕಲ್ಲಡ್ಕ (ಬ್ಯಾರಿ ಸಂಸ್ಕೃತಿ ಮತ್ತು ಕಲೆ) ಹಾಗೂ ಮುಹಮ್ಮದ್ ಶರೀಫ್ ನಿರ್ಮುಂಜೆ (ಬ್ಯಾರಿ ಸಾಹಿತ್ಯ) ಆಯ್ಕೆಯಾಗಿದ್ದಾರೆ.

ಸೆ. 6ರಂದು ಸಂಜೆ 4.30ಕ್ಕೆ ಮಂಗಳೂರು ಪುರಭವನದಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ ಎಂದು ಅಕಾಡೆಮಿ ಅಧ್ಯಕ್ಷ ಉಮರ್ ಯು. ಎಚ್. ತಿಳಿಸಿದ್ದಾರೆ.

ಹಂಝುತ್ ಉಲ್ಲಾ ಕುವೇಂಡ

ಮರಿಯಮ್ ಇಸ್ಮಾಯಿಲ್

ಶಾಹುಲ್ ಹಮೀದ್



ಆಲಿಯಬ್ಬ ಜೋಕಟ್ಟೆ

ಶರೀಫ್ ನಿರ್ಮುಂಜೆ

ಅಶ್ರಫ್ ಅಪೋಲೊ

ಒಪಿಎಸ್ ಜಾರಿಗೊಳಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದಂತೆ ರಾಜ್ಯ ಸರ್ಕಾರಿ ನೌಕರರಿಗೆ ಹಳೆ ಪಿಂಚಣಿ ವ್ಯವಸ್ಥೆ (ಒಪಿಎಸ್) ಜಾರಿಗೊಳಿಸಬೇಕು ಎಂದು ವಿಧಾನ ಪರಿಷತ್‌ನ ಮಾಜಿ ಸದಸ್ಯ ಅರುಣ್ ಶಹಾಪೂರ ಒತ್ತಾಯಿಸಿದರು.

ಏಕೀಕೃತ ಪಿಂಚಣಿ ಯೋಜನೆ (ಯುಪಿಎಸ್) ಜಾರಿಗೆ ತರಲು ಕೇಂದ್ರ ಸಂಪುಟ ಸಭೆ ಸಮ್ಮತಿಸಿರುವುದು ಕೇಂದ್ರ ಸರ್ಕಾರಿ ನೌಕರರಿಗೆ ಮಾತ್ರ. ಈ ಯೋಜನೆ ರಾಜ್ಯ ಸರ್ಕಾರಿ ನೌಕರರಿಗೆ ಅನ್ವಯಿಸುವುದಿಲ್ಲ. ನಿವೃತ್ತರಿಗೆ ಸರ್ಕಾರದ ಬೊಕ್ಕಸದಿಂದ ಪಿಂಚಣಿ ನೀಡುವುದು ಹೊರೆ ಎಂದು ಭಾವಿಸಿದ್ದ ಅಂದಿನ ಕೇಂದ್ರ ಸರ್ಕಾರ 2004ರಿಂದ ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್‌ಪಿಎಸ್) ಜಾರಿಗೆ ತಂದಿತು. ಎನ್‌ಪಿಎಸ್‌ನಿಂದ ನಿವೃತ್ತ ನೌಕರರಿಗೆ ಜೀವನ ಭದ್ರತೆ ಇಲ್ಲದಿರುವುದನ್ನು ಮನಗಂಡ ಪ್ರಧಾನಿ ನರೇಂದ್ರ ಮೋದಿ ಅವರು ಯುಪಿಎಸ್ ಜಾರಿಗೊಳಿಸಿದ್ದಾರೆ ಎಂದು ಹೇಳಿದರು.

ಸ್ನಾತಕೋತ್ತರ ಪದವಿ ಪಡೆದ ಪ್ರೌಢ ಶಾಲಾ ಶಿಕ್ಷಕರನ್ನು ಪಿಯು ಕಾಲೇಜು ಉಪನ್ಯಾಸಕರನ್ನಾಗಿ ನೇಮಿಸಬೇಕು. 2011ರಿಂದ ಸ್ಥಗಿತಗೊಂಡಿರುವ ಬಡ್ತಿ ಪ್ರಕ್ರಿಯೆ ಪುನರಾರಂಭಿಸಬೇಕು

ಶಶೀಲ್ ನಮೋಶಿ
ವಿಧಾನ ಪರಿಷತ್ ಸದಸ್ಯ

ಪಿಂಚಣಿ ಯೋಜನೆಗಳು ಇಂದು ರಾಜಕೀಯ ವಿಷಯಗಳಾಗಿ ಬದಲಾಗಿವೆ. ನಿವೃತ್ತರಿಗಾಗುವ ಲಾಭ–ನಷ್ಟಕ್ಕಿಂತ ರಾಜಕೀಯ ಲಾಭ–ನಷ್ಟಗಳು ಪ್ರಮುಖ ಸ್ಥಾನ ಪಡೆಯುತ್ತಿವೆ. ಕಾಂಗ್ರೆಸ್ ಚುನಾವಣೆ ವೇಳೆ ನೀಡಿದ್ದ ಭರವಸೆಯಂತೆ ಕ್ರಮ ಕೈಗೊಳ್ಳಬೇಕು. ಸಭೆಗಳನ್ನು ನಡೆಸುತ್ತಾ, ಸಮಿತಿ ರಚಿಸಿ ಕಾಲಹರಣ ಮಾಡುವ ಬದಲು ತಕ್ಷಣ ಒಪಿಎಸ್ ಜಾರಿಗೆ ಆದೇಶ ಹೊರಡಿಸಬೇಕು ಎಂದು ಒತ್ತಾಯಿಸಿದರು.

ಕೇಂದ್ರ ಸರ್ಕಾರ 8ನೇ ವೇತನ ಆಯೋಗ ರಚಿಸುತ್ತಿದೆ. ಆಯೋಗದ ಶಿಫಾರಸು ಜಾರಿಯಾದರೆ ಕೇಂದ್ರ ಹಾಗೂ ರಾಜ್ಯ ನೌಕರರ ವೇತನ, ಭತ್ಯೆಗಳ ಅಂತರ ಹೆಚ್ಚಾಗಲಿದೆ. ಇಂತಹ ತಾರತಮ್ಯ ಹೋಗಲಾಡಿಸಲು ರಾಜ್ಯ ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದರು.

ಅಖಿಲ ಭಾರತ ರಾಷ್ಟ್ರೀಯ ಶೈಕ್ಷಿಕ್ ಮಹಾಸಂಘದ ಪ್ರಧಾನ ಕಾರ್ಯದರ್ಶಿ ಶಿವಾನಂದ ಸಿಂದನಕೇರ ಮಾತನಾಡಿ, ಕನಿಷ್ಠ 25 ವರ್ಷ ಸೇವೆ ಸಲ್ಲಿಸಿದ ನೌಕರರು ನಿವೃತ್ತಿಯ ನಂತರ ತಮ್ಮ ಮೂಲ ವೇತನದ ಶೇ 50ರಷ್ಟು ಪ್ರತಿ ತಿಂಗಳು ಪಿಂಚಣಿ ಪಡೆಯುತ್ತಾರೆ. ಮೃತರಾದರೆ ಅವರ ಕುಟುಂಬಕ್ಕೆ ಅವರ ಪಿಂಚಣಿಯಲ್ಲಿ ಶೇ 60ರಷ್ಟು ಸಿಗುತ್ತದೆ. ಕನಿಷ್ಠ 10 ವರ್ಷ ಸೇವೆ ಸಲ್ಲಿಸಿದವರಿಗೆ ತಿಂಗಳಿಗೆ ₹10 ಸಾವಿರ ಸಿಗುತ್ತದೆ ಎಂದರು.

ಇನ್‌ಫ್ಲುಯೆನ್ಸರ್‌ಗಳಿಗೂ ಸರ್ಕಾರಿ ಜಾಹೀರಾತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಜಾಲತಾಣಗಳ ಮೂಲಕ ಪ್ರಭಾವ ಬೀರುವವರಿಗೂ (ಇನ್‌ಫ್ಲುಯೆನ್ಸರ್) ಸರ್ಕಾರಿ ಜಾಹೀರಾತು ನೀಡಲು ಅವಕಾಶ ಮಾಡಿಕೊಡುವ ನೂತನ ಜಾಹೀರಾತು ನೀತಿಯನ್ನು ರಾಜ್ಯ ಸರ್ಕಾರ ಜಾರಿಗೆ ತಂದಿದೆ.

ಇದಕ್ಕಾಗಿ ವಾರ್ತಾ ಇಲಾಖೆ, ‘ಕರ್ನಾಟಕ ಡಿಜಿಟಲ್ ಜಾಹೀರಾತು ಮಾರ್ಗಸೂಚಿ–2024’ ಅನ್ನು ಜಾರಿ ಮಾಡಿದೆ. ಎಲ್ಲಾ ಸ್ವರೂಪದ ಡಿಜಿಟಲ್ ಮಾಧ್ಯಮಗಳಲ್ಲಿ ಸರ್ಕಾರಿ ಜಾಹೀರಾತು ನೀಡಲು ಇದು ಅನುವು ಮಾಡಿಕೊಡಲಿದೆ.

ಬ್ರ್ಯಾಂಡ್ ರಾಯಭಾರಿಗಳು, ಪ್ರಾಯೋಜಿತ ಪೋಸ್ಟ್‌ಗಳು, ಅತಿಥಿ ಬ್ಲಾಗ್‌ಗಳು, ಕಂಟೆಂಟ್ ಸಹಯೋಗ, ವಿಷಯಾಧಾರಿತ ಅಭಿಯಾನ, ಕಾರ್ಯಕ್ರಮ ಪ್ರಚಾರ, ವಿಮರ್ಶೆ ಮತ್ತು ಹ್ಯಾಶ್‌ಟ್ಯಾಗ್ ಅಭಿಯಾನಗಳ ಸ್ವರೂಪದಲ್ಲಿ ಇನ್‌ಫ್ಲುಯೆನ್ಸರ್‌ಗಳಿಗೆ ಜಾಹೀರಾತು ನೀಡಲಾಗುತ್ತದೆ.

ಯಾವುದಾದರೂ ಒಂದು ಸಾಮಾಜಿಕ ಜಾಲತಾಣಗಳಲ್ಲಿ ನಿಗದಿತ ಸಂಖ್ಯೆಯ ಫಾಲೋವರ್‌ಗಳನ್ನು ಹೊಂದಿರುವ ಇನ್‌ಫ್ಲುಯೆನ್ಸರ್‌ಗಳಿಗೆ ಸರ್ಕಾರಿ ಜಾಹೀರಾತು ದೊರೆಯಲಿದೆ.

ಇನ್‌ಫ್ಲುಯೆನ್ಸರ್‌ಗಳಲ್ಲಿ ಮೂರು ವರ್ಗೀಕರಣ ಮಾಡಲಾಗಿದೆ. ಫಾಲೋವರ್‌ಗಳ ಸಂಖ್ಯೆ 1 ಲಕ್ಷದಿಂದ 5 ಲಕ್ಷದವರೆಗೆ ಇದ್ದರೆ ‘ನ್ಯಾನೊ’, 5 ಲಕ್ಷದಿಂದ 10 ಲಕ್ಷದವರೆಗೆ ‘ಮೈಕ್ರೊ’ ಮತ್ತು 10 ಲಕ್ಷಕ್ಕಿಂತ ಹೆಚ್ಚು ಇದ್ದರೆ ‘ಮ್ಯಾಕ್ರೊ’ ಇನ್‌ಫ್ಲುಯೆನ್ಸರ್‌ಗಳು ಎಂದು ವರ್ಗೀಕರಿಸಲಾಗಿದೆ.

ವಾರ್ತಾ ಇಲಾಖೆಯು ನೋಂದಾಯಿತ ಏಜೆನ್ಸಿಗಳ ಮೂಲಕ ಜಾಹೀರಾತು ನೀಡಲಿದೆ. ಕೇಂದ್ರ ಸರ್ಕಾರದ ಡಿಜಿಟಲ್ ಜಾಹೀರಾತು ನೀತಿಯ ಅಡಿಯಲ್ಲಿ ನಿಗದಿಪಡಿಸಲಾದ ಅಥವಾ ಇಲಾಖೆಯೇ ಸ್ವತಂತ್ರವಾಗಿ ನಿಗದಿಪಡಿಸಿದ ದರದಲ್ಲಿ ಜಾಹೀರಾತು ನೀಡಲಾಗುತ್ತದೆ.

ನಗರದಲ್ಲಿ ಇಂದು

ಕಿನ್ನರ ನಟನಾ ಕಲರವ–2024: ಬೆಳಿಗ್ಗೆ 9.30ಕ್ಕೆ ಅತಿಥಿಗಳು: ನಾಗರಾಜಮೂರ್ತಿ, ಜಗದಾ ಎ., ಎಂ. ಬೈರೇಗೌಡ, ಗೌಡಗೆರೆ ಮಾಯುಶ್ರೀ, ಸಂಜೆ 7ಕ್ಕೆ ‘ಮರುಗುಳಿ’ ನಾಟಕ ಪ್ರದರ್ಶನ: ರಚನೆ: ಸುಭಾಶ್ ಎಂ. ಗೌಡ, ಸಂಗೀತ: ಧನರಾಜು ಎಸ್.ಎಚ್., ನಿರ್ದೇಶನ: ನಾಗರಾಜ, ಅತಿಥಿಗಳು: ಜೆಪಿಒ ಚಂದ್ರು, ಮುರುಡಯ್ಯ ಸಿ., ಆಯೋಜನೆ: ಮನ್ವಂತರ, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ

ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ ಕುರಿತು ಚರ್ಚೆ: ಅಧ್ಯಕ್ಷತೆ: ಡಿ. ಜೀವನ್ ಕುಮಾರ್, ಅತಿಥಿ: ಟಿ.ಆರ್. ರಘುನಂದನ್, ಸಂವಾದ: ಅಂಜಲಿ ಮೋಹನ್, ಸಂದೀಪ್ ಅನಿರುದ್ಧನ್, ಸಂತೋಷ್ ನರಗುಂದ, ಆಯೋಜನೆ: ಸಿವಿಕ್, ಸ್ಥಳ: ಶಿಕ್ಷಕರ ಸದನ, ಮೈಸೂರು ಬ್ಯಾಂಕ್ ವೃತ್ತ, ಬೆಳಿಗ್ಗೆ 10

‘ಮಧುರಂ ಮನೋಹರಂ’ ವಾರ್ಷಿಕ ನೃತ್ಯೋತ್ಸವ–2024: ಅತಿಥಿಗಳು: ಸುನಿತಾ ಸುಕುಮಾರನ್, ಅಕ್ಷತಾ ಉಪಾಧ್ಯಾಯ, ಜಯಶ್ರೀ, ಎಂ. ಅಗಸ್ಟಿನ್, ರತ್ನಮ್ಮ, ಆಯೋಜನೆ: ಶ್ರೀಕೃಷ್ಣ ಕಲಾಲಯ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 11

ಬಿಸಿಯೋತ್ಸವ 2.0: ಅತಿಥಿಗಳು: ದಿಗಂತ್ ಮಂಚಾಲೆ, ಅನಿರುದ್ಧ ಆಚಾರ್ಯ, ಶರ್ಮಿಳಾ ಮಾಂಡ್ರೆ, ಧನ್ಯಾ ರಾಮಕುಮಾರ್, ಅಧ್ಯಕ್ಷತೆ: ಲಿಂಗರಾಜ ಗಾಂಧಿ, ಆಯೋಜನೆ: ಬೆಂಗಳೂರು ನಗರ ವಿಶ್ವವಿದ್ಯಾಲಯದ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿರ್ದೇಶನಾಲಯ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜಿನ ಆವರಣ, ಮಧ್ಯಾಹ್ನ 2

ಶರ್ಮಿಳಾ ಮಾಂಡ್ರೆ

ಜರ್ಮನ್ ಆಸ್‌ಬಿಲ್ಡಿಂಗ್ ಪ್ರೋಗ್ರಾಂ ಉದ್ಘಾಟನೆ: ಅತಿಥಿ: ಆನೆಟ್ ಬೇಸ್ಲರ್, ಆಯೋಜನೆ: ಎನ್‌ಟಿಟಿಎಫ್, ಸ್ಥಳ: ನೆಟ್ಟೂರು ಟೆಕ್ನಿಕಲ್ ಟ್ರೇನಿಂಗ್ ಫೌಂಡೇಷನ್, ಎಲೆಕ್ಟ್ರಾನಿಕ್ ಸಿಟಿ, ಹೊಸೂರು ರಸ್ತೆ, ಮಧ್ಯಾಹ್ನ 2.30

‘ಮಹಾಭಾರತ-ವಿರಾಟ ಪರ್ವ’ ಧಾರ್ಮಿಕ ಪ್ರವಚನ: ಅನಂತಪದ್ಮನಾಭಾಚಾರ್ಯ, ಆಯೋಜನೆ: ರಾಘವೇಂದ್ರ ಸೇವಾ ಸಮಿತಿ, ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಸಂಜೆ 7

ಪೊಲೀಸ್ ಕಮಿಷನರ್ ಬಿ.ದಯಾನಂದ್ ಅಭಿಮತ

‘ನೇತ್ರದಾನ ಮನುಕುಲಕ್ಕೆ ಶ್ರೇಷ್ಠ ಕೊಡುಗೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನೇತ್ರದಾನ ಮನುಕುಲಕ್ಕೆ ನೀಡುವ ಶ್ರೇಷ್ಠ ಕೊಡುಗೆಯಾಗಿದ್ದು, ಅನೇಕರು ಸ್ವಯಂ ಪ್ರೇರಿತರಾಗಿ ತಮ್ಮ ಕಣ್ಣುಗಳನ್ನು ದಾನ ಮಾಡಿದ್ದಾರೆ. ಅವರು ನಿಜವಾದ ಹೀರೊಗಳು’ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ್ ಹೇಳಿದರು.

ನಾರಾಯಣ ನೇತ್ರಾಲಯ ಮಂಗಳವಾರ ಆಯೋಜಿಸಿದ್ದ ‘ರಾಷ್ಟ್ರೀಯ ನೇತ್ರದಾನ ಪಾಕ್ಷಿಕ–2024’ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

‘ಹಲವರು ಸಾವಿನ ನಂತರ ಅಗತ್ಯವಿರುವವರಿಗೆ ದೃಷ್ಟಿಯನ್ನು ಉಡುಗೊರೆಯಾಗಿ ನೀಡಿದ್ದಾರೆ. ಇದು ಮತ್ತಷ್ಟು ಜನರಿಗೆ ನೇತ್ರದಾನ ಮಾಡಲು ಪ್ರೇರಣೆಯಾಗಲಿ’ ಎಂದರು.

ದೊಡ್ಡಬಳ್ಳಾಪುರದ ಡಾ.ರಾಜ್‌ಕುಮಾರ್ ನೇತ್ರ ಸಂಗ್ರಹ ಕೇಂದ್ರದ ಪರವಾಗಿ ಎಂ.ಬಿ. ಗುರುದೇವ್ ಅವರು ‘ಡಾ.ಭುಜಂಗಶೆಟ್ಟಿ ಪ್ರಶಸ್ತಿ’ ಹಾಗೂ ಸಾರಕ್ಕಿಯ ಜ್ಞಾನ ಬೆಳಕಿನೆಡೆಗೆ ವೇದಿಕೆಯ ಪರವಾಗಿ ವೇದಿಕೆಯ ಅಧ್ಯಕ್ಷ ರಾಜು ಸಾರಕ್ಕಿ ಅವರು ‘ಸಮಾಜ ಸೇವಕ ಹರೀಶ್ ನಂಜಪ್ಪ’ ಪ್ರಶಸ್ತಿಯನ್ನು ಸ್ವೀಕರಿಸಿದರು

ಚಲನಚಿತ್ರ ನಿರ್ಮಾಪಕ ಎಸ್.ಎ. ಚಿನ್ನೇಗೌಡ ಮಾತನಾಡಿ, ‘ವರನಟ ರಾಜ್‌ಕುಮಾರ್ ಮತ್ತು ಡಾ. ಕೆ. ಭುಜಂಗ ಶೆಟ್ಟಿ ಇಬ್ಬರೂ ನೇತ್ರದಾನ ಕ್ಷೇತ್ರದಲ್ಲಿ ದಾರ್ಶನಿಕರಾಗಿದ್ದಾರೆ. ಇವರ ಪ್ರಯತ್ನಗಳು ಅನೇಕ ಯುವಕರಿಗೆ ನೇತ್ರದಾನಕ್ಕೆ ಪ್ರೇರಣೆಯಾಗಿವೆ’ ಎಂದು ಹೇಳಿದರು.

ನಾರಾಯಣ ನೇತ್ರಾಲಯದ ಅಧ್ಯಕ್ಷ ಡಾ. ರೋಹಿತ್ ಶೆಟ್ಟಿ, ‘ನೇತ್ರದಾನದ ಮೂಲಕ ಕಾರ್ನಿಯಾ ಅಂಧತ್ವವನ್ನು ನಿರ್ಮೂಲನೆ ಮಾಡಬಹುದು. ಜನರನ್ನು ನೇತ್ರದಾನಕ್ಕೆ ಪ್ರೋತ್ಸಾಹಿಸಬೇಕು’ ಎಂದರು.

ನಾರಾಯಣ ನೇತ್ರಾಲಯದ ಸಿಇಒ ಗ್ರೂಪ್ ಕ್ಯಾಪ್ಟನ್ ಎಸ್.ಕೆ.ಮಿತ್ತಲ್ ಮಾತನಾಡಿದರು.

ಪ್ರಶಸ್ತಿ ಪ್ರದಾನ: ಅತ್ಯುತ್ತಮ ನೇತ್ರ ಸಂಗ್ರಹಕ್ಕಾಗಿ ದೊಡ್ಡಬಳ್ಳಾಪುರದ ಡಾ.ರಾಜ್‌ಕುಮಾರ್ ನೇತ್ರ ಸಂಗ್ರಹ ಕೇಂದ್ರಕ್ಕೆ ‘ಡಾ. ಕೆ ಭುಜಂಗ ಶೆಟ್ಟಿ ಪ್ರಶಸ್ತಿ’ ಹಾಗೂ ನೇತ್ರದಾನ ಜಾಗೃತಿಗಾಗಿ ಸಾರಕ್ಕಿಯ ಜ್ಞಾನ ಬೆಳಕಿನೆಡೆಗೆ ವೇದಿಕೆಗೆ ‘ಸಮಾಜಕ ಸೇವಕ ಹರೀಶ್ ನಂಜಪ್ಪ’ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

120 ರೌಡಿಗಳ ಮನೆಯ ಮೇಲೆ ದಾಳಿ

ಹಾಸಿಗೆ ಕೆಳಗೆ ಲಾಂಗ್ ಬಚ್ಚಿಟ್ಟಿದ್ದ ರೌಡಿ ಬಂಧನ ● ಪೊಲೀಸರಿಂದ ವಿವಿಧೆಡೆ ದಿಢೀರ್ ತಪಾಸಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈಶಾನ್ಯ ವಿಭಾಗದ ದೇವನಹಳ್ಳಿ ಹಾಗೂ ಯಲಹಂಕ ಉಪ ವಿಭಾಗದ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಯ ರೌಡಿಗಳ ಮನೆಗಳ ಮೇಲೆ ಮಂಗಳವಾರ ಬೆಳಿಗ್ಗೆ ಪೊಲೀಸರು ದಿಢೀರ್ ದಾಳಿ ನಡೆಸಿ, ತಪಾಸಣೆ ನಡೆಸಿದರು.

ರೌಡಿಯೊಬ್ಬನ ಮನೆಯಲ್ಲಿ ಮಾರಕಾಸ್ತ್ರ ಪತ್ತೆಯಾಗಿದ್ದು ಆತನನ್ನು ಪೊಲೀಸರು ಬಂಧಿಸಿದ್ದಾರೆ. ಬೆಳ್ಳಂಬೆಳಿಗ್ಗೆಯೇ ಪೊಲೀಸರ ದಿಢೀರ್ ದಾಳಿಯಿಂದ ರೌಡಿಗಳ ಮನೆಯವರು ಬೆಚ್ಚಿಬಿದ್ದರು.

ಯಲಹಂಕ, ಕೊಡಿಗೇಹಳ್ಳಿ, ಅಮೃತಹಳ್ಳಿ, ವಿದ್ಯಾರಣ್ಯಪುರ ಸೇರಿ ದಂತೆ ಹಲವು ಠಾಣೆಗಳ ವ್ಯಾಪ್ತಿಯಲ್ಲಿ ಬೆಳಿಗ್ಗೆ 5 ಗಂಟೆ ಸುಮಾರಿಗೆ 120ಕ್ಕೂ ಹೆಚ್ಚು ರೌಡಿಗಳ ಮನೆಗಳ ಮೇಲೆ ಏಕಕಾಲಕ್ಕೆ ದಾಳಿ ನಡೆಯಿತು.

ವಿದ್ಯಾರಣ್ಯಪುರದ ಶ್ರೀನಿಧಿಲೇಔಟ್ ರೌಡಿ ಶಾಹಿಲ್ ಎಂಬಾತ ಮಂಚದ ಕೆಳಗೆ ಮಾರಕಾಸ್ತ್ರವೊಂದನ್ನು ಅಡಗಿಸಿಟ್ಟಿದ್ದ. ಅದನ್ನು ಜಪ್ತಿ ಮಾಡಲಾಗಿದೆ. ಶಾಹಿಲ್ ವಿರುದ್ಧ ಶಸ್ತ್ರಾಸ್ತ್ರ ಕಾಯಿದೆ ಅಡಿ ಪ್ರಕರಣ ದಾಖಲಿಸಿಕೊಂಡು ಬಂಧಿಸಲಾಗಿದೆ. ಅಲ್ಲದೇ ಠಾಣೆಯ ವ್ಯಾಪ್ತಿಯಲ್ಲಿ 10ಕ್ಕೂ ಹೆಚ್ಚು ರೌಡಿಗಳ ಮನೆಗಳಲ್ಲಿ ತಪಾಸಣೆ ನಡೆಸಿ, ರೌಡಿ ಚಟುವಟಿಕೆಯಲ್ಲಿ ಭಾಗಿ ಆಗದಂತೆ ಎಚ್ಚರಿಕೆ ನೀಡಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಯಲಹಂಕ ಪೊಲೀಸ್ ಠಾಣಾ ವ್ಯಾಪ್ತಿಯ ಕಟ್ಟಿಗೆಹಳ್ಳಿ, ಯಲಹಂಕ ನ್ಯೂಟೌನ್, ಪಾಲನಹಳ್ಳಿ ವ್ಯಾಪ್ತಿಯಲ್ಲಿ ರೌಡಿ ಚಟುವಟಿಕೆಯಲ್ಲಿ ಭಾಗಿಯಾದ ಆರೋಪ ಎದುರಿಸುತ್ತಿರುವ 20ಕ್ಕೂ ಹೆಚ್ಚು ರೌಡಿಗಳ ಮನೆಗಳ ಮೇಲೆ ದಾಳಿ ನಡೆಸಲಾಗಿದೆ. ಯಲಹಂಕ ವ್ಯಾಪ್ತಿಯ ರೌಡಿಗಳ ಮನೆಗಳಲ್ಲಿ ಯಾವುದೇ ಮಾರಕಾಸ್ತ್ರಗಳು ಪತ್ತೆಯಾಗಿಲ್ಲ.

ರೌಡಿ ಪಟ್ಟಿಯಲ್ಲಿರುವ ವ್ಯಕ್ತಿಯನ್ನು ವಿಚಾರಣೆ ನಡೆಸಿದ ವಿದ್ಯಾರಣ್ಯಪುರ ಠಾಣೆ ಪೊಲೀಸರು

ಸಣ್ಣಪುಟ್ಟ ಗಲಾಟೆಯಲ್ಲಿ ಭಾಗಿ

ಕೆಲವು ರೌಡಿಗಳು ಇತ್ತೀಚೆಗೆ ಸಣ್ಣಪುಟ್ಟ ಗಲಾಟೆ ಹಾಗೂ ಹಣ ಸುಲಿಗೆ ದಂಧೆಯಲ್ಲಿ ತೊಡಗಿದ್ದರು. ಈ ಕುರಿತು ಪೊಲೀಸರಿಗೆ ಮಾಹಿತಿ ಲಭಿಸಿತ್ತು. ಅಲ್ಲದೇ ವಾರಂಟ್ ಜಾರಿ ಆಗಿದ್ದರೂ ಕೆಲವು ರೌಡಿಗಳು ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆಸಿಕೊಂಡು ಓಡಾಡುತ್ತಿದ್ದರು. ರೌಡಿ ಚಟುವಟಿಕೆ ನಿಯಂತ್ರಣಕ್ಕೆ ತರಲು ಕೋರ್ಟ್ ಪೊಲೀಸರಿಗೆ ಸೂಚನೆ ನೀಡಿತ್ತು. ಇದಾದ ಮೇಲೆ ಎಚ್ಚೆತ್ತ ಪೊಲೀಸರು ದಾಳಿ ನಡೆಸಿ ಎಚ್ಚರಿಕೆ ನೀಡಿದರು.

ಅಪರಾಧ ಹಿನ್ನೆಲೆಯುಳ್ಳವರ ವಾಸಸ್ಥಳ, ವಿಳಾಸ, ಆದಾಯದ ಮೂಲ ಮತ್ತಿತರ ಮಾಹಿತಿ ಕಲೆ ಹಾಕಲಾಗಿದೆ. ಕೆಲವರನ್ನು ವಶಕ್ಕೆ ಪಡೆದು ಮುಚ್ಚಳಿಕೆ ಬರೆಸಿಕೊಂಡು, ಎಚ್ಚರಿಕೆ ನೀಡಿ ಕಳುಹಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸಂಚಾರ ದಟ್ಟಣೆ ತಿಳಿಯಲು ವಾಹನ ಸವಾರರ ಜತೆ ಪ್ರಯಾಣ

‘ಜಾಯಿನ್ ದಿ ಕಮ್ಯೂಟ್’ ಅಭಿಯಾನ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಚಾರ ದಟ್ಟಣೆ ಪರಿಸ್ಥಿತಿ ತಿಳಿಯುವ ಸಲುವಾಗಿ ಪ್ರಥಮ ಭಾರಿಗೆ ನಗರದ ದಕ್ಷಿಣ ಸಂಚಾರ ವಿಭಾಗದಲ್ಲಿ ಡಿಸಿಪಿ ಶಿವಪ್ರಕಾಶ್ ದೇವರಾಜು ನೇತೃತ್ವದಲ್ಲಿ ‘ಜಾಯಿನ್ ದಿ ಕಮ್ಯೂಟ್’ (ವಾಹನ ಸವಾರರ ಜತೆ ಪ್ರಯಾಣ) ಎಂಬ ಅಭಿಯಾನ ಆರಂಭಿಸಲಾಗಿದೆ.

ವಾಹನ ಪ್ರಯಾಣಿಕರ ಜತೆಯೇ ಅಧಿಕಾರಿ ಪ್ರಯಾಣಿಸಿ ರಸ್ತೆಯ ಮಾರ್ಗ ಮಧ್ಯೆ ಉಂಟಾಗುವ ಸಂಚಾರ ದಟ್ಟಣೆ, ವಾಹನ ನಿಲುಗಡೆ ಪ್ರದೇಶಗಳ ಅತಿಕ್ರಮಣ ಸೇರಿ ಹಲವು ಸಮಸ್ಯೆಗಳ ನೈಜ ಸ್ಥಿತಿ ಅರಿಯಬಹುದು. ಪ್ರಾಯೋಗಿಕವಾಗಿ ಡಿಸಿಪಿ ಈ ಅಭಿಯಾನದ ಭಾಗವಾಗಿ ಪ್ರಯಾಣಿಕರ ಜತೆ ಪ್ರಯಾಣ ಮಾಡಲಿದ್ದಾರೆ.

ನಾಗರಿಕರನ್ನು ನೇರವಾಗಿ ಸಂಚಾರ ಸಮಸ್ಯೆಗಳ ಪರಿಹಾರದಲ್ಲಿ ಭಾಗಿಯಾಗಿಸುವುದು ಈ ಅಭಿಯಾನದ ಉದ್ದೇಶ. ನಾಗರಿಕರು ತಮ್ಮ ದೈನಂದಿನ ಪ್ರಯಾಣದ ಮಾರ್ಗಗಳು ಮತ್ತು ಪ್ರಯಾಣದ ವಿಧಾನಗಳನ್ನು ನೋಂದಣಿ ಮಾಡಿಕೊಳ್ಳಲು ಆಹ್ವಾನಿಸಲಾಗಿದೆ.

ಇದರಲ್ಲಿ ಆಯ್ಕೆಯಾದ ನಾಗರಿಕರಿಗೆ ಶಿವಪ್ರಕಾಶ್ ದೇವರಾಜು ಅವರೊಂದಿಗೆ ಸಂಚಾರ ಮಾಡುವ ಅವಕಾಶ ದೊರೆಯಲಿದೆ. ಈ ವೇಳೆ ದಟ್ಟಣೆ, ವಿಳಂಬ ಅಥವಾ ಸುರಕ್ಷತೆ ಕಾಳಜಿಗಳು ಸೇರಿದಂತೆ ನಾಗರಿಕರು ಸಂಚಾರ ಸಮಸ್ಯೆಗಳನ್ನು ನೇರವಾಗಿ ಅಧಿಕಾರಿಗೆ ವಿವರಿಸಬಹುದು. ಇದರಲ್ಲಿ ಸಂಗ್ರಹವಾಗುವ ಮಾಹಿತಿಯನ್ನು ಉಪಯೋಗಿಸಿ ನಗರದಾದ್ಯಂತ ಸಂಚಾರ ಸಮಸ್ಯೆಗೆ ಪರಿಹಾರ ಹುಡುಕುವ ಉದ್ದೇಶವಿದೆ.

ಡಿಸಿಪಿ ಶಿವಪ್ರಕಾಶ್ ದೇವರಾಜು ಮಾತನಾಡಿ, ‘ನಗರ ಸಂಚಾರ ಸಮಸ್ಯೆಗಳು ಕೇವಲ ಪೊಲೀಸರು ನಿರ್ವಹಿಸಬೇಕಾದ ಸಮಸ್ಯೆಗಳಲ್ಲ. ನಾಗರಿಕರು ಮತ್ತು ಪೊಲೀಸರು ಒಟ್ಟಾಗಿ ಪರಿಹರಿಸಬೇಕಾದ ಸವಾಲುಗಳಿವೆ .ನಾಗರಿಕರು ಎದುರಿಸುವ ದೈನಂದಿನ ಸವಾಲುಗಳನ್ನು ಅರ್ಥ ಮಾಡಿಕೊಂಡು ಪರಿಹಾರಗಳನ್ನು ಕಂಡುಕೊಳ್ಳುವ ಅಗತ್ಯವಿದೆ’ ಎಂದರು.

ಪ್ರಯಾಣಿಕರು ನಿತ್ಯದ ಪ್ರಯಾಣದ ಮಾರ್ಗಗಳು ಮತ್ತು ಯಾವ ವಾಹನಗಳಲ್ಲಿ ಸಂಚರಿಸುತ್ತಾರೆ ಎಂಬ ವಿವರಗಳನ್ನು ಆನ್‌ಲೈನ್ (https://jointhecommutebstp.in) ಮೂಲಕ ನೋಂದಾಯಿಸಬೇಕು. ಬಳಿಕ ಅಧಿಕಾರಿ ಜತೆ ಪ್ರಯಾಣಿಸುವ ಪ್ರಯಾಣಿಕರನ್ನು ಆಯ್ಕೆ ಮಾಡಲಾಗುತ್ತದೆ.

ಗಣಪತಿ ಆತ್ಮಹತ್ಯೆ ಪ್ರಕರಣ: ಮೇಲ್ಮನವಿ ವಜಾ

ಪ್ರಜಾವಾಣಿ ವಾರ್ತೆ

ನವದೆಹಲಿ: ಡಿವೈಎಸ್‌ಪಿ ಎಂ.ಕೆ. ಗಣಪತಿ ಆತ್ಮಹತ್ಯೆ ಪ್ರಕರಣದಲ್ಲಿ ಇಂಧನ ಸಚಿವ ಕೆ.ಜೆ. ಜಾರ್ಜ್ ಅವರಿಗೆ ಸಿಬಿಐ ಕ್ಲೀನ್‌ಚಿಟ್ ನೀಡಿದ್ದನ್ನು ಪ್ರಶ್ನಿಸಿ ಸಲ್ಲಿಸಿದ್ದ ವಿಶೇಷ ಮೇಲ್ಮನವಿ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ.

ಕಾನೂನಿನ ಬಗ್ಗೆ ನಂಬಿಕೆ ಇದೆ: ಜಾರ್ಜ್

‘ಈ ನೆಲದ ಕಾನೂನಿನ ಬಗ್ಗೆ ನನಗೆ ಸಂಪೂರ್ಣ ನಂಬಿಕೆ ಇದೆ. ನ್ಯಾಯ ಯಾವತ್ತೂ ಸತ್ಯದ ಪರವಾಗಿರುತ್ತದೆ ಎಂಬುದು ಈಗ ಮತ್ತೊಮ್ಮೆ ಸಾಬೀತಾಗಿದೆ. ನನ್ನ ವಿರುದ್ಧ ಮಾಡಿದ್ದ ಸುಳ್ಳು ಆರೋಪಗಳಿಂದ ಮುಕ್ತಿ ಸಿಕ್ಕಿದೆ’ ಎಂದು ಜಾರ್ಜ್ ಪ್ರತಿಕ್ರಿಯಿಸಿದರು.

ಗಣಪತಿ ಆತ್ಮಹತ್ಯೆಗೆ ಜಾರ್ಜ್, ಐಪಿಎಸ್ ಅಧಿಕಾರಿಗಳಾದ ಎ.ಎಂ. ಪ್ರಸಾದ್ ಮತ್ತು ಪ್ರಣವ್ ಮೊಹಾಂತಿ ಕಾರಣ ಎಂಬ ಆರೋಪದಡಿ ದಾಖಲಾದ ಪ್ರಕರಣದ ತನಿಖೆ ನಡೆಸಿದ್ದ ಸಿಬಿಐ, ಆರೋಪಗಳಲ್ಲಿ ಸತ್ಯಾಂಶವಿಲ್ಲ ಎಂದು ‘ಬಿ’ ವರದಿ ಸಲ್ಲಿಸಿತ್ತು. ಆದರೆ, ಸಿಬಿಐ ವರದಿಯನ್ನು ತಿರಸ್ಕರಿಸಿದ್ದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ, ಜಾರ್ಜ್ ಮತ್ತು ಐಪಿಎಸ್ ಅಧಿಕಾರಿಗಳಿಗೆ ಸಮನ್ಸ್ ಜಾರಿಗೊಳಿಸಿತ್ತು. ವಿಶೇಷ ನ್ಯಾಯಾಲಯದ ಆದೇಶವನ್ನು ಹೈಕೋರ್ಟ್ ರದ್ದುಗೊಳಿಸಿತ್ತು. ಇದನ್ನು ಪ್ರಶ್ನಿಸಿ ಗಣಪತಿ ಸಹೋದರಿ ಸಬಿತಾ ಮತ್ತಿತರರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿಗಳಾದ ಬೇಲಾ ಎಂ. ತ್ರಿವೇದಿ ಮತ್ತು ಸತೀಶ್ಚಂದ್ರ ಶರ್ಮ ಅವರನ್ನೊಳಗೊಂಡ ಪೀಠ ಮಂಗಳವಾರ ವಜಾಗೊಳಿಸಿದೆ.

ಪಶ್ಚಿಮ ವಲಯದ (ಮಂಗಳೂರು) ಐಜಿಪಿ ಕಚೇರಿಯಲ್ಲಿ ಡಿವೈಎಸ್‌ಪಿಯಾಗಿದ್ದ ಗಣಪತಿ 2016ರ ಜುಲೈ 7ರಂದು ಮಡಿಕೇರಿಯ ಲಾಡ್ಜ್ ಒಂದರಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು. ಆಗ ಗೃಹ ಸಚಿವರಾಗಿದ್ದ ಕೆ.ಜೆ. ಜಾರ್ಜ್, ಎ.ಎಂ. ಪ್ರಸಾದ್ ಮತ್ತು ಪ್ರಣವ್ ಮೊಹಾಂತಿ ತನಗೆ ಕಿರುಕುಳ ನೀಡಿದ್ದಾರೆ ಎಂದು ಸಾಯುವ ಮುನ್ನ ಸ್ಥಳೀಯ ಟಿ.ವಿ. ಚಾನೆಲ್ ಒಂದಕ್ಕೆ ನೀಡಿದ್ದ ಸಂದರ್ಶನದಲ್ಲಿ ಹೇಳಿದ್ದರು.

ಆತ್ಮಹತ್ಯೆಗೆ ಜಾರ್ಜ್ ಮತ್ತು ಐಪಿಎಸ್ ಅಧಿಕಾರಿಗಳು ಕಾರಣ ಎಂದು ಆರೋಪಿಸಿ ಗಣಪತಿ ಅವರ ಮಗ ನೇಹಲ್ ಸಲ್ಲಿಸಿದ್ದ ಖಾಸಗಿ ದೂರಿನ ಆಧಾರದಲ್ಲಿ ದಾಖಲಾಗಿದ್ದ ಪ್ರಕರಣದ ತನಿಖೆಯನ್ನು ಸುಪ್ರೀಂ ಕೋರ್ಟ್ ಸಿಬಿಐಗೆ ವರ್ಗಾಯಿಸಿತ್ತು.

42 ದಾಖಲೆಗಳನ್ನು ಸಂಗ್ರಹಿಸಿ, 108 ಸಾಕ್ಷಿಗಳ ವಿಚಾರಣೆ ನಡೆಸಿದ್ದ ಸಿಬಿಐ ತನಿಖಾ ತಂಡ, 2019ರ ಅಕ್ಟೋಬರ್ 30ರಂದು ‘ಬಿ’ ವರದಿ ಸಲ್ಲಿಸಿತ್ತು. ‘ಸಾಯುವ ಮುನ್ನ ಗಣಪತಿ ಹೇಳಿದ್ದ ಯಾವುದೇ ಸಂಗತಿಯೂ ಅವರ ಆತ್ಮಹತ್ಯೆಗೆ ಕಾರಣವಲ್ಲ’ ಎಂದು ವರದಿಯಲ್ಲಿ ಹೇಳಿತ್ತು. 2020ರ ಆಗಸ್ಟ್‌ನಲ್ಲಿ ‘ಬಿ’ ವರದಿ ತಿರಸ್ಕರಿಸಿದ್ದ ವಿಶೇಷ ನ್ಯಾಯಾಲಯ, ಮೂವರಿಗೂ ಸಮನ್ಸ್ ಜಾರಿ ಮಾಡಿತ್ತು.

ಇದಕ್ಕೂ ಮೊದಲು ಗಣಪತಿ ಆತ್ಮಹತ್ಯೆ ಪ್ರಕರಣ ವಿಚಾರಣೆಗೆ ನ್ಯಾ. ಕೆ.ಎನ್. ಕೇಶವನಾರಾಯಣ ನೇತೃತ್ವದಲ್ಲಿ ರಚಿಸಿದ್ದ ಏಕಸದಸ್ಯ ಆಯೋಗವು 2018ರ ಫೆಬ್ರವರಿ 27ರಂದು ಸರ್ಕಾರಕ್ಕೆ ತನ್ನ ವರದಿ ಸಲ್ಲಿಸಿತ್ತು. ಜಾರ್ಜ್ ಹಾಗೂ ಪ್ರಣಬ್ ಮೊಹಾಂತಿ, ಎ.ಎಂ. ಪ್ರಸಾದ್ ಅವರಿಗೆ ಈ ವರದಿಯಲ್ಲಿ ಕ್ಲೀನ್ ಚಿಟ್ ನೀಡಲಾಗಿತ್ತು.

11.50 ಲಕ್ಷ ಎಕರೆ ಒತ್ತುವರಿ ತೆರವಿಗೆ ತಡೆ

ಮೂರು ಎಕರೆಗಿಂತ ಕಡಿಮೆ ಜಮೀನಿನ ರೈತರಿಗೆ ಬೇಡ ಆತಂಕ: ಸಚಿವ ಖಂಡ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೂರು ಎಕರೆಗಿಂತ ಕಡಿಮೆ ಇರುವ ಜಮೀನು ಒತ್ತುವರಿ (ಪಟ್ಟಾ ಭೂಮಿ ಸೇರಿ) ತೆರವು ಮಾಡದಂತೆ ಸೂಚಿಸಲಾಗಿದೆ. ಸಣ್ಣ ಒತ್ತುವರಿದಾರರ ಜೀವನೋಪಾಯಕ್ಕೆ ಅಡ್ಡಿಯಾಗದಂತೆ ಕ್ರಮ ವಹಿಸಲು ಕೇಂದ್ರ ಸರ್ಕಾರವನ್ನೂ ಕೋರಲಾಗಿದೆ’ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದ್ದಾರೆ.

ಮೂರು ಎಕರೆಗಿಂತ ಕಡಿಮೆ ವಿಸ್ತೀರ್ಣದ ಒತ್ತುವರಿಯ 86,352 ಪ್ರಕರಣಗಳಿವೆ. 11.50 ಲಕ್ಷ ಎಕರೆ ಭೂಮಿ ಒತ್ತುವರಿಯಾಗಿದೆ. ಈ ಕುರಿತು ಅಧಿವೇಶನದಲ್ಲೂ ಚರ್ಚೆಯಾಗಿದೆ ಎಂದಿದ್ದಾರೆ.

ಈಶ್ವರ ಬಿ. ಖಂಡ್ರೆ

ಸಮಾಜ ಪರಿವರ್ತನ ಸಮುದಾಯ, ನಮ್ಮ ಬೆಂಗಳೂರು ಫೌಂಡೇಷನ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ಆಧಾರದಲ್ಲಿ ಕರ್ನಾಟಕ ಹೈಕೋರ್ಟ್ ಅರಣ್ಯ ಒತ್ತುವರಿ ತೆರವಿಗೆ ಆದೇಶ ನೀಡಿದೆ. ಎರಡು ಲಕ್ಷ ಎಕರೆ ಅರಣ್ಯ ಭೂಮಿ ಒತ್ತುವರಿ ಆಗಿರುವ ಕುರಿತು ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಲಾಗಿದೆ. 2015ರ ನಂತರದ ಅರಣ್ಯ ಒತ್ತುವರಿ ತೆರವು ಮಾಡಿಸಲಾಗುತ್ತಿದೆ. ಪಶ್ಚಿಮಘಟ್ಟ ಸೇರಿದಂತೆ ಅರಣ್ಯ ಪ್ರದೇಶಗಳಲ್ಲಿ ಒತ್ತುವರಿ ಮಾಡಿ ನಿರ್ಮಿಸಿರುವ ಅಕ್ರಮ ರೆಸಾರ್ಟ್, ಹೋಂಸ್ಟೇ, ತೋಟ, ಬಡಾವಣೆ ತೆರವು ಮಾಡಲು ಸೂಚಿಸಲಾಗಿದೆ ಎಂದು ಹೇಳಿದ್ದಾರೆ.

ಮುಖ್ಯಾಂಶಗಳು

- ಸಣ್ಣ ಒತ್ತುವರಿದಾರರ ಜೀವನೋಪಾಯಕ್ಕೆ ಅಡ್ಡಿಯಾಗದಂತೆ ಕ್ರಮ
- ಮೂರು ಎಕರೆಗಿಂತ ಕಡಿಮೆ ವಿಸ್ತೀರ್ಣದ ಒತ್ತುವರಿಯ 86,352 ಪ್ರಕರಣ ದಾಖಲು
- ಒತ್ತುವರಿ ಕುರಿತು ಈಗಾಗಲೇ ಅಧಿವೇಶನದಲ್ಲಿ ಚರ್ಚೆ ನಡೆದಿದೆ ಎಂದ ಖಂಡ್ರೆ

30 ಎಕರೆಗೂ ಹೆಚ್ಚು ಒತ್ತುವರಿಯ 5,344.33 ಎಕರೆ, 10ರಿಂದ 30 ಎಕರೆವರೆಗಿನ 12,898 ಎಕರೆ, 3ರಿಂದ 10 ಎಕರೆವರೆಗಿನ 71,108 ಎಕರೆ ಒತ್ತುವರಿ ತೆರಿಗೆ ಕ್ರಮ ಕೈಗೊಳ್ಳಲಾಗಿದೆ. ಬಡವರ ಭೂಮಿ ಒತ್ತುವರಿ ತೆರವು ಮಾಡಿಸುತ್ತಿಲ್ಲ, ದೊಡ್ಡ ಒತ್ತುವರಿ ತೆರವಿಗೆ ಕ್ರಮ ಕೈಗೊಳ್ಳಲಾಗಿದೆ. ವದಂತಿಗೆ ಜನರು ಕಿವಿಗೊಡಬಾರದು ಎಂದು ಕೋರಿದ್ದಾರೆ.

ಅರಣ್ಯ ಹಕ್ಕಿನ ಅರ್ಜಿಗೂ ಆದ್ಯತೆ: ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಪಾರಂಪರಿಕ ಅರಣ್ಯವಾಸಿಗಳು ಅರಣ್ಯ ಹಕ್ಕು ಕಾಯಿದೆ ಅಡಿ ಸಲ್ಲಿಸಿರುವ ಅರ್ಜಿಗಳ ಪುನರ್ ಪರಿಶೀಲನಾ ಪ್ರಕ್ರಿಯೆ ಪೂರ್ಣವಾಗುವವರೆಗೆ ಒತ್ತುವರಿ ತೆರವು ಮಾಡದಂತೆ ಸೂಚಿಸಲಾಗಿದೆ ಎಂದಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ADMISSION CORNER
ಕ್ಲಾಸಿಫೈಡ್ಸ್

JOB OPPORTUNITIES

Accounts & Finance

Receptionist/ Secretary

WANTED FEMALE Receptionist, puc Good Communication Skill English for College, Kengeri, Salary 20000, Contact 6363288544

WALK-IN INTERVIEW
HIRING - AUDIT & ASSURANCE EXECUTIVE - 02 Nos.
A well established and leading CA Firm is Looking to hire qualified & experienced personnel.
◆ CA inter cleared, Articleship completed.
◆ CA IPCC Articleship completed with 2 years experience in CA firm.
WALK-IN INTERVIEW: 11 am to 5.00 pm.
Email your resume to: prasad.spc@gmail.com
No. 41/1, Trisha Mansion, 3rd Floor, Nanjappa Road, Shanthinagar, Bangalore - 560027.
For details Contact: 9845542486 / 8867245446

Manager

VACANCY ANNOUNCEMENT
REQUIRED
GENERAL MANAGER (Finance and Accounts)
for a reputed company in Bangalore. Candidates should be post graduate in commerce and have 20 + years' experience in finance and accounting.
CONTACT : 9900314777

General

WANTED ADVISORS FOR Leading Co-operative Society in Bangalore & Karnataka. Salary + other benefits. Contact: 9901983850/ 9845597993

Office Boys/ Peon

WANTED: (YOUNGSTER) OFFICE STAFF, COMPUTER OPERATOR OFFICE BOYS, TELEMARKETING OFFICE SANJAYNAGAR RMV 2ND STAGE: 9035883017

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

Multiple Vacancy

LTG INFRASTRUCTURE LIMITED
Immediately hiring the below positions for Bangalore Location
Head–Tenders & Contracts (Getting in New Govt., Private Civil Projects)
Qualification: B.E/B.Tech/Dip-Civil
Experience: 5 to 10 yrs
Retired Bank Employee (Nationalized Banks only)
Qualification: Any Graduate / PG, Exp – 26+ yrs/ Retired
Experience: In all Bank works, Loan sections, BG's LC's, etc.
Manager Accounts (From Construction & Realestate)
Qualification: B.Com/ M.Com/ other professional courses
Experience: 10 to 15 yrs
Business Developement / Liasioning Officer (Relevant Exp in Realestate & Construction)
Qualification: Any Graduate/PG
Experience: 3 to 10 yrs
Sr Engineer/Jr Engineer–Civil
Qualification: B.E/B.Tech/ Dip–Civil
Experience: 3 to 10 yrs(Buildings, Plotted Developments, Others)
Interested candidates may please send their resume to hrm@ltgindia.com or Call 99860 41188

Teachers/ Professors

WANTED LADY Teachers with good English fluency and interested in teaching English/ EVS/ Computer for Primary Classes for a school with 58 years standing in Srirampuram. Contact: 6362166176/ 7094390262 (B/w 9.00 am to 6.00 pm)

REQUIRED SOCIAL and English teachers for High school contact Kenmore School basavanagudi whatsapp 9901501185 and email kenmoreschool@gmail.com

BALDWIN METHODIST EDUCATIONAL INSTITUTIONS
(A unit of the Baldwin Methodist Educational Society)
Applications of Dynamic, Experienced, Qualified & Result Oriented Professionals are invited to join our team for the Academic Year 2024
REQUIRED
PRINCIPALS
BALDWIN METHODIST COLLEGE, BANGALORE &
BALDWIN WOMEN'S METHODIST COLLEGE, BANGALORE
QUALIFICATION
Candidates with Ph.D. from a UGC recognized University, having experience as Professor/ Associate Professor with a total experience as full-time faculty of 15 years of teaching/ research/ administration in any Government First Grade Colleges or Private Degree College affiliated to Universities of Karnataka preferably with B.Ed. and minimum 5 years of experience as a Principal of College.
Applications with a recent passport size photograph should be emailed to hrhead.bmes@gmail.com on or before 30th August, 2024

TEACHERS WANTED: Wanted Experienced, Qualified and Trained Teacher to Teach PU College for Physics and Computer Science. Contact:- Principal-S.D.A. High School & PU Collge. Phone:- 9845606243. Email: sdapucollege@gmail.com

REAL ESTATE BUYING

Sites

Multiple Locations

ADELIE INTERNATIONAL SCHOOL: Chain of schools backed by Eduweft group looking to take over management of Preschools, CBSE, CISCE & Residential Schools (Long Lease/ Partnership/ Investment) Looking for multiple locations across Karnataka. Requirement: Excellent Location. Contact: Sumanth Narayan of Eduweft Services Pvt Ltd, Mobile: 9606353036 Email: info@eduweft.com www.eduweft.com

Banashankari

WANTED BANASHANKARI 6th Stage 1st To 11th Block 20x30, 30x40, 40x60, 50x80 Immediate Settlement Ullas Aswath 9845074355

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING

Sites

Sarjapur Road

DOMMASANDRA ELECTRONIC City Main Road near DPS Commercial 4600Sft, RS.5000 Per Sft: 8884501767

BUSINESS

Business to Business

Medical

ATTENTION: HOSPITALS, NURSING HOMES, HEALTHCARE UNITS. For Your HOSPITAL EQUIPMENTS FURNITURES and INSTRUMENTS. 9148137818, 9480618427

PUBLIC NOTICE

KENDRIYA VIHAR APARTMENT OWNERS ASSOCIATION
Invites Tender for:-
1. (i) Repair / replacement of water / waste water pipes in their complex: Apprx Cost: 150 Lakhs.
(ii) Supply of CPVC / PVC pipes for the above: Apprx Cost: 150 Lakhs.
2. Contact: AO : KVAOA, Kendriya Vihar, Yelahanka, Bangalore-64, Mob: 76766 00737
3. Issue of Tender Forms:
(i) 28 Aug 2024 to 17 Sep 2024 &
(ii) 28 Aug 2024 to 10 Sep 2024.
4. Tender Opening: Tender
(i) on 21 Sep 2024 and Tender &
(ii) on 14 Sep 2024.

NOTICE
For Disposal Of Medical Records, Seventh-Day Adventist Medical Center, Bangalore proposes to permanently dispose the inactive patient Medical Records from January 1, 2015 to December 31, 2018.
Any patient needing copy of the patient's medical record can submit written request with valid government id proof, to Medical Director, SDA Medical Centre, Frazer Town, Bangalore-5 on or before September 27, 2024.

PERSONAL

Change of Name

I PREMANAND S/o SEETARAM R/o Jantha Colony, Huligudda, Raichur, Karnataka- 584122, have changed my name to PREMANAND CHAUHAN

VIVEKANANDA INSTITUTE OF TECHNOLOGY
AN INSTITUTE OF JANATHA EDUCATION SOCIETY®
Recognised by GOK, Affiliated to VTU & Approved by AICTE
CET CODE: E087 | Estd.: 1997 | COMEDK CODE: E149
BE: Bachelor of Engineering
❖ Computer Science
❖ Artificial Intelligence & Machine Learning
❖ Electronics & Communication
❖ Information Science
❖ Mechanical ❖ Civil
ACCREDITED WITH B+ NAAC
College of Law B++ NAAC
3Yr LL.B
5Yr B.A.LL.B | B.Com.LL.B
Institute of Management PGCET B-323
BCA | BBA
MBA - Finance | Marketing, HR | Business Analytics
Degree College A NAAC
BCA | BA |
B.Ed | BA Journalism
B.Com | B.Com Data Analytics
College of Pharmacy CET B060
D.Pharm | B.Pharm
M.Pharm - Pharmaceutical Chemistry, Pharmaceutics
2024-25 Admissions Open
95139 53482
VKIT Campus: Gudimavu, Kumbalgodu, Kengeri, Bengaluru - 74
City Campus: Dr. RajKumar Road, Next to Orion Mall, Rajajinagar, Bengaluru - 55

I, EDWARD VIJAYARAJ BENJAMIN residing at No.65/3, 1st floor, 5th main, Hebbal Mill Road, Ganganagar, R.T.Nagar, Bengaluru-32 have changed my name to EDWARD VIJAYARAJ vide affidavit dated 14/08/2024 before notary LEELA Bangalore.

I SYED MAZHARULLA Residing at #36, 7th Main, 1st Cross BTM Layout, Bangalore- 560029, have changed my name to SYED MOHAMMED MAZHARULLA vide affidavit dated 27.08.2024, before notary R. Vishwanath, Bangalore. Henceforth I shall be called SYED MOHAMMED MAZHARULLA only.

I SHRIRAM R/a, #161, 4th cross, Gurudatta Layout, Hosakerehalli, Bangalore-560085 Have Changed My Name to SHRIRAM JAGANNATH KALAMADI Vide Affidavit Dated 26/08/2024 before Notary H.S. Sakalesh Aradhya, Bangalore

CHANGE OF NAME
I, JANSIE R RODRIGUES W/o Rodrigues Rajashekar S, R/at # 35, AVE Maria, Kanakadasa Layout, 1st Cross, Lingarajapuram, Bengaluru- 560084, have changed my minor daughter's name from ANGELINA JUANITA to ANGELINA JUANITA R vide affidavit dated 27-08-2024, before notary S I Balaguru Bengaluru.

Lost

LOST
I, Basavaraju S/o Late Veerabojaiah, Bavikere, Nelamangala – 562123. Have Lost Property Document on 10-07-2024, of Bangalore North, Bettanagere Village Grama Thana, Khatha No.125/2, Property No: 125/2, Site No. 8 & 9, East – West 30 feet, North – South 80 feet, Total 2400 Sq feet, Sale Deed Reg No: Book No: 1 MDL 1-02071-2008-09, CD No: MDL D 21st Dt:19.01.2009. Anybody found Please inform Mobile No: 9886883548 or Near by Police Station.

EDUCATION
To Place your Classified Ads Contact:
9845114560

CONNECT

RUNNING CONDITION DIESEL GENERATOR SETS FOR SALE
KVA - 500 kva
Quantity - 3 Nos
MAKE - CUMMINS
Commissioning year - 2008, 2009, 2010
MODEL -KTA-19-G9
Running Hours - 9500, 8500, 900 (approx) respectively
CONTACT : Deshpande INDUSTRIES
"Sidhdhi Homes" Sambhaji Road, Hindu Nagar, Tilakwadi Near HP Regional Office, BELAGAVI
Call: 9480687589 9480687586

DH Classifieds More value, more impact ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
*Conditions apply
www.dhclassifieds.com BOOK NOW
Book your ad with us now! For more details contact:
+91 9845114560 | +91 9901641752 | 080-45557163/164

ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ವಿವಿಧ ಕಾಮಗಾರಿಗಳ ಭೂಮಿಪೂಜೆ ನೆರವೇರಿಸಿದ ಸಿ.ಎಂ

‘ಆಸ್ಪತ್ರೆಗಳಲ್ಲಿ ರೋಬೊಟಿಕ್ ಸೌಲಭ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ಕಾರಿ ಆಸ್ಪತ್ರೆಗಳಲ್ಲಿಯೂ ಖಾಸಗಿ ಆಸ್ಪತ್ರೆಗಳಂತೆ ಅತ್ಯಾಧುನಿಕ ಸೌಲಭ್ಯಗಳು ಸಿಗುವಂತಾಗಬೇಕು. ಆದ್ದರಿಂದ ರೋಬೊಟಿಕ್ ತಂತ್ರಜ್ಞಾನವನ್ನು ಸರ್ಕಾರಿ ಆಸ್ಪತ್ರೆಗಳಲ್ಲಿ ಅಳವಡಿಸಲು ಕ್ರಮವಹಿಸಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಆರೋಗ್ಯ ಇಲಾಖೆಯು ಕೆ.ಸಿ. ಜನರಲ್ ಆಸ್ಪತ್ರೆಯ ಆವರಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಕಟ್ಟಡ ಸೇರಿ ₹150 ಕೋಟಿ ವೆಚ್ಚದ ವಿವಿಧ ಕಾಮಗಾರಿಗಳ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

‘ಖಾಸಗಿ ಆಸ್ಪತ್ರೆಗಳಲ್ಲಿ ರೋಬೊಟಿಕ್ ತಂತ್ರಜ್ಞಾನದ ನೆರವಿನಿಂದ ಶಸ್ತ್ರಚಿಕಿತ್ಸೆಗಳನ್ನು ಮಾಡಲಾಗುತ್ತಿದೆ. ಈ ತಂತ್ರಜ್ಞಾನವನ್ನು ಸರ್ಕಾರಿ ಆಸ್ಪತ್ರೆಗಳಲ್ಲಿಯೂ ಅಳವಡಿಸಿಕೊಂಡು, ಶಸ್ತ್ರಚಿಕಿತ್ಸೆ ನಡೆಸಬೇಕು. ಖಾಸಗಿ ಆಸ್ಪತ್ರೆಗಳು ವಿವಿಧ ಶಸ್ತ್ರ-ಚಿಕಿತ್ಸೆಗಳಿಗೆ ₹ 30 ಲಕ್ಷದವರೆಗೂ ಬಿಲ್ ಮಾಡುತ್ತಿವೆ. ಇದನ್ನು ಪಾವತಿಸಲಾಗದೆ ಪ್ರತಿನಿತ್ಯ ಹಲವರು ನೆರವು ಕೇಳಿಕೊಂಡು ಬರುತ್ತಾರೆ. ಎಲ್ಲ ಸೌಲಭ್ಯ ಸರ್ಕಾರಿ ಆಸ್ಪ-ತ್ರೆಗಳಲ್ಲಿಯೇ ಸಿಗುವಂತೆ ಮಾಡಿದರೆ ಖಾಸಗಿ ಆಸ್ಪತ್ರೆಗಳಿಗೆ ಹೋಗುವವರ ಸಂಖ್ಯೆ ಕಡಿಮೆ ಆಗುತ್ತದೆ’ ಎಂದರು.

‘ರೋಗಿಗಳಿಗೆ ಚಿಕಿತ್ಸೆ ನೀಡುವಾಗ ಸೌಹಾರ್ದಯುತವಾಗಿ ವರ್ತಿಸಿ, ಅವರ ಕಷ್ಟಗಳನ್ನು ಆಲಿಸಬೇಕು. ಇದರಿಂದ ರೋಗಿಗಳು ತಕ್ಕ ಮಟ್ಟಿಗೆ ನಿರಾಳರಾಗುತ್ತಾರೆ. ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಪೌಷ್ಟಿಕ ಆಹಾರವನ್ನೂ ಒದಗಿಸಬೇಕು. ಅದಕ್ಕೆ ಬೇಕಾದ ಸೌಲಭ್ಯವನ್ನು ಸರ್ಕಾರ ಒದಗಿಸಲಿದೆ’ ಎಂದು ತಿಳಿಸಿದರು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ‘ಬಿಬಿಎಂಪಿ ನಿರ್ವಹಿಸುತ್ತಿರುವ ಪ್ರಮುಖ ಆಸ್ಪತ್ರೆಗಳ ಜವಾಬ್ದಾರಿಯನ್ನು ಆರೋಗ್ಯ ಇಲಾಖೆಗೆ ಹಸ್ತಾಂತರಿಸುವ ಬಗ್ಗೆ ಚಿಂತನೆ ನಡೆಸಲಾಗುತ್ತಿದೆ’ ಎಂದು ಹೇಳಿದರು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ‘ಆರೋಗ್ಯ ವ್ಯವಸ್ಥೆಯ ಸಮಗ್ರ ಸುಧಾರಣೆಗೆ ಕ್ರಮವಹಿಸಲಾಗಿದೆ. ಕಿಮೋಥೆರಪಿಗೆ ಸಂಬಂಧಿಸಿದಂತೆ ದೊಡ್ಡ ಆಸ್ಪತ್ರೆಗಳಿಗೆ ತೆರಳುವುದನ್ನು ತಪ್ಪಿಸಲು ಮುಂದಿನ ತಿಂಗಳಿಂದ ಜಿಲ್ಲಾ ಆಸ್ಪತ್ರೆಗಳಲ್ಲಿಯೇ ಕಿಮೋಥೆರಪಿ ಡೇ ಕೇರ್ ಸೆಂಟರ್ ಪ್ರಾರಂಭಿಸಲಾಗುವುದು. ಅಪಘಾತಕ್ಕೆ ಒಳಗಾದವರಿಗೆ ತುರ್ತು ಆರೋಗ್ಯ ಸೇವೆ ಒದಗಿಸಲು ಪ್ರತ್ಯೇಕ ಆಂಬುಲೆನ್ಸ್ ಸೇವೆಯನ್ನು ಶೀಘ್ರದಲ್ಲಿಯೇ ಪ್ರಾರಂಭಿಸಲಾಗುತ್ತದೆ. ಈ ಸಂಬಂಧ ಅಪಘಾತ ವಲಯವನ್ನು (ಹಾಟ್ ಸ್ಪಾಟ್) ಗುರುತಿಸಿ, ಹತ್ತಿರದಲ್ಲಿಯೇ ಟ್ರಾಮಾ ಸೌಲಭ್ಯವನ್ನೂ ಒದಗಿಸಲಾಗುವುದು’ ಎಂದು ಅವರು ತಿಳಿಸಿದರು.

ಆರೋಗ್ಯ ಇಲಾಖೆ ಆಯುಕ್ತ ಡಿ. ರಂದೀಪ್, ಕೆ.ಸಿ. ಜನರಲ್ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕಿ ಡಾ.ಇಂದಿರಾ ಕಬಾಡೆ ಉಪಸ್ಥಿತರಿದ್ದರು.

ತಾಯಿ ಮತ್ತು ಮಕ್ಕಳ ಆಸ್ಪತ್ರೆ ಕಟ್ಟಡ ಸೇರಿ ವಿವಿಧ ಕಾಮಗಾರಿಗಳ ಭೂಮಿ ಪೂಜೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನೆರವೇರಿಸಿದರು. ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಹರ್ಷ ಗುಪ್ತ, ಗ್ಯಾರಂಟಿಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ಎಂ.ರೇವಣ್ಣ ಹಾಗೂ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಉಪಸ್ಥಿತರಿದ್ದರು

200 ಹಾಸಿಗೆಗಳ ಆಸ್ಪತ್ರೆ

ಕೆ.ಸಿ. ಜನರಲ್ ಆಸ್ಪತ್ರೆಯ ಆವರಣದಲ್ಲಿ ಒಟ್ಟು 12,824 ಚದರ ಮೀಟರ್ ವಿಸ್ತೀರ್ಣದಲ್ಲಿ ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ಕಟ್ಟಡ ನಿರ್ಮಾಣವಾಗಲಿದೆ. ಇದರಲ್ಲಿ ಕಟ್ಟಡದ ಅಡಿಪಾಯದ ವಿಸ್ತೀರ್ಣ 2,131 ಚದರ ಮೀಟರ್ ಇರಲಿದೆ. ಇದಕ್ಕೆ ₹ 66.78 ಕೋಟಿ ವೆಚ್ಚವಾಗಲಿದೆ. ನಾಲ್ಕು ಮಹಡಿಯ ಈ ಆಸ್ಪತ್ರೆಯು, 200 ಹಾಸಿಗೆಗಳನ್ನು ಒಳಗೊಂಡಿರಲಿದೆ.

ಇತರ ಯೋಜನೆಗಳು

- ಒಟ್ಟು 8,810 ಚದರ ಮೀಟರ್ ವಿಸ್ತೀರ್ಣದಲ್ಲಿ ₹ 38.28 ಕೋಟಿ ವೆಚ್ಚದಲ್ಲಿ ಬೋಧಕ ವಿಭಾಗದ ಕಟ್ಟಡ ನಿರ್ಮಾಣ. ಈ ಕಟ್ಟಡ ಐದು ಮಹಡಿಗಳನ್ನು ಹೊಂದಿರಲಿದೆ
- ಒಟ್ಟು 790 ಚದರ ಮೀಟರ್ ವಿಸ್ತೀರ್ಣದಲ್ಲಿ ₹ 4.28 ಕೋಟಿ ವೆಚ್ಚದಲ್ಲಿ ಶವಾಗಾರ ಕೊಠಡಿ ನಿರ್ಮಾಣ
- ಒಟ್ಟು 230 ಚದರ ಮೀಟರ್ ವಿಸ್ತೀರ್ಣದಲ್ಲಿ ₹ 1.77 ಕೋಟಿ ವೆಚ್ಚದಲ್ಲಿ ಅಡುಗೆ ಮನೆ ಕಟ್ಟಡ ನಿರ್ಮಾಣ
- 190 ಚದರ ಮೀಟರ್ ವಿಸ್ತೀರ್ಣದಲ್ಲಿ ₹ 1.98 ಕೋಟಿ ವೆಚ್ಚದಲ್ಲಿ ಲಾಂಡ್ರಿ ಕಟ್ಟಡ ನಿರ್ಮಾಣ
- 135 ಚದರ ಮೀಟರ್ ವಿಸ್ತೀರ್ಣದಲ್ಲಿ ₹ 38 ಲಕ್ಷ ವೆಚ್ಚದಲ್ಲಿ ಜೈವಿಕ ವೈದ್ಯಕೀಯ ತ್ಯಾಜ್ಯ ನಿರ್ವಹಣೆ ಕೊಠಡಿ ನಿರ್ಮಾಣ

ಜಯದೇವ ಘಟಕ: 24 ಗಂಟೆ ಸೇವೆ

‘ಇತ್ತೀಚೆಗೆ ಹೃದಯ ಸಂಬಂಧಿ ಕಾಯಿಲೆ ಜಾಸ್ತಿಯಾಗುತ್ತಿದೆ. ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿರುವ ಜಯದೇವ ಹೃದ್ರೋಗ ಸಂಸ್ಥೆಯ ಘಟಕವು ಸಂಜೆ 5 ಗಂಟೆಯವರೆಗೆ ಕಾರ್ಯನಿರ್ವಹಿಸುತ್ತಿದೆ. ಆಂಜಿಯೋಗ್ರಾಮ್ ಮತ್ತು ಆಂಜಿಯೋಪ್ಲಾಸ್ಟಿಯನ್ನು ಸಕಾಲದಲ್ಲಿ ಮಾಡಬೇಕಾಗುತ್ತದೆ. ಆದ್ದರಿಂದ ಕೆ.ಸಿ. ಜನರಲ್ ಆಸ್ಪತ್ರೆ ಆವರಣದಲ್ಲಿರುವ ಜಯದೇವ ಆಸ್ಪತ್ರೆಯ ಘಟಕದಲ್ಲಿ 24 ಗಂಟೆಯೂ ಸೇವೆ ಒದಗಿಸುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಿದ್ದೇನೆ’ ಎಂದು ಸಿದ್ದರಾಮಯ್ಯ ಹೇಳಿದರು.

ಎನ್‌ಡಿಎಗೆ ಬಹುಮತ

ರಾಜ್ಯಸಭೆ: ಕುರಿಯನ್ ಸೇರಿ 12 ಮಂದಿ ಅವಿರೋಧ ಆಯ್ಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜ್ಯಸಭೆಗೆ 12 ಸದಸ್ಯರು ಮಂಗಳವಾರ ಅವಿರೋಧವಾಗಿ ಆಯ್ಕೆಯಾಗಿದ್ದು, ಎನ್‌ಡಿಎ ಮೈತ್ರಿಕೂಟ ಬಹುಮತ ತನ್ನದಾಗಿಸಿಕೊಂಡಿದೆ.

12 ಸ್ಥಾನಗಳಲ್ಲಿ ಎನ್‌ಡಿಎ 11 ಸ್ಥಾನಗಳನ್ನು ಗೆದ್ದುಕೊಂಡಿದೆ. ಇದರಲ್ಲಿ ಬಿಜೆಪಿಯ 9 ಮಂದಿ ಸೇರಿದ್ದಾರೆ. ಮಿತ್ರ ಪಕ್ಷಗಳಾದ ಎನ್‌ಸಿಪಿ (ಅಜಿತ್ ಪವಾರ್ ಬಣ) ಮತ್ತು ರಾಷ್ಟ್ರೀಯ ಲೋಕ ಮಂಚ್‌ನ ತಲಾ ಒಬ್ಬರು ಆಯ್ಕೆಯಾಗಿದ್ದಾರೆ. ಇನ್ನೊಂದು ಸ್ಥಾನವನ್ನು ಕಾಂಗ್ರೆಸ್ ಪಕ್ಷ ತೆಲಂಗಾಣದಿಂದ ಗೆದ್ದುಕೊಂಡಿದೆ.

ಈ ಫಲಿತಾಂಶಕ್ಕೂ ಮುನ್ನ ನಾಮ ನಿರ್ದೇಶನಗೊಂಡ ಆರು ಸದಸ್ಯರು ಮತ್ತು ಹರಿಯಾಣದ ಒಬ್ಬ ಪಕ್ಷೇತರ ಸೇರಿದಂತೆ ಎನ್‌ಡಿಎ ಮೈತ್ರಿಕೂಟದ ಸದಸ್ಯರ ಸಂಖ್ಯೆ 110 ಇತ್ತು. ಇದೀಗ ಅದು 121ಕ್ಕೆ ಏರಿಕೆಯಾಗಿದೆ. ರಾಜ್ಯ-ಸಭೆಯಲ್ಲಿ ಹಾಲಿ 237 ಸದಸ್ಯರಿದ್ದಾರೆ. ಎಂಟು ಸ್ಥಾನಗಳು (ಜಮ್ಮು ಮತ್ತು ಕಾಶ್ಮೀರದಿಂದ 4, ನಾಮನಿರ್ದೇಶಿತ 4) ಖಾಲಿಯಿವೆ.

ನಾಮ ನಿರ್ದೇಶಿತ ಸದಸ್ಯರ ನಾಲ್ಕು ಸ್ಥಾನಗಳನ್ನು ಸರ್ಕಾರ ಭರ್ತಿಗೊಳಿಸಿದರೆ ಎನ್‌ಡಿಎ ಸದಸ್ಯರ ಸಂಖ್ಯೆ 125ಕ್ಕೆ ಏರಿಕೆಯಾಗಲಿದೆ. ಸದನವು ತನ್ನ ಪೂರ್ಣ ಬಲವನ್ನು (245) ಪಡೆದಾಗ ಬಹುಮತಕ್ಕೆ 123 ಸ್ಥಾನಗಳು ಬೇಕು.

ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ಅವರು ಕಾಂಗ್ರೆಸ್‌ನಿಂದ ಆಯ್ಕೆಯಾದ ಏಕೈಕ ಸದಸ್ಯ. ಬಿಜೆಪಿಯಿಂದ ಗೆದ್ದವರಲ್ಲಿ ಕೇಂದ್ರ ಸಚಿವರಾದ ಜಾರ್ಜ್ ಕುರಿಯನ್ (ಮಧ್ಯಪ್ರದೇಶದಿಂದ) ಮತ್ತು ರವನೀತ್ ಸಿಂಗ್ ಬಿಟ್ಟೂ (ರಾಜಸ್ಥಾನದಿಂದ) ಸೇರಿದ್ದಾರೆ. ಜೂನ್‌ನಲ್ಲಿ ಕೇಂದ್ರ ಸಂಪುಟಕ್ಕೆ ಸೇರ್ಪಡೆಗೊಂಡಾಗ ಇಬ್ಬರೂ ಸಂಸದರಾಗಿರಲಿಲ್ಲ.

ರಾಜ್ಯಸಭೆಯಲ್ಲಿ ಬಿಜೆಪಿಯ ಸದಸ್ಯರ ಸಂಖ್ಯೆ 96ಕ್ಕೆ ಏರಿಕೆಯಾಗಿದೆ. ಪ್ರಮುಖ ವಿರೋಧ ಪಕ್ಷ ಕಾಂಗ್ರೆಸ್ 27 ಸದಸ್ಯರನ್ನು ಹೊಂದಿದೆ. ಟಿಎಂಸಿಯು (13) ಅತಿಹೆಚ್ಚು ಸದಸ್ಯರನ್ನು ಹೊಂದಿರುವ ಮೂರನೇ ಪಕ್ಷ ಎನಿಸಿದೆ.

ರಾಜ್ಯಸಭೆಯ 10 ಸದಸ್ಯರು ಲೋಕಸಭೆಗೆ ಆಯ್ಕೆಯಾಗಿದ್ದರಿಂದ, ಬಿಆರ್‌ಎಸ್‌ನ ಕೇಶವ ರಾವ್ ಹಾಗೂ ಬಿಜೆಡಿಯ ಮಮತಾ ಮೊಹಾಂತ ಅವರು ಕ್ರಮವಾಗಿ ಕಾಂಗ್ರೆಸ್ ಮತ್ತು ಬಿಜೆಪಿ ಸೇರುವ ಮುನ್ನ ರಾಜೀನಾಮೆ ನೀಡಿದ್ದರಿಂದ 12 ಸ್ಥಾನಗಳು ತೆರವಾಗಿದ್ದವು.

ಬಿಹಾರ ಉಪಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಅವರು ಬಿಹಾರದಿಂದ ರಾಜ್ಯಸಭೆಗೆ ಆಯ್ಕೆಯಾದ ಎನ್‌ಡಿಎ ಅಭ್ಯರ್ಥಿಗಳಾದ ಉಪೇಂದ್ರ ಕುಶ್ವಾಹ ಮತ್ತು ಮನನ್ ಕುಮಾರ್ ಮಿಶ್ರಾ ಅವರೊಂದಿಗೆ ಸಂಭ್ರಮಿಸಿದರು –ಪಿಟಿಐ ಚಿತ್ರ

ಮುಖ್ಯಾಂಶಗಳು

- ಎನ್‌ಡಿಎ ಸದಸ್ಯರ ಸಂಖ್ಯೆ 121ಕ್ಕೆ ಏರಿಕೆ
- ಬಿಜೆಪಿಯ ಒಂಬತ್ತು ಮಂದಿ ಆಯ್ಕೆ
- ಅಭಿಷೇಕ್ ಮನು ಸಿಂಘ್ವಿ ಕಾಂಗ್ರೆಸ್‌ನಿಂದ ಆಯ್ಕೆ

‘ಬಿಎಚ್‌ಇಎಲ್ ನಷ್ಟಕ್ಕೆ ಸಿಲುಕದಂತೆ ಎಚ್ಚರವಹಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಎಚ್‌ಇಎಲ್‌ಗೆ ದೊಡ್ಡ ಪ್ರಮಾಣದಲ್ಲಿ ಬೇಡಿಕೆಗಳು ಇವೆ. ಆದರೆ ಸಂಸ್ಥೆಯ ಲಾಭದ ಪ್ರಮಾಣ ತೃಪ್ತಿದಾಯಕವಾಗಿಲ್ಲ. ನಿರ್ವಹಣೆಯಲ್ಲಿ ಸ್ವಲ್ಪ ಎಚ್ಚರ ತಪ್ಪಿದರೂ ಸಂಸ್ಥೆ ನಷ್ಟದ ಸುಳಿಗೆ ಸಿಲುಕುವ ಅಪಾಯವಿದೆ’ ಎಂದು ಕೇಂದ್ರ ಭಾರಿ ಕೈಗಾರಿಕಾ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ನಗರದ ಮೈಸೂರು ರಸ್ತೆಯಲ್ಲಿರುವ ಬಿಎಚ್‌ಇಎಲ್‌ನ ವಿದ್ಯುನ್ಮಾನ ಘಟಕಕ್ಕೆ ಮಂಗಳವಾರ ಭೇಟಿ ನೀಡಿದ್ದ ಸಚಿವರು, ಅಧಿಕಾರಿಗಳು ಮತ್ತು ನೌಕರರ ಜತೆ ಮಾತುಕತೆ ನಡೆಸಿದರು. ಈ ವೇಳೆ, ‘ಕೈಗಾರಿಕಾ ಕ್ಷೇತ್ರಕ್ಕೆ ಬೆಂಗಳೂರಿನ ಕೊಡುಗೆ ಅಪಾರ. ದೇಶದ ಅತ್ಯುತ್ತಮ ಕೈಗಾರಿಕೆಗಳು ಇಲ್ಲಿಯೇ ಇದ್ದವು. ಎಚ್‌ಎಂಟಿ, ಐಟಿಐಗಳು ನಷ್ಟಕ್ಕೆ ಸಿಲುಕಿವೆ. ಅಂತಹ ಸ್ಥಿತಿ ಬಿಎಚ್‌ಇಎಲ್‌ಗೆ ಬರಬಾರದು’ ಎಂದರು.

‘ಸಂಸ್ಥೆ ಉತ್ತಮ ಕೆಲಸ ಮಾಡುತ್ತಿದೆ. ಹಾಗೆಂದು ನೂತನ ಆವಿಷ್ಕಾರ ಮತ್ತು ತಂತ್ರಜ್ಞಾನ ಅಳವಡಿಕೆಯಲ್ಲಿ ಹಿಂದುಳಿಯಬಾರದು. ಈ ಬಗ್ಗೆ ಅಧಿಕಾರಿಗಳು ಮತ್ತು ನೌಕರ ವರ್ಗ ಎಚ್ಚರಿಕೆಯಿಂದ ಇರಬೇಕು. ಸಂಸ್ಥೆ ನಷ್ಟಕ್ಕೆ ಸಿಲುಕದಂತೆ ತಡೆಯುವ ಹೊಣೆಗಾರಿಕೆ ಅಧಿಕಾರಿ ಮತ್ತು ನೌಕರರ ಮೇಲೆ ಇದೆ’ ಎಂದು ಅವರು ಹೇಳಿದರು.

ಸಚಿವರು ಘಟಕದ ಎಲ್ಲಾ ವಿಭಾಗಗಳಿಗೆ ಭೇಟಿ ನೀಡಿ, ಅಲ್ಲಿನ ಕಾರ್ಯನಿರ್ವಹಣೆಯ ಮಾಹಿತಿ ಪಡೆದುಕೊಂಡರು. ನೌಕರರ ಜತೆಗೆ ಸಂವಾದ ನಡೆಸಿ, ಅವರ ಕುಂದುಕೊರತೆಗಳನ್ನು ಆಲಿಸಿದರು.

ಕುಂದುಕೊರತೆಗಳನ್ನು ಬಗೆಹರಿಸುವ ಬಗ್ಗೆ ಭರವಸೆ ನೀಡಿದರು. ಉತ್ತಮ ಕೆಲಸ ಮಾಡಿದ ನೌಕರರನ್ನು ಸನ್ಮಾನಿಸಲಾಯಿತು.

ಬಿಎಚ್‌ಇಎಲ್ ಕಾರ್ಖಾನೆ ಭೇಟಿ ವೇಳೆ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು

ಪ್ರಧಾನಿ ನರೇಂದ್ರ ಮೋದಿ ಅವರ ‘ಭಾರತದಲ್ಲೇ ತಯಾರಿಸಿ’ ಮತ್ತು ‘ಆತ್ಮನಿರ್ಭರ ಭಾರತ’ ಪರಿಕಲ್ಪನೆಗಳ ಅಡಿಯಲ್ಲಿ ಬಿಎಚ್‌ಇಎಲ್ ಅನ್ನು ಸಶಕ್ತಗೊಳಿಸಲಾಗುವುದು

ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಭಾರಿ ಕೈಗಾರಿಕಾ ಸಚಿವ

ಕಾರ್ಕಳದ ಅತ್ಯಾಚಾರ ಪ್ರಕರಣ: ಇಬ್ಬರು ಪೊಲೀಸ್ ಕಸ್ಟಡಿಗೆ

ಪ್ರಜಾವಾಣಿ ವಾರ್ತೆ

ಕಾರ್ಕಳ: ಇಲ್ಲಿನ ಯುವತಿ ಮೇಲೆ ನಡೆದ ಅತ್ಯಾಚಾರ ಪ್ರಕರಣದ ಮೂವರು ಆರೋಪಿಗಳನ್ನು ಮಂಗಳವಾರ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಇಬ್ಬರನ್ನು ನ್ಯಾಯಾಲಯವು ಪೊಲೀಸ್ ಕಸ್ಟಡಿಗೆ ಒಪ್ಪಿಸಿದೆ.

ಅಲ್ತಾಫ್ ಹಾಗೂ ಅಭಯ್‌ನನ್ನು ಏಳು ದಿನ ಪೊಲೀಸ್ ಕಸ್ಟಡಿಗೆ ನೀಡಲಾಗಿದೆ. ಡ್ರಗ್ಸ್ ಅಥವಾ ಗಾಂಜಾ ಪ್ರಕರಣದ ಮೇಲಿನ ತನಿಖೆಗಾಗಿ ಕಸ್ಟಡಿಗೆ ತೆಗೆದುಕೊಳ್ಳಲಾಗಿದೆ. ಆರೋಪಿ ಕ್ಸೇವಿಯರ್‌ನನ್ನು ಹಿರಿಯಡ್ಕ ಜೈಲಿನಲ್ಲಿ ಇರಿಸಲಾಗಿದೆ. ಅಗತ್ಯ ಬಿದ್ದಾಗ ಆತನ ವಿಚಾರಣೆ ನಡೆಸಲಾಗುವುದು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕರ್ನಾಟಕ ರಾಜ್ಯ ಖಾಸಗಿ ಸಾರಿಗೆ ಸಂಘಗಳ ಒಕ್ಕೂಟ ತೀರ್ಮಾನ

‘ಪ್ರವಾಸ್ 4.0’: ಬಹಿಷ್ಕಾರ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸ್ ಆ್ಯಂಡ್ ಕಾರ್ ಆಪರೇಟರ್ಸ್ ಕಾನ್ಫೆಡರೇಶನ್ ಆಫ್ ಇಂಡಿಯಾ (ಬಿಒಸಿಐ) ಇದೇ 29 ರಿಂದ 31ರವರೆಗೆ ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ ಆಯೋಜಿಸುತ್ತಿರುವ ‘ಪ್ರವಾಸ್ 4.0’ ಕಾರ್ಯಕ್ರಮವನ್ನು ಬಹಿಷ್ಕರಿಸಲು ನಿರ್ಧರಿಸಲಾಗಿದೆ ಎಂದು ಕರ್ನಾಟಕ ರಾಜ್ಯ ಖಾಸಗಿ ಸಾರಿಗೆ ಸಂಘಗಳ ಒಕ್ಕೂಟ ತಿಳಿಸಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಅಧ್ಯಕ್ಷ ನಟರಾಜ್ ಶರ್ಮಾ, ‘ಪ್ರವಾಸ್ 4.0 ಕಾರ್ಯಕ್ರಮಕ್ಕೆ ಸಂಬಂಧಿಸಿದ ಹಣಕಾಸು ನಿರ್ವಹಣೆಯಲ್ಲಿ ಅಕ್ರಮ ನಡೆಯುತ್ತಿದೆ. ಹಿಂದಿನ ಮೂರು ‘ಪ್ರವಾಸ್’ ಕಾರ್ಯಕ್ರಮಗಳ ಕುರಿತು ಹಣಕಾಸಿಗೆ ಸಂಬಂಧಿಸಿದ ಮಾಹಿತಿಯನ್ನು ಸದಸ್ಯರಿಗೆ ನೀಡುತ್ತಿಲ್ಲ. ವೆಹಿಕಲ್ ಲೋಕೇಶನ್ ಟ್ರ್ಯಾಕಿಂಗ್ ಡಿವೈಸಸ್ ಮತ್ತು ಪ್ಯಾನಿಕ್ ಬಟನ್‌ಗೆ ಸಂಬಂಧಿಸಿದ ಸಮಸ್ಯೆಗಳ ಕುರಿತು ಸರ್ಕಾರದ ವಿರುದ್ಧ ಧ್ವನಿ ಎತ್ತುತ್ತಿಲ್ಲ. ಆದ್ದರಿಂದ, ಈ ಬಾರಿಯ ‘ಪ್ರವಾಸ್’ ಬಹಿಷ್ಕರಿಸಲು ನಿರ್ಧರಿಸಲಾಗಿದೆ’ ಎಂದು ವಿವರಿಸಿದರು.

‘ಅಗ್ರಿಗೇಟರ್ ಕಂಪನಿಗಳು ವಾಹನಗಳ ಮಾಲೀಕರ ಕಮಿಷನ್ ಮೊತ್ತದಲ್ಲಿ ಶೇಕಡ 12 ರಿಂದ 20ರಷ್ಟನ್ನು ಸುಲಿಗೆ ಮಾಡುತ್ತಿವೆ. ಈ ಅಗ್ರಿಗೇಟರ್ ಕಂಪನಿಗಳಿಂದಲೇ ಈ ಬಾರಿಯ ‘ಪ್ರವಾಸ್’ ಪ್ರದರ್ಶನದಲ್ಲಿ ಜಾಹೀರಾತು ಪಡೆದುಕೊಳ್ಳಲಾಗುತ್ತಿದೆ. ಆದ್ದರಿಂದ ಈ ಕಂಪನಿಗಳ ವಿರುದ್ಧ ಬಿಒಸಿಐ ಧ್ವನಿ ಎತ್ತುತ್ತಿಲ್ಲ’ ಎಂದು ದೂರಿದರು.

ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಎಸ್. ರಾಘು, ಕರ್ನಾಟಕ ರಾಜ್ಯ ಬಸ್ ಮಾಲೀಕರ ಸಂಘದ ಪ್ರಧಾನ ಕಾರ್ಯದರ್ಶಿ ಸುರೇಶ್ ಪತ್ರಿಕಾಗೋಷ್ಠಿಯಲ್ಲಿದ್ದರು.

‘ಬೈಲಾವನ್ನು ಉಲ್ಲಂಘಿಸಲಾಗುತ್ತಿದೆ’

‘ವಿವಿಧ ರಾಜ್ಯಗಳ ಸಂಘಟನೆಗಳನ್ನು ಒಳಗೊಂಡು ಬಿಒಸಿಐ ಎಂಬ ಒಕ್ಕೂಟ ರಚಿಸಲಾಗಿದೆ. ಆದರೆ, ಬಿಒಸಿಐ ಒಕ್ಕೂಟದ ಮೂಲ ತತ್ವಗಳ ವಿರುದ್ಧವಾಗಿ ಕಾರ್ಯನಿರ್ವಹಿಸುತ್ತಿದೆ. ಇಲ್ಲಿ ಏಕಪಕ್ಷೀಯವಾಗಿ ನಿರ್ಧಾರ ಕೈಗೊಳ್ಳಲಾಗುತ್ತಿದ್ದು, ಪಾರದರ್ಶಕತೆ ಕೊರತೆ ಇದೆ. ರಾಜ್ಯ ಸಂಘಟನೆಗಳು ಬಿಒಸಿಐ ಪ್ರಮುಖರನ್ನು ಪ್ರಶ್ನಿಸಿದರೆ, ಸಮರ್ಪಕ ಉತ್ತರ ನೀಡುತ್ತಿಲ್ಲ. ಬೈಲಾ ಉಲ್ಲಂಘನೆ ಪ್ರಕರಣಗಳು ಹೆಚ್ಚುತ್ತಿವೆ’ ಎಂದು ಕರ್ನಾಟಕ ರಾಜ್ಯ ಖಾಸಗಿ ಸಾರಿಗೆ ಸಂಘಗಳ ಒಕ್ಕೂಟದ ಅಧ್ಯಕ್ಷ ನಟರಾಜ್ ಶರ್ಮಾ ಆರೋಪಿಸಿದರು.

ಹೆಬ್ಬಾಳ: ಇಂದು ವಿದ್ಯುತ್ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಾಳದ ಉಪ ಕೇಂದ್ರದಲ್ಲಿ ತುರ್ತು ನಿರ್ವಹಣೆ ಕಾಮಗಾರಿ ನಡೆಯುತ್ತಿರುವುದರಿಂದ ಬುಧವಾರ ಬೆಳಿಗ್ಗೆ 11 ರಿಂದ ಸಂಜೆ 4 ಗಂಟೆವರೆಗೆ, ಉಪ ಕೇಂದ್ರದ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವ್ಯತ್ಯಯವಾಗುವ ಪ್ರದೇಶಗಳು: ಗಂಗಾನಗರ, ಲಕ್ಷ್ಮಯ್ಯ ಬ್ಲಾಕ್, ವೀವರ್ ಕಾಲೊನಿ, ಸಿಬಿಐ ಕ್ವಾರ್ಟರ್ಸ್, ಆರ್.ಬಿ.ಐ ಕಾಲೊನಿ, ಸಿ.ಪಿ.ಯು ಬ್ಲಾಕ್, ಡಿ.ಜಿ.ಕ್ಯೂ ಕ್ವಾಟರ್ಸ್, ಮುನಿರಾಮಯ್ಯ ಬ್ಲಾಕ್, ಯು.ಎ.ಎಸ್ ಕ್ಯಾಂಪಸ್. ದಿಣ್ಣೂರು ಮುಖ್ಯ ರಸ್ತೆ, ಆರ್.ಟಿ. ನಗರ, ಪಂಜಾಬ್ ನ್ಯಾಶನಲ್ ಬ್ಯಾಂಕ್, ಎಚ್.ಎಂ.ಟಿ ಬ್ಲಾಕ್, ಚಾಮುಂಡಿನಗರ, ಮಾಜಿ ಸೈನಿಕರ ಕಾಲೊನಿ, ಆರ್.ಟಿ. ನಗರ ಪೊಲೀಸ್ ಠಾಣಾ ಪ್ರದೇಶ, ಅಶ್ವತ್ಥ ನಗರ, ಡಾಲರ್ಸ್ ಕಾಲೊನಿ, ಎಂಎಲ್‌ಎ ಲೇಔಟ್, ರತನ್ ಅಪಾರ್ಟ್‌ಮೆಂಟ್, ಗಾಯತ್ರಿ ಅಪಾರ್ಟ್‌ಮೆಂಟ್, ಫುಡ್‌ವರ್ಲ್ಡ್ ಆರ್.ಟಿ. ನಗರ ಸುತ್ತಮುತ್ತಲಿನ ಪ್ರದೇಶಗಳು.

ನೃಪತುಂಗ ಬಡಾವಣೆ, ಕೃಷ್ಣಪ್ಪ ಬ್ಲಾಕ್, ಸಿಬಿಐ ಮುಖ್ಯರಸ್ತೆ, ಎಂಎಲ್‌ಎ ಲೇಔಟ್‌ನ ಭಾಗಗಳು, ಶಾಂತಿಸಾಗರ ಮುಖ್ಯ ರಸ್ತೆ, ವೇಣುಗೋಪಾಲ ಲೇಔಟ್, ಜಡ್ಜಸ್ ಕಾಲೊನಿ, 80 ರಸ್ತೆ, ವಿಶ್ವೇಶ್ವರ ಬ್ಲಾಕ್, ಕರಿಯಣ್ಣ ಲೇಔಟ್, ಯೋಗೇಶ್ವರ ನಗರ, ರಿಂಗ್ ರೋಡ್, ಕುವೆಂಪು ಲೇಔಟ್, ನೇತಾಜಿ ನಗರ, ವಿನಾಯಕ ಲೇಔಟ್ ಒಂದನೇ ಹಂತ, ಗಂಗಾನಗರ ಮಾರುಕಟ್ಟೆ ವ್ಯಾಪ್ತಿ. ಸಂಜಯನಗರ, ಎಇಸಿಎಸ್ ಲೇಔಟ್, ಹೊಯ್ಸಳ ಅಪಾರ್ಟ್‌ಮೆಂಟ್, ಗೆದ್ದಲಹಳ್ಳಿ, ಜಯನಗರ, ಭೂಪಸಂದ್ರ, ಸೆಂಟ್ರಲ್ ಎಕ್ಸೈಸ್ ಲೇಔಟ್.

ಮೊಹಮ್ಮದ್ ಲೇಔಟ್, ವಿಎಸ್‌ಎನ್‌ಎಲ್ ವೈಟ್ ಹೌಸ್, ಚೋಳನಗರ, ಎಂ.ಎಸ್.ಎಚ್ ಲೇಔಟ್, ಅಮರಜ್ಯೋತಿ ಲೇಔಟ್, ಚಿದಾನಂದರೆಡ್ಡಿ ಲೇಔಟ್, ಕೆಂಪಣ್ಣ ಲೇಔಟ್, ನೇತಾಜಿ ನಗರ, ಚಿನ್ನಮ್ಮ ಲೇಔಟ್, ಸೀತಪ್ಪ ಲೇಔಟ್, ಸಿಐಎಲ್ ಲೇಔಟ್, ಗುಡ್ಡದಹಳ್ಳಿ ವೃತ್ತ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ಮತ್ತಿಕೆರೆ ಸುತ್ತಮುತ್ತವೂ ವ್ಯತ್ಯಯ

ಮತ್ತಿಕೆರೆಯ 20/66/11 ಕೆ.ವಿ. ಉಪ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಕೈಗೊಳ್ಳುವುದರಿಂದ, ಈ ಉಪ ಕೇಂದ್ರದ ವ್ಯಾಪ್ತಿಯ ಪ್ರದೇಶಗಳಲ್ಲಿ ಗುರುವಾರ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ಎಲ್.ಜಿ.ಹಳ್ಳಿ, ಆರ್.ಎಂ.ವಿ ಎರಡನೇ ಹಂತ, ಸಂಜೀವಪ್ಪ ಕಾಲೊನಿ, ನ್ಯೂ ಬಿ.ಇ.ಎಲ್ ರಸ್ತೆ, ಎಂ.ಎಸ್.ಆರ್. ನಗರ, ಮೋಹನ್ ಕುಮಾರ್ ನಗರ, ಪಂಪಾನಗರ, ಬಾಂಬೆ ಡೈಯಿಂಗ್ ರಸ್ತೆ, ಯಶವಂತಪುರ ಮೊದಲನೇ ಮುಖ್ಯ ರಸ್ತೆ, ಗೋಕುಲ, ಎಚ್.ಎಂ.ಟಿ ಮುಖ್ಯ ರಸ್ತೆ, ಎಚ್.ಎಂ.ಟಿ. ಲೇಔಟ್, ಬೃಂದಾವನ ನಗರ, ಎಸ್.ಬಿ.ಎಂ ಕಾಲೊನಿ, ಎಂ.ಆರ್.ಜೆ ಕಾಲೊನಿ, ವಿ.ಆರ್. ಲೇಔಟ್, ಜೆ.ಪಿ. ಪಾರ್ಕ್ ರಸ್ತೆ.

ಬಿಜೆಪಿ ಶಾಸಕ ಬಸನಗೌಡ ಯತ್ನಾಳ ಅವರು ಮಂಗಳವಾರ ರಾತ್ರಿ ಮಾಲಿನ್ಯ ನಿಯಂತ್ರಣ ಮಂಡಳಿಯ ಕಚೇರಿಗೆ ತೆರಳಿ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದರು. ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ ಚಿತ್ರದಲ್ಲಿದ್ದಾರೆ

ಮಾಲಿನ್ಯ ನಿಯಂತ್ರಣ ಮಂಡಳಿ ವಿರುದ್ಧ ಯತ್ನಾಳ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈಕೋರ್ಟ್ ಆದೇಶ ಪಾಲಿಸದ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳ ವಿರುದ್ಧ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಮಂಗಳವಾರ ರಾತ್ರಿ ಪ್ರತಿಭಟನೆ ನಡೆಸಿದರು.

ಎಥೆನಾಲ್ ಉತ್ಪಾದನೆ ವಿಚಾರವಾಗಿ ನಿಯಮ ಉಲ್ಲಂಘನೆ ಆರೋಪದಲ್ಲಿ ಕಲಬುರಗಿ ಜಿಲ್ಲೆಯ ಚಿಂಚೋಳಿಯ ಸಿದ್ದಸಿರಿ ಸಕ್ಕರೆ ಕಾರ್ಖಾನೆ ಮುಚ್ಚುವಂತೆ ಮಂಡಳಿ ನೋಟಿಸ್ ನೀಡಿತ್ತು.

ನೋಟಿಸ್ ಪ್ರಶ್ನಿಸಿ ಯತ್ನಾಳ ಹೈಕೋರ್ಟ್ ಮೊರೆ ಹೋಗಿದ್ದರು. ವಿಚಾರಣೆ ನಡೆಸಿದ ಕೋರ್ಟ್ ಕಾರ್ಖಾನೆ ತೆರೆಯಲು ಅನುಮತಿ ನೀಡಿತು. ಆದರೆ ಹೈಕೋರ್ಟ್ ಆದೇಶ ಪಾಲಿಸದೆ ಮಂಡಳಿ ಮೇಲ್ಮನವಿ ಸಲ್ಲಿಸಲು ಸಿದ್ಧತೆ ನಡೆಸಿತ್ತು.

ಇದನ್ನು ವಿರೋಧಿಸಿ ಯತ್ನಾಳ, ಕಚೇರಿಗೆ ಬಂದು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಕಚೇರಿಗೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರನ್ನು ಕರೆಸಿಕೊಂಡರು. ಬಳಿಕ ಅಧಿಕಾರಿಗಳ ಜತೆ ಮಾತುಕತೆ ನಡೆಸಿದರು.

ರೈಲ್ವೆ ಮಂಡಳಿಗೆ ಸತೀಶ್ ಕುಮಾರ್ ಅಧ್ಯಕ್ಷ

ನವದೆಹಲಿ (ಪಿಟಿಐ): ಭಾರತೀಯ ರೈಲ್ವೆ ನಿರ್ವಹಣಾ ಸೇವೆ (ಐಆರ್‌ಎಂಎಸ್) ಅಧಿಕಾರಿ ಸತೀಶ್ ಕುಮಾರ್ ಅವರನ್ನು ರೈಲ್ವೆ ಮಂಡಳಿಯ ಅಧ್ಯಕ್ಷ ಹಾಗೂ ಸಿಇಒ ಆಗಿ ಮಂಗಳವಾರ ನೇಮಕ ಮಾಡಲಾಗಿದೆ.

ಪರಿಶಿಷ್ಟ ಜಾತಿಗೆ ಸೇರಿದವರೊಬ್ಬರು ಈ ಉನ್ನತ ಹುದ್ದೆಗೇರಿರುವುದು ಮಂಡಳಿಯ ಇತಿಹಾಸದಲ್ಲಿ ಇದೇ ಮೊದಲು ಎಂದು ರೈಲ್ವೆ ಮಂಡಳಿಯ ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

ಹಾಲಿ ಅಧ್ಯಕ್ಷರಾಗಿರುವ ಜಯ ವರ್ಮಾ ಸಿನ್ಹಾ ಅವರು ಆಗಸ್ಟ್ 31 ರಂದು ನಿವೃತ್ತಿಯಾಗಲಿದ್ದು, ಸತೀಶ್ ಕುಮಾರ್ ಅವರ ನೇಮಕವು ಸೆಪ್ಟೆಂಬರ್ 1ರಿಂದ ಜಾರಿಗೆ ಬರಲಿದೆ.

‘1986ರ ಬ್ಯಾಚ್‌ನ ಐಆರ್‌ಎಂಎಸ್ ಅಧಿಕಾರಿಯಾಗಿರುವ ಸತೀಶ್ ಅವರು ತಮ್ಮ 34 ವರ್ಷಗಳ ವೃತ್ತಿಜೀವನದಲ್ಲಿ ಭಾರತೀಯ ರೈಲ್ವೆಗೆ ಸಾಕಷ್ಟು ಕೊಡುಗೆಗಳನ್ನು ನೀಡಿದ್ದಾರೆ’ ಎಂದು ಮಂಡಳಿಯ ಪ್ರಕಟಣೆ ತಿಳಿಸಿದೆ.

ದೇವಿ ಉತ್ಸವ

ನೆಲಮಂಗಲ ಸಮೀಪದ ಗೆಜ್ಜಗದಹಳ್ಳಿಯಲ್ಲಿ ಶ್ರಾವಣಮಾಸದ ಪ್ರಯುಕ್ತ ಮಾರಮ್ಮ ದೇವಿ ಉತ್ಸವ ನಡೆಯಿತು

ನಾರ್ತ್ ಡಕೋಟ ಸ್ಟೇಟ್ ಯೂನಿವರ್ಸಿಟಿ ಪ್ರಾಧ್ಯಾಪಕ ವಿಲಿಯಂ ಗ್ಯಾಂಜೆ

‘ಕಠಿಣ ಪರಿಶ್ರಮದಿಂದ ಮಾತ್ರ ಯಶಸ್ಸು’

ಪ್ರಜಾವಾಣಿ ವಾರ್ತೆ

ಯಲಹಂಕ: ‘ಸಣ್ಣ ಮತ್ತು ಸ್ವಾರ್ಥರಹಿತ ನಡೆಯು ಇಡೀ ಜಗತ್ತನ್ನು ಪ್ರಗತಿಪಥದಲ್ಲಿ ಕೊಂಡೊಯ್ಯಬಲ್ಲದು. ಯಶಸ್ಸು ಎಂದಿಗೂ ಉಡುಗೊರೆಯ ರೂಪದಲ್ಲಿ ಬರುವಂತಹದ್ದಲ್ಲ. ಅದು ಕಠಿಣ ಪರಿಶ್ರಮದಿಂದ ಮಾತ್ರ ಲಭಿಸಲು ಸಾಧ್ಯ’ ಎಂದು ಅಮೆರಿಕದ ನಾರ್ತ್ ಡಕೋಟ ಸ್ಟೇಟ್ ಯೂನಿವರ್ಸಿಟಿಯ ಪ್ರಾಧ್ಯಾಪಕ ವಿಲಿಯಂ ಗ್ಯಾಂಜೆ ಅಭಿಪ್ರಾಯಪಟ್ಟರು.

ನಿಟ್ಟೆ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್‌ನ 2022–24ನೇ ಸಾಲಿನ 14ನೇ ಪಿ.ಜಿ.ಡಿ.ಎಂ ಸ್ನಾತಕೋತ್ತರ ಪದವೀಧರರ ಘಟಿಕೋತ್ಸವ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಯಶಸ್ಸು ಸಿಕ್ಕ ತಕ್ಷಣ ಅದನ್ನೇ ಅಂತಿಮ ಎಂದು ಭಾವಿಸದೆ, ವೈಫಲ್ಯವನ್ನು ಅಘಾತಕಾರಿ ಎಂದು ಪರಿಗಣಿಸದೆ, ಧೈರ್ಯದಿಂದ ಗುರಿ ತಲುಪುವುದಷ್ಟೇ ಇಲ್ಲಿ ಮುಖ್ಯವಾಗಿದೆ. ವೈಫಲ್ಯಗಳನ್ನು ಛಲದಿಂದ ನಿಭಾಯಿಸಿದಾಗ ಮಾತ್ರ ನಿಮ್ಮ ಕನಸುಗಳು ನನಸಾಗಲು ಸಾಧ್ಯ’ ಎಂದು ತಿಳಿಸಿದರು.

ನಿಟ್ಟೆ ಪರಿಗಣಿತ ವಿಶ್ವವಿದ್ಯಾಲಯದ ಸಹ ಕುಲಾಧಿಪತಿ ವಿಶಾಲ್ ಹೆಗ್ಡೆ ಮಾತನಾಡಿ, ಒಳ್ಳೆಯ ಕಂಪನಿಯಲ್ಲಿ ಉದ್ಯೋಗ ದೊರಕಿಸಿಕೊಳ್ಳುವುದಷ್ಟೇ ನಿಮ್ಮ ಗುರಿಯಾಗಬಾರದು. ನಿಮ್ಮ ಪ್ರತಿಭೆ, ಪರಿಶ್ರಮ ಹಾಗೂ ಕಾಳಜಿಯಿಂದ ನಿಮ್ಮದೇ ಉದ್ಯಮವನ್ನು ಸ್ಥಾಪಿಸುವಂತಾಗಬೇಕು. ಆಗ ನೀವು ಕೇವಲ ಉದ್ಯೋಗಿಗಳಾಗಿ ಉಳಿಯದೆ ಉದ್ಯೋಗಗಳ ಸೃಷ್ಟಿಕರ್ತರಾಗುತ್ತೀರಿ’ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ 58 ವಿದ್ಯಾರ್ಥಿಗಳು ಸ್ನಾತಕೋತ್ತರ ಪದವಿ ಸ್ವೀಕರಿಸಿದರು. ಅತ್ಯುತ್ತಮ ಶೈಕ್ಷಣಿಕ ಸಾಧನೆ ಮಾಡಿದ ಮೂವರು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ವಿತರಿಸಲಾಯಿತು.

ಪಿ.ಜಿ.ಡಿ.ಎಂ ವಿತ್ತೀಯ ನಿರ್ವಹಣೆ ವಿಭಾಗದ ಪೃಥ್ವಿ, ಪ್ರತಿಷ್ಠಿತ ನಿಟ್ಟೆ ಮೀನಾಕ್ಷಿ ಸ್ಮರಣಾರ್ಥ ಚಿನ್ನದ ಪದಕ ಸ್ವೀಕರಿಸಿದರು. ಕರ್ನಲ್ ವೈ.ಕೆ.ಚಂದನ್ ಮತ್ತು ತ್ರಿದರ್ಶ್ ಡಿ.ಆರ್ ಅವರು ಜಸ್ಟಿಸ್ ಕೆ.ಎಸ್.ಹೆಗ್ಡೆ ಸ್ಮರಣಾರ್ಥ ಚಿನ್ನದ ಪದಕ ಪಡೆದರು.

ನಿಟ್ಟೆ ಮೀನಾಕ್ಷಿ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್‌ನ ನಿರ್ದೇಶಕ ಡಾ.ಎಂ.ವೇಣುಗೋಪಾಲ್, ಸಂಸ್ಥೆಯ ಪರೀಕ್ಷಾ ನಿಯಂತ್ರಕ ಪ್ರೊ.ಜಿ. ಕೋಟೇಶ್ವರರಾವ್, ನಿಟ್ಟೆ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿ ರೋಹಿತ್ ಪೂಂಜಾ, ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಎಚ್.ಸಿ.ನಾಗರಾಜ್, ಹಿರಿಯ ಮಾನವಸಂಪನ್ಮೂಲ ತಜ್ಞ ಪ್ರೊ.ಜಿ.ಗಿರಿನಾರಾಯಣ್ ಮತ್ತಿತರರು ಉಪಸ್ಥಿತರಿದ್ದರು.



ಅಮೆರಿಕದ ನಾರ್ತ್ ಡಕೋಟ ಸ್ಟೇಟ್ ಯೂನಿವರ್ಸಿಟಿಯ ಪ್ರಾಧ್ಯಾಪಕ ಡಾ.ವಿಲಿಯಂ ಗ್ಯಾಂಜೆ ಅವರು, ಪಿಜಿಡಿಎಂ ವಿತ್ತೀಯ ನಿರ್ವಹಣೆ ವಿಭಾಗದ ಪೃಥ್ವಿ ಅವರಿಗೆ ಪ್ರತಿಷ್ಠಿತ ನಿಟ್ಟೆ ಮೀನಾಕ್ಷಿ ಸ್ಮರಣಾರ್ಥ ಚಿನ್ನದ ಪದಕ ವಿತರಿಸಿದರು

ಕಾರ್ಯಕ್ರಮದಲ್ಲಿ ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ನಿಸಾರ್ ಅಹಮದ್ ಅವರು, ಶಿಕ್ಷಣತಜ್ಞ ಪ್ರೊ.ಡಾ.ಯು.ಟಿ.ಇಫ್ತಿಕಾರ್ ಅಲಿ ಅವರನ್ನು ಸನ್ಮಾನಿಸಿದರು

‘ಇಫ್ತಿಕಾರ್ ಕೊಡುಗೆ ಅಪಾರ’

ಪ್ರಜಾವಾಣಿ ವಾರ್ತೆ

ಯಲಹಂಕ: ರಾಷ್ಟ್ರೀಯ ಅಲೈಡ್ ಮತ್ತು ಹೆಲ್ತ್‌ಕೇರ್ ಪ್ರೊಫೆಶನ್ಸ್ ಅಡಿಯಲ್ಲಿ ಸ್ಥಾಪಿಸಲಾದ ಅಲೈಡ್ ಮತ್ತು ಹೆಲ್ತ್‌ಕೇರ್ ಕೌನ್ಸಿಲ್ ಕರ್ನಾಟಕದ ಅಧ್ಯಕ್ಷರಾಗಿ ನೇಮಕಗೊಂಡಿರುವ ಶಿಕ್ಷಣತಜ್ಞ ಡಾ.ಯು.ಟಿ.ಇಫ್ತಿಕಾರ್ ಅಲಿ ಅವರನ್ನು ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದಿಂದ ಸನ್ಮಾನಿಸಲಾಯಿತು.

ಕರ್ನಾಟಕದಾದ್ಯಂತ ಎಲ್ಲಾ ಅಲೈಡ್ ಮತ್ತು ಪ್ಯಾರಾಮೆಡಿಕಲ್ ಕೋರ್ಸ್ ಕಾಲೇಜುಗಳ ಮೇಲ್ವಿಚಾರಣೆಯ ಜವಾಬ್ದಾರಿಯನ್ನು ಅವರು ನಿರ್ವಹಿಸಲಿದ್ದಾರೆ.

ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ನಿಸಾರ್ ಅಹಮದ್, ಮಾತನಾಡಿ, ಕೋವಿಡ್ ಬಿಕ್ಕಟ್ಟಿನಲ್ಲಿ ರಾಜ್ಯದ ಜನರ ಆರೋಗ್ಯ ರಕ್ಷಣೆಗಾಗಿ ಇಫ್ತಿಕಾರ್ ಅವರು ನಿರ್ವಹಿಸಿದ ಕಾರ್ಯವನ್ನು ಸ್ಮರಿಸಿದರು.

ಕುಲಪತಿ ಡಾ.ಅನುಭಾ ಸಿಂಗ್ ಮಾತನಾಡಿ, ಸಮಾಜದ ಒಳಿತಿಗಾಗಿ ಬದಲಾವಣೆಯನ್ನು ತರುವ ನಿಟ್ಟಿನಲ್ಲಿ ಅವರು ಈಗ ಇನ್ನಷ್ಟು ಸಹಕಾರಿ ಆಗಲಿದ್ದಾರೆ ಎಂದರು.

ಪ್ರೆಸಿಡೆನ್ಸಿ ಸಮೂಹ ಶಿಕ್ಷಣಸಂಸ್ಥೆಯ ಉಪಾಧ್ಯಕ್ಷ ಸಲ್ಮಾನ್ ಅಹಮದ್, ಕ್ಯಾಲಿಕಟ್‌ನ ಮರ್ಕಝ್ ನಾಲೆಡ್ಜ್ ಸಿಟಿಯ ವ್ಯವಸ್ಥಾಪಕ ನಿರ್ದೇಶಕ ಡಾ.ಮುಹಮ್ಮದ್ ಅಬ್ದುಲ್ ಹಕ್ಕೀಂ ಅಝ್ಹರಿ ಇದ್ದರು.

ತಂತ್ರಜ್ಞಾನ



ಗೂಗಲ್ ಹುಡುಕಾಟದ ಹೊಸ ವೈಶಿಷ್ಟ್ಯ (ಪ್ರಾತಿನಿಧಿಕ ಚಿತ್ರ: ಗೆಟ್ಟಿ ಇಮೇಜಸ್)

ಚಕ್ರಗಳು ಮಾನವನು ಮಾಡಿದ ಆವಿಷ್ಕಾರಗಳಲ್ಲಿ ಪುರಾತನ ಆವಿಷ್ಕಾರ.

ನೀರಿನಂತೆ ಹರಿಯುವ ಗಾಲಿ

ಕೊಳ್ಳೇಗಾಲ ಶರ್ಮ

ಬೆಂಗಳೂರಿನ ಗುಂಡಿ ತುಂಬಿದ ರಸ್ತೆಗಳಲ್ಲಿ ಧಬಕ್ಕನೆ ಇಳಿದ ಸ್ಕೂಟರು, ಮರಳಿ ಗುಂಡಿಯನ್ನು ಏರಲಾರದೆ ಕುಳಿತ ಅನುಭವ ಆಗಿರಬೇಕಲ್ಲ?! ಹಿಂದಿನಿಂದ ಯಾವುದೋ ಟ್ರಕ್ಕು ಅವಸರದಲ್ಲಿ ಬಂದು ಗುದ್ದಿರದಿದ್ದರೆ, ಅಕ್ಕಪಕ್ಕದ ವಾಹನಸವಾರರ ನೆರವಿನಿಂದ ಗಾಡಿಯನ್ನು ಮೇಲೆತ್ತಿರುತ್ತೀರಿ. ಬಿಬಿಎಂಪಿಯನ್ನೂ ಸ್ಕೂಟರು ತಯಾರಿಸಿದವರನ್ನೂ ಗುಂಡಿ ಕಾಣದಂತೆ ನೀರು ತುಂಬಿದ ಮಳೆಯನ್ನೂ ಒಟ್ಟೊಟ್ಟಿಗೇ ಬೈದಿರುತ್ತೀರಿ. ಇದೋ. ದಕ್ಷಿಣಕೊರಿಯಾದ 'ಕೊರಿಯಾ ಇನ್‌ಸ್ಟಿಟ್ಯೂಟ್ ಆಫ್ ಮೆಶಿನರಿ ಆ್ಯಂಡ್ ಮೆಟೀರಿಯಲ್ಸ್ ಟೆಕ್ನಾಲಜಿ ಸಂಸ್ಥೆ'ಯ ಎಂಜಿನಿಯರುಗಳ ಕನಸು ನನಸಾದರೆ ನಿಮಗೆ ಈ ಬೈಯುವ ಕಷ್ಟ ಕಡಿಮೆಯಾದೀತು! ಈ ಸಂಸ್ಥೆಯ ಎಂಜಿನಿಯರ್ ಸುಂಗ್ಯುಕ್ ಸಾಂಗ್ ಮತ್ತು ಸಂಗಡಿಗರು, ಉರುಳಲಾಗದ ಅಡ್ಡಿ ಎದುರಾದಾಗ ಮೃದುವಾಗಿ ಆಕಾರ ಕಳೆದುಕೊಳ್ಳುವ ಹಾಗೂ ಅನಂತರ ತಕ್ಷಣವೇ ಮರಳಿ ಗಟ್ಟಿಯಾಗಿ, ಉರುಳುವ ಚಕ್ರವಾಗುವಂತೆ ಮಾಡುವ ವಸ್ತುವನ್ನು ರೂಪಿಸಿದ್ದಾರೆ. ಇದರಿಂದ ರೂಪಿಸಿದ ಗಾಲಿಗಳು ವಾಹನವನ್ನು ರಸ್ತೆ ಗುಂಡಿಗಳಷ್ಟೆ ಏಕೆ, ಮೆಟ್ಟಿಲುಗಳ ಮೇಲೂ ಸರಾಗವಾಗಿ ಉರುಳಿ ಹತ್ತುವಂತೆ ಮಾಡಿವೆ – ಎಂದು 'ಸೈನ್ಸ್ ರೋಬೋಟಿಕ್ಸ್' ಪತ್ರಿಕೆ ಮೊನ್ನೆ ವರದಿಯನ್ನು ಮಾಡಿದೆ.

ಚಕ್ರಗಳು ಮಾನವನು ಮಾಡಿದ ಆವಿಷ್ಕಾರಗಳಲ್ಲಿ ಬೆಂಕಿಯ ನಂತರದ ಅತ್ಯಂತ ಪುರಾತನ ಆವಿಷ್ಕಾರ. ಅತಿ ಪುರಾತನ ಯಂತ್ರ ಎಂದರೂ ತಪ್ಪಲ್ಲ. ಭಾರವನ್ನು ಸರಾಗವಾಗಿ ಒಂದೆಡೆಯಿಂದ ಇನ್ನೊಂದೆಡೆಗೆ ಸಾಗಿಸಲು ಚಕ್ರದಷ್ಟು ಅನುಕೂಲಿಯಾದ ಸಾಧನ ಇನ್ನೊಂದಿಲ್ಲ. ಕಡಿಮೆ ಬಲವನ್ನು ಬಳಸಿ ಹೆಚ್ಚು ಭಾರವನ್ನು ಕದಲಿಸುವ ಸಾಧನ ಇದು. ಉರುಳುವಂತಹ ವೃತ್ತಾಕಾರದ ಆಕಾರವೇ ಚಕ್ರದ ಈ ಸಾಮರ್ಥ್ಯಕ್ಕೆ ಮೂಲ. ಆ ಆಕಾರವಿಲ್ಲದಾಗ ಉರುಳುವುದು ಎಷ್ಟು ಕಷ್ಟ ಎನ್ನುವುದು ಟೈರ್ ಪಂಕ್ಚರ್ ಆಗಿ ಆಕಾರ ಕಳೆದುಕೊಂಡ ಸೈಕಲನ್ನೋ ಬೈಕನ್ನೋ ದೂಡುವಾಗ ಅನುಭವವಾಗಿರುತ್ತದೆ. ಚಕ್ರಗಳ ಆಕಾರ ಹೀಗೆ ವೃತ್ತಾಕಾರವಾಗಿ, ಧೃಢವಾಗಿ ಇಲ್ಲದಿದ್ದರೆ ಉರುಳುವುದು ಅಸಾಧ್ಯ; ಚಪ್ಪಟೆ ಚಕ್ರಗಳು ಇಲ್ಲದಿರುವುದು ಇದೇ ಕಾರಣಕ್ಕೆ.

ಅಡೆತಡೆಗಳನ್ನು ದಾಟಿ ಸಾಗುವಂತೆ ರೂಪಿಸಲಾದ ಚಕ್ರ. ಚಿತ್ರಕೃಪೆ: 'ಕೊರಿಯಾ ಮೆಟೀರಿಯಲ್ಸ್ ಅಂಡ್ ಮೆಶೀನ್ಸ್ ಇನ್‌ಸ್ಟಿಟ್ಯೂಟ್, ದಕ್ಷಿಣಕೊರಿಯಾ ಹಾಗೂ ಸೈನ್ಸ್ ರೋಬೋಟಿಕ್ಸ್'

ಚಕ್ರಕ್ಕೆ ಸಾಮರ್ಥ್ಯವನ್ನು ಒದಗಿಸುವ ಅದರ ಆಕಾರವೇ ಕೆಲವೊಮ್ಮೆ ಕಷ್ಟವನ್ನೂ ತಂದಿಡುತ್ತದೆ. ಉದಾಹರಣೆಗೆ, ಚಕ್ರದ ಉದ್ದಗಲದ ಅರ್ಧದಷ್ಟು ಎತ್ತರದ ಯಾವ ವಸ್ತುವೂ ಚಕ್ರವು ಮುಂದೆ ಉರುಳದಂತೆ ತಡೆದುಬಿಡುತ್ತದೆ. ದೊಡ್ಡ ದೊಡ್ಡ ತಡೆಗಳು ಅಥವಾ ಚಪ್ಪಟೆಯ ಅಡ್ಡಿಗಳನ್ನು ದೊಡ್ಡ ಚಕ್ರಗಳು ದಾಟುವುದು ಸುಲಭ. ಹೀಗಾಗಿಯೇ ಬಿಎಂಟಿಸಿ ಬಸ್ಸು, ಟ್ರಕ್ಕುಗಳು ಸರಾಗವಾಗಿ ಓಡಾಡುವ ಹಳ್ಳಗಳು ತುಂಬಿದ ರಸ್ತೆಗಳು ಸ್ಕೂಟರು ಚಾಲಕರಿಗೆ ದೊಡ್ಡ ಎವರೆಸ್ಟಿನಂತೆ ಅನಿಸುತ್ತವೆ.

ಚಕ್ರ ಉರುಳದಂತೆ ಅಡ್ಡಿಯಾಗುವ ಇಂತಹ ತಡೆಗಳನ್ನು ದಾಟುವುದಕ್ಕೆ ಎಂಜಿನಿಯರ್‌ಗಳು ಹಲವಾರು ಉಪಾಯಗಳನ್ನು ಮಾಡಿದ್ದಾರೇನೋ ನಿಜ. ಚಕ್ರಗಳನ್ನೇ ದೊಡ್ಡದಾಗಿಸುವುದು, ಚಕ್ರವನ್ನು ಆಧರಿಸಿರುವ ಆ್ಯಕ್ಸಲ್ಲೇ ಬಾಗುವಂತೆ ಮಾಡುವುದು, ಅಥವಾ ಚಕ್ರದ ಸುತ್ತಲೂ ಚಪ್ಪಟೆಯಾದಂತಹ ಬೆಲ್ಟು ಹಾಕುವುದು ಮುಂತಾದ ಉಪಾಯಗಳನ್ನು ಗುರುತಿಸಿದ್ದಾರೆ. ಮಿಲಿಟರಿ ಟ್ಯಾಂಕುಗಳ ಚಕ್ರಗಳ ಸುತ್ತಲೂ ಚಪ್ಪಟೆಪಟ್ಟಿ ಇರುವುದನ್ನು ಕಂಡಿದ್ದೀರಷ್ಟೆ. ಮೂಲ ಆಕಾರ ವೃತ್ತವೇ ಇದ್ದರೂ ಇಂತಹ ಉಪಾಯಗಳಿಂದ ಚಕ್ರವು ಚಪ್ಪಟೆಯ ಅಡ್ಡಿಗಳನ್ನು ನಿರಾತಂಕವಾಗಿ ದಾಟಬಹುದು. ಚಕ್ರದ ಆಕಾರವೇ ಬದಲಾಗುವಂತೆ ಮಾಡಿದರೆ ಹೇಗೆ? ಇದು ಸುಂಗ್ಯುಕ್ ಸಾಂಗ್ ತಂಡದ ಆಲೋಚನೆ.

ದೃಢವಾದ ವೃತ್ತಾಕಾರದ ಚಕ್ರ ಅಡ್ಡಿ ಎದುರಾದಾಗ ನೀರಿನಂತೆ ಆಕಾರವನ್ನು ಕಳೆದುಕೊಂಡು, ಅಡ್ಡಿ ದಾಟಿದ ನಂತರ ಮರಳಿ ವೃತ್ತಾಕಾರಕ್ಕೆ ಬರುವಂತೆ ಮಾಡಬಹುದಲ್ಲ – ಎನ್ನುವುದು ಇವರ ಆಲೋಚನೆ. ಈ ಆಲೋಚನೆಗೆ ಪ್ರೇರಣೆ ನೀರಿನ ಹನಿ. ಗಾಜಿನ ತಟ್ಟೆಯ ಮೇಲೆ ಉರುಳುವ ಹನಿಗಳನ್ನು ನೀವು ನೋಡಿರಬೇಕು. ಮರಳಿನ ಕಣವೇನಾದರೂ ಅಡ್ಡಿಯಾದರೆ ಅದರ ಮೇಲೆ ಸಾಗುವಾಗ ಆಕಾರ ಬದಲಿಸಿಕೊಳ್ಳುತ್ತದೆ. ನಂತರ ಮತ್ತೆ ದುಂಡಗಾಗುತ್ತದೆ. ಮೊದಲಿನಂತೆಯೇ ಉರುಳುತ್ತದೆ. ಚಕ್ರವನ್ನೂ ಹೀಗೆಯೇ ಅಡ್ಡಿಯನ್ನು ದಾಟುವಾಗಷ್ಟೆ ಮೃದುವಾಗುವಂತೆ, ಹಾಗೂ ನಂತರ ಗಟ್ಟಿಯಾಗಿ, ಧೃಢವಾಗುವಂತೆ ಮಾಡಿದರೆ ಹೇಗೆ?

ಈ ಆಲೋಚನೆಯಿಂದ ಸಾಂಗ್ ತಂಡ ವಿಶಿಷ್ಟವಾದೊಂದು ಚಕ್ರವನ್ನು ವಿನ್ಯಾಸ ಮಾಡಿ ಪರೀಕ್ಷಿಸಿದೆ. ಚಕ್ರದ ಅಂಚಿನಲ್ಲಿ ಬೈಸಿಕಲ್ಲಿನ ಸರಪಳಿಯಂತಹ ಸರಪಳಿಯಿದೆ. ಇದು ಬೈಸಿಕಲ್ಲಿನ ಸರಪಳಿಯಂತೆಯೇ ಆಕಾರ ಬದಲಿಸಬಲ್ಲುದು. ಆದರೆ ಸಾಧಾರಣ ಸ್ಥಿತಿಯಲ್ಲಿ ಈ ಸರಪಳಿಯ ಕೊಂಡಿಗಳು ಎದುರು ಬದಿಯಲ್ಲಿರುವ ಕೊಂಡಿಯ ಜೊತೆಗೆ ಗಟ್ಟಿಯಾದ ತಂತಿಯಿಂದ ಬಂಧಿಸಲ್ಪಟ್ಟಿರುತ್ತವೆ. ಈ ತಂತಿ ಚಕ್ರದ ನಡುವೆ ಇರುವ 'ಹಬ್' ಅಥವಾ ಅಕ್ಷಚಕ್ರದ ಒಳಗಿನಿಂದ ತೂರಿ ಹೋಗುತ್ತದೆ. ಸಾಮಾನ್ಯ ಸ್ಥಿತಿಯಲ್ಲಿ ಚಕ್ರ ಸಂಪೂರ್ಣ ದುಂಡಗಿನ ಆಕಾರ ತಳೆಯುತ್ತದೆ. ಆದರೆ ಕಲ್ಲೋ ಮೆಟ್ಟಿಲೋ ಎದುರಾದಾಗ, ಅವುಗಳ ಒತ್ತಡದಿಂದಾಗಿ, ಆ ಭಾಗದಲ್ಲಿನ ತಂತಿಗಳು ಮಡಚಿಕೊಳ್ಳುತ್ತವೆ. ಅಂಚು ಒಳಗೆ ಬಾಗುತ್ತದೆ. ಇದೊಂದು ರೀತಿಯಲ್ಲಿ ನೀರು ಮರಳಿನ ಕಣದ ಮೇಲೆ ಹರಿದ ಹಾಗೆ. ಅನಂತರ ಅಡ್ಡಿ ಬದಲಾದಾಗ ತಂತಿ ಮತ್ತೆ ಮೊದಲಿನಂತೆ ಸೆಟೆದುಕೊಳ್ಳುತ್ತದೆ, ದೃಢವಾಗುತ್ತದೆ.

ಜಾಣತನದಿಂದ ಹೀಗೆ ಚಕ್ರದ ವಿನ್ಯಾಸವನ್ನು ಬದಲಿಸಿ, ಅದು ಧೃಢವಾಗಿಯೂ ಮೃದುವಾಗಿಯೂ ಇರುವಂತೆ ಸಾಂಗ್ ತಂಡ ಮಾಡಿದೆ. ಇದು ನಿಜಕ್ಕೂ ಕೆಲಸ ಮಾಡಬಲ್ಲುದೇ ಎನ್ನುವುದನ್ನೂ ಪರೀಕ್ಷಿಸಿದೆ. ನೂರಿಪ್ಪತ್ತು ಕಿಲೋಗ್ರಾಂ ತೂಕದ ವಾಹನವೊಂದಕ್ಕೆ ಇಂತಹ ನಾಲ್ಕು ಚಕ್ರಗಳನ್ನು ಜೋಡಿಸಿ ವಿವಿಧ ಆಕಾರದ ಅಡ್ಡಿಗಳನ್ನು ದಾಟಲು ನೀಡಿದೆ. ಚಕ್ರದ ತ್ರಿಜ್ಯಕ್ಕಿಂತ ಎತ್ತರದ ಮೆಟ್ಟಿಲುಗಳನ್ನು ಹತ್ತುವಂತೆಯೂ ಮಾಡಿದೆ. ಈ ಎಲ್ಲ ಪರೀಕ್ಷೆಗಳಲ್ಲಿಯೂ ಚಕ್ರ ಯಶಸ್ವಿಯಾಗಿದೆಯಂತೆ. ಅಡ್ಡಿ ಎದುರಾದಾಗ ಸಾಧಾರಣವಾಗಿ ಇರುವ ಸೆಟೆತಕ್ಕಿಂತ ಅರವತ್ತರಷ್ಟು ಸೆಟೆತಕ್ಕೆ ಕುಸಿದು, ಈ ಅಡ್ಡಿಗಳನ್ನು ಚಕ್ರ ದಾಟಿತಂತೆ. ಒಂದಡಿ ಅಗಲದ ಚಕ್ರ ಒಂದೂವರೆ ಅಡಿ ಎತ್ತರದ ಮೆಟ್ಟಿಲನ್ನು ಸರಾಗವಾಗಿ ಹತ್ತಿತು ಎಂದು ಸಾಂಗ್ ವರದಿ ಮಾಡಿದ್ದಾರೆ.

ಹಾಗಿದ್ದರೆ ಇನ್ನೇನು ಈ ಚಕ್ರಗಳನ್ನೇ ತರಿಸಿಕೊಂಡು ಬಿಡೋಣ! ಬೆಂಗಳೂರಿನಲ್ಲಿ ಸುಗಮವಾಗಿ ಸ್ಕೂಟರು ಓಡಿಸಬಹುದು ಎಂದಿರಾ? ತಾಳಿ. ಇದನ್ನು ಬೆಂಗಳೂರಿನ ಸ್ಕೂಟರಿಗೆಂದು ಸಾಂಗ್ ಮಾಡಲಿಲ್ಲ. ರೋಗಿಗಳನ್ನು ಕೊಂಡೊಯ್ಯುವ ಗಾಲಿಕುರ್ಚಿಗಳ ಗಾಲಿಗಳಿಗಾಗಿ ಮಾಡಿದ್ದಾರೆ. ಚಕ್ರಗಳಿಗೆ ಇನ್ನಷ್ಟು ಮೃದುವಾದ ಹೊದಿಕೆ, ಸರಪಳಿಗೆ ದೂಳು ಕೂರದಂತಹ ವ್ಯವಸ್ಥೆಯನ್ನೂ, ತುಸು ದೊಡ್ಡದಾದ ಚಕ್ರಗಳನ್ನೂ ರೂಪಿಸಿ ಪರೀಕ್ಷಿಸಬೇಕಂತೆ. ಅನಂತರ ಬಳಕೆಗೆ ಇದು ಸಿದ್ಧವಾಗಬಹುದು ಎನ್ನುತ್ತಾರೆ. ಸಾಂಗ್. ಇರಲಿ. ಕಾಯೋಣ.

ಗೂಗಲ್ ಸರ್ಚ್‌ಗೆ ಈಗ ಹೆಚ್ಚಿನ 'ಬುದ್ಧಿಮತ್ತೆ'

ಅವಿನಾಶ್ ಬಿ.

ಕೃತಕ ಬುದ್ಧಿಮತ್ತೆ(ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ - ಎಐ) ಯನ್ನು ಈಗಾಗಲೇ ಬಹುತೇಕ ದೈನಂದಿನ ಕೆಲಸ-ಕಾರ್ಯ ಗಳಲ್ಲಿ ತಿಳಿದೋ ತಿಳಿಯದೆಯೋ ನಾವೆಲ್ಲರೂ ಬಳಸಲಾರಂಭಿಸಿದ್ದೇವೆ. ಫೋಟೊಗಳನ್ನು ತಿದ್ದುಪಡಿ ಮಾಡುವು ದರಿಂದ ಹಿಡಿದು, ಮೊಬೈಲ್ ಫೋನ್ ಗಳಿಗೆ (ಸಿರಿ, ಗೂಗಲ್ ಅಸಿಸ್ಟೆಂಟ್ ಮುಂತಾದ ಸಹಾಯಕ ತಂತ್ರಾಂಶಗಳ ಮೂಲಕ) ಆದೇಶಗಳನ್ನು ನೀಡಿ ನಮ್ಮ ಕೆಲಸ ಸಾಧಿಸಿಕೊಳ್ಳುವವರೆಗೆ ಒಂದಲ್ಲ ಒಂದು ರೀತಿಯಲ್ಲಿ ನಮ್ಮ ಕಂಪ್ಯೂಟರ್ ಅಥವಾ ಸ್ಮಾರ್ಟ್ ಸಾಧನಗಳಲ್ಲಿ 'ಎಐ' ಬಳಕೆಯಾಗುತ್ತಿದೆ. ಚಾಟ್‌ಜಿಪಿಟಿಯಂತಹ ಜನರೇಟಿವ್ ಎಐ ತಂತ್ರಜ್ಞಾನಗಳು ಕೂಡ ನಿಧಾನವಾಗಿ ನಮ್ಮ ದೈನಂದಿನ ಬದುಕಿನ ಭಾಗವಾಗುತ್ತಿದೆ. ಈ ಬೆಳವಣಿಗೆಗೆ ಪೂರಕವಾಗಿ ಸರ್ಚ್ ಎಂಜಿನ್ ದಿಗ್ಗಜ ಗೂಗಲ್ ಕೂಡ, ಜನರೇಟಿವ್ ಎಐ ತಂತ್ರಜ್ಞಾನವನ್ನು ನಮ್ಮ ಕೈಗೆ ಸುಲಭವಾಗಿ ನೀಡುತ್ತಿದೆ. ಅದು ಹೇಗೆ?

'ಗೂಗಲ್' ಎಂಬ ಸರ್ಚ್ ಎಂಜಿನ್ ಮೂಲಕ ಅಂತರ್ಜಾಲದಲ್ಲಿ ಯಾವುದನ್ನೇ ಹುಡುಕಾಡಿದರೂ ನಮಗೆ ದೊರೆಯುವ ಫಲಿತಾಂಶದಲ್ಲಿ ಕೆಲವು ದಿನಗಳಿಂದೀಚೆಗೆ ಸಣ್ಣ ಬದಲಾವಣೆಯಾಗಿರುವುದನ್ನು ಬಹುತೇಕರು ಗಮನಿಸಿದ್ದಿರಬಹುದು. ಅಲ್ಲೊಂದು ಲೇಬಲ್ ಕಾಣಿಸುತ್ತದೆ. ಅದರಲ್ಲಿ 'Search Labs | AI Overview' ಎಂದು ಬರೆದಿರುತ್ತದೆ. ಇಲ್ಲಿ ದೊರೆಯುವ ಮಾಹಿತಿಯು ಹೆಚ್ಚು ವ್ಯವಸ್ಥಿತವಾಗಿರುತ್ತದೆ ಎಂಬುದೇ ಈ ಹೊಸ ವೈಶಿಷ್ಟ್ಯದ ಹೆಗ್ಗಳಿಕೆ. ಅಮೆರಿಕದಲ್ಲಷ್ಟೇ ದೊರೆಯುತ್ತಿದ್ದ ಈ ವೈಶಿಷ್ಟ್ಯವನ್ನು ಗೂಗಲ್ ಇತ್ತೀಚೆಗಷ್ಟೇ ಭಾರತ ಸಹಿತ ಆರು ದೇಶಗಳ ಬಳಕೆದಾರರಿಗೂ ಪರಿಚಯಿಸಿದೆ.

ಗೂಗಲ್ ಸರ್ಚ್ ಮಾಡಿದಾಗ ಕಂಡುಬರುವ AI Overview ಲೇಬಲ್

ಏನಿದು ಎಐ ಓವರ್‌ವ್ಯೂ?

ಕೃತಕ ಬುದ್ಧಿಮತ್ತೆಯನ್ನು ಉಪಯೋಗಿಸಿ ಹುಡುಕಾಟದ ಫಲಿತಾಂಶಗಳ ಹೆಚ್ಚು ನಿಖರವಾದ ಸಾರಾಂಶವನ್ನು ಒದಗಿಸುವ ವೈಶಿಷ್ಟ್ಯವೇ 'ಗೂಗಲ್ ಎಐ ಓವರ್‌ವ್ಯೂ'. ಇದು ಗೂಗಲ್ ಸರ್ಚ್ ಲ್ಯಾಬ್ಸ್ ಕೊಡುಗೆ. ಈ ಸೌಲಭ್ಯವನ್ನು ಪಡೆಯಲು ಇರುವ ಮೊದಲ ಮಾನದಂಡ ಎಂದರೆ, ಗೂಗಲ್ ಕ್ರೋಮ್ ಬ್ರೌಸರ್‌ನಲ್ಲಿ ನಾವು ನಮ್ಮ ಗೂಗಲ್ ಇಮೇಲ್ (ಜಿಮೇಲ್) ಖಾತೆಯಿಂದ ಲಾಗಿನ್ ಆಗಿರಬೇಕಾಗುತ್ತದೆ. ಬಳಿಕ ನಮಗೆ ಬೇಕಾದ ವಿಷಯದ ಕುರಿತಾದ ಒಂದು ವಾಕ್ಯವನ್ನು ಸರ್ಚ್ ಎಂಜಿನ್ ಬಾಕ್ಸ್‌ನಲ್ಲಿ ಟೈಪ್ ಮಾಡಿ ಎಂಟರ್ ಒತ್ತಿದರೆ, ಯಾವುದೇ ಸಂಕೀರ್ಣ ವಿಚಾರದ ಮಾಹಿತಿಯೂ ವ್ಯವಸ್ಥಿತವಾಗಿ, ಮಾಹಿತಿಪೂರ್ಣವಾಗಿ ಮತ್ತು ಹೆಚ್ಚು ನಿಖರವಾಗಿ ಸಾರಾಂಶ ರೂಪದಲ್ಲಿ ಗೋಚರಿಸುತ್ತದೆ. ಇದು ಹುಡುಕಾಟದ ಫಲಿತಾಂಶ ಪುಟದ ಮೇಲ್ಭಾಗದಲ್ಲೇ ಕಾಣಿಸುತ್ತದೆ.ಹಿಂದಿಭಾಷೆಯಲ್ಲೂ ಲಭ್ಯವಿದ್ದು, ಅಲ್ಲೇ ಈ ಫಲಿತಾಂಶದ ಮಾಹಿತಿಯನ್ನು ಕೇಳಿಸಿಕೊಳ್ಳುವ (ಧ್ವನಿ) ಆಯ್ಕೆಯೂ (ಬಟನ್ ಮೂಲಕ) ದೊರೆಯುತ್ತದೆ. ಇಲ್ಲಿನ ವಿಶೇಷತೆ ಎಂದರೆ, ಅಲ್ಲಿ ಕಾಣಿಸಲಾದ ಫಲಿತಾಂಶವನ್ನು ಜಗತ್ತಿನ ಯಾವೆಲ್ಲ ಜಾಲತಾಣಗಳಿಂದ ಪಡೆದುಕೊಳ್ಳಲಾಗಿದೆ ಎಂದು ಖಚಿತಪಡಿಸುವ ಲಿಂಕ್‌ಗಳೂ ಇರುತ್ತವೆ. ಹೆಚ್ಚಿನ ಮಾಹಿತಿ ಬೇಕಿದ್ದರೆ ಆಯಾ ಲಿಂಕ್‌ಗೆ ಕ್ಲಿಕ್ ಮಾಡಿ ಓದಬಹುದು. ಅಲ್ಲದೆ, ನಮಗೆ ದೊರೆಯುವ ಹುಡುಕಾಟದ ಫಲಿತಾಂಶದ ಮೂಲವು ವಿಶ್ವಾಸಾರ್ಹವೇ ಎಂಬುದನ್ನು ತಿಳಿದುಕೊಳ್ಳುವುದಕ್ಕೂ ಇದು ಅನುಕೂಲ ಒದಗಿಸುತ್ತದೆ.

ಇದು ಈಗಾಗಲೇ ನಮಗೆ ತಿಳಿದಿರುವ ಜೆಮಿನಿ, ಕೋಪೈಲಟ್, ಚಾಟ್‌ಜಿಪಿಟಿ ಮುಂತಾದ ಬ್ರ್ಯಾಂಡ್ ಹೆಸರಲ್ಲಿ ಬಳಕೆಯಾಗುತ್ತಿರುವ ಜನರೇಟಿವ್ ಎಐ ತಂತ್ರಜ್ಞಾನದ ಫಲ. ಅಲ್ಲಿ ದಾಖಲಿಸುವ ಪಠ್ಯರೂಪದ ಪ್ರಾಂಪ್ಟ್(ಪ್ರಶ್ನೆ) ಗಳನ್ನೇ ಸರ್ಚ್ ಬಾಕ್ಸ್‌ನಲ್ಲಿ ಹಾಕಿದರೆ ದೊರೆಯುವ ಮೊದಲ ಫಲಿತಾಂಶವು ನಮಗೆ ಸಮಗ್ರವಾದ ಮಾಹಿತಿಯನ್ನು ಒದಗಿಸುತ್ತದೆ.

'ಎಐ ಓವರ್‌ವ್ಯೂ' ಹೆಸರಿನಲ್ಲಿ ಕಾಣಿಸಿಕೊಳ್ಳುವ ಸಾರಾಂಶದಿಂದ ನಮಗೆ ಒಂದು ಪ್ರಯೋಜನ ಎಂದರೆ, ಒಂದು ವಿಷಯದ ಕುರಿತು ಮಾಹಿತಿ ಪಡೆಯಲು ನಾವು ಹಲವಾರು ಜಾಲತಾಣಗಳನ್ನು ಜಾಲಾಡಬೇಕಾಗಿಲ್ಲ. ಆ ಕೆಲಸವನ್ನು ಗೂಗಲ್ ಸರ್ಚ್ ಎಂಜಿನ್ ತನ್ನ ಎಐ ವೈಶಿಷ್ಟ್ಯಕ್ಕೆ (ಜೆಮಿನಿ ಪ್ರೊ) ಒಪ್ಪಿಸಿಬಿಟ್ಟಿರುತ್ತದೆ. ತತ್ಫಲವಾಗಿ ಸಾರಾಂಶರೂಪದ ಫಲಿತಾಂಶ ನಮ್ಮ ಮುಂದಿರುತ್ತದೆ. ಈ ಮಾಹಿತಿಯು ವೇಗವಾಗಿಯೂ ಸುಲಭವಾಗಿಯೂ ದೊರೆಯುತ್ತಿದೆ. ಇದು ಸಂಶೋಧನೆ ಮಾಡುವವರ ಕೆಲಸವನ್ನು ಇನ್ನಷ್ಟು ಸುಲಭವಾಗಿಸಿದೆ.

ಹುಡುಕಾಟದ ಪುಟದಲ್ಲೇ ಸಾರಾಂಶವೂ ದೊರೆಯುವಂತಾಗುವುದರಿಂದ, ಮತ್ತಷ್ಟು ಹುಡುಕಾಟದ ಶ್ರಮ ತಪ್ಪುತ್ತದೆ.ಇಷ್ಟಲ್ಲದೆ, ಹಲವು ಪ್ರಶ್ನೆಗಳನ್ನು ಸೇರಿಸಲಾದ ಸಂಕೀರ್ಣವಾಕ್ಯದ ಪ್ರಶ್ನೆಗೂ ಇಲ್ಲಿ ಪರಿಹಾರವು ಕ್ಷಿಪ್ರವಾಗಿ ದೊರೆಯುತ್ತದೆ. ವಿಶೇಷವಾಗಿ ಚಾಟ್‌ಜಿಪಿಟಿ ಅಥವಾ ಜೆಮಿನಿ ಮುಂತಾದ ಜನರೇಟಿವ್ ಎಐ ಅಪ್ಲಿಕೇಶನ್‌ಗಳಿಗೆ ಕೇಳುವ ವಾಕ್ಯಗಳನ್ನೇ (ಪ್ರಾಂಪ್ಟ್) ಇಲ್ಲೂ ಕೇಳಿ, ಪರಿಹಾರ ಪಡೆಯಬಹುದು. ಎಐ ಸೃಜಿಸುವ ಸಾರಾಂಶ ಒದಗಿಸುವ ವೈಶಿಷ್ಟ್ಯ ಸೇರ್ಪಡೆಯೊಂದಿಗೆ, ಪಾರಸ್ಪರಿಕ ಸಂವಾದಕ್ಕೆ ಅವಕಾಶ ನೀಡಿರುವ ಗೂಗಲ್ ತನ್ನ ಹುಡುಕಾಟ (ಸರ್ಚ್) ವ್ಯವಸ್ಥೆಗೆ ಆಧುನಿಕತೆಯ ಸ್ಪರ್ಶ ನೀಡಿದೆ. ಬಳಸಿ, ಪ್ರಯೋಜನ ಪಡೆದುಕೊಳ್ಳಿ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ -ವಿಜ್ಞಾನ

ವಿದ್ಯುಚ್ಛಕ್ತಿ

23) (a) ವಿದ್ಯುತ್ ಬಲ್ಬ್‌ನ ತಂತುಗಳ ರೋಧವು 1200 Ω ಆಗಿದ್ದು, 220 V ಮೂಲದಿಂದ ವಿದ್ಯುತ್ ಬಲ್ಬ್ ಸೆಳೆಯುವ ವಿದ್ಯುತ್ ಪ್ರವಾಹ ಎಷ್ಟು?

(b) ಹೀಟರ್‌ನ ಸುರುಳಿಯ ರೋಧವು 100 Ω ಆಗಿದ್ದು, 220 V ಮೂಲದಿಂದ ವಿದ್ಯುತ್ ಹೀಟರ್‌ನ ಸುರುಳಿಯು ಸೆಳೆಯುವ ವಿದ್ಯುತ್ ಪ್ರವಾಹ ಎಷ್ಟು?

ಉತ್ತರ:– (a) ಕೊಟ್ಟಿರುವುದು, $V = 220\ V$; $R = 1200\ \Omega$.

ಸಮೀಕರಣ (11.6)ರಿಂದ, ವಿದ್ಯುತ್ ಪ್ರವಾಹ $I = 220\ V/1200\ \Omega = 0.18\ A$.

(b) ಕೊಟ್ಟಿರುವುದು, $V = 220\ V$, $R = 100\ \Omega$

ಸಮೀಕರಣ (11.6) ರಿಂದ,

ವಿದ್ಯುತ್ ಪ್ರವಾಹ $I = 220\ V/100\ \Omega = 2.2\ A$.

24) ಒಂದು ವಿದ್ಯುತ್ ಹೀಟರ್, ವಿದ್ಯುತ್ ಮೂಲದಿಂದ 4 A ವಿದ್ಯುತ್ ಸೆಳೆಯುವಾಗ ಅದರ ತುದಿಗಳ ನಡುವಿನ ವಿಭವಾಂತರವು 60 V ಆಗಿದ್ದು ಸದರಿ ವಿದ್ಯುತ್ ಹೀಟರ್‌ನ ವಿಭವಾಂತರವನ್ನು 120 V ಗೆ ಹೆಚ್ಚಿಸಿದಾಗ ಆ ವಿದ್ಯುತ್ ಹೀಟರ್ ಸೆಳೆಯುವ ವಿದ್ಯುತ್ ಪ್ರವಾಹ ಎಷ್ಟು?

ಪರಿಹಾರ : ಕೊಟ್ಟಿರುವುದು, ವಿಭವಾಂತರ $V = 60\ V$, ವಿದ್ಯುತ್‌ಪ್ರವಾಹ $I = 4\ A$.

ಓಮ್‌ನ ನಿಯಮದ ಪ್ರಕಾರ, $R = \frac{V}{I} = \frac{60V}{4A} = 15\Omega$

ವಿದ್ಯುತ್ ಹೀಟರ್‌ನ ವಿಭವಾಂತರವನ್ನು 120 V ಗೆ ಹೆಚ್ಚಿಸಿದಾಗ ಆ ವಿದ್ಯುತ್ ಹೀಟರ್ ಸೆಳೆಯುವ ವಿದ್ಯುತ್ ಪ್ರವಾಹವು

ವಿದ್ಯುತ್ ಪ್ರವಾಹ =

$$= \frac{V}{R} = \frac{120V}{15\Omega} = 8A.$$

ವಿದ್ಯುತ್ ಹೀಟರ್ ಸೆಳೆಯುವ ವಿದ್ಯುತ್ ಪ್ರವಾಹ= 8 A

25) ಒಂದು ಲೋಹದ ತಂತಿಯ ಉದ್ದವು 1 ಮೀ ಆಗಿದ್ದು, ಅದರ ರೋಧವು 20° C ನಲ್ಲಿ 26 Ω ಆಗಿದೆ. ಅದರ ವ್ಯಾಸವು 0.3mm ಆದರೆ ಈ ತಾಪಮಾನದಲ್ಲಿ ಲೋಹದ ತಂತಿಯ ರೋಧಶೀಲತೆಯನ್ನು ಕಂಡುಹಿಡಿಯಿರಿ. ಕೋಷ್ಟಕ 11.2 ನ್ನು ಬಳಸಿ, ತಂತಿಯು ಯಾವ ವಸ್ತುವಿನಿಂದ ಆಗಿದೆ ಎಂಬುದನ್ನು ಊಹಿಸಿ.

ಪರಿಹಾರ : ಕೊಟ್ಟಿರುವುದು, ಲೋಹದ ತಂತಿಯ ರೋಧವು$=26\ \Omega$, ಆಗಿದೆ

ತಂತಿಯ ವ್ಯಾಸವು $d = 0.3\ mm = 3 \times 10^{-4}\ m$, ಮತ್ತು

ತಂತಿಯ ಉದ್ದ $l = 1\ m$. ಸಮೀಕರಣ (11.10), ರಿಂದ ರೋಧಶೀಲತೆ $\rho = (RA/l) = (R\pi d^2/4l)$

ಕೊಟ್ಟಿರುವ ದತ್ತಾಂಶಗಳನ್ನು ಆದೇಶಿಸಿದಾಗ,

$$P = \frac{RA}{l} = \frac{R\pi d^2}{4l}$$

20°Cನಲ್ಲಿ ಲೋಹದ ತಂತಿಯ ರೋಧಶೀಲತೆಯು $1.84 \times 10^{-6}\ \Omega m$. ಕೋಷ್ಟಕ 11.2 ರ ಪ್ರಕಾರ ಇದು ಮ್ಯಾಂಗನೀಸ್‌ನ ರೋಧಶೀಲತೆಯಾಗಿದೆ.

26) ಉದ್ದ l ಮತ್ತು ಅಡ್ಡಕೊಯ್ತ A ಇರುವ ಒಂದು ವಾಹಕ ತಂತಿಯ ರೋಧವು 4Ω ಆಗಿದೆ. ಅದೇರೀತಿಯ ಇನ್ನೊಂದು ವಾಹಕ ತಂತಿಯ ಉದ್ದ l/2 ಮತ್ತು ಅದರ ಅಡ್ಡಕೊಯ್ತ 2A ಆದಾಗ ಅದರ ರೋಧವನ್ನು ಕಂಡುಹಿಡಿಯಿರಿ.

ಪರಿಹಾರ:–

ಮೊದಲನೆ ತಂತಿ.

$$R_1 = \rho\frac{l}{A} = 4\Omega$$

ಈಗ ಎರಡನೇ ತಂತಿ.

$$R_2 = \rho\frac{l/2}{2A} = \frac{1}{4}\rho\frac{l}{A}$$

$$R_2 = \frac{1}{4}R_1$$

$$R_2 = 1\Omega$$

ಹೊಸ ತಂತಿಯ ರೋಧವು 1Ω ಆಗಿದೆ.

27) ಯಾವುದನ್ನು ವಿದ್ಯುತ್‌ಪ್ರವಾಹದ ಉಷ್ಣೋತ್ಪಾದನಾ ಪರಿಣಾಮ ಎನ್ನುವರು ಎಂಬುದನ್ನು ವಿವರವಾಗಿ ವಿವರಿಸಿ?

ಉತ್ತರ:– ಶುಷ್ಕಕೋಶ ಅಥವಾ ವಿದ್ಯುತ್‌ಕೋಶಗಳು ವಿದ್ಯುಚ್ಛಕ್ತಿಯ ಆಕರಗಳಾಗಿವೆ. ವಿದ್ಯುತ್‌ಕೋಶದಲ್ಲಿ ಜರಗುವ ರಾಸಾಯನಿಕ ಕ್ರಿಯೆಗಳಿಂದ ಎರಡು ಧ್ರುವಗಳ ನಡುವೆ ವಿಭವಾಂತರವು ಉಂಟಾಗುತ್ತದೆ. ಇದು ಶುಷ್ಕಕೋಶಗಳೊಂದಿಗೆ ಸಂಯೋಜಿಸಲಾದ ರೋಧಕ ಅಥವಾ ರೋಧಕಗಳ ಮೂಲಕ ಇಲೆಕ್ಟ್ರಾನ್‌ಗಳ ಪ್ರವಾಹವನ್ನು ಉಂಟುಮಾಡುತ್ತದೆ. ವಿದ್ಯುತ್ ಪ್ರವಾಹವನ್ನು ಕಾಪಾಡಿಕೊಳ್ಳಲು ಅದರ ಆಕರವು ಶಕ್ತಿಯನ್ನು ವ್ಯಯಿಸುತ್ತಿರಬೇಕು ಈ ಶಕ್ತಿಯು ಎಲ್ಲಿಗೆ ಹೋಗಿದೆ ಎಂದರೆ. ವಿದ್ಯುತ್ ಪ್ರವಾಹದ ನಿರ್ವಹಣೆಯಲ್ಲಿ ಮೂಲಶಕ್ತಿಯ ಒಂದು ಭಾಗವು ಉಪಯುಕ್ತವಾದ ಕೆಲಸಕ್ಕೆ ಬಳಕೆಯಾಗುತ್ತಿರುತ್ತದೆ.. (ವಿದ್ಯುತ್ ಫ್ಯಾನ್‌ನ ಚಕ್ರ ತಿರುಗಲು), ಉಳಿದ ಮೂಲ ಶಕ್ತಿಯು ಸಾಧನದಲ್ಲಿ ತಾಪವನ್ನು ಹೆಚ್ಚಿಸಿ ಉಷ್ಣವನ್ನು ವ್ಯಯಿಸುತ್ತಿರುತ್ತದೆ.

ಅಂದರೆ ರೋಧಕಗಳನ್ನು ಶುಷ್ಕಕೋಶದೊಂದಿಗೆ ಸಂಪರ್ಕಿಸಿದಾಗ ಮಾತ್ರ ಆಕರದಿಂದ ಶಕ್ತಿಯು ನಿರಂತರವಾಗಿ ಉಷ್ಣದ ರೂಪದಲ್ಲಿ ಸಂಪೂರ್ಣವಾಗಿ ವ್ಯಯವಾಗುತ್ತಿರುತ್ತದೆ. ಈ ವಿದ್ಯಮಾನವನ್ನು ವಿದ್ಯುತ್‌ಪ್ರವಾಹದ ಉಷ್ಣೋತ್ಪಾದನಾ ಪರಿಣಾಮ ಎನ್ನುವರು

28) ವಿದ್ಯುತ್‌ಪ್ರವಾಹದ ಉಷ್ಣೋತ್ಪಾದನಾ ಪರಿಣಾಮ ಎನ್ನುವರು. ಈ ತತ್ವವನ್ನಾಧರಿಸಿ ತಯಾರಿಸಿರುವ ಸಾಧನಗಳನ್ನು ಹೆಸರಿಸಿ

ಉತ್ತರ:– ವಿದ್ಯುತ್‌ಪ್ರವಾಹದ ಉಷ್ಣೋತ್ಪಾದನಾ ಪರಿಣಾಮ ಎನ್ನುವರು. ಈ ತತ್ವವನ್ನಾಧರಿಸಿ ತಯಾರಿಸಿರುವ ಸಾಧನಗಳೆಂದರೆ ವಿದ್ಯುತ್‌ಇಸ್ತ್ರಿಪೆಟ್ಟಿಗೆ, ವಿದ್ಯುತ್‌ಹೀಟರ್ ಇತ್ಯಾದಿ.

ನೆನಪಿಡಿ

ಜೌಲನ ಉಷ್ಣೋತ್ಪಾದನಾ ನಿಯಮದ ಪ್ರಕಾರ ರೋಧಕದಲ್ಲಿ ಉತ್ಪತ್ತಿಯಾದ ಉಷ್ಣವು, (i) ಕೊಟ್ಟಿರುವ ರೋಧದಲ್ಲಿ ಪ್ರವಹಿಸುತ್ತಿರುವ ವಿದ್ಯುತ್‌ಪ್ರವಾಹದ ವರ್ಗಕ್ಕೆ ನೇರಾನುಪಾತದಲ್ಲಿರುತ್ತದೆ. (ii) ಕೊಟ್ಟಿರುವ ವಿದ್ಯುತ್ ಪ್ರವಾಹಕ್ಕೆ, ರೋಧವು ನೇರ ಅನುಪಾತದಲ್ಲಿರುತ್ತದೆ (iii) ರೋಧಕಗಳ ಮೂಲಕ ಹರಿಯುವ ವಿದ್ಯುತ್‌ಪ್ರವಾಹದ ಕಾಲಕ್ಕೆ ನೇರ ಅನುಪಾತದಲ್ಲಿರುತ್ತದೆ.

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC BIOLOGY

MOLECULAR BASIS OF INHERITANCE

59. What are the Prospects and Implications of Human Genome Project?

Ans:- (……Contd)

2. Soon we shall be mapping all the human genes, Alu sequences, transposons and junk DNA.

3. There are more than 1200 genes that cause common cardiovascular ailments, endocrine diseases like diabetes, Alzheimer's disease and other neurological ailments, cancers, etc. After taking their snapshots, it will be possible to know the method to alter them and remove the possibility of the disorders.

4. Single gene defects produce a number of hereditary diseases. Their exact location, reason for defect and method of correcting the same can be found out.

5. Studying the genes that will cause reversion of cancerous cells to normal cells.

6. It will be possible to study interactions between various genes, proteins, as well as mechanism of forming tissues, organs, tumors or switch over to different developmental stages.

7. It holds promise of healthier and longer living, designer drugs and genetically modified diets according to needs of individual human beings.

60. Match the following:-

	Column I		Column II
a	Jacob & Monad	i	Neurospora
b	1 gene 1 enzyme hypothesis	ii	Operon
c	Griffith	iii	Reverse transcriptase
d	Temin & Baltimore	iv	Okazaki fragments
e	DNA polymerase	v	Transformation
		vi	Transduction
		vii	Conjugation

Ans:- a – ii, b –i, c – v, d – iii, e – iv

61. Mention some of the differences between the Inducible and Repressible Operon.

Ans:- The differences between Inducible Repressible Operon are -

Inducible Operon	*Repressible Operon*
It is an operon which normally remains switched off.	The operon normally remains switched on.
It is switched on by the presence of a biochemical called inducer.	An inducer has no role in repressible operon.
The regulator gene of the operon produces a complete repressor.	The regulator gene forms only a part of repressor called aporepressor.
Inducible operon is functional in catabolic pathway.	It is connected with anabolic pathway.
Induction is caused by a new metabolite.	Repression is caused by excess availability of an existing metabolite.
Induction of the operon involves removal of repressor from the operator gene.	Repression involves binding of repressor over the operator gene.
Induction starts transcription and translation.	Repression stops transcription and translation.

62. Mention the differences between the codon and anticodon.

Ans:- The differences between the codon and anticodon are -

Codon	Anticodon
It is a sequence of three successive nitrogen bases that specifies an amino acid.	It is a sequence of three nitrogen bases that is complementary to a codon.
It occurs on mRNA (as well as DNA).	It occurs over the tRNA.
mRNA has a number of codons.	tRNA bares only a single anticodon.
It specifies the incorporation of a particular amino acid at a particular position.	By its interaction with its codon, anticodon ensures the bringing of a particular amino acid.

63. Write a brief note on the Repressible Operon System.

Ans:- Repressible Operon System (tryptophan Operon System) - A repressible operon system is a regulated segment of genetic material which normally remains operational but can be switched off when its product is either not required or crosses a threshold value. The system is found in anabolic pathways.

Eg:- Tryptophan operon of Escherichia coli. It has the following components:-

1) Regulator Gene (trp-R) - The gene produces a biochemical, generally a proteinaceous substance, called **aporepressor.** Aporepressor alone is unable to block the operator gene because of the absence of the binding head. Therefore, *(Contd…..)*

ಸಂಕ್ಷಿಪ್ತ ಸುದ್ದಿ

ಅಕ್ಬರ್ ಪಾಷಾ ಹಿಂಡಲಗಾ ಜೈಲಿಗೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರಿಗೆ ಕೊಲೆ ಬೆದರಿಕೆ ಹಾಕಿಸಿದ ಮತ್ತು ಉಗ್ರಗಾಮಿ ಸಂಘಟನೆ ಜೊತೆ ಸಂಪರ್ಕ ಹೊಂದಿದ ಆರೋಪಿ ಅಕ್ಬರ್ ಪಾಷಾಗೆ ಸೋಮವಾರ ರಾತ್ರಿ ನಾಗ್ಪುರದಿಂದ ಹಿಂಡಲಗಾ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಯಿತು.

ಅಕ್ಬರ್ ಪಾಷಾನನ್ನು ವಿಚಾರಣೆಗಾಗಿ ನಾಗ್ಪುರ ಪೊಲೀಸರು ವಶಕ್ಕೆ ಪಡೆದಿದ್ದರು. ವಿಚಾರಣೆ ಮುಗಿದಿದ್ದರಿಂದ ವಿಮಾನದ ಮೂಲಕ ಕರೆತಂದು, ಮತ್ತೆ ಜೈಲಿಗೆ ಸೇರಿಸಲಾಯಿತು.

'ಹಿಂಡಲಗಾ ಜೈಲಿನಲ್ಲಿರುವ ಕೊಲೆ ಅಪರಾಧಿ ಜಯೇಶ್ ಪೂಜಾರಿ ಉರೂಫ್ ಶಾಕೀರ್ ಮೊಹಮ್ಮದ್, 2023ರ ಜನವರಿ ಹಾಗೂ ಮಾರ್ಚ್‌ನಲ್ಲಿ ಗಡ್ಕರಿ ಅವರ ನಾಗ್ಪುರದ ಕಚೇರಿಗೆ ಬೆದರಿಕೆ ಕರೆ ಮಾಡಿದ್ದ.

ತಾನು ದಾವೂದ್ ಇಬ್ರಾಹಿಂನ ಸಹಚರ, ತನಗೆ ₹ 100 ಕೋಟಿ ಕೊಡದಿದ್ದರೆ ಬಾಂಬ್ ಸ್ಫೋಟಿಸಿ ಸಚಿವರನ್ನು ಹತ್ಯೆ ಮಾಡುವೆ ಎಂದು ಹೇಳಿದ್ದ. ಜಯೇಶ್‌ನ ಜತೆಗಿದ್ದ ಅಕ್ಬರ್ ಪಾಷಾನೇ ಈ ದೂರವಾಣಿ ಕರೆಯ ಸೂತ್ರಧಾರ ಎಂದು ಪೊಲೀಸರಿಗೆ ಗೊತ್ತಾಗಿತ್ತು. ವಿಚಾರಣೆಗಾಗಿ ನಾಗ್ಪುರ ಪೊಲೀಸರು ಅಕ್ಬರ್ ಪಾಷಾನನ್ನು ಕರೆದೊಯ್ದಿದ್ದರು' ಎಂದು ಮೂಲಗಳು ತಿಳಿಸಿವೆ.

ಹತ್ತಾರು ವರ್ಷ ಹಳೆಯ ಯಂತ್ರಗಳು: ಅಕ್ರಮ ಎಸಗುವವರಿಗೆ ವರದಾನ

ಕೇಂದ್ರ ಕಾರಾಗೃಹ: 'ಜಾಮರ್' ಬಂದ್

● ಆರ್. ಜಿತೇಂದ್ರ

ಮೈಸೂರು: ಬೆಂಗಳೂರು ಹೊರತುಪಡಿಸಿ, ರಾಜ್ಯದ ಬಹುತೇಕ ಕೇಂದ್ರ ಕಾರಾಗೃಹಗಳ ಮೊಬೈಲ್ ಜಾಮರ್‌ಗಳು ಬಂದ್ ಆಗಿದ್ದು, ಜೈಲಿನಲ್ಲಿದ್ದುಕೊಂಡೇ ಅಕ್ರಮ ಎಸಗುವವರಿಗೆ ವರದಾನವಾಗಿದೆ.

ಬಹುತೇಕ ಜೈಲುಗಳಲ್ಲಿ ಹತ್ತಾರು ವರ್ಷ ಹಳೆಯ 2ಜಿ–3ಜಿ ತಂತ್ರಜ್ಞಾನವುಳ್ಳ ಜಾಮರ್‌ಗಳನ್ನೇ ಬಳಸಲಾಗುತ್ತಿದೆ. ಜೈಲುಗಳಲ್ಲೇ 5ಜಿ ತಂತ್ರಜ್ಞಾನದ ಸ್ಮಾರ್ಟ್‌ಫೋನ್‌ಗಳು ಪತ್ತೆಯಾಗುತ್ತಿದ್ದರೂ, ಬಂಧಿಖಾನೆ ಇಲಾಖೆ ಮಾತ್ರ ಅಪ್‌ಡೇಟ್ ಆಗಿಲ್ಲ. ಶಿವಮೊಗ್ಗದಂತಹ ಕಾರಾಗೃಹಗಳಲ್ಲಿ ಜಾಮರ್ ಬಳಕೆಯೇ ಶುರುವಾಗಿಲ್ಲ. ಇದು, ಜೈಲುಗಳಲ್ಲಿ ತಂತ್ರಜ್ಞಾನ ಸೌಲಭ್ಯ ಕೊರತೆ ಹಾಗೂ ಅದೇ ಕಾರಣಕ್ಕೆ ಮುಂದುವರಿದಿರುವ ಅಕ್ರಮಕ್ಕೆ ಕನ್ನಡಿ ಹಿಡಿದಿದೆ.

ಮೈಸೂರಿನ ಕೇಂದ್ರ ಕಾರಾಗೃಹದಲ್ಲಿ ಅಳವಡಿಸಿದ್ದ ಜಾಮರ್ ನಿಷ್ಕ್ರಿಯಗೊಂಡಿದೆ. 4ಜಿ– 5ಜಿ ತಂತ್ರಜ್ಞಾನದ

ಮೈಸೂರಿನ ಕೇಂದ್ರ ಕಾರಾಗೃಹ

ಮೊಬೈಲ್ ನೆಟ್‌ವರ್ಕ್ ತುಂಡರಿಸುವ ಸಾಮರ್ಥ್ಯವೂ ಇಲ್ಲ. ಹೀಗಾಗಿ, ದುರಸ್ತಿ ಮಾಡಿಸಿದರೂ ಉಪಯೋಗಕ್ಕೆ ಬಾರದೆಂಬ ಕಾರಣಕ್ಕೆ ಹಾಗೆಯೇ ಬಿಡಲಾಗಿದೆ. ಜೈಲಿನ ಅಧಿಕಾರಿಗಳು ನಿತ್ಯವೂ ಜೈಲಿನೊಳಗೆ ಶೋಧ ನಡೆಸುತ್ತಿದ್ದಾರೆ.

'ಸಿಬ್ಬಂದಿಯನ್ನೂ ಯಾಮಾರಿಸಿ ಮೊಬೈಲ್ ಬಳಸುವ ಪ್ರಕರಣಗಳು ಆಗಾಗ್ಗೆ ವರದಿಯಾಗುತ್ತಿದ್ದು, ಈ ವರ್ಷ ಐದಾರು ಎಫ್‌ಐಆರ್ ದಾಖಲಿಸಲಾಗಿದೆ' ಎಂದು ಅಧಿಕಾರಿಗಳು ಹೇಳುತ್ತಾರೆ.

ಪ್ರತಿದಿನ ಬೆಳಿಗ್ಗೆ-ಸಂಜೆ ಜೈಲಿನ ಎಲ್ಲ ಬ್ಯಾರಕ್‌ಗಳು, ಅಡುಗೆ ಮನೆ, ಶೌಚಾಲಯ, ಕೈ ತೋಟ ಸೇರಿದಂತೆ ಎಲ್ಲ ಮೂಲೆಗಳನ್ನೂ ಸಿಬ್ಬಂದಿ ಶೋಧಿಸುತ್ತಿದ್ದಾರೆ. ಆದಾಗ್ಯೂ ಕಣ್ಣು ತಪ್ಪಿಸಿ ಮೊಬೈಲ್‌ಫೋನ್ ಪೂರೈಕೆ ಹಾಗೂ ಬಳಕೆ ಸಾಮಾನ್ಯವಾಗಿದೆ. ಕೆಲವು ಜೈಲುಗಳಲ್ಲಿ ಸಿಬ್ಬಂದಿಯೇ ಮೊಬೈಲ್ ಬಳಕೆಗೆ ಸಹಕರಿಸುತ್ತಿರುವ ಆರೋಪವೂ ಇದೆ. 'ಜೈಲಿನಲ್ಲಿದ್ದುಕೊಂಡೇ ಹೊರಜಗತ್ತಿನೊಂದಿಗೆ ಸಂಪರ್ಕ ಸಾಧಿಸುವುದು, ಬ್ಲ್ಯಾಕ್‌ಮೇಲ್–ಬೆದರಿಕೆ ಹಾಕುವುದು ಆಗಾಗ್ಗೆ ಬೆಳಕಿಗೆ ಬರುತ್ತಿದೆ. ಅದರಿಂದ ನಿಯಂತ್ರಿಸಲು ಪ್ರತಿ ಕಾರಾಗೃಹದಲ್ಲೂ ನೂತನ ತಂತ್ರಜ್ಞಾನವುಳ್ಳ ಜಾಮರ್ ಅಳವಡಿಸಬೇಕು' ಎಂಬ ಆಗ್ರಹ ಕೇಳಿಬಂದಿದೆ.

ಶೀಘ್ರ ಅಳವಡಿಕೆ: '5ಜಿ ತಂತ್ರಜ್ಞಾನದ ಜಾಮರ್‌ಗಾಗಿ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಶೀಘ್ರ ಅಳವಡಿಸುವ ನಿರೀಕ್ಷೆ ಇದೆ' ಎಂದು ಮೈಸೂರು ಕೇಂದ್ರ ಕಾರಾಗೃಹದ ಚೀಫ್ ಸೂಪರಿಂಟೆಂಡೆಂಟ್ ಪಿ.ಎಸ್.ರಮೇಶ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ಜಾಮರ್ ಅಳವಡಿಸಲಾಗಿದೆ. ಮೈಸೂರು ಕಾರಾಗೃಹದಲ್ಲೂ ಅಳವಡಿಕೆ ಸಂಬಂಧ ಸಂಬಂಧಿಸಿದ ಕಂಪನಿಯ ಪ್ರತಿನಿಧಿಗಳು ಸಮೀಕ್ಷೆ ನಡೆಸಿ ಹೋಗಿದ್ದಾರೆ' ಎಂದು ಮಾಹಿತಿ ನೀಡಿದರು.

> ಶಿವಮೊಗ್ಗ ಜೈಲಿನಲ್ಲಿ ಸದ್ಯ ಜಾಮರ್ ಅಳವಡಿಸಿಲ್ಲ. ಜಾಮರ್ ಅಗತ್ಯದ ಕುರಿತು ಇಲಾಖೆ ಮಾಹಿತಿ ಕೇಳಿದ್ದು, ಬೇಕು ಎಂದಿದ್ದೇವೆ. ಶೀಘ್ರ ಅಳವಡಿಸಬಹುದು
> **ಅನಿತಾ,** ಚೀಫ್ ಸೂಪರಿಂಟೆಂಡೆಂಟ್, ಶಿವಮೊಗ್ಗ ಕೇಂದ್ರ ಕಾರಾಗೃಹ

> ಮೈಸೂರು ಕೇಂದ್ರ ಕಾರಾಗೃಹದ ಮೊಬೈಲ್ ಜಾಮರ್ ನಾಲ್ಕೈದು ವರ್ಷದಿಂದ ಕಾರ್ಯ ನಿರ್ವಹಿಸುತ್ತಿಲ್ಲ. ಸಿಬ್ಬಂದಿಯೇ ತಪಾಸಣೆ ನಡೆಸುತ್ತಿದ್ದಾರೆ
> **ಪಿ.ಎಸ್.ರಮೇಶ್,** ಚೀಫ್ ಸೂಪರಿಂಟೆಂಡೆಂಟ್, ಮೈಸೂರು ಕಾರಾಗೃಹ

ಮುಖ್ಯಾಂಶಗಳು

- 5ಜಿ ತಂತ್ರಜ್ಞಾನದ ಸಂಪರ್ಕ ತಡೆಯುವ ಜಾಮರ್ ಅಗತ್ಯ
- ಅಕ್ರಮವಾಗಿ ಮೊಬೈಲ್ ಬಳಕೆ: ಈ ವರ್ಷ ಈವರೆಗೆ ಐದಾರು ಪ್ರಕರಣ ದಾಖಲು

ರಾಜ್ಯದ ನಾಲ್ವರು ಶಿಕ್ಷಕರಿಗೆ ರಾಷ್ಟ್ರೀಯ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಶಿಕ್ಷಣ ಮತ್ತು ಸಾಕ್ಷರತಾ ಸಚಿವಾಲಯ 50 ಶಿಕ್ಷಕರನ್ನು ರಾಷ್ಟ್ರೀಯ ಶಿಕ್ಷಕ ಪ್ರಶಸ್ತಿಗೆ ಮಂಗಳವಾರ ಆಯ್ಕೆ ಮಾಡಿದ್ದು, ಕರ್ನಾಟಕದ ನಾಲ್ವರು ಭಾಜನರಾಗಿದ್ದಾರೆ.

ಬೆಂಗಳೂರಿನ ಸಂಜಯನಗರದ ಡಫೋಡಿಲ್ಸ್ ಇಂಗ್ಲಿಷ್ ಶಾಲೆಯ ಎಚ್. ಕೆ. ನರಸಿಂಹ ಮೂರ್ತಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಲ್ಲಸಂದ್ರ–ಕಮ್ಮಗೊಂಡನಹಳ್ಳಿ ಕೇಂದ್ರೀಯ ವಿದ್ಯಾಲಯದ ಅಶೋಕ್ ಸೇನ್‌ಗುಪ್ತಾ, ಮೈಸೂರು ಜಿಲ್ಲೆ ಹುಣಸೂರಿನ ಸರ್ಕಾರಿ ಪಿಯು ಕಾಲೇಜಿನ ಎಚ್. ಎನ್. ಗಿರೀಶ್, ದೊಡ್ಡಬಳ್ಳಾಪುರದ ಬಾಶೆಟ್ಟಿಹಳ್ಳಿ ಸರ್ಕಾರಿ ಶಾಲೆಯ ಆರ್. ನಾರಾಯಣಸ್ವಾಮಿ ಪ್ರಶಸ್ತಿ ಪುರಸ್ಕೃತರು.

ಸಾಧನೆಗೆ ಮನ್ನಣೆ

ಎಚ್.ಎನ್. ಗಿರೀಶ್

ನಾರಾಯಣ ಸ್ವಾಮಿ

ಮೈಸೂರು: 'ನಾನು ಎಚ್‌ಐವಿ ಏಡ್ಸ್ ಪಾಸಿಟಿವ್ ಅಲ್ಲ; ಆದರೆ, ಆ ರೋಗಿಗಳ ಬಗ್ಗೆ ಪಾಸಿಟಿವ್ ಆಗಿದ್ದೇನೆ' ಎಂದು ಹೇಳಿಕೊಳ್ಳುತ್ತಲೇ, 'ಏಡ್ಸಮ್ಮನ ಜಾತ್ರೆ'ಯಂಥ ವಿನೂತನ ಜಾಗೃತಿ ಪರಿಕಲ್ಪನೆಗಳ ಮೂಲಕ ಗಮನಸೆಳೆದಿದ್ದ ಉಪನ್ಯಾಸಕ ಎಚ್.ಎನ್. ಗಿರೀಶ್ ಅವರು ರಾಷ್ಟ್ರ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಇಲ್ಲಿನ ವಿಜಯನಗರದ ನಿವಾಸಿಯಾದ ಅವರು, ಜಿಲ್ಲೆಯ ಹುಣಸೂರಿನ ಬಾಲಕಿಯರ ಸರ್ಕಾರಿ ಪಿಯು ಕಾಲೇಜಿನಲ್ಲಿ ಜೀವವಿಜ್ಞಾನ ಉಪನ್ಯಾಸಕರಾಗಿದ್ದಾರೆ.

(ದೊಡ್ಡಬಳ್ಳಾಪುರ ವರದಿ): ತಾಲ್ಲೂಕಿನ ಕೈಗಾರಿಕಾ ಪ್ರದೇಶದ ಬಾಶೆಟ್ಟಿಹಳ್ಳಿ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಎಂ.ನಾರಾಯಣಸ್ವಾಮಿ ಅವರಿಗೆ ರಾಷ್ಟ್ರ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕಾರ ಲಭಿಸಿದೆ.

ತಾಲ್ಲೂಕಿನ ತಪಸೀಹಳ್ಳಿ ಗ್ರಾಮದ ಎಂ.ನಾರಾಯಣಸ್ವಾಮಿ, ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಕೆಲಸಕ್ಕೆ ಸೇರಿದರು. ನಂತರ, ಪ್ರೌಢಶಾಲೆ ಶಿಕ್ಷಕರಾಗಿ ಬಡ್ತಿ ಹೊಂದಿದರು. ಪ್ರಸ್ತುತ ಬಾಶೆಟ್ಟಿಹಳ್ಳಿ ಸರ್ಕಾರಿ ಪ್ರೌಢ ಶಾಲೆಯಲ್ಲಿ ಮುಖ್ಯ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದಾರೆ. ಶಾಲೆಯ ಸಮಗ್ರ ಅಭಿವೃದ್ಧಿಗೆ ಶ್ರಮಿಸಿರುವ ಅವರ ಕಾರ್ಯವನ್ನು ಗುರುತಿಸಿ ರಾಷ್ಟ್ರ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಶೋಷಿತ ಸಮುದಾಯಗಳ ಒಕ್ಕೂಟದ ಪ್ರತಿಭಟನೆ ● ರಾಜಭವನ ಮುತ್ತಿಗೆಗೆ ಯತ್ನ

ರಾಜ್ಯಪಾಲರ ಅನುಮತಿ ವಿರೋಧಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ರಾಜ್ಯಪಾಲರು ತನಿಖೆಗೆ ಅನುಮತಿ ನೀಡಿರುವುದನ್ನು ವಿರೋಧಿಸಿ ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟದ ನೇತೃತ್ವದಲ್ಲಿ ಮಂಗಳವಾರ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಯಿತು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಹಲವು ಸಂಘಟನೆಗಳ ಕಾರ್ಯಕರ್ತರು, ಸಿದ್ದರಾಮಯ್ಯ ಅಭಿಮಾನಿಗಳು, ವಿದ್ಯಾರ್ಥಿಗಳು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಸೇರಿದಂತೆ ಸಾವಿರಾರು ಜನ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

'ಜೆಡಿಎಸ್–ಬಿಜೆಪಿ ಹಠಾವೋ, ಸಂವಿಧಾನ ಬಚಾವೋ', 'ಸಂವಿಧಾನ ವಿರೋಧಿ ರಾಜ್ಯಪಾಲರ ವಾಪಸ್ ಕರೆಸಿಕೊಳ್ಳಿ', 'ರಾಜ್ಯಪಾಲ ಹಠಾವೋ–ಕರ್ನಾಟಕ ಬಚಾವೋ' ಎಂಬ ಘೋಷಣೆಗಳನ್ನು ಪ್ರತಿಭಟನಕಾರರು ಕೂಗಿದರು.

'ಶೋಷಿತ ಸಮುದಾಯ ಮತ್ತು ಹಿಂದುಳಿದ ವರ್ಗದವರ ಕಲ್ಯಾಣಕ್ಕಾಗಿ ಶ್ರಮಿಸುತ್ತಿರುವ ಸಿದ್ದರಾಮಯ್ಯ ಅವರ ಏಳಿಗೆ ಸಹಿಸದೇ ಆರೋಪ ಮಾಡಲಾಗುತ್ತಿದೆ. ಕೇಂದ್ರ ಸರ್ಕಾರ ಯಾವುದೇ ಪ್ರಯತ್ನ ನಡೆಸಿದರೂ ಅವರನ್ನು ಅಧಿಕಾರದಿಂದ ಕೆಳಗಿಸಲು ಸಾಧ್ಯವಿಲ್ಲ' ಎಂದು ಮುಖಂಡರು ಹೇಳಿದರು.

ಇದೇ ವೇಳೆ ವೇದಿಕೆ ಮೇಲೆ ಮಹಿಳೆಯರು ಹಾಗೂ ಕಾರ್ಯಕರ್ತರು ಹೆಜ್ಜೆ ಹಾಕಿದರು. ಸಿದ್ದರಾಮಯ್ಯ ಅವರ ಅಭಿಮಾನಿಯೊಬ್ಬರು ಹೆಗಲ ಮೇಲೆ ಕುರಿಮರಿ ಹೊತ್ತು ಕುಣಿದರು.

ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟದ ನೇತೃತ್ವದಲ್ಲಿ ಮಂಗಳವಾರ ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಯಿತು – ಪ್ರಜಾವಾಣಿ ಚಿತ್ರ:ಪ್ರಶಾಂತ್ ಎಚ್‌.ಜಿ.

ರಾಜಭವನಕ್ಕೆ ಮುತ್ತಿಗೆ ಹಾಕಲು ಸ್ವಾತಂತ್ರ್ಯ ಉದ್ಯಾನದಿಂದ ಕಾಲ್ನಡಿಗೆಯಲ್ಲಿ ಹೊರಟ ಪ್ರತಿಭಟನಕಾರರನ್ನು ಮಾರ್ಗ ಮಧ್ಯದಲ್ಲಿಯೇ ಪೊಲೀಸರು ತಡೆದರು. ಬ್ಯಾರಿಕೇಡ್ ದಾಟಿ ಹೋಗಲು ಕೆಲವರು ಪ್ರಯತ್ನಿಸಿದರು. ಇನ್ನು ಕೆಲವರು ಬಸ್ ಚಾವಣಿ ಮೇಲೆ ಏರಿ ಕುಳಿತು ಘೋಷಣೆ ಕೂಗಿದರು. ಪೊಲೀಸರು ಎಲ್ಲರನ್ನೂ ವಶಕ್ಕೆ ಪಡೆದು ಬಸ್‌ನಲ್ಲಿ ಕರೆದೊಯ್ದರು. ಸ್ವಲ್ಪ ಹೊತ್ತಿನ ಬಳಿಕ ಬಿಡುಗಡೆ ಮಾಡಿದರು.

ಪ್ರತಿಭಟನಾ ಸಭೆಯಲ್ಲಿ ಮಾತನಾಡಿದ ಹಿರಿಯ ವಕೀಲ ಪ್ರೊ. ರವಿವರ್ಮ ಕುಮಾರ್, 'ಮುಡಾ ಪ್ರಕರಣದಲ್ಲಿ ದೂರುಬಂದ ತಕ್ಷಣವೇ ಪರಿಶೀಲನೆ ನಡೆಸದೆ ರಾಜ್ಯಪಾಲರು, ಸಿದ್ದರಾಮಯ್ಯ ಅವರಿಗೆ ನೋಟಿಸ್ ಜಾರಿ ಮಾಡಿದರು. ಸಿದ್ದರಾಮಯ್ಯ ಯಾವುದೇ ತಪ್ಪು ಮಾಡಿಲ್ಲ. ಅವರ ಪತ್ನಿ ಪಾರ್ವತಿ ಅವರಿಗೆ ಮುಡಾ ನಿವೇಶನ ಮಂಜೂರು ಮಾಡಿದೆ. ಪಾರ್ವತಿ ಅವರ ಮೇಲೆ ಆರೋಪ ಇರುವುದೇ ಹೊರತು ಸಿದ್ದರಾಮಯ್ಯ ಮೇಲೆ ಅಲ್ಲ. ಛಾಪಾ ಕಾಗದ ಹಗರಣದ ತೆಲಗಿ ತಪ್ಪು ಮಾಡಿದರೆ ಅವರ ಪತ್ನಿ ಮತ್ತು ಮಕ್ಕಳಿಗೆ ಶಿಕ್ಷೆ ನೀಡಲು ಸಾಧ್ಯವೆ' ಎಂದು ಪ್ರಶ್ನಿಸಿದರು.

ಪ್ರಿಯಾಂಕ್ ವಜಾ ಕೋರಿ ರಾಜ್ಯಪಾಲರಿಗೆ ದೂರು

ಪ್ರಜಾವಾಣಿ ವಾರ್ತೆ

ಪ್ರಿಯಾಂಕ್ ಖರ್ಗೆ

ಬೆಂಗಳೂರು: ಪ್ರಿಯಾಂಕ್ ಖರ್ಗೆ ಅವರನ್ನು ಸಚಿವ ಸಂಪುಟದಿಂದ ವಜಾ ಮಾಡಬೇಕು ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ರಾಜ್ಯಪಾಲರಿಗೆ ಮಂಗಳವಾರ ದೂರು ನೀಡಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಕುಟುಂಬದ ಸಿದ್ಧಾರ್ಥ ವಿಹಾರ ಶಿಕ್ಷಣ ಟ್ರಸ್ಟ್‌ಗೆ ಕೆಐಎಡಿಬಿಯಿಂದ ಐದು ಎಕರೆ ಜಾಗ ಪಡೆದುಕೊಂಡಿದ್ದಾರೆ. ಇದು ಅಧಿಕಾರ ದುರುಪಯೋಗ. ಪ್ರಿಯಾಂಕ್ ಖರ್ಗೆ ಅವರನ್ನು ಸಚಿವ ಸ್ಥಾನದಿಂದ ವಜಾ ಮಾಡಬೇಕು. ಜಮೀನು ವಾಪಸ್ ಪಡೆಯಬೇಕು ಎಂದು ದೂರಿನಲ್ಲಿ ಒತ್ತಾಯಿಸಿದ್ದಾರೆ.

ಕೈಗಾರಿಕಾ ನಿವೇಶನ ಪಡೆಯುವ ಹಕ್ಕು ಎಲ್ಲರಿಗೂ ಇದೆ. ಆದರೆ, ನಾಗರಿಕ ಸೌಲಭ್ಯದ (ಸಿಎ) ನಿವೇಶನ ಪಡೆಯಲು ಕೆಲವು ನಿಯಮಗಳಿವೆ. ಸಾಮಾಜಿಕ ಚಟುವಟಿಕೆ, ರಂಗಮಂದಿರ, ಆಸ್ಪತ್ರೆಗಳಿಗೆ ನೀಡಬೇಕು. ಆದರೆ, ಇತರ ಅರ್ಜಿಗಳನ್ನು ತಿರಸ್ಕರಿಸಿ, ಖರ್ಗೆ ಕುಟುಂಬಕ್ಕೆ ನೀಡಲಾಗಿದೆ ಎಂದು ದೂರಿದ್ದಾರೆ.

10 ವರ್ಷಕ್ಕೊಮ್ಮೆ ಶಾಲಾ ಮಾನ್ಯತೆ ನವೀಕರಣ

ಬೆಂಗಳೂರು: ಖಾಸಗಿ ಶಾಲೆಗಳ ಮಾನ್ಯತೆಯನ್ನು 10 ವರ್ಷಗಳಿಗೆ ಒಮ್ಮೆ ನವೀಕರಿಸಲು ಅವಕಾಶ ನೀಡಿ ಶಾಲಾ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ.

ಶಾಲೆ ನಡೆಸಲು ಒಮ್ಮೆ ಅನುಮತಿ ಪಡೆದ ಶಾಲೆಗಳು 10 ವರ್ಷಗಳ ನಂತರ ನವೀಕರಣಕ್ಕೆ ಅರ್ಜಿ ಸಲ್ಲಿಸಬೇಕು. ನಿಯಮಗಳನ್ನು ಪಾಲಿಸುವ ಶಾಲೆಗಳು ಶಾಶ್ವತ ಮಾನ್ಯತೆಯನ್ನೂ ಪಡೆಯಬಹುದು ಎಂದು ಆದೇಶದಲ್ಲಿ ವಿವರಿಸಲಾಗಿದೆ.

ರಾಜ್ಯದಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ ಜಾರಿಗೂ ಮೊದಲು ಇದ್ದಂತೆ ಮಾನ್ಯತೆ ನವೀಕರಣಕ್ಕೆ ಅವಕಾಶ ನೀಡಬೇಕು ಎಂದು ಖಾಸಗಿ ಶಾಲೆಗಳ ಒಕ್ಕೂಟ ಸರ್ಕಾರಕ್ಕೆ ಮನವಿ ಮಾಡಿತ್ತು. ಕೆಲ ಸಂಘಟನೆಗಳು ಸರ್ಕಾರದ ಕ್ರಮದ ವಿರುದ್ಧ ಕೋರ್ಟ್ ಮೊರೆಹೋಗಿದ್ದವು.

ಹಿಂದೆ 15 ವರ್ಷಗಳಿಗೆ ಒಮ್ಮೆ ಮಾನ್ಯತೆ ನವೀಕರಣಕ್ಕೆ ಅವಕಾಶ ಇತ್ತು. 2018ರ ನಂತರ ಮಾನ್ಯತೆ ನವೀಕರಣ ಅವಧಿಯನ್ನು ಐದು ವರ್ಷಗಳಿಗೆ ಇಳಿಸಲಾಗಿತ್ತು.

ಕೆಎಸ್‌ನ ಟ್ರಸ್ಟ್‌ಗೆ ಕಿಕ್ಕೇರಿ ಅಧ್ಯಕ್ಷ

ಬೆಂಗಳೂರು: ಮಂಡ್ಯದಲ್ಲಿರುವ ಕೆ.ಎಸ್. ನರಸಿಂಹಸ್ವಾಮಿ ಟ್ರಸ್ಟ್‌ನ ಅಧ್ಯಕ್ಷರನ್ನಾಗಿ ಗಾಯಕ ಕಿಕ್ಕೇರಿ ಕೃಷ್ಣಮೂರ್ತಿ ಅವರನ್ನು ನೇಮಿಸಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆದೇಶ ಹೊರಡಿಸಿದೆ.



ಕಿಕ್ಕೇರಿ ಕೃಷ್ಣಮೂರ್ತಿ

ಮುಂದಿನ ಆದೇಶದವರೆಗೆ ಈ ನೇಮಕಾತಿ ಜಾರಿಯಲ್ಲಿ ಇರಲಿದೆ ಎಂದು ಇಲಾಖೆ ತಿಳಿಸಿದೆ.

ರಾಜಭವನ ವಿರುದ್ಧ 'ಸರ್ಕಾರಿ' ಹೋರಾಟ

ಒಂದನೇ ಪುಟದಿಂದ...

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಶಿವಕುಮಾರ್, 'ಕುಮಾರಸ್ವಾಮಿ ವಿರುದ್ಧದ ಗಣಿಗಾರಿಕೆಗೆ ಅಕ್ರಮವಾಗಿ ಜಮೀನು ಮಂಜೂರು ಮಾಡಿದ ಪ್ರಕರಣದಲ್ಲಿ ಲೋಕಾಯುಕ್ತ 10 ವರ್ಷ ತನಿಖೆ ನಡೆಸಿ ವಿಚಾರಣೆಗೆ ಅನುಮತಿ ಕೋರಿದ್ದರೂ ರಾಜ್ಯಪಾಲರು ಕೊಟ್ಟಿಲ್ಲ. ಕುಮಾರಸ್ವಾಮಿ ಅವರು ಎಂದಿಗೂ ನಕಲಿ ಕೆಲಸ ಮಾಡುವುದಿಲ್ಲ, ಕೇವಲ ಅಸಲಿ ಕೆಲಸ ಮಾಡುವವರು' ಎಂದು ವ್ಯಂಗ್ಯವಾಡಿದರು.

'ಬೇರೆ ನಾಯಕರ ವಿರುದ್ಧ ಪ್ರಾಥಮಿಕ ತನಿಖೆ ನಡೆದು ವಿಚಾರಣೆಗೆ ಅನುಮತಿ ಕೇಳಿದ್ದರೂ ರಾಜ್ಯಪಾಲರು ನೀಡಿಲ್ಲ. ಆದರೆ, ಯಾವುದೇ ಪ್ರಾಥಮಿಕ ತನಿಖೆ ನಡೆಯದಿದ್ದರೂ ಮುಖ್ಯಮಂತ್ರಿ ವಿರುದ್ಧ ತನಿಖೆಗೆ ತರಾತುರಿಯಲ್ಲಿ ಅನುಮತಿ ನೀಡಿದ್ದಾರೆ. ಈ ವಿಚಾರ ಸದ್ಯ ನ್ಯಾಯಾಲಯದಲ್ಲಿದೆ. ಹೀಗಾಗಿ, ಆ ಬಗ್ಗೆ ಹೆಚ್ಚು ಮಾತನಾಡುವುದಿಲ್ಲ' ಎಂದರು.

'ಮುಖ್ಯಮಂತ್ರಿ ವಿರುದ್ಧ ತನಿಖೆಗೆ ಅನುಮತಿ ನೀಡಿರುವ ರಾಜ್ಯಪಾಲರಿಂದ ನ್ಯಾಯ ನಿರೀಕ್ಷಿಸಿ ಮತ್ತೆ ಮನವಿ ಸಲ್ಲಿಸುತ್ತೀರಾ' ಎಂದು ಕೇಳಿದ ಪ್ರಶ್ನೆಗೆ, 'ತಮ್ಮಿಂದ ಅನ್ಯಾಯ ಆಗಬಾರದು ಎಂಬ ಬುದ್ಧಿಯನ್ನು ಭಗವಂತ ರಾಜ್ಯಪಾಲರಿಗೆ ಕರುಣಿಸಬಹುದು. ಆ ಮೂಲಕ, ತಾವು ಕೊಟ್ಟಿರುವ ಅನುಮತಿಯನ್ನು ಅವರು ಹಿಂಪಡೆಯಬಹುದೆಂದು ನಂಬಿದ್ದೇವೆ' ಎಂದರು.

'ಸಹಿ ನಕಲಿಯಾದರೆ ಏಕೆ ದೂರು ನೀಡಿಲ್ಲ?'

'ಗಣಿಗಾರಿಕೆಗೆ ಅಕ್ರಮವಾಗಿ ಭೂಮಿ ಮಂಜೂರು ಮಾಡಿದ ಪ್ರಕರಣದಲ್ಲಿ ನಾನು ಯಾರಿಗೂ ಶಿಫಾರಸು ಮಾಡಿಲ್ಲ ಎಂದು ಕುಮಾರಸ್ವಾಮಿ ಹೇಳಿದ್ದಾರೆ. ಹಾಗಾದರೆ, ನಿಮ್ಮ ಸಹಿಯನ್ನು ಬೇರೆಯವರು ನಕಲು ಮಾಡಿದ್ದರೆ ಯಾಕಪ್ಪ ದೂರು ನೀಡಿಲ್ಲ? ಮುಖ್ಯಮಂತ್ರಿ ಸ್ಥಾನದಲ್ಲಿ ಕುಳಿತವರ ಸಹಿ ನಕಲು ಮಾಡಿದವರ ಮತ್ತು ನಕಲು ಸಹಿ ಆಧಾರದಲ್ಲಿ ಗಣಿಗಾರಿಕೆಗೆ ಜಮೀನು ಮಂಜೂರು ಮಾಡಿರುವವರ ವಿರುದ್ಧ ಕ್ರಮ ಕೈಗೊಳ್ಳಬಹುದಲ್ಲವೇ' ಎಂದು ಕುಮಾರಸ್ವಾಮಿ ಅವರನ್ನು ಶಿವಕುಮಾರ್ ಪ್ರಶ್ನಿಸಿದರು.

'ಗಣಿಗಾರಿಕೆಗೆ ಶ್ರೀ ಸಾಯಿ ವೆಂಕಟೇಶ್ವರ ಮಿನರಲ್ಸ್ ಸಂಸ್ಥೆಗೆ ಜಮೀನು ಮಂಜೂರು ಪ್ರಕರಣದಲ್ಲಿ ನ್ಯಾಯಾಲಯದಲ್ಲಿ ಕುಮಾರಸ್ವಾಮಿ ಜಾಮೀನು ಅರ್ಜಿ ಹಾಕಿಕೊಳ್ಳುತ್ತಾರೆ. ಪ್ರಮಾಣಪತ್ರದಲ್ಲಿ ಅವರು ಈ ಜಮೀನನ್ನು ಶ್ರೀ ಸಾಯಿ ವೆಂಕಟೇಶ್ವರ ಮಿನರಲ್ಸ್ ಸಂಸ್ಥೆಗೆ ಮಂಜೂರು ಮಾಡಿರುವುದಾಗಿ ಒಪ್ಪಿಕೊಂಡಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ 2011ರಲ್ಲೇ ಎಫ್‌ಐಆರ್ ದಾಖಲಾಗಿದ್ದು, ಈ ಪ್ರಕರಣದ ತನಿಖೆ ಬಾಕಿಯಿದೆ ಎಂದೂ ಒಪ್ಪಿಕೊಂಡಿದ್ದಾರೆ. ನಿಮ್ಮ ಸಹಿ ಅಲ್ಲದಿದ್ದರೆ, ನ್ಯಾಯಾಲಯದಲ್ಲಿ ಜಾಮೀನು ಪಡೆಯಲು ಆ ಆದೇಶವನ್ನು ನೀವೇ ನೀಡಿರುವುದಾಗಿ ಒಪ್ಪಿಕೊಂಡಿರುವುದು ಏಕೆ' ಎಂದೂ ಕೇಳಿದರು. 'ನಿಮ್ಮ ಸಹಿ ಅಲ್ಲದಿದ್ದರೆ ಈಗಲಾದರೂ ದೂರು ನೀಡಿ. ನೀವು ದೊಡ್ಡ ಸರ್ಕಾರದ ಭಾಗವಾಗಿದ್ದೀರಿ. ಆದರೂ, ಯಾಕೆ ದೂರು ನೀಡುತ್ತಿಲ್ಲ' ಎಂದೂ ಪ್ರಶ್ನಿಸಿದರು.

ಕೆಎಎಸ್ ಪ್ರಶ್ನೆಪತ್ರಿಕೆ ಸೋರಿಕೆ; ದೂರು

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ನಗರದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಕೇಂದ್ರದಲ್ಲಿ ಮಂಗಳವಾರ ನಡೆದ ಕೆಎಎಸ್ ಪೂರ್ವಭಾವಿ ಪರೀಕ್ಷೆ ಪ್ರಶ್ನೆಪತ್ರಿಕೆ ಸೋರಿಕೆಯಾಗಿದೆ ಎಂದು ಕೆಲ ಅಭ್ಯರ್ಥಿಗಳು ದೂರು ನೀಡಿದ್ದಾರೆ.

ಸರ್ಕಾರಿ ಪದವಿ ಪೂರ್ವ ಕಾಲೇಜಿನ ಕೊಠಡಿ ಸಂಖ್ಯೆ 3ರಲ್ಲಿ ಪ್ರಶ್ನೆಪತ್ರಿಕೆ 'ಪತ್ರಿಕೆ 1' ರ ಬಂಡಲ್ ತೆರೆದಿತ್ತು. ಅದರಲ್ಲಿದ್ದ ಒಂದು ಪ್ರಶ್ನೆ ಪತ್ರಿಕೆ ತೆರೆದಿದೆ. ಅಲ್ಲದೆ, 15 ನಿಮಿಷ ತಡವಾಗಿ ಪ್ರಶ್ನೆ ಪತ್ರಿಕೆ ನೀಡಿದ್ದಾರೆ.

ಪ್ರಶ್ನೆಪತ್ರಿಕೆ ಸೋರಿಕೆಯಾಗಿ ಅಕ್ರಮ ನಡೆದಿದೆ ಎಂದು ಚಿಕ್ಕಬಳ್ಳಾಪುರ ಕೆಎಎಸ್ ಪರೀಕ್ಷಾ ಕೇಂದ್ರದ ಪರೀಕ್ಷಾ ನಿಯಂತ್ರಕರಿಗೆ ಅಭ್ಯರ್ಥಿಗಳಾದ ಎನ್.ಪ್ರವೀಣ್ ಮತ್ತಿತರರು ದೂರಿನಲ್ಲಿ ತಿಳಿಸಿದ್ದಾರೆ.

ಯಾವುದೇ ಸೋರಿಕೆ ಆಗಿಲ್ಲ: ಪ್ರಶ್ನೆಪತ್ರಿಕೆ ಸೀಲ್ ಮಾಡಿದ ಟ್ರಂಕ್‌ನಲ್ಲಿ ಬಂದಿದೆ. ತಹಶೀಲ್ದಾರ್, ತಾ.ಪಂ ಇಒ ಮತ್ತು ಪೊಲೀಸರ ಮೂಲಕ ಪರೀಕ್ಷಾ ಕೇಂದ್ರಕ್ಕೆ ಕಳುಹಿಸಿದ್ದೇವೆ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಎನ್. ಭಾಸ್ಕರ್ 'ಪ್ರಜಾವಾಣಿ' ಗೆ ತಿಳಿಸಿದರು.

ಪರೀಕ್ಷೆ ನಡೆಯುವ ಶಾಲೆ ಅಥವಾ ಕಾಲೇಜಿನಲ್ಲಿ ಸ್ಥಳೀಯ ತಪಾಸಣಾ ಅಧಿಕಾರಿ ಇರುತ್ತಾರೆ. ಅವರ ಮುಂದೆ ಪೆಟ್ಟಿಗೆ ತೆರೆಯುತ್ತೇವೆ. ಯಾವ ಪರೀಕ್ಷಾ ಕೇಂದ್ರದ ಯಾವ ಕೊಠಡಿಗೆ ಈ ಪ್ರಶ್ನೆ ಪತ್ರಿಕೆಗಳು ಎಂದು ಮೊದಲೇ ನಮೂದಾಗಿರುತ್ತದೆ ಎಂದು ತಿಳಿಸಿದರು.

ಅಭ್ಯರ್ಥಿಗಳ ಮುಂದೆ ತೋರಿಸಿ ಅವರಿಂದ ಸಹಿ ಪಡೆದ ನಂತರ ತೆರೆಯುತ್ತೇವೆ. ಈ ಎಲ್ಲವೂ ನಿಯಮ ಬದ್ಧವಾಗಿ ನಡೆದಿದೆ ಎಂದರು.

ಒಎಂಆರ್ ಶೀಟ್ ನೀಡಲು ವಿಳಂಬ, ಪ್ರತಿಭಟನೆ

ಪ್ರಜಾವಾಣಿ ವಾರ್ತೆ

16386400105834,16386400080854,16386400103607,16386400097593,16386400097965,16386400098591,16386400099128,16386400098385,16386400095985,16386400099482,16386400090689,16386400098732,16386400097973,16386400098096,16386400096611,16386400096934,16386400090804,16386400088949,16386400100215,16386400097833,16386400086646,16386400086653,16386400091513,16386400091554,16386400091463,16386400089830,16386400076704,16386400097486,16386400096322,16386400098930,16386400073909,16386400089756.

Br. Gulbarga: Plot No.7, 1st Floor, Main Road, Super Market, Gulbarga- 585 101 Ph no. 08472-230107 :-
16046400043415,16046400043423,16046400020967,16046400031501,16046400048315,16046400048141,16046400043365,16046400022021.

Br. Ganeshpur: Plot No. 19, BUDA Scheme No 51, Near Military Hospital, Ganeshpur Main Road, Belgaum - 590 009, Ph no. 0831-2446719 :-
14956100108312,14956400023575,14956100107603,14956100108759.

Br.Gangawati: Building No 2-12-81,82,83, Malleswara Complex, Koppal road, Gangawati-583 227 Ph 08533-271861:- 16856400081995,16856400114143,16856400111446,16856400091465,16856400114325,16856400112543,16856400124555,16856400121379,16856400122252,16856400121387,16856400100167,16856400121262,16856400120975,16856400125107,16856400125024,16856400124662,16856400113665,16856400088263,16856400084106,16856400123367,16856400124076,16856400126758,16856400122625,16856400097793,16856400103062,16856400110166,16856400088230,16856400125446,16856400113731,16856400113004,16856400125693,16856400123185,16856400101223,16856400122633,16856400121254,16856400114077,16856400097785,16856400112584.

Br. Hubli: Swastik Central, Niligin Road, New Cotton Market, Hubballi, Dharwad- 580 029,Ph no. 0836-2369449 :-
13386400113096,13386400107080,13386400117121,13386400120059,13386400113104,13386400113971,13386400117147,13386400097372,13386400113112,13386400073019,13386400125942,13386400120638,13386400112635,13386400107965,13386400116651,13386400069892,13386400125652,13386400118418,13386400108963,13386400084206,13386400117030,13386400083612,13386400106884,13386400079875,13386400117337,13386400108567.

Br. Hiriyur: Prashantha Nilaya, Main Road, Hiriyur, Chitradurga Dist, Karnataka :- 577 598, Ph no. 08193271024 :-
19886400079100,19886400066131,19885500002087,19886400070182,19886400060688,19886400060548,19886400063419,19886400066677,19886400072816,19886400041456,19886400079357,19886400059276,19886400080421,19886400049228,19886400077823,19886400075215,19886400082419,19886400080249.

Br. Haveri: C Plot No.30A, Vidya Nagar, P B Road, Haveri Dist- 581110 Ph no. 08375232784 :-
20436400040541,20436400075331,20436400053320,20436400057487,20436400059152,20436400059889,20436400062321,20436400067338,20436400067353,20436400067387,20436400068799,20436400068807,20436400069268,20436400070654,20436400072718,20436400072726,20436400075125,20436400075281.

Br. Kagwad: Athani Road, Kagwad PO, Taluk-Athani, Belgaum- 591 223 Ph no. 08339264628 :-
14806400021055,14806400021089,14806400023283,14806400021196,14806400021311,14806400019299.

Br. Koppal: Kodandappa Complex,Near Kiran Paints, Jawahar Road, Koppal- 583 231, Ph no. 0853-9220606 :- 21176400061985,21176400069590,21176400070408,21176400091149,21176400091149,21176400088558,21176400090331,21176400088640,21176400087089,21176400098243,21176400096965,21176400087014,21176400096932,21176400071760,21176400078823,21176400097310,21176400097195,21176400097179,21176400098441,21176400097815,21176400102557,21176400098367,21176400090786,21176400098144,21176400098722,21176400098706,21176400098037,21176400067651,21176400051994,21176400089150,21176400091008,21176400090133,21176400090448,21176400090976,21176400087113,21176400089259,21176400096411,21176400088996,21176400090208,21176400089630,21176400098607,21176400098557,21176400088822,21176400090760,21176400095975,21176400088806,21176400089663,21176400069004,21176400053941,21176400089200,21176400089747,21176400090927,21176400089796,21176400095413,21176400096668,21176400089663.

Br. Ranebennur: Gungadatti Building, Opp.KEB Office, PB Road, Ranibennur, Haveri- 581 115, Ph no. 08373-262111 :-
21116400030853, 21116400025192, 21116400032115,21116400031786.

Br. Raichur: Ashwini Complex, Opp. Public Gardens, Ambedkar Circle, Station Road, Raichur- 584101, Ph no. 08532-225091:-
15736400151843,15736400145316,15736400145407,15736400152536,15736400145415,15736400145357,15736400151249,15736400132884,15736400145621,15736400152064,15736400144335,15736400144780,15736400130599,15736400144343,15736400138212,15736400131746,15736400144210,15736400144350.

Br. Ugarkhurd: Ghodagire Building, Opposite Post Office, Ugar Khurd, Athani Taluk, Belgaum- 591316, Ph no.8339 272325 :-
14996400023175,14996400033570,14996400033455,14996400033604,14996400030824,14996400033109,14996400034750,14996400033331,14996400025642,14996400032937,14996400025444,14996400030956,14996400031186,14996400031079,14996400032960,14996400030485,14996400033844,14996400025535,14996400033349,14996400025022,14996400030949,14996400023985,14996400030550.

Br. Jamkhandi : Opp to Govts Girls High School, Near Bus Stand, Jamkhandi, Bagalkote- 587 301, Ph. No: 9663380119 :- 23846400002159.

Br. Davanagere: Raghavendra Plaza, No.200/1A & 200/1B, 3rd Main, 7th Cross 28th Ward, P J Extension, Davangere-577002,Ph 08192-222511:-
22976400037953,22976400039397,22976400040445,22976400040452,22976400035585,22976400036112,22976400023540,22976400036336,22976400028416,22976400036757,22976400037573,22976400044926,22976400036807,22976400015371,22976400012121,22976400012642,22976400013228,22976400021072,22976400036963,22976400036971,22976400037409,22976400037318,22976400037326,22976400038407,22976400043944,22976400043951,22976400018821,22976400030693,22976400032970,22976400034497,22976400035031,22976400037268,22976400047549,22976400037243,22976400037623,22976400025776,22976400017054,22976400026865,22976400033648,22976400033754,22976400033994,22976400034083,22976400037771,22976400042896,22976400029984,22976400036500,22976400036906,22976400040643,22976400040874,22976400040916,22976400043274,22976400049552,22976400037979,22976400041971,22976400042409,22976400050006,22976400045543,22976400045550,22976400038241,22976400040627,22976400041229,22976400041732,22976400044389,22976400044603,22976400023094,22976400030503,22976400030511,22976400030529,22976400038373,22976400038381,22976400050790,22976400014572,22976400037094,22976400048299,22976400038597,22976400038605,22976400045246,22976400045618,22976400030818,22976400021999,22976400030875,22976400048349,22976400038647,22976400049636,22976400038696,22976400038928,22976400036575,22976400043563,22976400046889,22976400049214,22976400043225,22976400043464,22976400047101.

Bangalore 27-08-2024 Vice President & Zonal Head

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ರಾಕ್ಷಸ ಶಕ್ತಿಯನ್ನು ಹೊಂದಿರುವುದು ಒಳ್ಳೆಯದು. ಆದರೆ ಅದನ್ನು ರಾಕ್ಷಸನಂತೆ ಉಪಯೋಗಿಸುವುದು ಕೆಟ್ಟದ್ದು.

-ವಿಲಿಯಂ ಶೇಕ್ಸ್‌ಪಿಯರ್

ಏಕೀಕೃತ ಪಿಂಚಣಿ ಯೋಜನೆ ಸಮತೋಲನ ಸಾಧಿಸುವ ಯತ್ನ

ಸರ್ಕಾರಿ ನೌಕರರ ಪಿಂಚಣಿ ವಿಚಾರವಾಗಿ ವಿರೋಧ ಪಕ್ಷಗಳು ರೂಪಿಸಿದ ತಂತ್ರಗಾರಿಕೆಯ ಕಾರಣದಿಂದ ಚುನಾವಣೆಯಲ್ಲಿ ಅನುಭವಿಸಿದ ಹಿನ್ನಡೆಗೆ ಪ್ರತಿಕ್ರಿಯೆಯಾಗಿ ಕೇಂದ್ರ ಸರ್ಕಾರವು ಏಕೀಕೃತ ಪಿಂಚಣಿ ಯೋಜನೆಯನ್ನು (ಯುಪಿಎಸ್) ಘೋಷಣೆ ಮಾಡಿರುವಂತಿದೆ. ಆದರೆ, ಮೇಲ್ನೋಟಕ್ಕೆ ಹಳೆಯ ಪಿಂಚಣಿ ಯೋಜನೆ (ಒಪಿಎಸ್) ಹಾಗೂ ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್‌ಪಿಎಸ್) ನಡುವೆ ಸಮತೋಲನವೊಂದನ್ನು ಸಾಧಿಸುವ ಪ್ರಯತ್ನವು ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಈಗ ಪ್ರಕಟಿಸಿರುವ ಯುಪಿಎಸ್ ಯೋಜನೆಯಲ್ಲಿ ಇದೆ. 2004ರವರೆಗೆ ಒಪಿಎಸ್ ಜಾರಿಯಲ್ಲಿತ್ತು, ನಂತರದಲ್ಲಿ ಎನ್‌ಪಿಎಸ್ ವ್ಯವಸ್ಥೆ ಜಾರಿಗೆ ಬಂದಿದೆ. ಎನ್‌ಪಿಎಸ್‌ನ ಭಾಗವಾಗಿದ್ದ 'ಪಿಂಚಣಿ ನಿಧಿಗೆ ನೌಕರರಿಂದಲೂ ಕೊಡುಗೆ ಇರಬೇಕು' ಎಂಬ ಅಂಶವನ್ನು ಹಾಗೂ ಒಪಿಎಸ್ ವ್ಯವಸ್ಥೆಯಲ್ಲಿ ಇದ್ದ 'ಖಾತರಿ ಮೊತ್ತದ ಪಿಂಚಣಿ' ಅಂಶವನ್ನು ಯುಪಿಎಸ್ ಒಳಗೊಂಡಿದೆ. ಪಿಂಚಣಿ ನಿಧಿಗೆ ಕೇಂದ್ರ ಸರ್ಕಾರ ನೀಡುವ ಮೊತ್ತದ ಪ್ರಮಾಣವು ಶೇಕಡ 14ರಿಂದ ಶೇ 18.5ಕ್ಕೆ ಹೆಚ್ಚಳ ಕಾಣಲಿದೆ. ಇದರ ಪರಿಣಾಮವಾಗಿ, ಕೇಂದ್ರ ಸರ್ಕಾರದ ಮೇಲೆ ಹೆಚ್ಚುವರಿಯಾಗಿ ವಾರ್ಷಿಕ ₹6,250 ಕೋಟಿ ಹೊರೆ ಬೀಳಲಿದೆ. ಕನಿಷ್ಠ 10 ವರ್ಷ ಕರ್ತವ್ಯ ನಿರ್ವಹಿಸಿ ನಿವೃತ್ತರಾದವರಿಗೆ ಯುಪಿಎಸ್ ವ್ಯವಸ್ಥೆಯ ಅಡಿಯಲ್ಲಿ ಕನಿಷ್ಠ ₹10 ಸಾವಿರವು ಪಿಂಚಣಿ ರೂಪದಲ್ಲಿ ಸಿಗಲಿದೆ. ಪೂರ್ಣ ಅವಧಿಗೆ ಕರ್ತವ್ಯ ನಿರ್ವಹಿಸಿದವರಿಗೆ ಅವರು ನಿವೃತ್ತರಾಗುವುದಕ್ಕಿಂತ ಮೊದಲಿನ 12 ತಿಂಗಳ ಸರಾಸರಿ ಮೂಲ ವೇತನದ ಶೇಕಡ 50ರಷ್ಟು ಮೊತ್ತವು ಪಿಂಚಣಿಯಾಗಿ ಸಿಗಲಿದೆ. ಯುಪಿಎಸ್ ಅಡಿ ಸಿಗಲಿರುವ ಪ್ರಯೋಜನಗಳು ಒಪಿಎಸ್‌ಗೆ ಸರಿಸಮ ಅಲ್ಲದಿದ್ದರೂ ಯುಪಿಎಸ್ ಆಯ್ಕೆ ಮಾಡಿಕೊಂಡವರಿಗೆ ಖಾತರಿ ಮೊತ್ತದ ಪಿಂಚಣಿ ಸಿಗುತ್ತದೆ.

ಪಿಂಚಣಿ ಹೊರೆ ಹೆಚ್ಚಳದ ಬಗ್ಗೆ ವಿಶ್ವದ ಹಲವು ಸರ್ಕಾರಗಳು ಕಳವಳ ಹೊಂದಿವೆ

ಸರ್ಕಾರಿ ನೌಕರರ ಸಂಘಟನೆಗಳು ಈ ಯೋಜನೆ ಬಗ್ಗೆ ಹಲವು ಪ್ರಶ್ನೆಗಳನ್ನು ಹೊಂದಿವೆ. ಅಲ್ಲದೆ, ಯೋಜನೆಯ ಸ್ಪಷ್ಟ ವಿವರಗಳಿಗಾಗಿ ಅವು ಕಾಯುತ್ತಿವೆ. ಹೀಗಿದ್ದರೂ, ಕೇಂದ್ರವು ಪ್ರಕಟಿಸಿರುವ ಈ ಯೋಜನೆಯ ಕಾರಣದಿಂದಾಗಿ ವಿರೋಧ ಪಕ್ಷಗಳು ತಮ್ಮ ನಿಲುವಿನ ಬಗ್ಗೆ ಮರು ಅವಲೋಕನ ನಡೆಸಬೇಕಾದ ಪರಿಸ್ಥಿತಿ ಎದುರಾಗಿದೆ. ಒಪಿಎಸ್ ವ್ಯವಸ್ಥೆಯನ್ನು ಪೂರ್ಣ ಪ್ರಮಾಣದಲ್ಲಿ ಜಾರಿಗೆ ತರುವ ಭರವಸೆ ನೀಡುವ ಮೂಲಕ ಕಾಂಗ್ರೆಸ್ ಪಕ್ಷವು ಕೆಲವು ರಾಜ್ಯಗಳಲ್ಲಿ ಬಲ ಹೆಚ್ಚಿಸಿಕೊಂಡಿದೆ. ಈಗ ಯುಪಿಎಸ್ ಯೋಜನೆಯು ಕಾಂಗ್ರೆಸ್ ನೇತೃತ್ವದ ಸರ್ಕಾರಗಳಿಗೆ ಪಕ್ಷದ ಭರವಸೆಯನ್ನು ಭಾಗಶಃ ಈಡೇರಿಸಲು ಒಂದು ಅವಕಾಶ ಒದಗಿಸಿಕೊಟ್ಟಿದೆ. ಅಲ್ಲದೆ, ಒಪಿಎಸ್‌ನಲ್ಲಿ ಇರುವಂತೆ ಪಿಂಚಣಿಯ ಭಾರಿ ಹೊರೆಯು ಯುಪಿಎಸ್ ಅಡಿಯಲ್ಲಿ ಸರ್ಕಾರದ ಮೇಲೆ ಇರುವುದಿಲ್ಲ. ಕಾಂಗ್ರೆಸ್ ನೇತೃತ್ವದ ಸರ್ಕಾರಗಳು ತಮಗೆ ಬಿಜೆಪಿಯ ವಿರುದ್ಧ ನೈತಿಕ ಜಯ ಸಿಕ್ಕಿದೆ ಎಂದೂ ಹೇಳಿಕೊಳ್ಳಬಹುದು. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ರಾಜಕೀಯ ಲಾಭ ಪಡೆಯಲು ಅವಕಾಶ ಸಿಗದಿರಲಿ ಎಂಬ ಉದ್ದೇಶದೊಂದಿಗೆ, ಮಹಾರಾಷ್ಟ್ರದ ಏಕನಾಥ ಶಿಂದೆ ನೇತೃತ್ವದ ಸರ್ಕಾರವು ಯುಪಿಎಸ್ ಯೋಜನೆಯನ್ನು ಜಾರಿಗೆ ತರುವುದಾಗಿ ಈಗಾಗಲೇ ಘೋಷಿಸಿ ಆಗಿದೆ. ಬಿಜೆಪಿಯ ಆಡಳಿತ ಇರುವ ಹರಿಯಾಣದಲ್ಲಿಯೂ ಇದೇ ತಂತ್ರವನ್ನು ಅನುಸರಿಸುವ ನಿರೀಕ್ಷೆ ಇದೆ.

ದೇಶದ ಜನರ ಸರಾಸರಿ ಜೀವಿತಾವಧಿಯು ಈಗ 70 ವರ್ಷಗಳು. ಇದು ಹೆಚ್ಚುತ್ತಿದೆ ಕೂಡ. ಹೀಗಿರುವಾಗ, ಪಿಂಚಣಿ ಪಾವತಿಗಾಗಿ ವಿನಿಯೋಗಿಸಬೇಕಿರುವ ಮೊತ್ತವು ಹೆಚ್ಚುತ್ತ ಸಾಗಿದೆ. ಮುಂದಿನ ದಶಕಗಳಲ್ಲಿ ಈ ಮೊತ್ತವು ನಿಯಂತ್ರಣ ಮೀರಿ ಹೋಗಬಹುದು ಎಂದು ಹಲವು ಸರ್ಕಾರಗಳಿಗೆ ಅನ್ನಿಸಿದೆ. ಪಿಂಚಣಿದಾರರು ತಾವು ಹಿಂದೆ ಕರ್ತವ್ಯ ನಿರ್ವಹಿಸಿದ್ದ ಅವಧಿಗಿಂತ ಹೆಚ್ಚಿನ ಅವಧಿಗೆ ಪಿಂಚಣಿ ಪಡೆದಿರುವ ನಿದರ್ಶನಗಳು ಇವೆ. ವಿಶ್ವದಲ್ಲಿ ಹಲವು ಸರ್ಕಾರಗಳು ಹೆಚ್ಚುತ್ತಿರುವ ಪಿಂಚಣಿ ಹೊರೆಯ ಬಗ್ಗೆ ಕಳವಳ ಹೊಂದಿವೆ. ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಪಿಂಚಣಿ ಹೊರೆಯನ್ನು ತಗ್ಗಿಸಿಕೊಳ್ಳುವ ಉದ್ದೇಶದಿಂದಲೇ ತನ್ನ ಎರಡನೆಯ ಅವಧಿಯಲ್ಲಿ ಅಗ್ನಿವೀರ ಯೋಜನೆ, ಲ್ಯಾಟರಲ್ ಎಂಟ್ರಿ, ಹಲವು ಹುದ್ದೆಗಳನ್ನು ಖಾಲಿ ಬಿಡುವ ಕ್ರಮಗಳ ಮೊರೆ ಹೋಗಿತ್ತು. ಈಗ ಘೋಷಣೆಯಾಗಿರುವ ಯುಪಿಎಸ್ ವ್ಯವಸ್ಥೆಯು ಪಿಂಚಣಿ ಹೊರೆಯನ್ನು ನಿಭಾಯಿಸುವ ಹಾಗೂ ನೌಕರರ ಬೇಡಿಕೆಗಳಿಗೆ ಸ್ಪಂದಿಸುವ ವಿಚಾರವಾಗಿ ಸರ್ಕಾರದ ಕಡೆಯಿಂದ ಬಂದಿರುವ ಬಹಳ ಸುಧಾರಿತ ಪ್ರತಿಕ್ರಿಯೆಯಾಗಿ ಕಾಣುತ್ತಿದೆ. ಚುನಾವಣೆಗಳು ಹತ್ತಿರವಾದಂತೆಲ್ಲ ಇಂತಹ ಹಲವು ಕ್ರಮಗಳನ್ನು ನಿರೀಕ್ಷಿಸಬಹುದು. ಒಪಿಎಸ್ ಬದಲು ಯುಪಿಎಸ್ ವ್ಯವಸ್ಥೆ ಜಾರಿಗೆ ಬಂದ ನಂತರವೂ ತಮ್ಮ ಸ್ಥಿತಿಯು ಇತರರಿಗೆ ಹೋಲಿಸಿದರೆ ಬಹಳ ಉತ್ತಮವಾಗಿಯೇ ಇರುತ್ತದೆ ಎಂಬುದನ್ನು ಸರ್ಕಾರಿ ನೌಕರರು ಅರಿತರೆ ಚೆನ್ನ. ಈ ದೇಶದ ಬಹುಪಾಲು ಜನರಿಗೆ ಯಾವ ಪಿಂಚಣಿಯೂ ಇಲ್ಲ, ಸಾಮಾಜಿಕ ಭದ್ರತೆಯೂ ಇಲ್ಲ ಎಂಬ ವಾಸ್ತವವು ಎಲ್ಲರಿಗೂ ತಿಳಿದಿರಬೇಕು.

ನಿರಂತರವಾಗಿ ಅಪಬಳಕೆಗೆ ಈಡಾದ ಯಾವ ಹುದ್ದೆ ತಾನೇ ಪಾವಿತ್ರ್ಯ ಉಳಿಸಿಕೊಳ್ಳಲು ಸಾಧ್ಯ?

ಕೇಂದ್ರದ ದಾಸ್ಯದಲ್ಲಿ ರಾಜ್ಯಪಾಲ

ವಿಶ್ಲೇಷಣೆ

ದಿನೇಶ್ ಅಮಿನ್ ಮಟ್ಟು

ಸಂವಿಧಾನದ ಪಾಲನೆ, ರಕ್ಷಣೆ ಹಾಗೂ ಸಮರ್ಥನೆಯ ಪ್ರಮಾಣವಚನದೊಂದಿಗೆ ಅಧಿಕಾರ ಸ್ವೀಕರಿಸುವ ರಾಜ್ಯಪಾಲರು ಕಾರ್ಯಾಂಗದ ಮುಖ್ಯಸ್ಥರು. ಸಂವಿಧಾನದ ಪ್ರಕಾರ ಮುಖ್ಯಮಂತ್ರಿಯನ್ನು ನೇಮಿಸುವ ಅಧಿಕಾರ ರಾಜ್ಯಪಾಲರದು. ಅವರು 'ಇಚ್ಛಿಸುವ' ವರೆಗೆ ಮಾತ್ರ ಮುಖ್ಯಮಂತ್ರಿ ಅಧಿಕಾರದಲ್ಲಿ ಇರಬಹುದು ಎನ್ನುತ್ತದೆ ಸಂವಿಧಾನದ 164(1)ನೇ ವಿಧಿ. ರಾಜ್ಯದ ಆಡಳಿತ ಅಧಿಕೃತವಾಗಿ ನಡೆಯುವುದೆಲ್ಲವೂ ರಾಜ್ಯಪಾಲರ ಹೆಸರಿನಲ್ಲಿ, ಅವರ ಅಂಕಿತ ಇಲ್ಲದೆ ಯಾವ ಮಸೂದೆಯೂ ಕಾನೂನು ಆಗುವಂತಿಲ್ಲ. ರಾಜ್ಯಪಾಲರೇ ಕೇಂದ್ರ ಮತ್ತು ರಾಜ್ಯದ ಕೊಂಡಿ... ಇವೆಲ್ಲವನ್ನೂ ಕೇಳುತ್ತಾ ಹೋದರೆ ರಾಜ್ಯಪಾಲರ ಹುದ್ದೆ ಎಷ್ಟೊಂದು ಶಕ್ತಿಶಾಲಿ ಎಂದು ಅನಿಸುವುದು ಸಹಜ. ಆದರೆ ವಾಸ್ತವದಲ್ಲಿ ರಾಜ್ಯಪಾಲ ಹುದ್ದೆಯಷ್ಟು ಅಭದ್ರ ಮತ್ತು ಕಳಂಕಿತವಾದ ಸಾಂವಿಧಾನಿಕ ಹುದ್ದೆ ಮತ್ತೊಂದಿಲ್ಲ.

ರಾಜ್ಯಪಾಲರು ಏಕಕಾಲಕ್ಕೆ ರಾಜ್ಯದಲ್ಲಿ ಸಾಂವಿಧಾನಿಕ ಮುಖ್ಯಸ್ಥರು ಮತ್ತು ಕೇಂದ್ರ ಸರ್ಕಾರದ ಪ್ರತಿನಿಧಿ ಆಗಿರುತ್ತಾರೆ. ಇಂತಹ ದ್ವಿಪಾತ್ರವೇ ಅವರನ್ನು ಆಗಾಗ ವಿವಾದದ ಸುಳಿಯಲ್ಲಿ ಮುಳುಗೇಳಿಸುತ್ತದೆ. ಸಂಸದರು ಮತ್ತು ಶಾಸಕರ ಮೂಲಕ ಆಯ್ಕೆಯಾಗುವ ರಾಷ್ಟ್ರಪತಿ ಅವರಿಗೆ ಐದು ವರ್ಷಗಳ ಸುರಕ್ಷಿತ ಕಾರ್ಯಾವಧಿ ಇದೆ. ಇದೇ ಮಾದರಿಯ ಸ್ಥಾನಮಾನ ನ್ಯಾಯಮೂರ್ತಿಯವರದ್ದು. ಇವರನ್ನು ಸಂಸತ್ತಿನ ಮೂರನೇ ಎರಡರಷ್ಟು ಬಹುಮತದ ನಿರ್ಣಯದ ಮೂಲಕವಷ್ಟೇ ಕಿತ್ತುಹಾಕಬಹುದು. ಆದರೆ ರಾಜ್ಯಪಾಲರ ಹುದ್ದೆಗೆ ಒಬ್ಬ ಸಾಮಾನ್ಯ ಸರ್ಕಾರಿ ನೌಕರನಿಗೆ ಇರುವ ಸೇವಾಭದ್ರತೆಯೂ ಇಲ್ಲ, ಸ್ವಾತಂತ್ರ್ಯವೂ ಇಲ್ಲ. ಅವರನ್ನು ಯಾವಾಗ ಬೇಕಾದರೂ ಕಿತ್ತುಹಾಕಬಹುದು. ಅವರ ಸ್ಥಾನಮಾನ ಏನಿದ್ದರೂ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಪಕ್ಷದ ಮರ್ಜಿಯನ್ನು ಅವಲಂಬಿಸಿದೆ. ರಾಜ್ಯಪಾಲರು ಒಮ್ಮೊಮ್ಮೆ ಅತಿ ಕ್ರಿಯಾಶೀಲರಾಗಿ ಎಡವಟ್ಟು ಮಾಡಿಕೊಳ್ಳಲು ಕೂಡ ಈ ಅಭದ್ರತೆ ಮತ್ತು ಕೀಳರಿಮೆ ಕಾರಣವಾಗಿರಬಹುದು.

ರಾಜಭವನವನ್ನು ದುರುಪಯೋಗಪಡಿಸಿಕೊಳ್ಳುವುದರಲ್ಲಿ ಯಾವ ರಾಜಕೀಯ ಪಕ್ಷವೂ ಹಿಂದೆ ಬಿದ್ದಿಲ್ಲ. ಇಂದಿರಾ ಗಾಂಧಿ ಪ್ರಧಾನಿಯಾಗಿದ್ದ ಕಾಲದಲ್ಲಿ ನೂರಕ್ಕೂ ಹೆಚ್ಚು ಬಾರಿ ರಾಜ್ಯಗಳ ಮೇಲೆ ರಾಷ್ಟ್ರಪತಿ ಆಳ್ವಿಕೆ ಹೇರಿದ್ದರು. ಇದನ್ನು ಟೀಕಿಸಿದ್ದ ವಿರೋಧ ಪಕ್ಷಗಳು ತಾವು ಅಧಿಕಾರಕ್ಕೆ ಬಂದಾಗೆಲ್ಲ ಅದೇ ಚಾಳಿಯನ್ನು ಮುಂದುವರಿಸಿಕೊಂಡು ಬಂದಿವೆ. 1977ರಲ್ಲಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿದ್ದ ಜನತಾ ಪಕ್ಷದ ನೇತೃತ್ವದ ಸರ್ಕಾರವು ಒಂಬತ್ತು ರಾಜ್ಯಗಳಲ್ಲಿನ ಕಾಂಗ್ರೆಸ್ ನೇತೃತ್ವದ ಸರ್ಕಾರಗಳನ್ನು ವಜಾಗೊಳಿಸಿತ್ತು. ರಾಜ್ಯಪಾಲರ ಹುದ್ದೆಯು ಒಮ್ಮೊಮ್ಮೆ ಮುದಿ ರಾಜಕಾರಣಿಗಳ ಪುನರ್ವಸತಿಗೆ, ಇನ್ನು ಕೆಲವೊಮ್ಮೆ ಪಕ್ಷನಿಷ್ಠೆಗೆ ನೀಡುವ ಉಡುಗೊರೆಯಾಗಿ, ಇನ್ನೆಷ್ಟೋ ಬಾರಿ ರಾಜ್ಯಗಳಲ್ಲಿ ಅಧಿಕಾರದಲ್ಲಿ ಇರುವ, ತಮ್ಮನ್ನು ರಾಜಕೀಯವಾಗಿ ವಿರೋಧಿಸುವ ಪಕ್ಷಗಳ ನೇತೃತ್ವದ ಸರ್ಕಾರದ ಮೇಲೆ ಪರೋಕ್ಷ ನಿಯಂತ್ರಣಕ್ಕಾಗಿ ಕೇಂದ್ರದ ಏಜಂಟ್ ರೂಪದಲ್ಲಿ ಬಳಕೆಯಾಗುವುದಿದೆ. ಈ ರೀತಿ ನಿರಂತರವಾಗಿ ಅಪಬಳಕೆಗೆ ಈಡಾದ ನಂತರ ಯಾವ ಹುದ್ದೆ ತಾನೇ ಪಾವಿತ್ರ್ಯ ಉಳಿಸಿಕೊಳ್ಳಲು ಸಾಧ್ಯ?

ರಾಜ್ಯಪಾಲರ ಹುದ್ದೆಯ ದುರುಪಯೋಗಕ್ಕೆ ಕೇಂದ್ರ ಸರ್ಕಾರ ನಿರಂತರವಾಗಿ ದುರ್ಬಳಕೆ ಮಾಡಿಕೊಂಡು ಬಂದದ್ದು ಸಂವಿಧಾನದ 164(1) ಮತ್ತು 356ನೇ ವಿಧಿಗಳನ್ನು. 'ರಾಜ್ಯಪಾಲರು ಇಚ್ಛಿಸುವವರೆಗೆ ಮುಖ್ಯಮಂತ್ರಿಗಳು ಅಧಿಕಾರದಲ್ಲಿ ಇರಬಹುದು' ಎನ್ನುತ್ತದೆ 164(1)ನೇ ವಿಧಿ. 'ಸಂವಿಧಾನಕ್ಕೆ ನಿಷ್ಠೆಯಿಂದ ಕಾರ್ಯನಿರ್ವಹಿಸಲು ವಿಫಲವಾಗುವ ಸರ್ಕಾರಗಳನ್ನು ವಜಾ ಮಾಡಬಹುದು' ಎನ್ನುತ್ತದೆ 356ನೇ ವಿಧಿ. 'ಬಹುಮತ ಸದನದೊಳಗೆ ನಿರ್ಧಾರವಾಗಬೇಕೇ ವಿನಾ ರಾಜಭವನದಲ್ಲಿ ಅಲ್ಲ' ಎಂದು ಎಸ್.ಆರ್.ಬೊಮ್ಮಾಯಿ ನೇತೃತ್ವದ ಸರ್ಕಾರದ ಪದಚ್ಯುತಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ಐತಿಹಾಸಿಕ ತೀರ್ಪಿನ ನಂತರ ರಾಜಭವನದ ದುರುಪಯೋಗ ಕಡಿಮೆಯಾಗಿದೆ.

ಇತ್ತೀಚಿನ ದಿನಗಳಲ್ಲಿ ರಾಜ್ಯಪಾಲರನ್ನು ವಿವಾದದ ಕಟಕಟೆಯಲ್ಲಿ ತಂದು ನಿಲ್ಲಿಸುತ್ತಿರುವುದು ಸಂವಿಧಾನದ 163ನೇ ವಿಧಿ. 'ರಾಜ್ಯಪಾಲರು ಸಚಿವ ಸಂಪುಟದ ನೆರವು ಮತ್ತು ಸಲಹೆಯೊಂದಿಗೆ ತಮ್ಮ ಕರ್ತವ್ಯ ನಿರ್ವಹಿಸಬೇಕು' ಎಂದು ಹೇಳಿರುವ ಈ ವಿಧಿಯಲ್ಲಿ 'ಸಂವಿಧಾನದತ್ತವಾಗಿ ಕಾರ್ಯನಿರ್ವಹಿಸಬೇಕಾದ ಸಂದರ್ಭದಲ್ಲಿ ತಮ್ಮ ವಿವೇಚನೆಗೆ ತಕ್ಕಂತೆ ನಿರ್ಧಾರ ಕೈಗೊಳ್ಳಬಹುದು' ಎಂಬ ಅಂಶವೂ ಸೇರಿದೆ. ವಿವೇಚನಾಧಿಕಾರಕ್ಕೆ ಇತಿಮಿತಿಗಳು ಇರದೆ ಇರುವ ಕಾರಣಕ್ಕೆ ಸರಳವಾದ 163ನೇ ವಿಧಿಯ ದುರುಪಯೋಗ ಕೂಡ ನಡೆಯತೊಡಗಿದೆ. ಕರ್ನಾಟಕದ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರ ವಿರುದ್ಧ ಕೇಳಿಬರುತ್ತಿರುವುದು ಕೂಡ ಇದೇ ಆರೋಪ.

ಭವಿಷ್ಯದಲ್ಲಿ ರಾಜ್ಯಪಾಲರ ಹುದ್ದೆಯ ದುರುಪಯೋಗ ನಡೆಯಬಹುದೆಂಬ ನಿರೀಕ್ಷೆಯಿಂದಲೋ ಏನೋ ಸಂವಿಧಾನ ರಚನಾ ಸಭೆಯಲ್ಲಿ ರಾಜ್ಯಪಾಲರ ಹುದ್ದೆ ಬಗ್ಗೆ ಸುದೀರ್ಘ ಚರ್ಚೆ ನಡೆದಿತ್ತು. ರಾಜ್ಯಪಾಲರು ಜನರಿಂದಲೇ ಆಯ್ಕೆಯಾಗಬೇಕು ಎನ್ನುವುದು ಆ ಸಭೆಯಲ್ಲಿದ್ದ ಬಹುತೇಕ ಸದಸ್ಯರ ಮೊದಲ ಅಭಿಪ್ರಾಯವಾಗಿತ್ತು. ರಾಜ್ಯಪಾಲರನ್ನು ರಾಷ್ಟ್ರಪತಿಯವರ ರೀತಿಯಲ್ಲಿ ಪರೋಕ್ಷವಾಗಿ ಅಂದರೆ ಜನಪ್ರತಿನಿಧಿಗಳ ಮತಗಳ ಮೂಲಕ ಆಯ್ಕೆ ಮಾಡಬಹುದು ಎನ್ನುವ ಇನ್ನೊಂದು ಅಭಿಪ್ರಾಯವೂ ಕೇಳಿಬಂದಿತ್ತು. ಆದರೆ ಚುನಾವಣೆ ಮೂಲಕ ಆಯ್ಕೆಯಾದ ರಾಜ್ಯಪಾಲರು ಸಂವಿಧಾನದ ಆಶಯಗಳಿಗೆ ಬದ್ಧರಾಗಿ ನಡೆದುಕೊಳ್ಳದೆ ಆಳುವ ಪಕ್ಷದ ಪ್ರತಿನಿಧಿಯಾಗಬಹುದು ಮತ್ತು ರಾಜ್ಯಗಳಲ್ಲಿ ಪ್ರಾಂತೀಯ ಭಾವನೆಗೆ ಉತ್ತೇಜನ ನೀಡುವ ಸಾಧ್ಯತೆ ಇದೆ ಎಂದು ಜವಾಹರಲಾಲ್ ನೆಹರೂ ಅವರಂತಹವರು ಆತಂಕ ವ್ಯಕ್ತಪಡಿಸಿದ್ದರು. ಅಂತಿಮವಾಗಿ ಎಲ್ಲರೂ ಒಪ್ಪಿಕೊಂಡದ್ದು ಕೇಂದ್ರ ಸರ್ಕಾರವು ರಾಷ್ಟ್ರಪತಿಯವರ ಮೂಲಕ ನಡೆಸುವ ನೇಮಕಾತಿಯನ್ನು. ದೇಶ ವಿಭಜನೆಯ ಆಘಾತದಿಂದ ಆಗಷ್ಟೇ ಚೇತರಿಸಿಕೊಳ್ಳುತ್ತಿದ್ದ ಬಹುತೇಕ ನಾಯಕರು 'ರಾಜ್ಯ ಸರ್ಕಾರಗಳನ್ನು ನಿಯಂತ್ರಿಸಿಕೊಂಡು ಹೋಗುವ ರೀತಿಯಲ್ಲಿ ಕೇಂದ್ರ ಸರ್ಕಾರವನ್ನು ಬಲಗೊಳಿಸಬೇಕು' ಎಂಬ ಅಭಿಪ್ರಾಯ ಹೊಂದಿದ್ದು ಕೂಡ ಇದಕ್ಕೆ ಕಾರಣ.

ರಾಜಭವನದ ದುರ್ಬಳಕೆಯ ರೋಗಕ್ಕೆ ಚಿಕಿತ್ಸೆ ಇಲ್ಲವೇ ಇಲ್ಲವೆಂದಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಂಬಂಧ ಸುಧಾರಣೆಗಾಗಿ ರಚನೆಗೊಂಡಿದ್ದ ನ್ಯಾಯಮೂರ್ತಿ ಆರ್.ಎಸ್.ಸರ್ಕಾರಿಯಾ ಆಯೋಗ ಮತ್ತು ಎನ್‌ಡಿಎ ಸರ್ಕಾರ ರಚಿಸಿದ್ದ 'ಸಂವಿಧಾನ ಕಾರ್ಯನಿರ್ವಹಣೆಯ ಪುನರ್‌ಪರಿಶೀಲನಾ ಆಯೋಗ'ದ ಶಿಫಾರಸುಗಳನ್ನು ಜಾರಿಗೆ ತರುವುದೊಂದೇ ಇದಕ್ಕಿರುವ ಮಾರ್ಗ. ಸರ್ಕಾರಿಯಾ ಆಯೋಗದ ಕೆಲವು ಶಿಫಾರಸುಗಳು:

- ರಾಜ್ಯಪಾಲರಾಗಿ ನೇಮಕಗೊಳ್ಳುವವರು ಯಾವುದಾದರೂ ಕ್ಷೇತ್ರದಲ್ಲಿ ಸಾಧನೆ ಮಾಡಿದವರಾಗಿರಬೇಕು. ತವರು ರಾಜ್ಯದಲ್ಲಿ ರಾಜ್ಯಪಾಲರಾಗಬಾರದು. ನೇಮಕ ಆಗುವ ಹೊತ್ತಿನಲ್ಲಿ ರಾಜಕೀಯವಾಗಿ ಕ್ರಿಯಾಶೀಲರಾಗಿ ಇರಬಾರದು.
- ಕೇಂದ್ರದಲ್ಲಿ ಅಧಿಕಾರದಲ್ಲಿರುವ ಪಕ್ಷಕ್ಕೆ ಸೇರಿರುವ ವ್ಯಕ್ತಿಗಳನ್ನು ವಿರೋಧ ಪಕ್ಷದ ಆಡಳಿತ ಇರುವ ರಾಜ್ಯಕ್ಕೆ ರಾಜ್ಯಪಾಲರನ್ನಾಗಿ ನೇಮಕ ಮಾಡಬಾರದು. ರಾಜ್ಯಪಾಲರಾಗಿ ಹೋಗುವ ರಾಜ್ಯದ ರಾಜಕೀಯದಲ್ಲಿ ಅವರು ಆಸಕ್ತಿ ಹೊಂದಿರಬಾರದು.
- ರಾಜ್ಯಪಾಲರ ನೇಮಕಕ್ಕೆ ಮೊದಲು ರಾಜ್ಯಗಳ ಮುಖ್ಯಮಂತ್ರಿಗಳ ಜತೆ ಸಮಾಲೋಚನೆ ಮಾಡಬೇಕು. ಉಪರಾಷ್ಟ್ರಪತಿ ಮತ್ತು ಲೋಕಸಭಾಧ್ಯಕ್ಷರ ಜತೆ ರಹಸ್ಯ ಹಾಗೂ ಅನೌಪಚಾರಿಕ ರೀತಿಯಲ್ಲಿ ಚರ್ಚಿಸಬೇಕು. ರಾಜ್ಯಪಾಲ ಹುದ್ದೆಯಿಂದ ನಿರ್ಗಮಿಸಿದ ನಂತರ ಯಾವುದೇ ರೀತಿಯ ಅಧಿಕಾರದ ಸ್ಥಾನವನ್ನಾಗಲಿ, ಲಾಭದಾಯಕ ಹುದ್ದೆಯನ್ನಾಗಲಿ ಹೊಂದಬಾರದು.

ಸಂವಿಧಾನ ಪುನರ್‌ಪರಿಶೀಲನಾ ಆಯೋಗದ ಶಿಫಾರಸುಗಳು:

- ರಾಜ್ಯಪಾಲರ ನೇಮಕಕ್ಕೆ ಪ್ರಧಾನಮಂತ್ರಿ, ಲೋಕಸಭಾಧ್ಯಕ್ಷರು ಮತ್ತು ಸಂಬಂಧಿತ ರಾಜ್ಯಗಳ ಮುಖ್ಯಮಂತ್ರಿಗಳನ್ನು ಒಳಗೊಂಡ ಸಮಿತಿ ರಚಿಸಬೇಕು. ಸಮಿತಿಯ ಸಮಾಲೋಚನೆ ಪಾರದರ್ಶಕವಾಗಿದ್ದರೆ ಒಳಿತು.
- ರಾಜ್ಯಪಾಲರನ್ನು ಬಹುಮತದ ಮೂಲಕ ವಜಾಗೊಳಿಸುವ ಅಧಿಕಾರ ವಿಧಾನಮಂಡಲಕ್ಕೆ ಇರಬೇಕು.

ಸರ್ಕಾರಿಯಾ ಆಯೋಗ ವರದಿ ನೀಡಿ 37 ವರ್ಷ ಮತ್ತು ಸಂವಿಧಾನ ನಿರ್ವಹಣೆಯ ಪುನರ್ ಪರಿಶೀಲನಾ ಆಯೋಗ ವರದಿ ನೀಡಿ 24 ವರ್ಷಗಳಾಗಿವೆ. ಅನುಷ್ಠಾನ ದೂರವೇ ಉಳಿಯಿತು, ಕನಿಷ್ಠ ಈ ಬಗ್ಗೆ ರಾಜಕೀಯ ಪಕ್ಷಗಳು ಚರ್ಚೆಯನ್ನೂ ನಡೆಸುತ್ತಿಲ್ಲ. ಯಾಕೆಂದರೆ ರಾಜಭವನದ ಬಾಗಿಲು ಮುಚ್ಚಿದರೆ ಸಕ್ರಿಯ ರಾಜಕೀಯದಿಂದ ನಿವೃತ್ತಿ ಹೊಂದಿದ ರಾಜಕೀಯ ನಾಯಕರ ಗತಿ ಏನು? ಎಲ್ಲ ಪಕ್ಷಗಳಲ್ಲಿಯೂ ಗೆಹಲೋತ್‌ಗಳಿದ್ದಾರಲ್ಲಾ!

ಚುರುಮುರಿ

ಜೈಲು ಯಾತ್ರೆ

● ಮಣ್ಣೆ ರಾಜು

'ಫ್ರೆಂಡ್ಸ್ ಜೊತೆ ಪರಪ್ಪನ ಅಗ್ರಹಾರ ಜೈಲಿಗೆ ಹೋಗ್ತಿದ್ದೀವಿ, ನೀವೂ ಬರ್ತೀರೇನ್ರೀ?' ಎನ್ನುತ್ತಾ ಪಕ್ಕದ ಮನೆ ಪದ್ಮಾ ಬಂದಳು.

'ಜೈಲಿಗೆ ಹೋಗುವಂಥಾ ಅಪರಾಧ ನೀವೇನು ಮಾಡಿದ್ದೀರಿ?!' ಸುಮಿ ಕೇಳಿದಳು.

'ಹಾಗೇನಿಲ್ಲಾರೀ, ಜೈಲಿಗೆ ಟೂರ್ ಹೋಗ್ತಿದ್ದೀವಿ. ಪರಪ್ಪನ ಜೈಲು ಪ್ರವಾಸತಾಣ ಆಗಿದೆಯಂತೆ. ನಿತ್ಯ ನೂರಾರು ಅಭಿಮಾನಿಗಳು ಬರ್ತಾರಂತೆ'.

'ಜೈಲಿನ ನರಕ ನೋಡಲು ಹೋಗ್ಬೇಕೇನ್ರೀ?'

'ನಾನೂ ಹಾಗೇ ಅಂದುಕೊಂಡಿದ್ದೆ. ಜೈಲು ನರಕ ಅಲ್ವಂತೆ, ಅಲ್ಲಿ ಎಲ್ಲಾ ಸೌಲಭ್ಯ ಇವೆಯಂತೆ. ಆದರೆ ಸ್ಟಾರ್ ಹೋಟೆಲ್‌ಗಿಂತ ದುಬಾರಿ ಅಂತೆ. ನಾನು ಒಮ್ಮೆಯೂ ಜೈಲಿಗೆ ಹೋಗಿಲ್ಲ, ನೋಡಿಕೊಂಡು ಬರೋಣ ಅಂತ ಹೊರಟಿದ್ದೀವಿ'.

'ಹೋದವರನ್ನೆಲ್ಲಾ ಜೈಲಿನ ಒಳಗೆ ಬಿಡೋಲ್ಲವಂತೆ...'

'ಹೌದೂರೀ, ಪ್ರವೇಶ ಶುಲ್ಕ ಪಡೆದು ಒಳಗೆ ಬಿಡುವ ವ್ಯವಸ್ಥೆಯನ್ನಾದರೂ ಮಾಡಿದರೆ ಸರ್ಕಾರಕ್ಕೆ ವರಮಾನವೂ ಬರುತ್ತದೆ, ಪ್ರವಾಸಿ ತಾಣವಾಗಿ ಜೈಲು ಪ್ರಸಿದ್ಧಿಯೂ ಆಗುತ್ತದೆ. ದಿನನಿತ್ಯ ಸಿನಿಮಾ ನಟನಟಿಯರು ಜೈಲು ಕಡೆ ಬರ್ತಿದ್ದಾರಂತೆ. ನಾವೂ ಅವರನ್ನು ಮಾತನಾಡಿಸಿ ಪರಿಚಯ ಮಾಡಿಕೊಂಡು, ಸೆಲ್ಫಿ ತಗೊಂಡು ಬರ್ತೀವಿ'.

'ನಾನು ಬರೊಲ್ಲ... ಅಂದಹಾಗೆ, ನಿಮ್ಮ ಮಗನ ಬರ್ತ್‌ಡೇ ಎಲ್ಲಿ ಆಚರಿಸ್ತೀರಿ?'

'ಹೋದ ವರ್ಷ ಅನಾಥಾಶ್ರಮದಲ್ಲಿ ಆಚರಿಸಿದ್ವಿ, ಅದರ ಹಿಂದಿನ ವರ್ಷ ರೆಸಾರ್ಟ್‌ನಲ್ಲಿ ಸೆಲೆಬ್ರೇಟ್ ಮಾಡಿದ್ವಿ, ಈ ವರ್ಷ ಜೈಲಿನಲ್ಲಿ ಆಚರಿಸೋಣ ಅಂತ ಮಗ ಆಸೆಪಡ್ತಿದ್ದಾನೆ... ನಿಮ್ಮ ಗಂಡನಿಗೆ ಜೈಲು ಅಧಿಕಾರಿಗಳು ಪರಿಚಯ ಇದ್ದಾರೆ, ಮಗನ ಬರ್ತ್‌ಡೇ ಆಚರಿಸಲು ಜೈಲಿನಲ್ಲಿ ಪರ್ಮಿಷನ್ ಕೊಡಿಸಿ ಅಂತ ಕೇಳಲು ಬಂದೆ'.

'ಜೈಲಿನಲ್ಲೇ ಯಾಕ್ರೀ?'

'ಜೈಲಿನಲ್ಲಿ ಬರ್ತ್‌ಡೇ ಆಚರಿಸಿದರೆ ಪೇಪರ್, ಟಿ.ವಿ.ಯವರು ಸುದ್ದಿ ಮಾಡ್ತಾರೆ, ನಾವೂ ಫೇಮಸ್ ಆಗ್ತೀವಿ. ನಿಮ್ಮ ಗಂಡನಿಗೆ ಹೇಳಿ ಪರ್ಮಿಷನ್ ಕೊಡಿಸಿ...' ಎಂದು ಹೇಳಿ ಪದ್ಮಾ ಹೊರಟಳು.

ದಿನದ ಟ್ವೀಟ್

ಅವಳಿ ನಗರಗಳು?

ಟಾಟಾದವರು ಜಮ್‌ಷೆಡ್‌ಪುರದ ಮಾದರಿಯಲ್ಲಿ ಹೊಸೂರಿನಲ್ಲಿ ಬೃಹತ್ ಟೌನ್‌ಶಿಪ್ ನಿರ್ಮಿಸುತ್ತಿದ್ದಾರೆ. ಅಲ್ಲಿಗೆ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಬರಲಿದೆ. ಹೊಸೂರು– ಬೆಂಗಳೂರು ನಡುವೆ ಮೆಟ್ರೊ ಸಂಪರ್ಕ ಕಲ್ಪಿಸುವ ಸಾಧ್ಯತೆ ಇದೆ. ಹೊಸೂರು ಅಭಿವೃದ್ಧಿಗೆ ತಮಿಳುನಾಡು ಸರ್ಕಾರ ಹೆಚ್ಚಿನ ಗಮನ ಕೇಂದ್ರೀಕರಿಸಿದೆ. ಬೆಂಗಳೂರು ಮತ್ತು ಹೊಸೂರು ಅವಳಿ ನಗರಗಳಾಗಿ ಗುರುತಿಸಿಕೊಳ್ಳುವ ಸಾಧ್ಯತೆ ಇದೆ.

ಡಿ.ಮುತ್ತುಕೃಷ್ಣನ್, ಹೂಡಿಕೆದಾರ

ಕಿಡಿನುಡಿ

ಕವಿತಾ ಅವರಿಗೆ ಸುಪ್ರೀಂ ಕೋರ್ಟ್ ಜಾಮೀನು ನೀಡಿದೆ. 20 ತಿಂಗಳ ವಿಚಾರಣೆ, 5 ತಿಂಗಳ ಜೈಲುವಾಸ, 493 ಸಾಕ್ಷಿಗಳು, 50 ಸಾವಿರ ಪುಟಗಳ ದಾಖಲೆ. ಇಷ್ಟೆಲ್ಲದರ ನಡುವೆಯೂ ತನಿಖಾ ಸಂಸ್ಥೆಗಳಿಗೆ ಏನನ್ನೂ ಕಂಡುಹಿಡಿಯಲಾಗಿಲ್ಲ. ಈ ರಾಜಕೀಯ ಪ್ರೇರಿತ ಪ್ರಕರಣದ ಅಸಲಿತನದ ಬಗ್ಗೆ ಇದೇ ಎಲ್ಲವನ್ನೂ ಹೇಳುತ್ತದೆ.

(ಬಿಆರ್‌ಎಸ್ ನಾಯಕಿ ಕೆ.ಕವಿತಾ ಅವರಿಗೆ ಜಾಮೀನು ದೊರೆತಿರುವುದಕ್ಕೆ ಪ್ರತಿಕ್ರಿಯೆ)

ನಯಿನಿ ಅನುರಾಗ್ ರೆಡ್ಡಿ, ಉದ್ಯಮಿ

25 ವರ್ಷಗಳ ಹಿಂದೆ

ಶನಿವಾರ, 28-8-1999

● **ಆಸ್ತಿ ವಿವರ ಸಲ್ಲಿಸದ ಸಚಿವರಿಬ್ಬರ ರಾಜೀನಾಮೆಗೆ ಹೈಕೋರ್ಟ್ ಆಜ್ಞೆ**

ಬೆಂಗಳೂರು, ಆಗಸ್ಟ್ 27– ಲೋಕಾಯುಕ್ತಕ್ಕೆ ಆಸ್ತಿ ವಿವರ ಸಲ್ಲಿಸದಿರುವ ಇಬ್ಬರು ರಾಜ್ಯ ಸಚಿವರು ರಾಜೀನಾಮೆ ಕೊಡಬೇಕೆಂದು ಮತ್ತು ಶಾಸಕರಾಗಿ ಸಾರ್ವಜನಿಕ ಹುದ್ದೆಗಳನ್ನು ಹೊಂದಿರುವ 11 ಮಂದಿ ಆ ಹುದ್ದೆಗಳನ್ನು ತೆರವು ಮಾಡಬೇಕೆಂದು ಹೈಕೋರ್ಟ್ ಇಂದು ಆದೇಶಿಸಿತು.

ಇಬ್ಬರು ರಾಜ್ಯ ಸಚಿವರು 3 ದಿನಗಳಲ್ಲಿ ರಾಜೀನಾಮೆ ನೀಡದಿದ್ದಲ್ಲಿ ಕ್ರಮ ತೆಗೆದುಕೊಳ್ಳುವ ಅಧಿಕಾರ ಹೊಂದಿರುವವರು ಅವರನ್ನು ಅಧಿಕಾರದಿಂದ ತೆಗೆದುಹಾಕಬೇಕು. ಉಳಿದಂತೆ ಅಧಿಕಾರ ಹೊಂದಿರುವ ಶಾಸಕರ ಸ್ಥಾನಗಳು ತೆರವಾಗಿವೆ ಎಂದು ತಿಳಿಯಬೇಕು. ಅವರ್‍ಯಾರಿಗೂ ಅಧಿಕಾರ ನಿರ್ವಹಿಸಲು ಅವಕಾಶ ಕೊಡಬಾರದು ಎಂದು ಸ್ಪಷ್ಟಗೊಳಿಸಿತು. ರಾಜ್ಯ ಸಚಿವರಾದ ಅಶ್ವತ್ಥ ನಾರಾಯಣ ರೆಡ್ಡಿ ಮತ್ತು ನಾಗಪ್ಪ ಸಾಲೋನಿ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡಬೇಕು ಎಂದು ಕೋರ್ಟ್ ಸ್ಪಷ್ಟಪಡಿಸಿದೆ.

● **ಸತ್ತವರ ಸಂಖ್ಯೆ 41; ಎಲ್ಲ ಶವ ಪತ್ತೆ**

ಹರಪನಹಳ್ಳಿ, ಆಗಸ್ಟ್ 27– ತಾಲ್ಲೂಕಿನ ಉಚ್ಚಂಗಿದುರ್ಗದಲ್ಲಿ ಗುರುವಾರ ಮಧ್ಯಾಹ್ನ ಅರಿಸಿನ ಬಾವಿಗೆ (ಹೊಂಡ) ಮಹದೇವ ಬಸ್ಸು ಬಿದ್ದು ಸಂಭವಿಸಿದ ದಾರುಣ ದುರಂತದಲ್ಲಿ ಜಲಸಮಾಧಿಯಾದವರ ಒಟ್ಟು ಸಂಖ್ಯೆ 41.

ನಾಲ್ಕು ಕ್ರೇನ್‌ಗಳ ನೆರವಿನೊಂದಿಗೆ ಬಸ್ಸನ್ನು ಬಾವಿಯಿಂದ ಹೊರತೆಗೆಯಲಾಯಿತು. ಈ ಭೀಕರ ಅಪಘಾತದಲ್ಲಿ ಬಸ್ಸಿನ ಚಾಲಕ ಚಂದ್ರಪ್ಪನೂ ಮೃತಪಟ್ಟಿದ್ದಾನೆ.

50 ವರ್ಷಗಳ ಹಿಂದೆ

ಬುಧವಾರ, 28-8-1974

● **ಬಸಪ್ಪ ದಾನಪ್ಪ ಜತ್ತಿ ಹೊಸ ಉಪರಾಷ್ಟ್ರಪತಿ**

ನವದೆಹಲಿ, ಆಗಸ್ಟ್ 27– ಕಾಂಗ್ರೆಸ್ ಅಭ್ಯರ್ಥಿಯಾದ ಬಸಪ್ಪ ದಾನಪ್ಪ ಜತ್ತಿ ಅವರು ಇಂದು ಭಾರತ ಗಣರಾಜ್ಯದ ಉಪ ರಾಷ್ಟ್ರಪತಿಯಾಗಿ ಆಯ್ಕೆಯಾದರು. ಉಪ ರಾಷ್ಟ್ರಪತಿ ಸ್ಥಾನಕ್ಕೆ ನಡೆದ ನೇರ ಸ್ಪರ್ಧೆಯಲ್ಲಿ ಜತ್ತಿಯವರು 521 ಮತಗಳನ್ನೂ, ಅವರ ಪ್ರತಿಸ್ಪರ್ಧಿಯಾದ ವಿರೋಧ ಪಕ್ಷಗಳ ಅಭ್ಯರ್ಥಿ ಎನ್.ಇ. ಹೋರೋ ಅವರು 141 ಮತಗಳನ್ನೂ ಪಡೆದರು.

ಲೋಕಸಭೆ ಮತ್ತು ರಾಜ್ಯಸಭೆಗಳ ಸದಸ್ಯರು ಮತದಾನದಲ್ಲಿ ಭಾಗವಹಿಸಿದ್ದು 10 ಮತಗಳು ಕುಲಗೆಟ್ಟಿದ್ದವು. 40 ಮಂದಿ ಸದಸ್ಯರು ಮತ ನೀಡಲೇ ಇಲ್ಲ ಎಂದು ಚುನಾವಣಾ ಅಧಿಕಾರಿ ಎಸ್.ಎಲ್. ಷೇಕ್‌ದಾರ್ ತಿಳಿಸಿದ್ದಾರೆ.

● **ಕಾಳಿ ವಿದ್ಯುತ್ ಯೋಜನೆ ನಿಲ್ಲದು: ಸಚಿವರ ಭರವಸೆ**

ಬೆಂಗಳೂರು, ಆಗಸ್ಟ್ 27– 'ಹಣದ ಕೊರತೆಯಿಂದಾಗಿ ಕಾಳಿ ಜಲ ವಿದ್ಯುತ್ ಯೋಜನೆಯ ಕಾರ್ಯ ನಿಂತಿಲ್ಲ; ನಿಲ್ಲುವುದೂ ಇಲ್ಲ. ಈ ಬಗ್ಗೆ ಯಾವ ಆತಂಕವೂ ಬೇಡ' ಎಂದು ಲೋಕೋಪಯೋಗಿ ಇಲಾಖಾ ಮಂತ್ರಿ ಎಚ್.ಎಂ. ಚನ್ನಬಸಪ್ಪ ಅವರು ಇಂದು ವಿಧಾನಸಭೆಗೆ ಸ್ಪಷ್ಟ ಭರವಸೆ ನೀಡಿದರು.

ಸಂಗತ

ಸಹಾನುಭೂತಿ, ಸಹಾಯ, ಸಂಯಮ

ಯಾರಿಗಾದರೂ ನೆರವು ನೀಡುವಾಗ ಸಹಾನುಭೂತಿ ಇರಬೇಕೆ ವಿನಾ ಕನಿಕರವಲ್ಲ ಎಂಬುದನ್ನು ನಾವು ಮನದಟ್ಟು ಮಾಡಿಕೊಳ್ಳಬೇಕು

● ಎಚ್.ಕೆ.ಶರತ್

ಕಷ್ಟದಲ್ಲಿ ಇರುವವರಿಗೆ ಸಾಧ್ಯವಿರುವಷ್ಟು ನೆರವಾಗುವುದು ಮಾನವೀಯ ಮೌಲ್ಯ ಎನ್ನುವ ಕುರಿತು ಸಮಾಜದಲ್ಲಿ ಸಹಮತವಿದೆ. ಅನ್ಯರ ನೋವಿಗೆ ಮಿಡಿಯುವವರ ವರ್ತನೆ ಹೇಗಿರಬೇಕು ಎಂಬ ಬಗ್ಗೆ ಭಿನ್ನ ಅಭಿಪ್ರಾಯಗಳಿವೆ. ಈ ಭಿನ್ನಾಭಿಪ್ರಾಯಗಳು ಕೆಲವೊಮ್ಮೆ ವಾಗ್ವಾದಕ್ಕೂ ಕಾರಣವಾಗುವುದಿದೆ.

ತಾವು ಮಾಡಿದ ಒಳ್ಳೆಯ ಕೆಲಸದ ಕುರಿತು ನಾಲ್ಕು ಮಂದಿಗೆ ತಿಳಿಸಿದರೆ ಏನು ತಪ್ಪು ಎನ್ನುವ ಧೋರಣೆ ಸಹಾಯಹಸ್ತ ಚಾಚುವ ಕೆಲವರದ್ದು. ಇತರರಿಗೆ ನೆರವಿನಹಸ್ತ ಚಾಚಿದ್ದನ್ನು ಜಗಜ್ಜಾಹೀರುಗೊಳಿಸುವಾಗ ಏನು ಮಾಡಬಾರದು ಎಂಬ ಕುರಿತು ನಮ್ಮಲ್ಲಿ ಸ್ಪಷ್ಟತೆ ಮೂಡಬೇಕಿದೆ. ಇಲ್ಲವಾದಲ್ಲಿ ನಮ್ಮಿಂದ ನೆರವು ಪಡೆದವರ ವ್ಯಕ್ತಿತ್ವದ ಘನತೆಯೊಂದಿಗೆ ಚೆಲ್ಲಾಟವಾಡಿದಂತೆ ಆಗುವ ಅಪಾಯವಿದೆ.

ಸಾಹಿತ್ಯಕ ವಲಯದಲ್ಲಿ ಗುರುತಿಸಿಕೊಂಡಿರುವ ಅಧ್ಯಾಪಕರೊಬ್ಬರು ತಮ್ಮಿಂದ ಆರ್ಥಿಕ ಹಾಗೂ ಬೌದ್ಧಿಕ ಸಂಪನ್ಮೂಲಗಳ ನೆರವು ಪಡೆದು, ಶೈಕ್ಷಣಿಕವಾಗಿ ಉತ್ತಮ ಸಾಧನೆ ಮಾಡುತ್ತಿರುವ ಇಬ್ಬರು ವಿದ್ಯಾರ್ಥಿಗಳ ಕುರಿತು, ಅವರ ಗುರುತು ಮತ್ತು ಪರಿಚಯದೊಂದಿಗೆ ಇತ್ತೀಚೆಗೆ ಸಾಮಾಜಿಕ ಜಾಲತಾಣದಲ್ಲಿ ಸವಿವರವಾಗಿ ಬರೆದುಕೊಂಡಿದ್ದರು. ಅದಕ್ಕೆ ಬಹಳಷ್ಟು ಮಂದಿ ಪ್ರಶಂಸೆ ವ್ಯಕ್ತಪಡಿಸಿದರೆ, ಕೆಲವರು ವಿದ್ಯಾರ್ಥಿಗಳಿಗೆ ನೆರವು ನೀಡಿದ ವಿಚಾರವನ್ನು ಅವರ ಫೋಟೊ ಸಮೇತ ಹಂಚಿಕೊಂಡಿರುವುದು ಸರಿಯಲ್ಲ ಎಂದು ನೇರವಾಗಿಯೇ ತಮ್ಮ ಅಸಮಾಧಾನ ಹೊರಹಾಕಿದರು.

ವಿದ್ಯಾರ್ಥಿಗಳಿಗೆ ಶಿಕ್ಷಕರು ವಿವಿಧ ಸಂದರ್ಭಗಳಲ್ಲಿ ನೆರವು ನೀಡುವುದು ಸಾಮಾನ್ಯ ಸಂಗತಿ. ಬಹುತೇಕ ಶಿಕ್ಷಕರು ಇದನ್ನು ತಮ್ಮ ಜವಾಬ್ದಾರಿ ಎಂದುಕೊಂಡೇ ಮಾಡುತ್ತಾರೆ ವಿನಾ ಪ್ರಚಾರಕ್ಕೆ ಬಳಸಿಕೊಳ್ಳುವುದಿಲ್ಲ ಎಂದು ತಿಳಿಸಿದರು. ಹೀಗೆ ಹೇಳಿದವರದ್ದು 'ಎಲ್ಲದರಲ್ಲೂ ತಪ್ಪು ಹುಡುಕುವ ಬುದ್ಧಿ' ಎಂದು ಭಾವಿಸಿದ ಅಧ್ಯಾಪಕರು, ಕೊನೆಗೆ ಫೋಟೊ ಡಿಲೀಟ್ ಮಾಡಿದರು.

ಬೇರೆಯವರಿಗೆ ಸಹಾಯ ಮಾಡಿದ್ದನ್ನು ಜಗಜ್ಜಾಹೀರುಗೊಳಿಸುವ ಪ್ರವೃತ್ತಿಗೆ ಮೆಚ್ಚುಗೆ ಮತ್ತು ಸಹಮತ ದೊರೆಯುವುದೇ ಹೆಚ್ಚು. ಇದು ಈ ಕುರಿತು ಒಟ್ಟಾರೆ ಸಮಾಜದ ಧೋರಣೆಗೆ ಹಿಡಿದ ಕನ್ನಡಿ. 'ಬಲಗೈಯಲ್ಲಿ ಕೊಟ್ಟದ್ದು ಎಡಗೈಗೆ ತಿಳಿಯಬಾರದು' ಎಂಬ ಹೇಳಿಕೆ ಜನಜನಿತವಾಗಿದ್ದರೂ, ಅದು ಪ್ರತಿಪಾದಿಸುವ ಮೌಲ್ಯ ಆಚರಣೆಗೆ ಬರುತ್ತಿರುವುದು ಅಪರೂಪ. ಬೇರೊಬ್ಬರ ನೋವಿಗೆ ಸ್ಪಂದಿಸಬೇಕೆನ್ನುವ ತುಡಿತ ಸ್ವಾರ್ಥ ರಹಿತವೂ ಆಗಬೇಕಿದ್ದರೆ, ಅವರ ನೋವನ್ನು ಸ್ವಹಿತ ಸಾಧನೆಗೆ ಬಳಸಿಕೊಳ್ಳಬಾರದು ಎನ್ನುವ ಸೂಕ್ಷ್ಮ ಮನೋಭಾವವೂ ಇರಬೇಕು.

ಸಹಾಯ ನೀಡುವವರು ಮೇಲರಿಮೆ ಪ್ರದರ್ಶಿಸಿದಂತೆಲ್ಲ ಸಹಾಯ ಪಡೆಯುವವರಲ್ಲಿನ ಕೀಳರಿಮೆ ಉದ್ದೀಪನಗೊಳ್ಳುವುದಲ್ಲವೇ? ವ್ಯಕ್ತಿಗತ ನೆಲೆಗಟ್ಟಿನಲ್ಲಿ ಮತ್ತೊಬ್ಬರಿಗೆ ನೆರವು ನೀಡುವುದನ್ನು ನಾವು ನಮ್ಮ ವಾಟ್ಸ್‌ಆ್ಯಪ್ ಸ್ಟೇಟಸ್‌ಗಳಲ್ಲಿಯೋ ಸಾಮಾಜಿಕ ಜಾಲತಾಣಗಳ ಪೋಸ್ಟ್‌ಗಳ ಮೂಲಕವೋ ಹೇಳಿಕೊಳ್ಳುವುದರಿಂದ ಆಗುವ ಪ್ರಯೋಜನವಾದರೂ ಏನೆಂದು ಆತ್ಮವಿಮರ್ಶೆ ಮಾಡಿಕೊಳ್ಳಬೇಕಲ್ಲವೇ? ಇಂತಹವರಿಗೆ ಈ ಕಾರಣಕ್ಕೆ ಸಹಾಯ ನೀಡಿದೆ ಎಂದು ಸಾರುವುದರ ಅಡ್ಡಪರಿಣಾಮಗಳತ್ತ ನಾವು ಸಂಯಮದಿಂದ ವಿವೇಚಿಸಬೇಕಿದೆ.

ಸಹಾಯ ಕೇಳುವುದು ಮತ್ತು ಸಹಾಯ ನೀಡುವುದು, ಎರಡರಲ್ಲಿ ಯಾವುದು ನಮ್ಮಲ್ಲಿ ಮೇಲರಿಮೆ ಉದ್ದೀಪಿಸಲಿದೆ ಎಂದು ವಿವೇಚಿಸಿದರೆ, ಮನುಷ್ಯ ಘನತೆಗೆ ಕುಂದುಂಟಾಗದ ರೀತಿಯಲ್ಲಿ ನೆರವಾಗುವುದು ಏಕೆ ಮುಖ್ಯ ಎಂಬುದರ ಅರಿವಾಗಲಿದೆ. ಅನ್ಯರಿಗೆ ನೆರವು ನೀಡುವಾಗ ಸಹಾನುಭೂತಿ ತೋರಬೇಕೆ ವಿನಾ ಕನಿಕರವನ್ನಲ್ಲ ಎಂಬುದನ್ನು ಮಕ್ಕಳಿಗೆ ಮನದಟ್ಟು ಮಾಡಿಕೊಡಬೇಕಾದ ಜವಾಬ್ದಾರಿಯುತ ಸ್ಥಾನದಲ್ಲಿ ಇರುವವರು ಮೊದಲಿಗೆ ಈ ಕುರಿತು ಸ್ಪಷ್ಟತೆ ಹೊಂದುವ ಅಗತ್ಯ ಇದೆ. ವೃದ್ಧಾಶ್ರಮ, ಅನಾಥಾಶ್ರಮ, ಬಾಲಮಂದಿರಗಳಲ್ಲಿ ಹುಟ್ಟಿದಹಬ್ಬ ಆಚರಿಸಿ, ತಾವೇನೋ ಮಹತ್ವದ ಕಾರ್ಯ ಮಾಡಿದೆವೆಂದು ಬೀಗುವುದು ನಮಗೆ ಸಮಸ್ಯಾತ್ಮಕವಾಗಿ ತೋರುವುದಿಲ್ಲ.

ಲಾಭದ ಬದಲಿಗೆ ಮನುಷ್ಯಕೇಂದ್ರಿತವಾಗಿ ಸಮಸ್ಯೆಯನ್ನು ವಿಶ್ಲೇಷಿಸಿ, ಪರಿಹರಿಸುವ ಪ್ರಕ್ರಿಯೆ ಯಾವೆಲ್ಲ ಅಂಶಗಳನ್ನು ಒಳಗೊಂಡಿರಲಿದೆ ಎಂಬುದನ್ನು ತಿಳಿಸಿಕೊಡುವ 'ಡಿಸೈನ್ ಥಿಂಕಿಂಗ್' ಎಂಬ ಪರಿಕಲ್ಪನೆಯನ್ನು ತಾಂತ್ರಿಕ ಶಿಕ್ಷಣ ಪಠ್ಯಕ್ರಮದಲ್ಲಿ ಸೇರಿಸಲಾಗಿದೆ. ಐದು ಹಂತಗಳನ್ನು ಒಳಗೊಂಡಿರುವ ಈ ಪರಿಕಲ್ಪನೆಯಲ್ಲಿ ಸರಿಯಾದ ರೀತಿಯಲ್ಲಿ ಯೋಚಿಸುವುದು ಎಂದರೆ ಏನು ಎಂಬುದನ್ನು ತಿಳಿಸಿಕೊಡಲಾಗುತ್ತದೆ. ಈ ಪರಿಕಲ್ಪನೆಯ ಮೊದಲ ಹಂತ, ಸಮಸ್ಯೆ ಎದುರಿಸುತ್ತಿರುವವರ ಕುರಿತು ಸಹಾನುಭೂತಿ ಹೊಂದುವ ಮೂಲಕ ಸಮಸ್ಯೆಯನ್ನು ಸರಿಯಾದ ರೀತಿಯಲ್ಲಿ ಗುರುತಿಸುವುದಾಗಿದೆ. ಬೇರೊಬ್ಬರು ಎದುರಿಸುತ್ತಿರುವ ಸಮಸ್ಯೆಯನ್ನು ಪರಿಹರಿಸಲು ಹೊರಡುವಾಗ ಮೇಲರಿಮೆಗೆ ಆಸ್ಪದ ನೀಡದೆ, ಸಮಸ್ಯೆ ಎದುರಿಸುತ್ತಿರುವ ವ್ಯಕ್ತಿಯ ಘನತೆಗೆ ಕುಂದುಂಟಾಗದ ರೀತಿಯಲ್ಲಿ ಅವರೊಂದಿಗೆ ಸಂವಹನ ನಡೆಸುವುದು ಹೇಗೆ ಎಂಬುದನ್ನು ಚರ್ಚಿಸಲಾಗುತ್ತದೆ. ಸಹಾನುಭೂತಿ ಮತ್ತು ಕನಿಕರ ಎರಡಕ್ಕೂ ಇರುವ ವ್ಯತ್ಯಾಸವನ್ನು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿಕೊಡುವ ಪ್ರಯತ್ನ ಮಾಡಲಾಗುತ್ತದೆ.

ಇತರರಿಗೆ ನೆರವು ನೀಡುವ ಪ್ರಕ್ರಿಯೆ ನಿಜವಾದ ಅರ್ಥದಲ್ಲಿ ಮಾನವೀಯ ಮೌಲ್ಯದ ದ್ಯೋತಕವಾಗುವುದು ಯಾವಾಗ ಎಂಬ ಕುರಿತು ಅರಿವು ಮೂಡಿಸುವ ಪ್ರಯತ್ನಗಳು ಹೆಚ್ಚೆಚ್ಚು ನಡೆಯಬೇಕಿದೆ. ಬೇರೆಯವರ ನೋವಿಗೆ ಮಿಡಿಯುವ ಗುಣದೊಂದಿಗೆ ಸಹಾನುಭೂತಿಯೂ ಸಹಬಾಳ್ವೆ ನಡೆಸುವಂತಾದರೆ, ಕೊಡುವ ಮತ್ತು ಪಡೆಯುವ ಮನಸ್ಸುಗಳೆರಡೂ ಏಕಕಾಲಕ್ಕೆ ನಿಟ್ಟುಸಿರು ಬಿಡಬಹುದು.

ವಾಚಕರ ವಾಣಿ

ಕಾರಾಗೃಹ ಸುಧಾರಣೆ ಎಂದರೆ...!

ದರ್ಶನಾತಿಥ್ಯ ಸಂಬಂಧ ಕೇಂದ್ರ ಕಾರಾಗೃಹಕ್ಕೆ ಭೇಟಿ ನೀಡಿದ್ದ ಉನ್ನತ ಅಧಿಕಾರಿಗಳು 'ಕಾರಾಗೃಹಗಳು ಹಾಗೂ ಸುಧಾರಣೆ ಇಲಾಖೆ'ಗೆ ಸೇರಿದವರು. ಸುಧಾರಣೆ ಎಂದರೆ, ಕಾರಾಗೃಹಕ್ಕೆ ಬಲಿಷ್ಠರು ಆರೋಪಿಗಳಾಗಿ ಬಂದಾಗ ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ, ಯಾವುದೇ ರೀತಿ ರಿವಾಜುಗಳನ್ನು ಲೆಕ್ಕಿಸದೆ, ಅವರಿಗೆ ಮಾತ್ರ ರಾಜೋಪಚಾರ ಮಾಡುವುದು ಎಂದು ಅರ್ಥ ಮಾಡಿಕೊಳ್ಳಬೇಕೆಂದು ಕಾಣುತ್ತದೆ.

ಎಂ.ಎಸ್.ರಘುನಾಥ್, ಬೆಂಗಳೂರು

ಎಲೆಕ್ಟ್ರಾನಿಕ್ ಸಿಟಿ ರೂವಾರಿ ಕೃಷ್ಣ

ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ಡಿ.ದೇವರಾಜ ಅರಸು ಅವರ ಜನ್ಮದಿನಾಚರಣೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಗೆ ದೇವರಾಜ ಅರಸು ಸಿಟಿ ಎಂದು ನಾಮಕರಣ ಮಾಡಲು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡುವುದಾಗಿ ಹೇಳಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ಬೆಂಗಳೂರಿಗೆ ಎಲೆಕ್ಟ್ರಾನಿಕ್ ಸಿಟಿ ಬರಲು ಕಾರಣಕರ್ತರಾದವರು ಎಸ್.ಎಂ.ಕೃಷ್ಣ. ಬೆಂಗಳೂರಿಗೆ ಐ.ಟಿ- ಬಿ.ಟಿ. ತಂದು, ಇಂದು ಲಕ್ಷಾಂತರ ಸಾಫ್ಟ್‌ವೇರ್ ಎಂಜಿನಿಯರ್‌ಗಳು ತಮ್ಮ ಬದುಕನ್ನು ಕಟ್ಟಿಕೊಳ್ಳಲು ಅವಕಾಶ ಕಲ್ಪಿಸಿದವರು. ಕೃಷ್ಣ ಅವರು ಹಾಗೆ ಮಾಡದೇ ಹೋಗಿದ್ದರೆ ಬೆಂಗಳೂರು ಇನ್ನೂ 25 ವರ್ಷಗಳಷ್ಟು ಹಿಂದೆಯೇ ಉಳಿದಿರುತ್ತಿತ್ತು. ಹೀಗಾಗಿ, ಅರಸು ಅವರ ಹೆಸರನ್ನು ಬೇರೆ ಯಾವುದಾದರೂ ಪ್ರದೇಶಕ್ಕೆ ನಾಮಕರಣ ಮಾಡಿ, ಎಲೆಕ್ಟ್ರಾನಿಕ್ ಸಿಟಿಗೆ ಎಸ್.ಎಂ.ಕೃಷ್ಣ ಅವರ ಹೆಸರನ್ನೇ ಇಡಲು ಸರ್ಕಾರ ಮುಂದಾಗಬೇಕು.

ಬೂಕನಕೆರೆ ವಿಜೇಂದ್ರ, ಮೈಸೂರು

ಅನ್ನ, ಇಡ್ಲಿ ಸೇರುತ್ತಿದೆ ಪ್ಲಾಸ್ಟಿಕ್

ಸಕ್ಕರೆ, ಉಪ್ಪು ಸೇರಿದಂತೆ ಆಹಾರ ಪದಾರ್ಥಗಳಲ್ಲಿ ಅಪಾಯಕಾರಿ ಮೈಕ್ರೊಪ್ಲಾಸ್ಟಿಕ್ ಕಣಗಳು ಕಂಡುಬಂದಿದ್ದು (ಆಳ– ಅಗಲ, ಆ. 26), ಈ ಮೂಲಕ ಅವು ಮಾನವನ ದೇಹ ಸೇರುತ್ತಿರುವುದು ಬಹು ಆತಂಕಕಾರಿ ವಿಚಾರ. ಬದಲಾದ ಜೀವನಶೈಲಿ ಕೂಡ ಇಂತಹ ತ್ಯಾಜ್ಯವು ದೇಹವನ್ನು ಸೇರಲು ಕಾರಣವಾಗಿದೆ. ಕೆಲವು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡರೆ ನೇರವಾಗಿ ಹಾಗೂ ಪರೋಕ್ಷವಾಗಿ ಪ್ಲಾಸ್ಟಿಕ್ ಮನುಷ್ಯನ ದೇಹ ಸೇರುವುದನ್ನು ತಪ್ಪಿಸಬಹುದು.

ಕೆಲವರು ಇತ್ತೀಚೆಗೆ ಇಡ್ಲಿ ಮಾಡಲು ಪ್ಲಾಸ್ಟಿಕ್ ಹಾಳೆ ಉಪಯೋಗಿಸುತ್ತಿದ್ದಾರೆ. ಬಿಸಿಯಾದ ಪ್ಲಾಸ್ಟಿಕ್ ತನ್ನ ಕಣಗಳನ್ನು ಇಡ್ಲಿಗೆ ಸೇರಿಸುತ್ತಿದೆ. ಕೂಡಲೇ ಇದನ್ನು ನಿಲ್ಲಿಸಬೇಕು. ರಸ್ತೆಬದಿಯ ಹಾಗೂ ಚಿಕ್ಕ ಚಿಕ್ಕ ಗಾಡಿಗಳಲ್ಲಿ ತಟ್ಟೆಯ ಮೇಲೆ ಪ್ಲಾಸ್ಟಿಕ್ ಹಾಳೆ ಹಾಕಿ ಅದರ ಮೇಲೆ ತುಂಬಾ ಬಿಸಿಯಾದ ಅನ್ನ, ಸಾಂಬಾರನ್ನು ಕೊಡುತ್ತಾರೆ. ಇಲ್ಲಿ ಕೂಡ ಪ್ಲಾಸ್ಟಿಕ್ ಕಣಗಳು ಅನ್ನದೊಂದಿಗೆ ದೇಹವನ್ನು ಸೇರುತ್ತಿವೆ. ವ್ಯಾಪಾರಿಗಳಿಗೆ ತೊಂದರೆ ಕೊಡದೆ, ಪ್ಲಾಸ್ಟಿಕ್ ಬಳಕೆಯಿಂದಾಗುವ ಅನಾಹುತಗಳ ಬಗ್ಗೆ ಅವರಿಗೆ ಸ್ಪಷ್ಟವಾಗಿ ಮನದಟ್ಟು ಮಾಡಿಕೊಟ್ಟು, ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಬೇಕಾಗಿದೆ.

ಪಿ.ಎನ್.ಎಂ.ಗುಪ್ತ, ಬೆಂಗಳೂರು

ಅಪಾಯಕಾರಿ ಕೈದಿಗಳನ್ನು ಅಂಡಮಾನ್‌ಗೆ ಕಳಿಸಿ

ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ಅವಲೋಕಿಸಿದರೆ, ಜೈಲು ಅಧಿಕಾರಿಗಳ ಬದಲಿಗೆ ರೌಡಿಗಳು ಆ ಜೈಲನ್ನು ಆಳುತ್ತಿದ್ದಾರೆ ಅನ್ನಿಸುತ್ತದೆ. ಜೈಲಿನಲ್ಲಿ ಬಾಡೂಟ, ಎಣ್ಣೆಪಾರ್ಟಿ, ಮಸಾಜ್, ಸಿಗರೇಟ್ ಪೂರೈಕೆ ನಿರಾತಂಕವಾಗಿ ನಡೆಯುತ್ತಿದೆ ಎಂದಾದರೆ, ಅದರಲ್ಲಿ ಜೈಲು ಅಧಿಕಾರಿಗಳು ಶಾಮೀಲಾಗಿದ್ದಾರೆ ಎಂದೇ ಅರ್ಥ. ವಶೀಲಿಯಿಂದಲೊ, ಹಣ ನೀಡಿಯೊ ಆದಾಯ ಬರುವ ಆಯಕಟ್ಟಿನ ಸ್ಥಳಗಳಲ್ಲಿ ಹೋಗಿ ಕುಳಿತುಕೊಳ್ಳುವ ನಮ್ಮ ಅಧಿಕಾರಿಗಳು, ವಸೂಲಿ ದಂಧೆಯನ್ನು ಬಿಟ್ಟು ಇನ್ನೇನು ಮಾಡಿಯಾರು? ಪೊಲೀಸ್ ಅಥವಾ ಜೈಲು ಅಧಿಕಾರಿಗಳ ವರ್ಗಾವಣೆಗೆ ಲಕ್ಷಗಟ್ಟಲೆ ಹಣ ತೆಗೆದುಕೊಳ್ಳುವ ನಮ್ಮ ಜನಪ್ರತಿನಿಧಿಗಳಿಗೆ ಇದೆಲ್ಲ ಗೊತ್ತಿಲ್ಲ ಎಂದಲ್ಲ. ವಿಷಯ ಹೊರಬರುವವರೆಗೆ ಸರ್ಕಾರ ಮೌನವಾಗಿರುತ್ತದೆ. ವಿಷಯ ಹೊರಬಿದ್ದ ಕೂಡಲೇ ಕೆಲವು ಅಧಿಕಾರಿಗಳನ್ನು ಅಮಾನತು ಮಾಡುವ ಪ್ರಹಸನ ನಡೆಯುತ್ತದೆ. ಇದೆಲ್ಲ ಜನರ ಮನಸ್ಸಿನಿಂದ ವಿಷಯ ಮರೆಯಾಗುವವರೆಗೆ ಮಾತ್ರ. ಮತ್ತೆ ಯಥಾಸ್ಥಿತಿ ಮುಂದುವರಿಯುತ್ತದೆ.

ಬ್ರಿಟಿಷರು ತಮಗೆ ತುಂಬ ಅಪಾಯಕಾರಿ ಎನಿಸಿದ ಕೈದಿಗಳನ್ನು ಅಂಡಮಾನ್‌ನ ಸೆಲ್ಯುಲಾರ್ ಜೈಲಿಗೆ ಕಳುಹಿಸುತ್ತಿದ್ದರು. ಆ ಜೈಲಿನಲ್ಲಿ ಕೈದಿಗಳನ್ನು ಉಗ್ರವಾಗಿ ಶಿಕ್ಷಿಸಲಾಗುತ್ತಿತ್ತು. ಸುತ್ತಲೂ ಸಮುದ್ರ ಇದ್ದುದರಿಂದ ಅವರು ಅಲ್ಲಿಂದ ತಪ್ಪಿಸಿಕೊಂಡು ಹೋಗಲು ಸಾಧ್ಯವಿರಲಿಲ್ಲ. ಈಗ ನಮ್ಮ ಜೈಲುಗಳಲ್ಲಿರುವ ಅಪಾಯಕಾರಿ ಕೈದಿಗಳನ್ನು ಅಂತಹ ಜೈಲುಗಳಿಗೆ ಸಾಗಿಸಬಹುದಲ್ಲವೇ? ಅಪರಿಚಿತ ಸ್ಥಳದಲ್ಲಾದರೂ ಅವರ ಅಟ್ಟಹಾಸ ಕಡಿಮೆಯಾಗಬಹುದೇನೊ. ಅವರ ವಿಚಾರಣೆಯನ್ನು ಸಹ ಅಲ್ಲಿನ ಕೋರ್ಟ್‌ಗೇ ವರ್ಗಾಯಿಸಿದರೆ, ಶಿಕ್ಷೆಯಾದ ನಂತರ ಪುನಃ ಅವರನ್ನು ಇಲ್ಲಿಗೆ ಕರೆತರುವ ಪ್ರಮೇಯವೂ ಇರುವುದಿಲ್ಲ. ಕಾನೂನಿನ ತೊಡಕುಗಳು ಏನಾದರೂ ಇದ್ದರೆ ಅವಕ್ಕೆ ತಿದ್ದುಪಡಿ ಮಾಡಿ ಬಗೆಹರಿಸಬೇಕು.

ಮುರಲೀಧರ ಕುಲಕರ್ಣಿ, ಬೀದರ್

ಜಾಣ ಅರ್ಚಕರ ಮುಂದೆ ಬೆಪ್ಪರಾಗುವ ಭಕ್ತರು

ತಮಿಳುನಾಡಿನ ಮದುರೆಯ ಶ್ರೀ ಮೀನಾಕ್ಷಿ ಸುಂದರೇಶ್ವರ ದೇವಸ್ಥಾನದ ಅಧಿಕಾರಿಗಳು, ನಟಿ ನಮಿತಾ ಅವರನ್ನು ತಾವು ಹಿಂದೂ ಎನ್ನುವುದಕ್ಕೆ ದಾಖಲೆ ಕೊಡಿ ಎಂದು ಕೇಳಿರುವುದಾಗಿ ವರದಿಯಾಗಿದೆ (ಪ್ರ.ವಾ., ಆ. 27). ಇದೊಂದು ಎಲ್ಲರಿಗೂ ಅನ್ವಯ ಆಗುವ ನೈಜ ಪ್ರಶ್ನೆ. ನಾವು 'ಹಿಂದೂ' ಎಂದು ಕರೆದುಕೊಳ್ಳಲು ಏನೇನು ಮಾನದಂಡಗಳಿರಬೇಕು? ಬಹುಶಃ ನಮಿತಾ ಅವರಿಗೆ ಎದುರಾಗಿರುವ ಈ ಪ್ರಶ್ನೆ ಒಂದು ದಿನ ನಮಗೂ ಎದುರಾಗಬಹುದು.

ಭಾರತದಲ್ಲಿ ಇಂತಹ ಪ್ರಶ್ನೆ ಮಾಡುವ, ಮಡಿ ಮೈಲಿಗೆಯನ್ನು ಜೀವಂತವಾಗಿ ಇಟ್ಟುಕೊಂಡಿರುವ ದೇವಸ್ಥಾನಗಳು ಬಹಳಷ್ಟಿವೆ. ಭಕ್ತರು ಯಾವ ದಾಖಲೆಗಳೊಂದಿಗೆ ಒಳಗೆ ಬರಬೇಕು ಎಂಬುದರ ಬಗ್ಗೆ ದೇವಸ್ಥಾನದ ಮುಂದೆ ಕಡ್ಡಾಯವಾಗಿ ಬೋರ್ಡ್ ಹಾಕಬೇಕು. ಆಗ ಭಕ್ತರು ಇಂತಹ ಮುಜುಗರದಿಂದ ಪಾರಾಗಬಹುದು. ಧಾರ್ಮಿಕ ಸ್ವಾತಂತ್ರ್ಯ ಸಿಕ್ಕದ ಇಂತಹ ವಾತಾವರಣದಲ್ಲಿ ನಾವಿದ್ದೇವೆ. ಜಾಣ ಅರ್ಚಕರ ಈ ನಡೆ ಮುಗ್ಧ ಭಕ್ತರಿಗೆ ತಿಳಿಯುವುದು ಯಾವಾಗ?

ತಾ.ಸಿ.ತಿಮ್ಮಯ್ಯ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

2025ರ ಏಪ್ರಿಲ್ 1ರಿಂದ ಏಕೀಕೃತ ಪಿಂಚಣಿ ಯೋಜನೆ ಜಾರಿಗೆ ಕೇಂದ್ರ ನಿರ್ಧಾರ

ಪಿಂಚಣಿ ಯೋಜನೆ: ಬದಲಾಗಿದ್ದೇಕೆ?

ಪಿಂಚಣಿ ಎನ್ನುವುದು ಸರ್ಕಾರಿ ನೌಕರಿಯ ಪ್ರಮುಖ ಆಕರ್ಷಣೆಯಾಗಿದ್ದ ಕಾಲವೊಂದಿತ್ತು. 2004ರಲ್ಲಿ ಹೊಸ ಪಿಂಚಣಿ ಯೋಜನೆ ಜಾರಿ ಮೂಲಕ ದಶಕಗಳಿಂದ ಅಸ್ತಿತ್ವದಲ್ಲಿದ್ದ ಪಿಂಚಣಿ ವ್ಯವಸ್ಥೆಯಲ್ಲಿ ಬದಲಾವಣೆ ತರಲಾಯಿತು. ಅದರಲ್ಲಿ ಹಲವು ಗೊಂದಲಗಳು ಇದ್ದು, ನಿಶ್ಚಿತ ಆದಾಯದ ಬಗ್ಗೆ ಅನುಮಾನಗಳಿವೆ ಎಂದು ನೌಕರರು ವಿರೋಧ ವ್ಯಕ್ತಪಡಿಸಿದರು. ಅದು ರಾಜಕೀಯ ಪರ–ವಿರೋಧದ ವಿಚಾರವೂ ಆಗಿ, ಚುನಾವಣಾ ವಿಷಯವಾಯಿತು. ಕೇಂದ್ರ ಸರ್ಕಾರ ಈಗ ಮತ್ತೆ ಪಿಂಚಣಿ ಯೋಜನೆಗೆ ಬದಲಾವಣೆ ತಂದಿದೆ. ಸರ್ಕಾರದ ಮೇಲೆ ಹೊರೆ ಹೆಚ್ಚಾದರೂ ನೌಕರರ ಅನುಕೂಲಕ್ಕಾಗಿ ಏಕೀಕೃತ ಪಿಂಚಣಿ ಯೋಜನೆ ಜಾರಿಗೊಳಿಸುವುದಾಗಿ ಕೇಂದ್ರ ಸರ್ಕಾರ ಹೇಳಿದೆ. ಆದರೆ, ಅದರ ಬಗ್ಗೆಯೂ ವಿರೋಧದ ಧ್ವನಿಗಳು ಕೇಳಿಬಂದಿವೆ



1.ಜಮ್ಮು ಮತ್ತು ಕಾಶ್ಮೀರ (ಈಗ ಕೇಂದ್ರಾಡಳಿತ ಪ್ರದೇಶ)
2. ಹಿಮಾಚಲ ಪ್ರದೇಶ
3. ಪಂಜಾಬ್
4. ಉತ್ತರಾಖಂಡ
5. ಹರಿಯಾಣ
6. ದೆಹಲಿ
7. ರಾಜಸ್ಥಾನ
8. ಉತ್ತರಪ್ರದೇಶ
9. ಬಿಹಾರ
10. ಸಿಕ್ಕಿಂ
11. ಅರುಣಾಚಲ ಪ್ರದೇಶ
12. ಅಸ್ಸಾಂ
13. ನಾಗಾಲ್ಯಾಂಡ್
14. ಮಣಿಪುರ
15. ಮಿಜೋರಾಂ
16. ತ್ರಿಪುರಾ
17. ಮೇಘಾಲಯ
18. ಪಶ್ಚಿಮ ಬಂಗಾಳ
19. ಜಾರ್ಖಂಡ್
20. ಛತ್ತೀಸಗಢ
21. ಮಧ್ಯಪ್ರದೇಶ
22. ಗುಜರಾತ್
23. ಮಹಾರಾಷ್ಟ್ರ
24. ಒಡಿಶಾ
25. ಆಂಧ್ರಪ್ರದೇಶ
26. ಕರ್ನಾಟಕ
27 ಗೋವಾ
28. ತೆಲಂಗಾಣ
29. ತಮಿಳುನಾಡು
30. ಕೇರಳ

ಪ್ರಜಾವಾಣಿ ವಾರ್ತೆ

2004ಕ್ಕಿಂತ ಮೊದಲು ಕೇಂದ್ರ ಹಾಗೂ ರಾಜ್ಯ ಸರ್ಕಾರಿ ನೌಕರರಿಗೆ ಹಳೆಯ ಪಿಂಚಣಿ ಯೋಜನೆ (ಒಪಿಎಸ್) ಅಡಿ ಪಿಂಚಣಿ ನೀಡಲಾಗುತ್ತಿತ್ತು. ನೌಕರರ ಕೊನೆಯ ತಿಂಗಳ ಸಂಬಳದ ಮೂಲವೇತನದಲ್ಲಿ ಶೇ 50ರಷ್ಟು ಭಾಗ ಅವರಿಗೆ ಪಿಂಚಣಿಯಾಗಿ ಸಿಗುತ್ತಿತ್ತು. ಅದರ ಮತ್ತೊಂದು ಮುಖ್ಯ ಅಂಶ ಎಂದರೆ, ನೌಕರರ ಸಂಬಳದಿಂದ ಪಿಂಚಣಿಗಾಗಿ ಹಣ ಕಡಿತ ಮಾಡುತ್ತಿರಲಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ, ಕಾಲದಿಂದ ಕಾಲಕ್ಕೆ ಹಣದುಬ್ಬರದ ಏರಿಳಿತಕ್ಕೆ ತಕ್ಕಂತೆ ತುಟ್ಟಿಭತ್ಯೆ (ಡಿಎ) ಪರಿಷ್ಕರಣೆ ಮಾಡಿ, ಪಿಂಚಣಿ ಹೆಚ್ಚಿಸಲಾಗುತ್ತಿತ್ತು. ಆದರೆ, ಹಳೆಯ ಪಿಂಚಣಿ ಯೋಜನೆಯಿಂದ ಸರ್ಕಾರಕ್ಕೆ ಆರ್ಥಿಕ ಹೊರೆ ಹೆಚ್ಚಾಗುತ್ತಿದೆಯೆಂದು, ಸಾಲದ ಸುಳಿಯಲ್ಲಿ ಸಿಲುಕಿರುವ ಸರ್ಕಾರಕ್ಕೆ ಪಿಂಚಣಿ ಭರಿಸುವುದು ಭವಿಷ್ಯದಲ್ಲಿ ಇನ್ನೂ ಕಷ್ಟವಾಗಲಿದೆ ಎನ್ನುವ ಅಭಿಪ್ರಾಯ ಸರ್ಕಾರದ ಮಟ್ಟದಲ್ಲಿ ವ್ಯಕ್ತವಾಗತೊಡಗಿತ್ತು. ಹೀಗಾಗಿ ಅದನ್ನು ಬದಲಾಯಿಸುವ ಪ್ರಯತ್ನಗಳು ಆರಂಭವಾದವು.

2004ರ ಜನವರಿ 1ರಿಂದ ಹೊಸ ಪಿಂಚಣಿ ಯೋಜನೆ (ಎನ್‌ಪಿಎಸ್) ಜಾರಿಗೊಳಿಸಲಾಯಿತು. ಅದರ ಅಡಿಯಲ್ಲಿ ಪಿಂಚಣಿಗಾಗಿ ನೌಕರರ ಮೂಲವೇತನದಲ್ಲಿ ಶೇ 10ರಷ್ಟು ಕಡಿತ ಮಾಡಲು ಆರಂಭಿಸಲಾಯಿತು. ಜತೆಗೆ ಕೇಂದ್ರ ಸರ್ಕಾರವು ಶೇ 14ರಷ್ಟು ಪಾಲು ನೀಡುತ್ತಿತ್ತು. ಪಿಂಚಣಿಯ ಮೊತ್ತವನ್ನು ಸರ್ಕಾರಿ ಸ್ವಾಮ್ಯದ ಉದ್ದಿಮೆಗಳಲ್ಲಿ ತೊಡಗಿಸುವುದು ಮತ್ತು ನಿವೃತ್ತಿಯ ಸಮಯದಲ್ಲಿ ಮಾರುಕಟ್ಟೆಯಲ್ಲಿ ಹೂಡಿದ ಮೊತ್ತದ ಏರಿಳಿತ ಪರಿಗಣಿಸಿ ಅವರಿಗೆ ಪಿಂಚಣಿ ಮೊತ್ತ ನಿರ್ಧರಿಸಲಾಗುವುದು ಎಂದು ಕೇಂದ್ರವು ಹೇಳಿತ್ತು.

ಒಪಿಎಸ್ ಬಿಟ್ಟು ಎನ್‌ಪಿಎಸ್ ಜಾರಿಗೊಳಿಸಿದಾಗಿನಿಂದಲೂ ಅದಕ್ಕೆ ಸರ್ಕಾರಿ ನೌಕರರ ವಲಯದಲ್ಲಿ ವಿರೋಧ ವ್ಯಕ್ತವಾಗುತ್ತಲೇ ಇತ್ತು. ನೌಕರರ ಸಂಬಳದಲ್ಲಿ ಪಿಂಚಣಿಗಾಗಿ ಕಡಿತ ಮಾಡುವುದು ಹಾಗೂ ಅದನ್ನು ವಿವಿಧ ಕಂಪನಿಗಳಲ್ಲಿ ಹೂಡಿಕೆ ಮಾಡುವುದನ್ನು ಸರ್ಕಾರಿ ನೌಕರರು ವಿರೋಧಿಸಿದ್ದರು. ನಿವೃತ್ತಿ ನಂತರ ಎಷ್ಟು ಪಿಂಚಣಿ ಬರುತ್ತದೆ ಎನ್ನುವುದೇ ಅನಿಶ್ಚಿತವಾಗಿ ಮಾರ್ಪಟ್ಟಿತ್ತು. ಹೂಡಿಕೆಯ ಸ್ವರೂಪದ ಬಗ್ಗೆ ಹಲವು ಗೊಂದಲಗಳಿದ್ದವು. ಸರ್ಕಾರಿ ನೌಕರಿಯ ಅವಿಭಾಜ್ಯ ಅಂಗವಾಗಿದ್ದ ಮತ್ತು ಪ್ರಮುಖ ಆಕರ್ಷಣೆಯಾಗಿದ್ದ ಪಿಂಚಣಿ ಯೋಜನೆಯ ಬದಲಾದ ಸ್ವರೂಪದ ಬಗ್ಗೆ ತೀವ್ರ ಆಕ್ಷೇಪಗಳು ವ್ಯಕ್ತವಾದವು. ಬಿಜೆಪಿಯೇತರ ಸರ್ಕಾರಗಳು ಆಡಳಿತ ನಡೆಸುತ್ತಿದ್ದ ಕೆಲವು ರಾಜ್ಯಗಳು ಒಪಿಎಸ್ ಜಾರಿಗೆ ಮುಂದಾದವು. ತುಟ್ಟಿಭತ್ಯೆ (ಡಿಎ) ಆಧರಿಸಿ ಪಿಂಚಣಿ ನಿಗದಿಪಡಿಸಲು ಕ್ರಮ ಕೈಗೊಂಡವು.

ಕೇಂದ್ರ ಸರ್ಕಾರದ ಮೇಲೂ ಒತ್ತಡ ಹೆಚ್ಚಾಯಿತು. ಎನ್‌ಪಿಎಸ್ ಅನ್ನು ಉತ್ತಮಪಡಿಸುವುದು ಹೇಗೆ ಎನ್ನುವ ಬಗ್ಗೆ ಅಧ್ಯಯನ ಮಾಡಿ ವರದಿ ನೀಡಲು ಕೇಂದ್ರವು ಏಪ್ರಿಲ್ 2023ರಲ್ಲಿ ಒಂದು ಸಮಿತಿ ನೇಮಿಸಿತ್ತು. ಅದು ನೀಡಿದ ವರದಿಯ ಆಧಾರದ ಮೇಲೆ ಈಗ ಕೇಂದ್ರ ಸರ್ಕಾರ ಏಕೀಕೃತ ಪಿಂಚಣಿ ಯೋಜನೆ (ಯುಪಿಎಸ್) ಘೋಷಿಸಿದೆ.

ಕೇಂದ್ರ ಸರ್ಕಾರದ 23 ಲಕ್ಷ ನೌಕರರಿಗೆ ಯುಪಿಎಸ್‌ನ ನೆರವು ಸಿಗಲಿದೆ ಎಂದು ಕೇಂದ್ರ ಹೇಳಿದೆ. ಇದೇ ಪದ್ಧತಿಯನ್ನು ರಾಜ್ಯ ಸರ್ಕಾರಗಳೂ ಅಳವಡಿಸಿಕೊಂಡರೆ, ರಾಜ್ಯಗಳ 90 ಲಕ್ಷ ನೌಕರರಿಗೂ ಅದರ ಫಲ ಸಿಗಲಿದೆ ಎಂದು ಕೇಂದ್ರವು ಹೇಳಿದೆ. ಇದು ದೀರ್ಘ ಬಾಳಿಕೆಯ ಯೋಜನೆಯಾಗಿದ್ದು, ಕೇಂದ್ರ ಸರ್ಕಾರದ ಮೇಲೆ ಹೆಚ್ಚು ಒತ್ತಡ ಹಾಕುವುದಿಲ್ಲ ಎಂದು ಕೆಲವರು ಪ್ರತಿಪಾದಿಸುತ್ತಿದ್ದಾರೆ. ಭಾರತದ ಪಿಂಚಣಿ ವ್ಯವಸ್ಥೆಯಲ್ಲಿ ಯುಪಿಎಸ್ ಒಂದು ಉತ್ತಮ ಸುಧಾರಣಾ ಕ್ರಮ ಎಂದೂ ಅವರು ಹೇಳುತ್ತಿದ್ದಾರೆ. ಆದರೆ, ಯುಪಿಎಸ್ ಕೂಡ ಮಾರುಕಟ್ಟೆ ಆಧಾರಿತವಾಗಿದ್ದು, ಏರಿಳಿತದ ಅಪಾಯ ಇದ್ದೇ ಇದೆ; ಒಪಿಎಸ್‌ನಂತೆ ಖಚಿತ ಮೊತ್ತದ ಗ್ಯಾರಂಟಿ ನೀಡುವುದಿಲ್ಲ ಎಂದು ಕೆಲವರು ವಿಶ್ಲೇಷಿಸುತ್ತಿದ್ದಾರೆ.

ಎನ್‌ಪಿಎಸ್ ಅಡಿಯಲ್ಲಿರುವ ನೌಕರರು ಯುಪಿಎಸ್ ಆಯ್ಕೆ ಮಾಡಿಕೊಳ್ಳಬಹುದು. ಆದರೆ, ಒಮ್ಮೆ ಯುಪಿಎಸ್ ಆಯ್ಕೆ ಮಾಡಿಕೊಂಡರೆ, ನಂತರ ಬದಲಾವಣೆಗೆ ಅವಕಾಶವಿಲ್ಲ.

23 ಲಕ್ಷ — ಯುಪಿಎಸ್ ವ್ಯಾಪ್ತಿಗೆ ಬರಲಿರುವ ಕೇಂದ್ರ ಸರ್ಕಾರಿ ನೌಕರರು

10% — ಯುಪಿಎಸ್‌ನಲ್ಲಿ ನೌಕರರ ಮೂಲವೇತನದಲ್ಲಿ ಕಡಿತ ಮಾಡಲಾಗುವ ಪ್ರಮಾಣ

18.5 % — ಕೇಂದ್ರ ಸರ್ಕಾರ ಪಾವತಿಸುವ ಹಣದ ಪ್ರಮಾಣ

₹6,250 ಕೋಟಿ — ಯುಪಿಎಸ್ ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರದ ಬೊಕ್ಕಸಕ್ಕೆ ವಾರ್ಷಿಕವಾಗಿ ಬೀಳಲಿರುವ ಹೆಚ್ಚುವರಿ ಹೊರೆ

ಹಲವು ರಾಜ್ಯಗಳ ಚುನಾವಣೆ ಮತ್ತು ಯುಪಿಎಸ್ ಜಾರಿ

ಕೇಂದ್ರವು ಎನ್‌ಪಿಎಸ್ ಬದಲಿಸಿ ಯುಪಿಎಸ್ ಜಾರಿ ಮಾಡಲು ಹೊರಟಿರುವುದರ ಹಿಂದೆ ರಾಜಕೀಯ ಕಾರಣಗಳೂ ಇವೆ ಎನ್ನುವ ಮಾತೂ ಕೇಳಿಬರುತ್ತಿದೆ. ಮುಂಬರುವ ಜಮ್ಮು-ಕಾಶ್ಮೀರ, ಹರಿಯಾಣ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಕೇಂದ್ರ ಸರ್ಕಾರ ಈ ನಿರ್ಧಾರ ಮಾಡಿದೆ ಎನ್ನಲಾಗುತ್ತಿದೆ.

ಕೇಂದ್ರವು ಯುಪಿಎಸ್ ಘೋಷಿಸಿದ ತಕ್ಷಣವೇ ಮಹಾರಾಷ್ಟ್ರ ಸರ್ಕಾರ ಕೂಡ ಯುಪಿಎಸ್ ಅನ್ನು ಅಳವಡಿಸಿಕೊಳ್ಳುವುದಾಗಿ ಘೋಷಿಸಿದೆ. ದೇಶದಲ್ಲಿ ಯುಪಿಎಸ್ ಅಳವಡಿಸಿಕೊಂಡ ಮೊದಲ ರಾಜ್ಯ ಇದಾಗಿದೆ. ಚುನಾವಣೆ ಸನಿಹದಲ್ಲಿರುವುದನ್ನು ಗಮನದಲ್ಲಿರಿಸಿಕೊಂಡೇ ರಾಜ್ಯದಲ್ಲಿ ಯುಪಿಎಸ್ ಜಾರಿ ಮಾಡಲಾಗಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಎನ್‌ಪಿಸ್ ಕೊರತೆಗಳನ್ನು ಯುಪಿಎಸ್ ಮೂಲಕ ನೀಗಲು ಕೇಂದ್ರವು ಪ್ರಯತ್ನಿಸಿದೆ. ಆದರೂ ಒಪಿಎಸ್‌ಗೆ ಹೋಲಿಸಿದರೆ, ಇನ್ನೂ ಕೆಲವು ಕೊರತೆಗಳಿವೆ ಎಂದು ಆರ್‌ಎಸ್‌ಎಸ್‌ನ ಅಂಗಸಂಸ್ಥೆಯಾದ ಭಾರತೀಯ ಮಜ್ದೂರ್ ಸಂಘ (ಬಿಎಂಎಸ್) ಅಭಿಪ್ರಾಯ ಪಟ್ಟಿದೆ.

ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್ (ಎಐಟಿಯುಸಿ), 'ಯುಪಿಎಸ್, ಎನ್‌ಪಿಎಸ್‌ನ ವಿಸ್ತರಣೆ ಅಲ್ಲದೇ ಬೇರೇನಲ್ಲ' ಎಂದಿದೆ. ಯುಪಿಎಸ್ ಬಗ್ಗೆ ಹಲವು ಗುಮಾನಿಗಳಿವೆ ಎಂದೂ ಹೇಳಿರುವ ಅದು, ಒಪಿಎಸ್ ಜಾರಿಗೆ ಹೋರಾಟ ಮುಂದುವರಿಸುವುದಾಗಿ ಹೇಳಿದೆ. ಸಿಐಟಿಯು ಕೂಡ ಇದೇ ಧಾಟಿಯಲ್ಲಿ ಮಾತನಾಡಿದೆ.

ಹಿಂದೆಯೂ ಚುನಾವಣೆ ವಿಷಯ: ಸರ್ಕಾರಿ ನೌಕರರ ಪಿಂಚಣಿ ವ್ಯವಸ್ಥೆ ಈ ಹಿಂದೆಯೂ ಚುನಾವಣಾ ವಿಷಯವಾಗಿತ್ತು. ಪಶ್ಚಿಮ ಬಂಗಾಳವು ಆರಂಭದಿಂದಲೂ ಹೊಸ ಪಿಂಚಣಿ ವ್ಯವಸ್ಥೆಯನ್ನು ಅಳವಡಿಸಿಕೊಂಡಿರಲಿಲ್ಲ. ಆದರೆ, ಎನ್‌ಪಿಎಸ್ ಅಳವಡಿಸಿಕೊಂಡಿದ್ದ ಕೆಲವು ರಾಜ್ಯಗಳು ಹಳೆಯ ವ್ಯವಸ್ಥೆಗೆ ಮರಳಿವೆ.

ಹಿಮಾಚಲ ಪ್ರದೇಶದಲ್ಲಿ 2022ರ ಚುನಾವಣೆಯಲ್ಲಿ ಇದು ಚುನಾವಣೆ ವಿಷಯವಾಗಿತ್ತು. ಪಕ್ಷ ಅಧಿಕಾರಕ್ಕೆ ಬಂದರೆ ಒಪಿಎಸ್ ಜಾರಿಗೊಳಿಸುವುದಾಗಿ ಕಾಂಗ್ರೆಸ್ ಘೋಷಿಸಿತ್ತು. ಚುನಾವಣೆಯಲ್ಲಿ ಗೆದ್ದ ಬಳಿಕ ಕಾಂಗ್ರೆಸ್ ಸರ್ಕಾರ ಅಲ್ಲಿ ಹಳೆ ವ್ಯವಸ್ಥೆ ಜಾರಿಗೊಳಿಸಿದೆ.

2022ರಲ್ಲಿ ಛತ್ತೀಸಗಢದ ಕಾಂಗ್ರೆಸ್ ಸರ್ಕಾರವು ಸರ್ಕಾರಿ ನೌಕರರಿಗೆ ಹಳೆ ಪಿಂಚಣಿ ವ್ಯವಸ್ಥೆಗೆ ಮರಳಲು ಅವಕಾಶ ಕಲ್ಪಿಸಿತ್ತು.

ರಾಜಸ್ಥಾನದಲ್ಲಿ 2022ರಲ್ಲಿ ಕಾಂಗ್ರೆಸ್ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರು ಹಳೆ ವ್ಯವಸ್ಥೆ ಜಾರಿಯನ್ನು ಘೋಷಿಸಿದ್ದರು. 2023ರ ಚುನಾವಣಾ ಸಂದರ್ಭದಲ್ಲಿ ಒಪಿಎಸ್ ಅನ್ನು ಮುಂದುವರಿಸುವುದು ಕಾಂಗ್ರೆಸ್‌ನ ಐದು ಗ್ಯಾರಂಟಿಗಳಲ್ಲಿ ಒಂದಾಗಿತ್ತು. ಆದರೆ, ಚುನಾವಣೆಯಲ್ಲಿ ಬಿಜೆಪಿ ಗೆದ್ದಿತು. ಬಿಜೆಪಿ ಸರ್ಕಾರ ಹಳೆ ವ್ಯವಸ್ಥೆಯನ್ನೇ ಮುಂದುವರಿಸಿದೆ. ಜಾರ್ಖಂಡ್‌ನಲ್ಲೂ 2022ರಲ್ಲಿ ಹಳೆ ಪಿಂಚಣಿ ವ್ಯವಸ್ಥೆ ಜಾರಿಗೆ ತರಲಾಗಿದೆ.

ಪಂಜಾಬ್‌ನಲ್ಲಿ ಹೊಸದಾಗಿ ಅಧಿಕಾರಕ್ಕೆ ಬಂದ ಎಎಪಿ ಸರ್ಕಾರ ಕೂಡ ಒಪಿಎಸ್ ಜಾರಿಗೆ ತರುವುದಾಗಿ ಘೋಷಿಸಿದೆ. ಈ ಸಂಬಂಧ ಅಧಿಸೂಚನೆ ಹೊರಡಿಸುವುದು ಬಾಕಿ ಇದೆ.

ಕರ್ನಾಟಕದಲ್ಲಿ 2023ರ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ಹಳೆ ಪಿಂಚಣಿ ವ್ಯವಸ್ಥೆ ಜಾರಿಗೆ ತರುವ ಭರವಸೆ ನೀಡಿತ್ತು. ಅಧಿಕಾರಕ್ಕೆ ಬಂದ ಬಳಿಕ ಪ್ರಸ್ತಾವದ ಪರಿಶೀಲನೆಗಾಗಿ ಸಮಿತಿಯೊಂದನ್ನು ರಚಿಸಿದೆ.

ಯುಪಿಎಸ್ v/s ಎನ್‌ಪಿಎಸ್

ಯುಪಿಎಸ್

- ಕನಿಷ್ಠ 25 ವರ್ಷ ಕೆಲಸ ಮಾಡಿ ನಿವೃತ್ತರಾದ ನೌಕರರಿಗೆ, ನಿವೃತ್ತಿಗೂ ಮೊದಲಿನ ಕೊನೆಯ 12 ತಿಂಗಳ ಸರಾಸರಿ ಮೂಲ ವೇತನದ ಶೇ 50ರಷ್ಟು ಹಣ ಪಿಂಚಣಿ ರೂಪದಲ್ಲಿ ಸಿಗಲಿದೆ. 10ರಿಂದ 25 ವರ್ಷಗಳ ಸೇವಾವಧಿ ಹೊಂದಿರುವ ನಿವೃತ್ತ ನೌಕರರಿಗೆ, ಕೆಲಸ ಮಾಡಿದ ವರ್ಷಗಳಿಗೆ ಅನುಗುಣವಾಗಿ ಪಿಂಚಣಿ ಸಿಗಲಿದೆ.
- 10 ವರ್ಷ ಕೆಲಸ ಮಾಡಿ ನಿವೃತ್ತರಾದವರಿಗೆ ಕನಿಷ್ಠ ₹10 ಸಾವಿರ ಪಿಂಚಣಿ ಬರಲಿದೆ
- ನಿವೃತ್ತ ನೌಕರ ಮೃತಪಟ್ಟರೆ ಶೇ 60ರಷ್ಟು ಪಿಂಚಣಿ ಕುಟುಂಬದ ಸದಸ್ಯರಿಗೆ ಸಿಗಲಿದೆ
- ಖಚಿತ ಪಿಂಚಣಿ, ಖಚಿತ ಕುಟುಂಬ ಪಿಂಚಣಿ, ಕನಿಷ್ಠ ಪಿಂಚಣಿಯು ಹಣದುಬ್ಬರದ ಸೂಚ್ಯಂಕಕ್ಕೆ ಅನುಗುಣವಾಗಿರಲಿದೆ. ಅಂದರೆ, ಹಣದುಬ್ಬರಕ್ಕೆ ಅನುಗುಣವಾಗಿ ಪಿಂಚಣಿಯ ಮೊತ್ತದಲ್ಲಿ ಬದಲಾವಣೆಯಾಗುತ್ತದೆ
- ನಿವೃತ್ತಿ ಹೊಂದುವ ಸಂದರ್ಭದಲ್ಲಿ ನೌಕರ ಖಚಿತ ಮೊತ್ತವನ್ನು ಪಡೆಯಲಿದ್ದಾರೆ. ಇದು ಗ್ರ್ಯಾಚ್ಯುಟಿಯಿಂದ ಪ್ರತ್ಯೇಕವಾಗಿರುತ್ತದೆ ಮತ್ತು ಪಿಂಚಣಿ ಮೊತ್ತವನ್ನು ಕಡಿಮೆ ಮಾಡುವುದಿಲ್ಲ
- ಪಿಂಚಣಿಗಾಗಿ ನೌಕರರ ಮೂಲ ವೇತನದಿಂದ ಶೇ 10 ಕಡಿತವಾದರೆ, ಕೇಂದ್ರ ಶೇ 18.5ರಷ್ಟು ಪಾವತಿಸುತ್ತದೆ

ಎನ್‌ಪಿಎಸ್

- ಪಿಂಚಣಿ ಮೊತ್ತ ನಿಗದಿತವಲ್ಲ. ಅದು ಮಾರುಕಟ್ಟೆ ಬೆಳವಣಿಗೆಯ ಮೇಲೆ ಅವಲಂಬಿತವಾಗಿರುತ್ತದೆ
- ಕುಟುಂಬ ಪಿಂಚಣಿ ಮೊತ್ತವು, ಪಿಂಚಣಿ ನಿಧಿಯಲ್ಲಿ ಸಂಗ್ರಹವಾಗಿರುವ ಮೊತ್ತ ಮತ್ತು ನಿವೃತ್ತಿ ಸಂದರ್ಭದಲ್ಲಿ ಆಯ್ಕೆ ಮಾಡಿದ ವಾರ್ಷಿಕ ಯೋಜನೆಯನ್ನು ಅವಲಂಬಿಸಿರುತದೆ
- ಸಶಸ್ತ್ರ ಪಡೆಗಳ ಸಿಬ್ಬಂದಿ ಬಿಟ್ಟು, 2004ರ ಜ. 1ರ ನಂತರ ಕೇಂದ್ರ ಸರ್ಕಾರಿ ಕೆಲಸಕ್ಕೆ ಸೇರಿದವರಿಗೆ ಅನ್ವಯ. ಖಾಸಗಿ ವಲಯದ ನೌಕರರಿಗೂ ಇದು ಲಭ್ಯವಿದೆ.
- ನೌಕರರು ಮೂಲ ವೇತನದ ಶೇ 10ರಷ್ಟು, ಕೇಂದ್ರ ಶೇ 14ರಷ್ಟು ಪಾವತಿಸುತ್ತದೆ

ಆಧಾರ: ಪಿಟಿಐ, ಪಿಐಬಿ, ಎನ್‌ಪಿಎಸ್ ಟ್ರಸ್ಟ್

ಪಿಂಚಣಿ ಯೋಜನೆ ಮತ್ತು ನೋಂದಣಿ

7.63 ಕೋಟಿ ಒಟ್ಟು ನೋಂದಣಿದಾರರು

₹12.81 ಲಕ್ಷ ಕೋಟಿ ನಿಧಿಯಲ್ಲಿರುವ ಒಟ್ಟು ಮೊತ್ತ



(2024ರ ಜುಲೈ 31ರವರೆಗಿನ ಮಾಹಿತಿ)

ಸಿನಿಮಾವಾಯ್ತು 'ರಮ್ಮಿ ಆಟ'

ಆನ್‌ಲೈನ್‌ನಲ್ಲಿ ರಮ್ಮಿ, ಜೂಜಾಟವಾಡಿ ಬೀದಿಗೆ ಬಂದವರು ಅನೇಕರಿದ್ದಾರೆ. ರಮ್ಮಿ ಆಡಬೇಡಿ ಎಂದು ಜಾಗೃತಿ ಮೂಡಿಸುವ ಸಾಕಷ್ಟು ವಿಡಿಯೊಗಳು ಈಗಾಗಲೇ ವೈರಲ್ ಆಗಿವೆ. ಇದೀಗ ಆನ್‌ಲೈನ್ ರಮ್ಮಿ ಕುರಿತಾದ ಕಥೆ ಹೊಂದಿರುವ 'ರಮ್ಮಿ ಆಟ' ಚಿತ್ರ ತೆರೆಗೆ ಬರಲು ಸಜ್ಜಾಗಿದೆ. ಉಮರ್ ಷರೀಫ್ ಈ ಚಿತ್ರವನ್ನು ನಿರ್ಮಿಸಿ, ನಿರ್ದೇಶಿಸಿದ್ದಾರೆ.

'ಮನರಂಜನೆಗೆಂದು ಶುರು ಮಾಡಿದ ಆನ್‌ಲೈನ್ ಜೂಜಾಟ ಕೆಲವರ ಜೀವನವನ್ನೇ ನಾಶ ಮಾಡುತ್ತಿದೆ. ಅದಕ್ಕೆ ಒಮ್ಮೆ ಅಡಿಕ್ಟ್ ಆದಮೇಲೆ ಅದನ್ನು ಬಿಡಲು ಸಾಧ್ಯವೇ ಆಗದು. ಈ ಆಟದಿಂದ ಕೆಲವೊಮ್ಮೆ ತುಂಬಾ ಲಾಭ ಆಗಬಹುದು. ಜೊತೆಗೆ ಕೆಟ್ಟದ್ದೂ ಆಗಬಹುದು. ಆಟಕ್ಕೆ ಸರ್ಕಾರವೇ ಅನುಮತಿ ನೀಡಿದೆ. ನಟ,ನಟಿಯರು ಇದನ್ನು ಪ್ರಚಾರ ಮಾಡುವುದರಿಂದ ಅಭಿಮಾನಿಗಳೂ ಅದನ್ನೇ ಅನುಸರಿಸುತ್ತಾರೆ. ಇವೆಲ್ಲದರ ಪರಿಣಾಮವನ್ನು ಚಿತ್ರದಲ್ಲಿ ಹೇಳಿದ್ದೇವೆ' ಎನ್ನುತ್ತಾರೆ ನಿರ್ದೇಶಕರು.

ಸ್ನೇಹರಾವ್

ನಿರೂಪಕ ರಾಘವ ಸೂರ್ಯ, ವಿನ್ಯಾ ಶೆಟ್ಟಿ, ಸ್ನೇಹರಾವ್ ಪ್ರಮುಖ ಪಾತ್ರದಲ್ಲಿದ್ದಾರೆ. ಈಗಾಗಲೇ ಶೂಟಿಂಗ್, ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಮುಗಿದಿದ್ದು, ಚಿತ್ರವನ್ನು ಮುಂದಿನ ತಿಂಗಳು ತೆರೆಗೆ ತರಲು ತಂಡ ಆಲೋಚಿಸಿದೆ.

ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದ್ದು, ಕಾರ್ತಿಕ್ ಎಸ್. ಛಾಯಾಚಿತ್ರಗ್ರಹಣ, ಪ್ರಭು ಎಸ್.ಆರ್. ಸಂಗೀತವಿದೆ.

ನೋಟು ಅಮಾನ್ಯೀಕರಣ ಅವಧಿಯ '1888'

2016ರಲ್ಲಿ ನಡೆದ ನೋಟು ಅಮಾನ್ಯೀಕರಣವನ್ನು ಆಧಾರವಾಗಿಟ್ಟುಕೊಂಡು ಸೌರಭ್ ಶುಕ್ಲ ಹೆಣೆದ '1888' ಸಿನಿಮಾ ಹಲವು ಡಿಜಿಟಲ್ ವೇದಿಕೆಗಳಲ್ಲಿ ಪ್ರಸಾರವಾಗುತ್ತಿದೆ.

ಆ್ಯಪಲ್ ಟಿ.ವಿ., ಯುಟ್ಯೂಬ್, ಬುಕ್‌ಮೈಶೋ, ಮೂವಿ ಸೈಂಟ್ಸ್ ವೇದಿಕೆಗಳಲ್ಲಿ ಬಾಡಿಗೆ ಆಧಾರದಲ್ಲಿ ಸಿನಿಮಾ ದೊರೆಯುತ್ತಿದ್ದು, ವಿಡಿಒಜಾರ್‌ನಲ್ಲಿ ಈ ಸಿನಿಮಾವನ್ನು ಉಚಿತವಾಗಿ ನೋಡಬಹುದು. ಈ ಸಿನಿಮಾ ಹಲವು ಸಿನಿಮೋತ್ಸವಗಳಲ್ಲಿ ಪ್ರದರ್ಶನವನ್ನೂ ಕಂಡಿದೆ ಹಾಗೂ ಪ್ರಶಸ್ತಿಗಳನ್ನು ಗಳಿಸಿದೆ. ಈ ಸಿನಿಮಾ ಮೂರು ಪಾತ್ರಗಳ ಸುತ್ತ ಸುತ್ತುತ್ತದೆ. ನೋಟು ಅಮಾನ್ಯೀಕರಣ ಆದ ಸಂದರ್ಭದಲ್ಲಿ ರಾಜಕಾರಣಿಯಾದ ಓರ್ವ ನಟಿ, ಒಬ್ಬ ಎಲ್‌ಐಸಿ ಏಜೆಂಟ್ ಹಾಗೂ ವ್ಯಕ್ತಿಯೊಬ್ಬ ಹಣ ತುಂಬಿದ ಬ್ಯಾಗ್ ಒಂದರ ಹಿಂದೆ ಬೀಳುತ್ತಾರೆ. ತನಿಖಾ ಏಜೆನ್ಸಿಯೂ ಇವರ ಹಿಂದೆ ಬಿದ್ದಾಗ ಕಥೆ ತಿರುವು ಪಡೆಯುತ್ತಾ ಸಾಗುತ್ತದೆ ಎಂದಿದೆ ಚಿತ್ರತಂಡ.

ನೀತು

'ಈ ಸಿನಿಮಾವನ್ನು ನನ್ನನ್ನೂ ಸೇರಿಸಿಕೊಂಡು ಕೇವಲ ಮೂರ್ನಾಲ್ಕು ಜನರ ತಂಡ ರಚಿಸಿದೆ. ಇದೊಂದು ಸಣ್ಣ ಬಜೆಟ್‌ನ ಸಿನಿಮಾ. ಚಿತ್ರಮಂದಿರಗಳಲ್ಲಿ ಸಿನಿಮಾ ಬಿಡುಗಡೆ ಮಾಡುವಷ್ಟು, ಪ್ರಚಾರ ನಡೆಸುವಷ್ಟು ಬಜೆಟ್ ನಮ್ಮಲ್ಲಿಲ್ಲ. ಹೀಗಾಗಿ ನೇರವಾಗಿ ಡಿಜಿಟಲ್ ವೇದಿಕೆಗಳಲ್ಲಿ ಸಿನಿಮಾ ಬಿಡುಗಡೆ ಮಾಡಿದೆವು. 1 ಗಂಟೆ 55 ನಿಮಿಷದ ಈ ಆ್ಯಕ್ಷನ್ ಥ್ರಿಲ್ಲರ್ ಚಿತ್ರದಲ್ಲಿ 'ಗಾಳಿಪಟ' ಖ್ಯಾತಿಯ ನೀತು, ಪ್ರತಾಪ್ ಕುಮಾರ್, ಮಂಜು ರಾಜ್ ನಟಿಸಿದ್ದಾರೆ. ನಾನು ಎಂಜಿನಿಯರಿಂಗ್ ಕೆಲಸ ಬಿಟ್ಟು ಸಿನಿಮಾ ಕ್ಷೇತ್ರಕ್ಕೆ ಧುಮುಕಿದವ. ಒಂದಿಷ್ಟು ಜನರ ಸ್ನೇಹಿತರು ಸೇರಿ ಈ ಸಿನಿಮಾ ಮಾಡಿದ್ದೇವೆ' ಎಂದರು ನಿರ್ದೇಶಕ ಸೌರಭ್.

ಗುಂಡಣ್ಣ

ಯಾವುದು ದೇವರ ಪೂಜೆ?

ನುಡಿ ಬೆಳಗು 10

ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

ನಾವು ಯಾರೂ ನಿಸರ್ಗ ಕೆಡಿಸಬಾರದು. ನಿಸರ್ಗ ಒಂದು ಅದ್ಭುತ. ಅದಕ್ಕ ಬ್ರಹ್ಮಾಂಡ ಅಂತ ಕರೀತಾರ. ನಮ್ಮ ದೇಹ ಇದೆಯಲ್ಲ ಅದಕ್ಕ ಪಿಂಡಾಂಡ ಅಂತಾರ. ಈ ಪಿಂಡಾಂಡ ಬ್ರಹ್ಮಾಂಡ ದಿಂದಲೇ ಆಗ್ಯೆತಿ. ಬ್ರಹ್ಮಾಂಡ ಕೆಟ್ಟಿತು ಅಂದರ ಪಿಂಡಾಂಡವೂ ಕೆಡುತ್ತದ. ಅದಕ್ಕೆ ಅದನ್ನು ಕೆಡಿಸಬಾರದು. ಗಿಡ ಹಚ್ಚಬೇಕು. ಭೂಮಿಯೊಳಗ ವಿಷ ಹಾಕಬಾರದು. ನೀರು ಸ್ವಚ್ಛವಾಗಿಟ್ಟುಕೊಳ್ಳಬೇಕು.

ಕ್ರೊವೇಷಿಯಾ ಅಂತ ಒಂದು ದೇಶ ಅದ. ಅಲ್ಲಿ ಮದುವೆಯಾಗಬೇಕು ಅಂದರ ನೂರು ಗಿಡ ನೆಟ್ಟು ಬೆಳೆಸಿದರೆ ಮಾತ್ರ ಅನುಮತಿ ಕೊಡ್ತಾರ. ಇಲ್ಲದಿದ್ದರೆ ಮದುವಿ ಇಲ್ಲ. ಇದು ನಮ್ಮ ಇಂಡಿಯಾದಲ್ಲೂ ಜಾರಿಯಾಗಬೇಕು. ಇಲ್ಲಿ ಕನ್ಯಾ ನೋಡೇ ಮುಗಿಯೋದಿಲ್ಲ. ಇನ್ನು ಗಿಡ ನೆಡೋದಕ್ಕೆ ಸಮಯ ಎಲ್ಲಿ? ದೇವರ ಪೂಜೆ ಎಂದರೆ ಏನು ಅಂದರ, ಲಕ್ಷ ದೀಪ ಹಚ್ಚಿ ಪೂಜಿಸೋದು ದೇವರ ಪೂಜೆ ಅಲ್ಲ. ವೃಕ್ಷದೀಪಗಳಿಂದ ದೇವರ ಪೂಜೆ ಮಾಡಬೇಕು. ಲಕ್ಷ ದೀಪೋತ್ಸವ ಅಲ್ಲ, ವೃಕ್ಷ ದೀಪೋತ್ಸವ ಮಾಡಬೇಕು. ಇದಕ್ಕ ಯಜ್ಞ ಅಂತ ಕರೀತಾರ. ನಾವು ಯಜ್ಞ ಅಂದರ ಏನ ತಿಳಕೊಂಡೀವಿ ಅದೇ ನಿಜವಾದ ಯಜ್ಞ ಅಲ್ಲ. ಕುಂಡ ಮಾಡಿರ್ತಾರ, ಅದರೊಳಗೆ ತುಪ್ಪ, ಕಟಗಿ ಹಾಕಿರ್ತಾರ ಅದೇ ಯಜ್ಞ ಅನಕೊಂಡೀವಿ.

ಬಸವಣ್ಣವರು ಎಷ್ಟು ಚಂದ ಹೇಳ್ತಾರ ನೋಡಿ. 'ಕಿಚ್ಚು ದೈವವೆಂದು ಹವಿಯನಿಕ್ಕುವ ಹಾರುವರ ಮನೆಯಲು ಕಿಚ್ಚೆದ್ದು ಸುಡುವಾಗ ಬಚ್ಚಲ ನೀರು ಬೀದಿಯ ಧೂಳು ಹೊಯ್ದು ಬೊಬ್ಬಿಟ್ಟಲ್ಲರ ಕರೆವರಯ್ಯ ಕೂಡಲ ಸಂಗಮದೇವ ವಂದನೆಯ ಮರೆದು ನಿಂದಿಸುವರಯ್ಯ'.

ಕುಂಡದೊಳಗಿನ ಯಜ್ಞವೇ ಮನೆಗೆ ತಾಗಿದರೆ ಅದನ್ನು ನಿಂದಿಸುತ್ತೇವೆ. ಹಾಗಲ್ಲ. ಈ ವಿಶ್ವವೇ ಒಂದು ಯಜ್ಞ ಕುಂಡ. ನಮ್ಮ ಇಂದ್ರಿಯಗಳೇ ಹವಿಸ್ಸಾಗಿ ಅರ್ಪಿಸಬೇಕು. ಅದು ನಿಜವಾದ ಯಜ್ಞ.

ಜಗತ್ತು ವಿಕಾಸ ಆಗಬೇಕಲ್ಲ? ಅದಕ್ಕೆ ಒಂದಿಷ್ಟು ಕೆಲಸ ಮಾಡಬೇಕು. ನಾವು ಒಂದು ವಿಷಯ ತಿಳಕೋಬೇಕು, ನಮ್ಮೊಳಗೆ ಶಕ್ತಿ ಬಹಳ ಇದೆ. ಆದರ, ಸಮಯ ಕಡಿಮೆ ಇದೆ. ದೇವರು ನಮಗ ಆಯುಷ್ಯ ಕಡಿಮೆ ಕೊಟ್ಟಾನ. ಆದರ ನಮ್ಮೊಳಗ ಶಕ್ತಿ ಬಹಳ ಇಟ್ಟಾನ. ಕಡಿಮೆ ಸಮಯದೊಳಗೆ ಕೂಡಲಸಂಗಮ ದೇವ ಮೆಚ್ಚಿ ಅಹುದಹುದು ಎನುವಂತೆ ನಾವು ಕೆಲಸ ಮಾಡಬೇಕು. ಚಲೋ ಕೆಲಸ ಮಾಡಿದಿರಿ ಅಂದ್ರ ಮನುಷ್ಯನ ಜೀವನವೇ ಒಂದು ಯೋಗ ಆಗತೈತಿ.

ಮಂಗಳೂರಿನಲ್ಲಿ ಹಾಜಪ್ಪ ಅಂತ ಒಬ್ಬ ಇದ್ದಾನ. ಹಣ್ಣು ಮಾರೋನು. ದಿನಕ್ಕೆ ನೂರೈವತ್ತು ರೂಪಾಯಿ ಕೂಡಿಸಿ ತಾನು ಓದಿಲ್ಲದಿದ್ದರೂ ಊರಿಗೆ ಒಂದು ಶಾಲೆ ಮಾಡಿದ. ಅದು ವಿಕಾಸಕ್ಕೆ ಮಾಡುವ ಕೆಲಸ. ಅದೇ ನಿಜವಾದ ಪೂಜೆ. ನಮಗೆ ಎರಡು ಮಕ್ಕಳಿದ್ದರೆ ಭಾರಿ ಟೆನ್ಷನ್. ಆದರ, ಸಿದ್ದಗಂಗಾ ಮಠದ ಸ್ವಾಮೀಜಿ 10 ಸಾವಿರಕ್ಕೂ ಹೆಚ್ಚು ಮಕ್ಕಳನ್ನು ಕೇವಲ ಜೋಳಿಗೆ ಇಟ್ಟುಕೊಂಡು ಸಾಕಿದರು. ಮಹಾಪುರುಷರಾದರು. ಅದು ವಿಕಾಸಕ್ಕೆ ಮಾಡಿದ ಕಾರ್ಯ. ಅಬ್ದುಲ್ ಕಲಾಂ ಅವರನ್ನು ಯಾರೋ ಕೇಳಿದರಂತೆ. 'ನಾವು ನಿಮ್ಮ ಜನ್ಮ ದಿನ ಮಾಡ್ತೀವಿ' ಅಂತ. ಅದಕ್ಕೆ ಕಲಾಂ ಅವರು 'ಜನ್ಮದಿನ ಅಂತ ಸೂಟಿ ಕೊಡಬೇಡಿ. ಒಂದು ತಾಸು ಹೆಚ್ಚಿಗೆ ಕೆಲಸ ಮಾಡಿ' ಅಂದರಂತೆ. ಅದು ದೇಶ ಕಟ್ಟೋ ಕೆಲಸ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಬುಧವಾರ ಆಗಸ್ಟ್ 28, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣ ದಶಮಿ ಗಂ. 25-20 ನಕ್ಷತ್ರ: ಮೃಗಶಿರ ಗಂ. 15-53 ಯೋಗ: ವಜ್ರ ಗಂ. 19-12 ಕರಣ: ವಣಿಜ ಗಂ. 13-23, ಸಿಂಹ ಮಾಸದ 12 ನೇ ದಿನ, ಮಳೆನಕ್ಷತ್ರ: ಮಘಾ 4.
ರಾಹುಕಾಲ: ಮಧ್ಯಾಹ್ನ 12-00–01-30
ಸೂರ್ಯೋದಯ: 06-23 ಸೂರ್ಯಾಸ್ತ : 06-41
ಮುಸ್ಲಿಂ ದಿನಾಂಕ : 23 ಸಫರ್, ಅದೃಷ್ಟ ಸಂಖ್ಯೆ : 9, 6

ಮೇಷ: ನಿಮ್ಮಲ್ಲಿರುವ ಕಲೆಗೆ ಒಂದು ನೆಲೆ ಕಲ್ಪಿಸುವ ಹೋರಾಟವು ಅಕ್ಷರಶಃ ಸಫಲವಾಗಲಿದೆ. ಉದ್ಯೋಗ ಬದಲಾವಣೆ ವಿಚಾರದಲ್ಲಿದ್ದ ಗೊಂದಲವನ್ನು ಮಾರ್ಗದರ್ಶಕರ ಸೂಚನೆಯಂತೆ ನಿವಾರಿಸಿಕೊಳ್ಳಿರಿ.

ವೃಷಭ: ಸಂಘ-ಸಂಸ್ಥೆಯಲ್ಲಿ ಅಥವಾ ಗ್ರಾಮೀಣ ಬದುಕಿನಲ್ಲಿ ಅಧಿಕಾರ ಸಿಗಲಿದೆ. ತಾಂತ್ರಿಕ ಕ್ಷೇತ್ರದಲ್ಲಿ ಪರಿಣತಿ ಹೊಂದಿರುವವರಿಗೆ ಉತ್ತಮ ಅವಕಾಶಗಳು ಅರಸಿ ಬರಲಿವೆ. ನೆನಪಿನಶಕ್ತಿ ವೃದ್ಧಿಯಾಗಲು ಶಾರದಾಪರಮೇಶ್ವರಿಯನ್ನು ಆರಾಧಿಸಿ.

ಮಿಥುನ: ಸಣ್ಣ ಕಾರಣವನ್ನೇ ಹಿಡಿದು ಕೆಲಸದಿಂದ ಅಮಾನತುಗೊಳಿಸುವಂಥ ಸಾಧ್ಯತೆಗಳು ಬರಬಹುದು. ಸಂಬಂಧಿಗಳಿಂದ ಸಂತಸದ ಸುದ್ದಿ ಕೇಳುವಿರಿ. ಪೂರ್ಣ ಪ್ರಯತ್ನದಿಂದ ಕುಟುಂಬದ ಸಮಸ್ಯೆಗಳನ್ನು ಪರಿಹರಿಸುವಿರಿ.

ಕರ್ಕಾಟಕ: ಬರೆಯುತ್ತಿರುವ ಪುಸ್ತಕಕ್ಕೆ ಕಣ್ಣೆದುರು ನಡೆದ ಒಂದು ಘಟನೆ ಮುಖ್ಯವಸ್ತುವನ್ನೇ ಬದಲು ಮಾಡುತ್ತದೆ. ಹಲವು ಕಾರಣಗಳಿಂದ ಅದೃಷ್ಟವಂತರೆಂದು ಅನ್ನಿಸಬಹುದು. ತರಕಾರಿ ಮಾರಾಟಗಾರರಿಗೆ ಉತ್ತಮ ದಿನ.

ಸಿಂಹ: ನಂದಾದೀಪವಾಗಿ ಮನೆಗೆ ಮಗಳಾಗಿ ಬಂದವಳನ್ನು ಮತ್ತೊಂದು ಮನೆಯ ನಂದಾದೀಪವಾಗಿ ಕಳುಹಿಸಿಕೊಡುವ ಸನ್ನಿವೇಶ ಪದೇ ಪದೇ ನಿಮ್ಮ ಕಣ್ಣೆದುರು ಬರುವುದು. ವಿವಿಧ ಮೂಲಗಳಿಂದ ದ್ರವ್ಯಲಾಭ ಇರುವುದು.

ಕನ್ಯಾ: ಮಕ್ಕಳು ವಿದ್ಯಾಭ್ಯಾಸದ ಕಡೆಗೆ ಗಮನಹರಿಸಿ, ಏಕಾಗ್ರತೆಯನ್ನು ಕಾಯ್ದುಕೊಳ್ಳಿ. ಹಲವು ದುಃಖಗಳು ಮಧುರ ಸಂಗೀತವನ್ನು ಕೇಳುವ ಮೂಲಕ ಪರಿಹರಿಸಿಕೊಳ್ಳುವಿರಿ. ಲೇವಾದೇವಿಯ ಹಣ ಕೈ ಸೇರುವುದು.

ತುಲಾ: ಮದುವೆಯ ಮುಂದುವರಿದ ಮಾತುಕತೆಗಳು ಗಮನಕ್ಕೆ ಬಾರದೇ ಹೋಗಬಹುದು. ವೃದ್ಧರ ಹಾಗು ಅನಾಥ ಮಕ್ಕಳ ಸೇವೆಯಿಂದಾಗಿ ಸಂತೋಷ ಹೊಂದುವ ಸಾಧ್ಯತೆ ಇದೆ. ಸರ್ಕಾರಿ ಕೆಲಸಗಳು ಕೈಗೂಡುವುದು.

ವೃಶ್ಚಿಕ: ವಿದೇಶಕ್ಕೆ ಹೋಗುವ ಅವಕಾಶಗಳನ್ನು ತಂದೆ ತಾಯಿಯರ ಹಿತಕ್ಕಾಗಿ ಹೋಗುವುದನ್ನು ನಿಲ್ಲಿಸುವಂತಾಗುವುದು. ಎಣಿಕೆಯಂತೆ ಜವಾಬ್ದಾರಿಯ ಕಾರ್ಯಗಳು ಸಿದ್ಧಿಸುವವು. ಆರೋಗ್ಯದಲ್ಲಿ ಚೇತರಿಕೆಯಾಗುತ್ತದೆ.

ಧನು: ರಾಜಕೀಯ ವ್ಯಕ್ತಿಗಳು ಜನರಲ್ಲಿ ತಾಳ್ಮೆಯಿಂದ ವರ್ತಿಸಿ. ಹೊಸ ಕೆಲಸಗಳನ್ನು ಪ್ರಾರಂಭ ಮಾಡಬೇಕಾದಾಗ ಸೂಕ್ತ ಮಾರ್ಗದರ್ಶನ ತೆಗೆದುಕೊಳ್ಳುವುದು ಉತ್ತಮ. ಬಲ ಕಣ್ಣಿಗೆ ಅಪಾಯವಾಗುವ ಸಾಧ್ಯತೆಗಳಿವೆ.

ಮಕರ: ವಿಭಿನ್ನವಾಗಿ ಯೋಚಿಸುವ ನಿಮ್ಮಿಂದ ಕೆಲವು ಸವಾಲುಗಳಿಗೆ ಪರಿಹಾರ ಸಿಗುತ್ತದೆ. ನಿಮ್ಮ ಕೆಲಸದ ಮೇಲೆ ನಿಮ್ಮ ಗಮನ ಕಡಿಮೆಯಾದ ಕಾರಣ ಸಿಗಬೇಕಾದ ಅವಕಾಶಗಳು ಬೇರೆಯವರ ಪಾಲಾಗಲಿದೆ.

ಕುಂಭ: ಎಷ್ಟು ಜಾಗರೂಕರಾಗಿದ್ದರೂ ಸಾಲದೆಂಬಂತೆ ಆಗುತ್ತದೆ. ಮಗಳ ಗಂಡನ ಮನೆಯಲ್ಲಿನ ವಿಶೇಷ ಕಾರ್ಯಕ್ರಮಗಳಿಗೆ ಭೇಟಿ ನೀಡುವಂತಾಗಿ ಸಂತೋಷ ಹೊಂದುವಿರಿ.

ಮೀನ: ಕಳೆದು ಹೋದ ಜಾನುವಾರೊಂದು ಹಲವಾರು ದಿನಗಳ ನಂತರ ಮನೆಯ ಜಾಡು ಹಿಡಿದು ಬರುವಂಥ ಸಾಧ್ಯತೆ ಇದೆ. ನೆಚ್ಚಿನ ಕಲಾಕಾರರನ್ನು ಭೇಟಿಯಾಗಲು ಸ್ನೇಹಿತರು ಸಹಾಯ ಮಾಡಲಿದ್ದಾರೆ.

ಪದಬಂಧ 5786

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಅಳಿಯನನ್ನು ಮನೆಯಲ್ಲಿಯೇ ಇಟ್ಟುಕೊಳ್ಳುವುದು (5)
4.ಚೀನದಲ್ಲಿ ಇರುವುದೆಲ್ಲಾ ಹಿಂದಿನದು (3)
5.ಗಂಭೀರವಾದುದನ್ನು ಹೀಗೆನ್ನಿ (3)
7.ಅವಿರತ ಪ್ರಯೋಗಗಳನ್ನು ಮಾಡುತ್ತಿರುವ ಬ್ರಾಹ್ಮಣ! (2)
9.ಮಧುರ ಫಲಗಳನ್ನು ಕೊಡುವ ವೃಕ್ಷ (2)
10.ಹದಿನೈದು ದಿನಗಳ ಕಾಲ (2)
11.ಮನೆಯಲ್ಲಿ ವಾಸಿಸುವವನಿಗೆ ಸಿಕ್ಕ ಒಡೆತನ (3)
12.ಖರ್ಚು ಕಳೆದು ಉಳಿದುದು (2)
13.ಮಂದಿರದಲ್ಲಿರುವ ಜನ (2)
14.ಕುಟಿಲನ ವಂಶ (2)
16.ಪಥದಲ್ಲಿ ಸಾಗುವಾಗ ಕೈಗೊಂಡ ಪ್ರತಿಜ್ಞೆ (3)
18.ತರ್ಕ ಮಾಡುತ್ತಿರುವ ವ್ಯಾಪಾರಿ (3)
19.ಹಳೆಯದನ್ನು ಹೊಸತು ಮಾಡುವಿಕೆ (5)

ಮೇಲಿಂದ ಕೆಳಕ್ಕೆ
1.ಕಟ ಕಟ ಶಬ್ದ ಮಾಡುವ ಬಾಗಿಲು (3)
2.ಮನದಿಂದ ಮಾಡಿಕೊಂಡಿರುವ ಅರಿಕೆ (3)
3.ನರನಿರುವ ಪಟ್ಟಣ (3)
4.ಉಪವಾಸದಿಂದ ಮರಣ ಹೊಂದುವ ವ್ರತ (5)
6.ಮನುಷ್ಯರನ್ನು ತಿನ್ನುವ ಪ್ರಾಣಿ (5)
8.ಪ್ರತಿವಾದಿಯಲ್ಲಿ ದಾರ್ಶನಿಕ ಕಾಣುತ್ತಿದ್ದಾನೆ (3)
9.ನಸುಕಿನಲ್ಲಿ ನೋಡಿದ್ದಕ್ಕೇ ಇದು ಅಸ್ಪಷ್ಟ! (3)
13.ಯಾವುದಾದರೂ ವಿಷಯವನ್ನು ಕೂಲಂಕಷವಾಗಿ ಚರ್ಚಿಸುವುದು (3)
15.ವಲಯದಲ್ಲಿ ದೊರೆತ ಉಪ್ಪು (3)
17.ಕರ ಕೊನೆಗಿಟ್ಟಾಗಿನ ಮಿಶ್ರಣ (3)



5785ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮೈಸೂರು 2.ದಳಪತಿ
4.ಗರಂಸಾ 7.ಸಭಿಕ
8.ಗರಗಸ 9.ಜರ
10.ಕಾಕ 11.ನಾಮಧೇಯ
13.ರಜನಿ 14.ಕಸ್ತೂರಿ
16.ಮಿತವ್ಯಯ 17.ಕಲ್ಯಾಣ

ಮೇಲಿಂದ ಕೆಳಕ್ಕೆ:
1.ಮೈಲಿಗಲ್ಲು 2.ದಡ
3.ಪಟ್ಟಾಭಿಷೇಕ
5.ಸಾಗರ 6.ಗಗನಮಣಿ
9.ಜನಜನಿತ 10.ಕಾಯಕ
12.ಹರಿವಾಣ 15.ಧ್ಯೇಯ

ಸುಡೊಕು 6171

2		6					5	
			5		6	3		2
3	8			2			6	
	2							4
			2	4	7			6
	7					5		
7		9			8		4	
4				3			8	1
	6		4		2	7		3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6170 ಸುಡೊಕು

3	9	1	8	7	5	6	4	2
7	6	5	2	4	9	3	8	1
2	8	4	3	1	6	7	9	5
1	5	9	7	2	4	8	6	3
4	2	7	6	8	3	5	1	9
8	3	6	5	9	1	2	7	4
6	1	2	4	5	8	9	3	7
9	7	8	1	3	2	4	5	6
5	4	3	9	6	7	1	2	8

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	25,010
ಇಂದಿನ ಅಂತ್ಯ	25,017
▲	7
ದಿನದ ಗರಿಷ್ಠ	25,073

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹16950
ಎಸಿ	₹10125
ಆರ್‌ಪಿ	₹20250
ಆರ್‌ಸಿ	₹10325

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹480
12 ಕ್ಕೆ	₹66
ಮೈಸೂರು	
100ಕ್ಕೆ	₹482

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	18000-28500
ಹೊಸತು	28500-39500
ಹಳತು	39500-47500
ಚಿತ್ರದುರ್ಗ	
ಅಪಿ	46619-47029
ಬೆಟ್ಟೆ	33649-34079
ಕೆಂಪುಗೋಟು	27600-28000
ರಾಶಿ	46139-46569
ಕಾರ್ಕಳ	
ಹೊಸತು	25000-39500
ಹಳತು	30000-47500
ಸಾಗರ	
ಬಿಳಿಗೋಟು	23209-24609
ಚಾಲಿ	26588-32409
ಕೋಕ	16989-16989
ಕೆಂಪುಗೋಟು	30299-30299
ರಾಶಿ	35299-47329
ಸಿಪ್ಪೆಗೋಟು	14744-17315
ಶಿವಮೊಗ್ಗ	
ಬೆಟ್ಟೆ	42014-54701
ಗೊರಬಲು	16000-35169
ರಾಶಿ	30000-48100
ಸರಕು	46000-80321
ಸಿದ್ದಾಪುರ	
ಬಿಳಿಗೋಟು	24000-28899
ಚಾಲಿ	32309-35719
ಕೋಕ	22699-24699
ಕೆಂಪುಗೋಟು	23699-24589
ರಾಶಿ	40699-45989
ತಟ್ಟಿಬೆಟ್ಟೆ	27399-34089
ಶಿರಸಿ	
ಬೆಟ್ಟೆ	25621-42099
ಬಿಳಿಗೋಟು	22180-30299
ಚಾಲಿ	33139-36461
ಕೆಂಪುಗೋಟು	20009-31599
ರಾಶಿ	41298-47699
ಯಲ್ಲಾಪುರ	
ಅಪಿ	54439-56209
ಬಿಳಿಗೋಟು	18109-29612
ಚಾಲಿ	30099-36299
ಕೋಕ	6600-17310
ಕೆಂಪುಗೋಟು	18199-25199
ರಾಶಿ	41666-52958
ತಟ್ಟಿಬೆಟ್ಟೆ	25910-40268

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹288-530
ದ್ವಿತಳಿ (ಬಿ.ವಿ)	₹242-661

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹230
ಆರ್‌ಎಸ್‌ಎಸ್-5	₹224
ಗುಡ್ ಲಾಟ್	₹208

(ಪ್ರತಿ ಕೆ.ಜಿಗೆ)

ರಿಯಲ್ ಎಸ್ಟೇಟ್ ಪಾರದರ್ಶಕ ಸೂಚ್ಯಂಕ: ಭಾರತಕ್ಕೆ 31ನೇ ಸ್ಥಾನ

ಮುಂಬೈ (ಪಿಟಿಐ): ಜಾಗತಿಕ ರಿಯಲ್ ಎಸ್ಟೇಟ್ ಪಾರದರ್ಶಕ ಸೂಚ್ಯಂಕ 2024ರಲ್ಲಿ ಭಾರತವು 31ನೇ ಸ್ಥಾನ ಪಡೆದಿದೆ ಎಂದು ಗ್ಲೋಬಲ್ ಪ್ರಾಪರ್ಟಿ ಕನ್ಸಲ್ಟೆನ್ಸಿ ಜೆಎಲ್‌ಎಲ್ ವರದಿ ತಿಳಿಸಿದೆ.

ಭಾರತದ ಟೈರ್ 1 ಮಾರುಕಟ್ಟೆಯು 2.44 ಅಂಕ ಪಡೆಯುವ ಮೂಲಕ ಮೊದಲ ಬಾರಿಗೆ 'ಪಾರದರ್ಶಕ' ವಲಯವನ್ನು ಪ್ರವೇಶಿಸಿದೆ. ಪಾರದರ್ಶಕ ಸೂಚ್ಯಂಕಗಳ 89 ರಾಷ್ಟ್ರಗಳ ಪೈಕಿ ಭಾರತದ ಸಾಧನೆಯು ಸುಧಾರಿಸಿದೆ ಎಂದು ತಿಳಿಸಿದೆ.

ಗರಿಷ್ಠ ಪಾರದರ್ಶಕ ವಲಯದಲ್ಲಿ ಬ್ರಿಟನ್ ಅಗ್ರಸ್ಥಾನದಲ್ಲಿದೆ. ಆ ನಂತರದ ಸ್ಥಾನದಲ್ಲಿ ಫ್ರಾನ್ಸ್, ಅಮೆರಿಕ, ಆಸ್ಟ್ರೇಲಿಯಾ, ಕೆನಡಾ, ನೆದರ್ಲೆಂಡ್ಸ್, ನ್ಯೂಜಿಲೆಂಡ್, ಐರ್ಲೆಂಡ್, ಸ್ವೀಡನ್, ಜರ್ಮನ್, ಜಪಾನ್, ಬೆಲ್ಜಿಯಂ ಮತ್ತು ಸಿಂಗಪುರ ಇವೆ. 22 ರಾಷ್ಟ್ರಗಳನ್ನು ಪಾರದರ್ಶಕ ರಾಷ್ಟ್ರಗಳೆಂದು ವರ್ಗೀಕರಿಸಲಾಗಿದೆ. ಇದರಲ್ಲಿ ಫಿನ್ಲೆಂಡ್ ಅಗ್ರಸ್ಥಾನದಲ್ಲಿದೆ. ಈ ವಲಯದಲ್ಲಿ ಭಾರತ ಇದೆ. ಉಳಿದ ದೇಶಗಳು ಅರೆ ಪಾರದರ್ಶಕ ಮತ್ತು ಕಡಿಮೆ ಪಾರದರ್ಶಕ ವಲಯದಲ್ಲಿವೆ. 'ದೇಶದ ರಿಯಲ್ ಎಸ್ಟೇಟ್ ಕ್ಷೇತ್ರದ ಸುಧಾರಣೆಗಾಗಿ ರೇರಾ ಕಾಯ್ದೆ ಜಾರಿಯಾಗಿದೆ. ಇದರಡಿ ಹೂಡಿಕೆದಾರರಿಗೆ ರಕ್ಷಣೆ ಸಿಕ್ಕಿದೆ. ಭೂ ದಾಖಲೆಗಳ ಡಿಜಿಟಲೀಕರಣವು ಹೆಚ್ಚಿನ ಪಾರದರ್ಶಕತೆಗೆ ಒತ್ತು ನೀಡಿದೆ. ಇದು ರಿಯಾಲ್ಟಿ ವಲಯದ ಬೆಳವಣಿಗೆಗೆ ಸಹಕಾರಿಯಾಗಿದೆ' ಎಂದು ವರದಿ ಹೇಳಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಹುಟ್ಟು ಹಬ್ಬದ ಸವಿನೆನಪು



ಬಿ.ನಾರಾಯಣ ರೆಡ್ಡಿ (ಬಿ.ಎನ್.ಬಿ)
ಸೀತಾರಾಮಪಾಳ್ಯ
97 ನೇ ವರ್ಷದ ಹುಟ್ಟು ಹಬ್ಬದ ಪ್ರೀತಿಯ ಶುಭಾಶಯಗಳು
"ನಿಮ್ಮ ಆದರ್ಶ ಜೀವನವು ಎಲ್ಲರ ಪ್ರೀತ್ಯಾದರಕ್ಕೆ ಪಾತ್ರವಾಗಿದ್ದು ನಿಮ್ಮ ಸವಿನೆನಪು ನಮ್ಮ ಹೃದಯದಲ್ಲಿ ಸದಾ ಹಸಿರಾಗಿರುವುದು. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ದಯಪಾಲಿಸಲೆಂದು ಪ್ರಾರ್ಥಿಸುವ."
– ಬಿ.ಎನ್.ಬಿ.ಕುಟುಂಬದವರು ಮತ್ತು ಸ್ನೇಹಿತರು

33 ನೇ ವರ್ಷದ ಪುಣ್ಯತಿಥಿ

ಶ್ರೀಮತಿ ಮೀನಮ್ಮ
ಶ್ರೀ ಬಿ. ನಾರಾಯಣರೆಡ್ಡಿಯವರ ಧರ್ಮಪತ್ನಿ
ಸೀತಾರಾಮಪಾಳ್ಯ
ನಿಧನ: 28–8–1991
"ನಿಮ್ಮ ಆದರ್ಶ ಜೀವನವು ಎಲ್ಲರ ಪ್ರೀತ್ಯಾದರಕ್ಕೆ ಪಾತ್ರವಾಗಿದ್ದು ನಿಮ್ಮ ಸವಿನೆನಪು ನಮ್ಮ ಹೃದಯದಲ್ಲಿ ಸದಾ ಹಸಿರಾಗಿರುವುದು. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ದಯಪಾಲಿಸಲೆಂದು ಪ್ರಾರ್ಥಿಸುವ."
–ಬಿ.ಎನ್.ಬಿ.ಕುಟುಂಬದವರು ಮತ್ತು ಸ್ನೇಹಿತರು

4ನೇ ವರ್ಷದ ಪುಣ್ಯಸ್ಮರಣೆ

1936 – 2020
ಶ್ರೀಯುತ ಎನ್. ಗಂಗಯ್ಯನವರು
ಶ್ರೀ ಗೋಪಿವೆಂಕಟೇಶ್ವರ ಕಲ್ಯಾಣ ಮಂಟಪದ ಮಾಲೀಕರು, ನೆಲಮಂಗಲ
ಸದಾ ನಿಮ್ಮ ನೆನಪಿನಲ್ಲಿ: ಶ್ರೀಮತಿ ಕೆ.ಜಿ. ಜಯಲಕ್ಷ್ಮಮ್ಮನವರು, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರು, ಮತ್ತು ಜಿ. ಗೋಪಿನಾಥ್
ಮೊ: 9945236300

NAME CHANGE ANNOUNCEMENT
Log on to :
dhclassifieds.com

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಊರು ಮತ್ತು ಹೆಸರು ಬೇಡ.

- **ಪ್ರಶ್ನೆ:** ನನ್ನ ವಯಸ್ಸು 74 ವರ್ಷ. ವಾರ್ಷಿಕ ಆದಾಯ ₹2 ಲಕ್ಷಕ್ಕಿಂತ ಕಡಿಮೆ ಇದೆ. ಅದರಲ್ಲಿ ನನ್ನ ನಿತ್ಯದ ಖರ್ಚು ಮತ್ತು ದುಬಾರಿ ವೈದ್ಯಕೀಯ ವೆಚ್ಚ ಪೂರೈಸಿಕೊಳ್ಳುವುದು ಕಷ್ಟವಿದೆ. ಆ ಕಾರಣದಿಂದ ನನ್ನಲ್ಲಿರುವ ಒಂದು ನಿವೇಶನ ಹಾಗೂ ಮತ್ತೊಂದು ಮನೆ (ಆರ್‌ಸಿಸಿ ಕಟ್ಟಡ) ಎರಡನ್ನೂ ಮಾರಬೇಕೆಂದಿದ್ದೇನೆ.

ಈ ಎರಡೂ ನಿವೇಶನಗಳನ್ನು ನಾನು 1993ರಲ್ಲಿಖರೀದಿಸಿರುತ್ತೇನೆ. ಇದರಲ್ಲಿ ಒಂದು ನಿವೇಶನದಲ್ಲಿ 1999ರಲ್ಲಿ ವಾಸಕ್ಕೆ ಮನೆ ಕಟ್ಟಿಕೊಂಡಿದ್ದು, ಮತ್ತೊಂದು ನಿವೇಶನ ಖಾಲಿ ಇದೆ. 2024ರ ಜುಲೈನಲ್ಲಿ ಮಂಡಿಸಿದ ಬಜೆಟ್‌ನಲ್ಲಿ ಕ್ಯಾಪಿಟಲ್ ಗೇನ್ಸ್ (ಬಂಡವಾಳ ಗಳಿಕೆ) ಟ್ಯಾಕ್ಸ್ ಬಗ್ಗೆ ಮಾಡಿದ ಬದಲಾವಣೆಗಳ ನಂತರ, 2024ರ ಜುಲೈ 23ಕ್ಕಿಂತ ಹಿಂದೆ ಖರೀದಿಸಿದ್ದ ಆಸ್ತಿಗಳ ಬಗ್ಗೆ, ಹಳೆಯ ಪದ್ಧತಿಯಂತೆ ಇನ್‌ಡೆಕ್ಸೇಷನ್ ಸೌಕರ್ಯ ಸಹಿತವಾಗಿ ಶೇ 20ರ ತೆರಿಗೆಯ ಕ್ರಮ ಅಥವಾ ಹೊಸ ಪದ್ಧತಿಯಂತೆ ಇನ್‌ಡೆಕ್ಸೇಷನ್ ಸೌಲಭ್ಯ ಇಲ್ಲದ ಶೇ 12.5ರ ತೆರಿಗೆಯ ಕ್ರಮ, ಎರಡರಲ್ಲಿ ಯಾವುದನ್ನಾದರೂ ಆಯ್ಕೆ ಮಾಡುವ ಅವಕಾಶ ಕಲ್ಪಿಸಿ ಮಾಡಿದ ಪರಿಷ್ಕರಣೆಯ ಬಗ್ಗೆ ಪತ್ರಿಕೆಯಲ್ಲಿ ಓದಿರುತ್ತೇನೆ.

ಅಲ್ಲದೆ ವಾರಕ್ಕೂ ಹಿಂದೆ ಶೇ 12.5ರ ತೆರಿಗೆಯ ಹೊಸ ಪದ್ಧತಿಯಲ್ಲೂ ಇನ್‌ಡೆಕ್ಸೇಷನ್ ಸೌಲಭ್ಯ ಇರದಿದ್ದರೂ 2001ರ ಏಪ್ರಿಲ್ 1ಕ್ಕಿಂತ ಮೊದಲು ಖರೀದಿಸಿದ್ದ ಆಸ್ತಿಗಳಿಗೆ 2001ರ ಎಫ್‌ಎಂವಿ (ಮಾರುಕಟ್ಟೆ ಸಮಂಜಸ ದರ) ಸೌಲಭ್ಯ ಪಡೆಯಬಹುದು ಅಂತ ಓದಿರುವೆ.

ನನ್ನ ಪ್ರಶ್ನೆ ಈ ಕೆಳಗಿನಂತಿವೆ.

1. ನಾನು ಮಾರಾಟ ಮಾಡಲು ಬಯಸಿದ ಆಸ್ತಿಗಳು 2001ಕ್ಕೂ ಸಾಕಷ್ಟು ಹಿಂದೆಯೇ ಖರೀದಿ ಆಗಿವೆ. ಈ ಎಫ್‌ಎಂವಿ ಮೌಲ್ಯದ ಮಾಹಿತಿ ಹೇಗೆ ತಿಳಿಯಬೇಕು?
2. ಹೊಸ ಪದ್ಧತಿಯಲ್ಲಿ ಇನ್‌ಡೆಕ್ಸೇಷನ್ ಸೌಲಭ್ಯ ಇರದಿದ್ದರೂ ಕಟ್ಟಡದ ನಿರ್ಮಾಣ ವೆಚ್ಚ, ಮತ್ತೆ ಇಲ್ಲಿಯವರೆಗೆ ಮಾಡಿದ ಪೇಂಟಿಂಗ್, ದುರಸ್ತಿ, ಕಂದಾಯ ಪಾವತಿ ಇತ್ಯಾದಿ ವಿವಿಧ ರೀತಿಯ ವೆಚ್ಚಗಳನ್ನು, ದೀರ್ಘಾವಧಿ ಬಂಡವಾಳದ ಲಾಭದಲ್ಲಿ ಕಡಿತಗೊಳಿಸಿ ತೆರಿಗೆ ಲೆಕ್ಕ ಹಾಕುವ ಅವಕಾಶ ಇದೆಯೇ?
3. ಖಾಲಿ ನಿವೇಶನ ಮತ್ತು ಕಟ್ಟಡ ಎರಡೂ ನನ್ನವೇ ಆಗಿದ್ದರೂ, ಅವನ್ನು ಖರೀದಿಸುವವರು ಬೇರೆ ಬೇರೆ ವ್ಯಕ್ತಿಗಳು. ಆದರೆ, ಎರಡೂ ಸ್ವತ್ತುಗಳೂ ಒಂದೇ ಆರ್ಥಿಕ ವರ್ಷದಲ್ಲಿ ಕೆಲವು ತಿಂಗಳ ಅಂತರದಲ್ಲಿ ಮಾರಾಟ ಆಗುವ ಸಾಧ್ಯತೆ ಇದೆ. ಈ ಸಂದರ್ಭದಲ್ಲಿ ನಾನು ನಿವೇಶನ ಮಾರಾಟದಿಂದ ಬರುವ ದೀರ್ಘಾವಧಿ ಬಂಡವಾಳ ಲಾಭದ ಬಗ್ಗೆ ಇನ್‌ಡೆಕ್ಸೇಷನ್ ಸೌಲಭ್ಯ ಇರದ ಶೇ 12.5ರ ತೆರಿಗೆಯ ಹೊಸ ಕ್ರಮವನ್ನೂ, ಕಟ್ಟಡ ಮಾರಾಟದಿಂದ ಬರುವ ದೀರ್ಘಾವಧಿ ಬಂಡವಾಳ ಲಾಭಕ್ಕೆ ಇನ್‌ಡೆಕ್ಸೇಷನ್ ಸೌಲಭ್ಯ ಸಹಿತವಾದ ಶೇ 20ರ ತೆರಿಗೆಯ ಹಳೆಯ ಕ್ರಮವನ್ನು ಪ್ರತ್ಯೇಕವಾಗಿ ಆಯ್ಕೆ ಮಾಡಿಕೊಳ್ಳಲು ಅವಕಾಶ ಇದೆಯಾ?

ದಯವಿಟ್ಟು ಈ ಎಲ್ಲಾ ವಿಷಯಗಳ ಬಗ್ಗೆ ಮಾಹಿತಿ ನೀಡಲು ಮನವಿ.

ಉತ್ತರ: ನಿಮ್ಮ ಪ್ರಶ್ನೆ ಬಹಳ ಸುದೀರ್ಘವಾಗಿರುವುದರಿಂದ ಕ್ಲುಪ್ತವಾಗಿ ಹಾಗೂ ಅಗತ್ಯವುಳ್ಳ ಮಾಹಿತಿ ಮಾತ್ರ ನೀಡುತ್ತಿದ್ದೇನೆ. ಮಾರುಕಟ್ಟೆ ಸಮಂಜಸ ದರವನ್ನು ಮಾನ್ಯತೆ ಪಡೆದ ಸ್ಥಿರಾಸ್ತಿ ಮೌಲ್ಯಮಾಪಕರು ಆಯಾ ಸ್ಥಳ, ಅಲ್ಲಿನ ಸೌಲಭ್ಯ, ಹಿಂದಿನಿಂದ ಬೆಳೆದು ಬಂದ ಭೂ ಸುಧಾರಣೆ, ಮುಂದಿನ ಪ್ರಗತಿಯ ಸಾಧ್ಯತೆ ಇತ್ಯಾದಿ ಅಂಶಗಳನ್ನು ಗಮನದಲ್ಲಿಟ್ಟು ನಿಗದಿಪಡಿಸುತ್ತಾರೆ. ಕೆಲವೊಂದು ಬಾರಿ ಅನೇಕ ವರ್ಷ ಹಿಂದೆ ಖರೀದಿಸಿದ್ದ ಭೂಮಿಯ ನಿಜವಾದ ಮೌಲ್ಯ ತುಂಬಾ ಕಡಿಮೆ ಇದ್ದಿರಬಹುದು ಅಥವಾ ಅದರ ಮಾಹಿತಿ ಸರಿಯಾಗಿ ಸಿಗದೆ ಇರಬಹುದು. ಇಂತಹ ಸಂದರ್ಭದಲ್ಲಿ ಮಾರುಕಟ್ಟೆ ಸಮಂಜಸ ದರವನ್ನು ತೆರಿಗೆ ಲೆಕ್ಕ ಹಾಕಲು ಬೇಕಾದ ಇನ್‌ಡೆಕ್ಸೇಷನ್ ಆಧಾರಿತ ಆಸ್ತಿ ಮೌಲ್ಯದ ನಿರ್ಧಾರಕ್ಕೆ ಪರಿಗಣಿಸಲಾಗುತ್ತದೆ.

ಈ ಮೌಲ್ಯದ ಮೇಲೆ ಇನ್‌ಡೆಕ್ಸೇಷನ್ ದರವನ್ನು ಅನ್ವಯಿಸಲಾಗುತ್ತದೆ. ಆರ್ಥಿಕ ವರ್ಷ 2024-25ರ ಈ ಮೌಲ್ಯ 363 ಆಗಿದೆ. ಉದಾಹರಣೆಗೆ 2001ರಲ್ಲಿ ನಿಮ್ಮ ಆಸ್ತಿಯ ಮಾರುಕಟ್ಟೆ ಸಮಂಜಸ ದರ ₹5 ಲಕ್ಷ ಇದ್ದರೆ, ಇಂದು ಅದರ ಮೌಲ್ಯ ₹ 18.15 ಲಕ್ಷ ಎಂದರ್ಥ. ನಿಮ್ಮ ನಿಜವಾದ ಅಸಲು ₹1 ಲಕ್ಷವಾಗಿದ್ದರೂ, ಇಲ್ಲಿ ತೆರಿಗೆ ಲೆಕ್ಕ ಹಾಕುವ ಉದ್ದೇಶಕ್ಕಾಗಿ ₹5 ಲಕ್ಷ ಮೌಲ್ಯ ಪರಿಗಣಿಸಿ ಇನ್‌ಡೆಕ್ಸೇಷನ್‌ಗೆ ಅವಕಾಶ ನೀಡಲಾಗಿದೆ. ಇದು ಬಜೆಟ್‌ಗಿಂತ ಮೊದಲು ಖರೀದಿಸಿದ ಆಸ್ತಿಗಳಿಗೆ ಮಾತ್ರ ಅನ್ವಯವಾಗುತ್ತದೆ. ಹೀಗಾಗಿ ಹಳೆಯ ಆಸ್ತಿಗಳಿಗೆ ಸಂಬಂಧಿಸಿ ಹಿಂದೆ ಇದ್ದಂತೆ ಯಥಾಸ್ಥಿತಿಯನ್ನು ಕಾಯ್ದುಕೊಳ್ಳಲಾಗಿದೆ.

ಯಾವುದೇ ಸ್ಥಿರಾಸ್ತಿಯ ಅಸಲು ಲೆಕ್ಕ ಹಾಕುವಾಗ, ಖರೀದಿಗೆ ಸಂಬಂಧಿತ ಮೂಲ ವೆಚ್ಚ, ಕಟ್ಟಡದ ನಿರ್ಮಾಣಕ್ಕೆ ಸಂಬಂಧಿತ ವೆಚ್ಚ, ಅದರ ಹಂತ ಹಂತದ ಅಭಿವೃದ್ಧಿಗೆ ಸಂಬಂಧಿಸಿ ಕೈಗೊಳ್ಳುವ ಮೌಲ್ಯವರ್ಧಿತ ವೆಚ್ಚ ಇತ್ಯಾದಿಯನ್ನು ಪರಿಗಣಿಸಿಕೊಳ್ಳುವ ಅವಕಾಶ ಇದೆ. ಆದರೆ, ಕಟ್ಟಡದ ಸಾಮಾನ್ಯ ನಿರ್ವಹಣಾ ವೆಚ್ಚ (ಉದಾ: ಸುಣ್ಣ-ಬಣ್ಣ, ತೆರಿಗೆ, ದುರಸ್ತಿ ವೆಚ್ಚ) ಇತ್ಯಾದಿಯನ್ನು ಅಸಲು ಮೊತ್ತಕ್ಕೆ ಪರಿಗಣಿಸುವ ಅವಕಾಶ ಇಲ್ಲ. ಕಾರಣ ಇವು ಆಸ್ತಿಯನ್ನು ಚೆನ್ನಾಗಿ ಕಾಣುವಂತೆ ಮಾಡಿದರೂ, ಮೂಲ ಉಪಯುಕ್ತತೆ ಹೆಚ್ಚಿಸುವಲ್ಲಿ ನೆರವಾಗುವುದಿಲ್ಲ.

ನೀವು ಓದಿ ತಿಳಿದಿರುವಂತೆ ಪ್ರತ್ಯೇಕವಾದ ಎರಡು ತೆರಿಗೆ ಪದ್ಧತಿ ಅಡಿ ನಿಮಗೆ ಲಾಭದಾಯಕವಾದ ತೆರಿಗೆ ಪದ್ಧತಿಯ ಆಯ್ಕೆಗೆ ಅವಕಾಶ ಇದೆ. ನೀವು ಎರಡು ಪ್ರತ್ಯೇಕ ಆಸ್ತಿಗಳನ್ನು ಮಾರಾಟ ಮಾಡುತ್ತಿರುವ ಕಾರಣ ನಿಮ್ಮ ತೆರಿಗೆ ಉಳಿತಾಯದ ದೃಷ್ಟಿಯಲ್ಲಿ ಯಾವ ತೆರಿಗೆ ಪದ್ಧತಿಯ ಆಯ್ಕೆ ಯಾವ ಆಸ್ತಿಗೆ ಸೂಕ್ತ ಎಂಬುದನ್ನು ಬದಲಾದ ಸನ್ನಿವೇಶದಲ್ಲಿ ತೆರಿಗೆ ಲೆಕ್ಕ ಹಾಕಿ ನೋಡಿ. ನಿಮಗೆ ಸೂಕ್ತವಾದ ತೆರಿಗೆ ಪದ್ಧತಿಯ ಆಯ್ಕೆಗೆ ಅವಕಾಶ ಇದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ-ಮೇಲ್: businessdesk@prajavani.co.in

ಶೀಘ್ರ ಉತ್ಪನ್ನಗಳು ಲಭ್ಯ • ಸನ್ ಪ್ಲಸ್‌ನಿಂದ ಸಾಫ್ಟ್‌ವೇರ್ ಅಭಿವೃದ್ಧಿ

ಇ–ಕಾಮರ್ಸ್‌ಗೆ ಕಾಲಿಟ್ಟ ಲಿಡ್ಕರ್

• ಗೋವರ್ಧನ ಎಸ್.ಎನ್.

ಹುಬ್ಬಳ್ಳಿ: ಡಾ.ಬಾಬು ಜಗಜೀವನರಾಂ ಚರ್ಮೋತ್ಪನ್ನ ಕೈಗಾರಿಕೆಗಳ ಅಭಿವೃದ್ಧಿ ನಿಗಮದ (ಲಿಡ್ಕರ್) ಉತ್ಪನ್ನಗಳು, ಶೀಘ್ರವೇ ಇ-ಕಾಮರ್ಸ್ ವೇದಿಕೆಗಳಲ್ಲಿ ಗ್ರಾಹಕರ ಖರೀದಿಗೆ ದೊರೆಯಲಿವೆ.

ಚರ್ಮದ ಶೂ, ಚಪ್ಪಲಿ, ಪರ್ಸ್, ಬೆಲ್ಟ್, ಬ್ಯಾಗ್‌ಗಳನ್ನು ಇ-ಕಾಮರ್ಸ್ ವೇದಿಕೆಯಡಿ ಮಾರಾಟಕ್ಕೆ ಲಿಡ್ಕರ್ ಸಂಸ್ಥೆಯು ಸಿದ್ಧತೆ ನಡೆಸಿದೆ.

'ಇ-ಕಾಮರ್ಸ್ ಪ್ರಕ್ರಿಯೆಗೆ ಕರೆದ ಟೆಂಡರ್‌ನಲ್ಲಿ ಸನ್ ಪ್ಲಸ್ ಏಜೆನ್ಸಿ ಆಯ್ಕೆಯಾಗಿದೆ. ಅಮೆಜಾನ್, ಫ್ಲಿಪ್‌ಕಾರ್ಟ್‌ನಂತಹ ಇ-ಕಾಮರ್ಸ್ ವೇದಿಕೆಗಳಲ್ಲಿ ಲಿಡ್ಕರ್ ಉತ್ಪನ್ನಗಳು ಲಭ್ಯವಾಗಲು ಅಗತ್ಯ ಸಾಫ್ಟ್‌ವೇರ್ ಅಭಿವೃದ್ಧಿ ಕೆಲಸ ನಿರ್ವಹಿಸುತ್ತಿದೆ. ಈಗಾಗಲೇ, ಅಂಚೆ ಕಚೇರಿಯೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಆನ್‌ಲೈನ್‌ನಲ್ಲಿ ದರ ಪಾವತಿಗಾಗಿ ಪೇಮೆಂಟ್ ಗೇಟ್ ವೇ ಖರೀದಿಗೆ ಕೆನರಾ ಬ್ಯಾಂಕ್ ಜೊತೆಗೆ ಒಪ್ಪಂದ ಮಾಡಿಕೊಳ್ಳಲಾಗುವುದು' ಎಂದು ಲಿಡ್ಕರ್ ವ್ಯವಸ್ಥಾಪಕ ನಿರ್ದೇಶಕಿ ವಸುಂಧರಾ 'ಪ್ರಜಾವಾಣಿ'ಗೆ ತಿಳಿಸಿದರು.

'ಉತ್ಪನ್ನಗಳ '3 ಡಿ' ಚಿತ್ರಗಳನ್ನು ತೆಗೆಯಬೇಕಿದೆ. ದರ, ಲಭ್ಯತೆ, ಬಣ್ಣ, ವಿಧ, ಅಳತೆ ಮಾಹಿತಿ ಸಿದ್ಧಪಡಿಸಿ, ಸಾಫ್ಟ್‌ವೇರ್ ವಿನ್ಯಾಸವನ್ನು ಅಂತಿಮಗೊಳಿಸಬೇಕಿದೆ. ತಾಂತ್ರಿಕ ತೊಂದರೆಗಳನ್ನು ನಿವಾರಿಸಿ ಆಗಸ್ಟ್ ಅಂತ್ಯಕ್ಕೆ ಅಥವಾ ಸೆಪ್ಟೆಂಬರ್ ಆರಂಭದಲ್ಲಿ ಸಾಫ್ಟ್‌ವೇರ್ ಬಿಡುಗಡೆ ಆಗಲಿದೆ' ಎಂದರು.

ರಾಜ್ಯದಲ್ಲಿ 18 ಲಿಡ್ಕರ್ ಉತ್ಪನ್ನ ಮಾರಾಟ ಮಳಿಗೆಗಳಿವೆ. ಇ-ಕಾಮರ್ಸ್‌ನಿಂದ ಉತ್ಪನ್ನ ಮಾರಾಟಕ್ಕೆ ಅತ್ಯಾಧುನಿಕ ವೇದಿಕೆ ಸಿಗಲಿದೆ

ವಸುಂಧರಾ, ವ್ಯವಸ್ಥಾಪಕ ನಿರ್ದೇಶಕಿ, ಲಿಡ್ಕರ್

ಶಾಲಾ ವಿದ್ಯಾರ್ಥಿಗಳಿಗೆ ಶೂ ಪೂರೈಕೆ

'ಲಿಡ್ಕರ್ ಉತ್ಪನ್ನಗಳಿಗೆ ನಟ ಡಾಲಿ ಧನಂಜಯ ರಾಯಭಾರಿ ಆಗಿದ್ದಾರೆ. ಲಿಡ್ಕರ್ ಸಂಸ್ಥೆಯ ಅಭಿವೃದ್ಧಿಗೆ ಪೂರಕವಾಗಿ ಕಾರ್ಯಗಳು ನಡೆದಿವೆ. ಸಂಸ್ಥೆಗೆ ಸೇರಿದ ತಯಾರಿಕಾ ಘಟಕಗಳು ಇರದ ಕಾರಣ, ಫಲಾನುಭವಿಗಳು ಹಾಗೂ ವ್ಯಾಪಾರಿಗಳಿಂದ ಖರೀದಿಸುವ ಉತ್ಪನ್ನಗಳ ಗುಣಮಟ್ಟ ಪರಿಶೀಲನೆಗೆ ಸಮಿತಿ ರಚಿಸಲಾಗಿದೆ' ಎಂದು ವಸುಂಧರಾ ಹೇಳಿದರು.

'ಪೊಲೀಸರಿಗೆ ಶೂ ಪೂರೈಸಲು ಮಾತುಕತೆ ನಡೆದಿದೆ. ವಸತಿ ಶಾಲೆ ವಿದ್ಯಾರ್ಥಿಗಳಿಗೆ ಶೂ ಭಾಗ್ಯ ಯೋಜನೆಯಡಿ ಶೂ ಪೂರೈಸಲಾಗಿದೆ. ಮೈಸೂರು, ಚಾಮರಾಜನಗರ ಹಾಗೂ ಮಂಡ್ಯದಲ್ಲಿ ಸರ್ಕಾರಿ ಶಾಲೆ ಮಕ್ಕಳಿಗೂ ಶೂ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಖಾಸಗಿ ಶಾಲೆಗಳಿಗೂ ಶೂ ಪೂರೈಸಲು ಮಾತುಕತೆ ನಡೆಸಲಾಗುವುದು. ಇತರೆ ಕಂಪನಿಗಳಿಂತ ಕಡಿಮೆ ಮೊತ್ತದಲ್ಲಿ ಉತ್ತಮ ಗುಣಮಟ್ಟದ ಉತ್ಪನ್ನ ಪೂರೈಸಲು ಶ್ರಮಿಸಲಾಗುತ್ತಿದೆ' ಎಂದರು.

ಕೆ.ಜಿ ಬೆಳ್ಳುಳ್ಳಿಗೆ ₹400 ಧಾರಣೆ

ಒಂದನೇ ಪುಟದಿಂದ...

ಬೆಂಗಳೂರಿನ ಯಶವಂತಪುರದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಈ ಮೊದಲು ಪ್ರತಿದಿನ 5 ಸಾವಿರದಿಂದ 6 ಸಾವಿರ ಚೀಲ (ಪ್ರತಿ ಚೀಲ 50 ಕೆ.ಜಿ) ಆವಕವಾಗುತ್ತಿತ್ತು. ಸದ್ಯ 3 ಸಾವಿರ ಚೀಲ ಆವಕವಾಗುತ್ತಿದೆ. ಇಲ್ಲಿಂದ ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಮಂಡ್ಯ, ಮೈಸೂರಿಗೂ ರವಾನೆಯಾಗುತ್ತದೆ. ಬೆಂಗಳೂರಿನ ಗಡಿ ಭಾಗದಲ್ಲಿ ಇರುವ ತಮಿಳುನಾಡಿನ ಹೊಸೂರು ಸೇರಿ ಹಲವು ಪ್ರದೇಶಗಳಿಗೂ ಇಲ್ಲಿಂದಲೇ ಪೂರೈಕೆಯಾಗುತ್ತದೆ.

ಮಧ್ಯಪ್ರದೇಶದಿಂದ ಸದ್ಯ ಪೂರೈಕೆಯಾಗುತ್ತಿರುವ ಬೆಳ್ಳುಳ್ಳಿಯು ಬೆಂಗಳೂರು ನಗರದ ಬೇಡಿಕೆಯನ್ನು ಪೂರೈಸಲು ಸಾಧ್ಯವಾಗುತ್ತಿಲ್ಲ ಎಂದು ವ್ಯಾಪಾರಿಗಳು ವಿವರಿಸುತ್ತಾರೆ.

'ಮಧ್ಯಪ್ರದೇಶದಲ್ಲಿ ವ್ಯಾಪಾರಿಗಳ ಬಳಿ ಬೆಳ್ಳುಳ್ಳಿ ದಾಸ್ತಾನಿಲ್ಲ. ರೈತರ ಬಳಿ ದಾಸ್ತಾನು ಇದೆ. ಅವರು ಮಾರುಕಟ್ಟೆಯಲ್ಲಿನ ಬೆಲೆಯ ಸ್ಥಿತಿಗತಿ ಅವಲೋಕಿಸಿ ಮಾರಾಟ ಮಾಡುತ್ತಾರೆ. ಈಗ ಬಿತ್ತನೆ ಮಾಡಿರುವ ಬೆಳ್ಳುಳ್ಳಿಯು ಮುಂದಿನ ವರ್ಷದ ಜನವರಿಗೆ ಕಟಾವಿಗೆ ಬರಲಿದೆ. ಹಾಗಾಗಿ, ಮುಂಬರುವ ತಿಂಗಳುಗಳಲ್ಲಿ ಧಾರಣೆಯು ಮತ್ತಷ್ಟು ಏರಿಕೆಯಾಗುವ ಸಾಧ್ಯತೆಯಿದೆ' ಎಂದು ಬೆಂಗಳೂರಿನ ಗುಜರಾತ್ ಟ್ರೇಡರ್ಸ್‌ನ ವರ್ತಕ ಜುಬೇರ್ ಹೇಳುತ್ತಾರೆ.

'ಚೀನಾದಿಂದ ಭಾರತಕ್ಕೆ ಅಕ್ರಮವಾಗಿ ಬೆಳ್ಳುಳ್ಳಿ ಪೂರೈಕೆಯಾಗುತ್ತಿದೆ. ಆದರೆ, ಇದು ಗುಣಮಟ್ಟದಿಂದ ಕೂಡಿಲ್ಲ. ಗ್ರಾಹಕರು ಇದನ್ನು ಖರೀದಿಸುವುದು ಕಡಿಮೆ' ಎನ್ನುತ್ತಾರೆ.

'ಮಂಗಳವಾರದಂದು ಯಶವಂತಪುರದ ಮಾರುಕಟ್ಟೆಯಲ್ಲಿ 'ಎ' ದರ್ಜೆಯ ಹೈಬ್ರೀಡ್ ಬೆಳ್ಳುಳ್ಳಿಯ ಸಗಟು ಧಾರಣೆ ಕೆ.ಜಿಗೆ ₹420ಕ್ಕೆ ಮುಟ್ಟಿತ್ತು. ಹಾಗಾಗಿ, ಈ ವಾರದಲ್ಲಿ ಚಿಲ್ಲರೆ ಧಾರಣೆಯು ₹450 ದಾಟುವ ಸಾಧ್ಯತೆಯಿದೆ' ಎಂದು ವಿವರಿಸುತ್ತಾರೆ.

ಚಿನ್ನ, ಬೆಳ್ಳಿ ದರ ಏರಿಕೆ

ನವದೆಹಲಿ (ಪಿಟಿಐ): ದೇಶೀಯ ಆಭರಣ ತಯಾರಕರಿಂದ ಬೇಡಿಕೆ ಹೆಚ್ಚಳದಿಂದಾಗಿ ಇಲ್ಲಿನ ಚಿನಿವಾರ ಪೇಟೆಯಲ್ಲಿ ಮಂಗಳವಾರ ಚಿನ್ನ ಮತ್ತು ಬೆಳ್ಳಿ ಧಾರಣೆಯು ಏರಿಕೆಯಾಗಿದೆ. 10 ಗ್ರಾಂ ಚಿನ್ನಕ್ಕೆ ₹550 ಹೆಚ್ಚಳವಾಗಿದ್ದು, ₹74,350ರಂತೆ ಮಾರಾಟವಾಗಿದೆ. ಬೆಳ್ಳಿ ಧಾರಣೆಯು ಕೆ.ಜಿಗೆ ₹1,200 ಏರಿಕೆಯಾಗಿದ್ದು, ₹88,200ಕ್ಕೆ ಮುಟ್ಟಿದೆ.

ಹೊಸ ವಾಹನಗಳಿಗೆ ರಿಯಾಯಿತಿ

ಹಳೆ ವಾಹನ ಗುಜರಿಗೆ ಹಾಕಿದ ಪ್ರಮಾಣಪತ್ರ ಕಡ್ಡಾಯ

ನವದೆಹಲಿ (ಪಿಟಿಐ): ಹಳೆಯ ವಾಹನವನ್ನು ಗುಜರಿಗೆ ಹಾಕಿ ಹೊಸ ವಾಹನ ಖರೀದಿಸುವವರಿಗೆ ಈ ಹಬ್ಬದ ಋತುವಿನಲ್ಲಿ ಶೇ 1.5ರಿಂದ ಶೇ 3ರಷ್ಟು ರಿಯಾಯಿತಿ ನೀಡುವುದಾಗಿ ಆಟೊಮೊಬೈಲ್ ಕಂಪನಿಗಳು ಘೋಷಿಸಿವೆ.



ನಿತಿನ್ ಗಡ್ಕರಿ

ದರ ಕಡಿತದ ಈ ಸೌಲಭ್ಯ ಪಡೆಯಲು ಖರೀದಿದಾರರು ಹಳೆಯ ವಾಹನವನ್ನು ಗುಜರಿಗೆ ಹಾಕಿದ ನಂತರ ಪ್ರಮಾಣ ಪತ್ರ ಪಡೆಯಬೇಕಿದೆ. ಅಂತಹ ಖರೀದಿದಾರರಿಗೆ ಈ ಸೌಲಭ್ಯ ಕಲ್ಪಿಸಲು ಮುಂದಾಗಿವೆ ಎಂದು ಕೇಂದ್ರ ರಸ್ತೆ ಸಾರಿಗೆ ಹಾಗೂ ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.

ಭಾರತೀಯ ವಾಹನ ತಯಾರಕರ ಒಕ್ಕೂಟದ ಪ್ರತಿನಿಧಿಗಳ ನಿಯೋಗದ ಜೊತೆಗೆ ಮಂಗಳವಾರ ಗಡ್ಕರಿ ಮಾತುಕತೆ ನಡೆಸಿದರು.

ರಿಯಾಯಿತಿ ಎಷ್ಟು?: ಮರ್ಸಿಡಿಸ್ ಬೆಂಜ್ ಇಂಡಿಯಾ ₹25 ಸಾವಿರ ರಿಯಾಯಿತಿ ಪ್ರಕಟಿಸಿದೆ.

ವಾಣಿಜ್ಯ ವಾಹನಗಳ ತಯಾರಕರು ಎರಡು ವರ್ಷದ ವರೆಗೆ ಹಾಗೂ ಪ್ರಯಾಣಿಕ ವಾಹನ ತಯಾರಕರು ಒಂದು ವರ್ಷದವರೆಗೆ ರಿಯಾಯಿತಿ ನೀಡಲು ಸಮ್ಮತಿಸಿವೆ ಎಂದು ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಪ್ರಯಾಣಿಕ ವಾಹನ ತಯಾರಿಕಾ ಕಂಪನಿಗಳಾದ ಮಾರುತಿ ಸುಜುಕಿ ಇಂಡಿಯಾ, ಟಾಟಾ ಮೋಟರ್ಸ್, ಮಹೀಂದ್ರ ಆ್ಯಂಡ್ ಮಹೀಂದ್ರ, ಹುಂಡೈ ಮೋಟರ್ಸ್ ಇಂಡಿಯಾ, ಕಿಯಾ ಮೋಟರ್ಸ್, ಟೊಯೊಟ, ಹೋಂಡಾ ಕಾರ್ಸ್, ಜೆಎಸ್‌ಡಬ್ಲ್ಯು ಎಂಜಿ ಮೋಟರ್ಸ್, ರೆನೊ ಇಂಡಿಯಾ, ನಿಸಾನ್ ಮೋಟರ್ ಇಂಡಿಯಾ, ಸ್ಕೋಡಾ, ಫೋಕ್ಸ್‌ವ್ಯಾಗನ್ ಇಂಡಿಯಾ ಎಕ್ಸ್ ಷೋರೂಂ ಬೆಲೆಯಲ್ಲಿ ಶೇ 1.5ರಷ್ಟು ಅಥವಾ ₹20 ಸಾವಿರ ರಿಯಾಯಿತಿ ನೀಡಲಿವೆ ಎಂದು ತಿಳಿಸಿದೆ.

ವಾಣಿಜ್ಯ ವಾಹನ ತಯಾರಿಸುವ ಟಾಟಾ ಮೋಟರ್ಸ್, ವೋಲ್ವೊ ಐಷರ್, ಅಶೋಕ್ ಲೇಲ್ಯಾಂಡ್, ಮಹೀಂದ್ರ ಆ್ಯಂಡ್ ಮಹೀಂದ್ರ, ಫೋರ್ಸ್ ಮೋಟರ್ಸ್, ಇಸುಜು ಮೋಟರ್ಸ್, ಎಸ್‌ಎಂಎಲ್ ಇಸುಜು ಕಂಪನಿಯು ಶೇ 3ರಷ್ಟು ರಿಯಾಯಿತಿ ಪ್ರಕಟಿಸಿವೆ.

ವಾಣಿಜ್ಯ ಸರಕು ಸಾಗಣೆ ವಾಹನಗಳ ದರದಲ್ಲಿ ಶೇ 3.5ರಷ್ಟು ರಿಯಾಯಿತಿ ಘೋಷಿಸಿವೆ. ಈ ಯೋಜನೆಯು ಬಸ್‌ಗಳು ಮತ್ತು ವ್ಯಾನ್‌ಗಳಿಗೂ ಅನ್ವಯವಾಗುವ ಸಾಧ್ಯತೆಯಿದೆ ಎಂದು ಸಚಿವಾಲಯ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

'ಕೋವಿಡ್ ವೇಳೆ ಫೇಸ್‌ಬುಕ್ ಮೇಲೆ ಶ್ವೇತಭವನ ಒತ್ತಡ ಹೇರಿತ್ತು'

ವಾಷಿಂಗ್ಟನ್ (ಎಪಿ): 'ಕೋವಿಡ್ 19 ಪಿಡುಗಿನ ವೇಳೆ ಕೋವಿಡ್ ಸಂಬಂಧಿತ ಮಾಹಿತಿಗಳನ್ನು ತೆಗೆದು ಹಾಕುವಂತೆ ಅಧ್ಯಕ್ಷ ಜೋ ಬೈಡನ್ ಅವರ ಆಡಳಿತ ಫೇಸ್‌ಬುಕ್ ಮೇಲೆ ಒತ್ತಡ ಹೇರಿತ್ತು. ಇಂತಹ ಒತ್ತಡದ ಬೇಡಿಕೆಗಳು ಮತ್ತೆ ಎದುರಾದರೆ ಕಡೆಗಣಿಸುವ ಸಂಕಲ್ಪವನ್ನು ಕಂಪನಿ ಮಾಡಿತ್ತು' ಎಂದು ಮೆಟಾ ಸಿಇಒ ಮಾರ್ಕ್ ಜುಕರ್‌ಬರ್ಗ್ ಹೇಳಿದ್ದಾರೆ.

ಸಂಸತ್ತಿನ ನ್ಯಾಯಾಂಗ ಸಮಿತಿಯ ಅಧ್ಯಕ್ಷರಾದ ರಿಪಬ್ಲಿಕನ್ ಪಕ್ಷದ ಸಂಸದ ಜಿಮ್ ಜೋರ್ಡಾನ್ ಅವರಿಗೆ ಬರೆದ ಪತ್ರದಲ್ಲಿ, ಜುಕರ್‌ಬರ್ಗ್ ಈ ವಿಷಯ ತಿಳಿಸಿದ್ದಾರೆ. ಅಲ್ಲದೆ, ಈ ಪತ್ರವನ್ನು ಫೇಸ್‌ಬುಕ್ ಮತ್ತು 'ಎಕ್ಸ್'ನಲ್ಲೂ ಪೋಸ್ಟ್ ಮಾಡಿದ್ದಾರೆ.

ಉಕ್ರೇನ್: ದಾಳಿ ಮುಂದುವರಿಕೆ

ಕೀವ್ (ಎಪಿ): ಡ್ರೋನ್ ಹಾಗೂ ಕ್ಷಿಪಣಿ ಬಳಸಿ ಉಕ್ರೇನ್ ಮೇಲೆ ನಡೆಸುತ್ತಿರುವ ದಾಳಿಯನ್ನು ರಷ್ಯಾ ಪಡೆಗಳು ಸೋಮವಾರ ರಾತ್ರಿಯೂ ಮುಂದುವರಿಸಿದ್ದು, ಐವರು ಮೃತಪಟ್ಟಿದ್ದಾರೆ.

'ಸೋಮವಾರ ರಾತ್ರಿಯಿಂದ ಮಂಗಳವಾರ ಬೆಳಿಗ್ಗೆವರೆಗೆ ನಿರಂತರ ದಾಳಿ ನಡೆದಿದ್ದು, 16 ಜನ ಗಾಯಗೊಂಡಿದ್ದಾರೆ. ದಾಳಿಯಿಂದಾಗಿ ಉಕ್ರೇನ್ ರಾಜಧಾನಿ ಕೀವ್‌ನ ಹೊರವಲಯದಲ್ಲಿ ಬೆಂಕಿ ಹೊತ್ತಿಕೊಂಡಿದೆ' ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ಪ್ರತ್ಯುತ್ತರ ನಿಶ್ಚಿತ: '81 ಡ್ರೋನ್‌ಗಳು ಸೇರಿದಂತೆ ಹಲವು ಕ್ಷಿಪಣಿಗಳನ್ನು ಬಳಸಿ ಉಕ್ರೇನ್ ಮೇಲೆ ದಾಳಿ ನಡೆಸ ಲಾಗಿದೆ. ಇದಕ್ಕೆ ನಾವು ಖಂಡಿತವಾಗಿ ಪ್ರತ್ಯುತ್ತರ ನೀಡುತ್ತೇವೆ' ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಹೇಳಿದ್ದಾರೆ.

ಮೋದಿ ಶ್ಲಾಘಿಸಿದ ಬೈಡನ್: ವಾಷಿಂಗ್ಟನ್ ವರದಿ (ಪಿಟಿಐ): ಶಾಂತಿ ಸಂದೇಶ ಸಾರಿ, ಉಕ್ರೇನ್‌ಗೆ ಮಾನವೀಯ ಸಹಕಾರವನ್ನು ನೀಡುವುದಾಗಿ ತಿಳಿಸಿದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ಸೋಮವಾರ ಶ್ಲಾಘಿಸಿದ್ದಾರೆ.

ಪುಟಿನ್ ಜತೆ ಮೋದಿ ಮಾತುಕತೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರೊಂದಿಗೆ ಮಂಗಳವಾರ ಸಂಭಾಷಣೆ ನಡೆಸಿದ್ದಾರೆ. ಈಚೆಗೆ ತಾವು ಕೈಗೊಂಡಿದ್ದ ಉಕ್ರೇನ್ ಪ್ರವಾಸದ ಬಗ್ಗೆಯೂ ಸೂಕ್ಷ್ಮವಾಗಿ ವಿವರ ಹಂಚಿಕೊಂಡಿದ್ದು, ರಷ್ಯಾ–ಉಕ್ರೇನ್ ಯುದ್ಧಕ್ಕೆ ಶಾಂತಿಯುತ ಪರಿಹಾರ ಒದಗಿಸಲು ಭಾರತವು ಬದ್ಧವಾಗಿದೆ ಎಂದು ಪುನರುಚ್ಚರಿಸಿದ್ದಾರೆ.

ಪ್ರಧಾನಿಯವರು ಈ ಸಂಬಂಧ 'ಎಕ್ಸ್'ನಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

ಬಾಂಗ್ಲಾ: ಮಾಜಿ ಸಚಿವ ಅರಾಫತ್ ಬಂಧನ

ಢಾಕಾ(ಪಿಟಿಐ): ಬಾಂಗ್ಲಾದ ಮಾಹಿತಿ ಮತ್ತು ಪ್ರಸಾರ ಖಾತೆ ಮಾಜಿ ಸಹಾಯಕ ಸಚಿವ ಮೊಹಮ್ಮದ್ ಅಲಿ ಅರಾಫತ್ ಅವರನ್ನು ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ಅಲಿ ವಿರುದ್ಧ ಹಲವಾರು ಪ್ರಕರಣಗಳಿವೆ. ಅಲ್ಲದೇ, ಇತ್ತೀಚೆಗೆ ಸರ್ಕಾರದ ವಿರುದ್ಧ ನಡೆದ ಪ್ರತಿಭಟನೆ ವೇಳೆ ವಿದ್ಯಾರ್ಥಿಯೊಬ್ಬನ ಕೊಲೆ ಸಂಬಂಧಿಸಿದ ಪ್ರಕರಣದಲ್ಲಿಯೂ ಅವರು ಆರೋಪ ಎದುರಿಸುತ್ತಿದ್ದಾರೆ.

ಹಸೀನಾ ವಿರುದ್ಧ ಮತ್ತೆ 5 ಪ್ರಕರಣ: ಪದಚ್ಯುತ ಪ್ರಧಾನಿ ಶೇಖ್ ಹಸೀನಾ ವಿರುದ್ಧ ಮತ್ತೆ ಐದು ಕೊಲೆ ಪ್ರಕರಣಗಳನ್ನು ದಾಖಲಿಸಲಾಗಿದೆ. ಇದರೊಂದಿಗೆ, ಅವರ ವಿರುದ್ಧ ದಾಖಲಾಗಿರುವ ಪ್ರಕರಣಗಳ ಸಂಖ್ಯೆ 71ಕ್ಕೆ ಏರಿದಂತಾಗಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Engg/ Production Technical

Linit Exports Pvt. Ltd.
having 32 CNC/ VMC Mc's at Chincholi, MIDC Solapur, MH, Looking for:
1) CNC/VMC Programmers: (5 to 10 yrs exp)
2) CNC/VMC Setters: (3 to 5 yrs exp)
3) CNC/VMC Operators: (2 to 10 yrs exp)
4) QA Engineer/ Inspector having CMM exp.
5) Lathe Operators
Call: 8108199986/ jobs@linitindia.com

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000- 86,000. (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ತಕ್ಷಣ ಬೇಕಾಗಿದ್ದಾರೆ. ಟಯೋಟಾ,TVS, ಬ್ರಿಟಾನಿಯಾ, ಟಾಟಾಮೋಟಾರ್ಸ್ ಗಳಿಗೆ SSLC,PUC,Degree,ITI, DIPLOMAದವರು.18,100/- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡಿಗಿಯರು ಬೇಕಾಗಿದ್ದಾರೆ ಊಟ ವಸತಿವಿದೆ13,000 - 17,000. 8951315839 , 9141634619

Multiple Vacancy

ವಾರ್ಡ್ ಬಾಯ್ ಮತ್ತು ಆಯಾ (ಮಹಿಳೆ) ಮತ್ತು ಅಡುಗೆ ಸಹಾಯಕ ಮಹಿಳೆ ತಕ್ಷಣ ಬೇಕಾಗಿದ್ದಾರೆ, ಉಚಿತ ಊಟ, ವಸತಿ ಸೌಲಭ್ಯವಿದೆ. ಬೆಂಗಳೂರಿನ ಸುಸಜ್ಜಿತ ವೃದ್ಧಾಶ್ರಮಕ್ಕೆ. ದೂ: 7619583088

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/- ರಿಂದ 20,000/- ESI,PF ಸೌಲಭ್ಯವಿರುತ್ತದೆ. ಬೆಂಗಳೂರು-76. ಸಂಪರ್ಕಿಸಿ: 9008835841, 9900859248

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000- 20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9663563555, 9663542555

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲಿ ವರ್ಕ್ ಫ್ರಮ್ ಹೋಮ್ ಕೆಲಸಮಾಡಿ 4000- 20,000/- ಪಡೆಯಿರಿ. ವಯೋಮಿತಿ ಇರುವುದಿಲ್ಲ. ಮೊದಲು ಬಂದವರಿಗೆ ಆದ್ಯತೆ. 8861041526, 9945791526.

ಪ್ರವಾಸ

Travel

ವಿಮಾನ ಎಸಿ ಬಸ್ಸಿನಲ್ಲಿ 17.10.2024 ದ್ವಾರಕಾ,ಸೋಮನಾಥ್ ನಿಷ್ಕಳಂಕ ಮಹಾದೇವ ಮಹಾಕಾಳೇಶ್ವರ ಓಂಕಾರೇಶ್ವರ್ 23.09.2024 23.10.2024 ಚಾರ್‌ಧಾಮ್ ಪ್ರವಾಸ 19.09.2024 ಪಿತ್ರಪಕ್ಷ ಪ್ರಯುಕ್ತ ಕಾಶಿ,ಬುದ್ಧಗಯಾ ಅಯೋಧ್ಯಾ 26.09.2024 ನೇಪಾಳ,ಮುಕ್ತಿನಾಥ ಪೋಕ್ರಾ,ಲುಂಬಿನಿ. ದಕ್ಷಿಣ ಮತ್ತು ಮಧ್ಯ ಭಾರತ ಅಂದ್ರ ಪ್ರವಾಸಗಳಿಗೆ ಸಂಪರ್ಕಿಸಿ ಏಷ್ಯನ್ ಟ್ರಾವಲ್ ಏಜೆನ್ಸಿ ಕೆಳಮಹಡಿ ಬೆಂಗಳೂರು4. 26574131 8431888138 8262573686 8317446683

16.09.2024 12ದಿನಗಳು ದೆಹಲಿ,ಬದ್ರಿನಾಥ್ ಕೇದಾರನಾಥ ಗಂಗೋತ್ರಿ,ಯಮುನೋತ್ರಿ (ಕೆಲವೇ`ಸೀಟುಗಳುವೆ) 42000/ `03.10.2024 6ದಿನಗಳು`ಕಾಶಿ, ಅಯೋಧ್ಯಾ`ಗಯಾ, ಅಲಹಾಬಾದ್`32,000/ ಸೆಪ್ಟೆಂಬರ್`ಅಕ್ಟೋಬರ್`ನಲ್ಲಿ ಅಂಡಮಾನ್`ಹವಳದ್ವೀಪ. ''ಶ್ರೀಸಾಯಿ`ರಾಘವೇಂದ್ರ ಟ್ರಾವೆಲ್ಸ್'' 9739847429/ 9845560219

14.10.2024 15ದಿನಗಳು ಪ್ರವಾಸ ಭುವನೇಶ್ವರ್ ಕೋನಾರ್ಕ್, ಪುರಿಜಗನ್ನಾಥ್, ಗಯಾ,ಕಾಶಿ, ಅಲಹಾಬಾದ್, ಅಯೋಧ್ಯ, ನೇಪಾಳ,ಮುಕ್ತಿನಾಥ, ನೈಮಿಷಾರಣ್ಯ. 30.10.2024 ಅಷ್ಟಜ್ಯೋತಿರ್ಲಿಂಗ ಪ್ರವಾಸ. ಮಹಾರಾಷ್ಟ್ರ, ಮಧ್ಯಪ್ರದೇಶ ಗುಜರಾತ್. ಸಂಪರ್ಕಿಸಿ: ಏಷ್ಯನ್ ಟೂರ್ಸ್ ಅಂಡ್ ಟ್ರಾವಲ್ಸ್, ಬೆಂಗಳೂರು-70. 9342287551, 8050629305

ದಸರಾ ರಜೆಯಲ್ಲಿ ರಿಯಾಯಿತಿ ದರದಲ್ಲಿ ವಿದೇಶ ಪ್ರವಾಸ. 7/11 ದಿನಗಳ ಸಿಂಗಾಪುರ್, ಮಲೇಶಿಯಾ, ಥೈಲ್ಯಾಂಡ್. 6ದಿನಗಳ ಶ್ರೀಲಂಕಾ ಪ್ರವಾಸ. 6 ದಿನಗಳ ದುಬೈ ಅಬುದಾಬಿ ಪ್ರವಾಸ. 6 ದಿನಗಳ ಬಾಲಿ. 18 ದಿನಗಳ ಯುಕ ಮತ್ತು ಯುರೋಪ್. ಸಂಪರ್ಕಿಸಿ: ಅರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್. 9900080793, 9900080796, 080-26617178

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಉದ್ಯೋಗಕ್ಕಾಗಿ

BOOK YOUR JOB ADS IN PRAJAVANI ALL KARNATAKA ON WEDNESDAY + SUNDAY
@500/-* PER SQCM
SINGLE / DOUBLE / MULTIPLE COLUMN
www.dhclassifieds.com
BOOK NOW
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9901641752 | +91 9845114560 | +91 9886213331

ಜೋಧಪುರ ಸರ್ಕಾರಿ ಆಸ್ಪತ್ರೆ ಆವರಣದಲ್ಲಿ ಕೃತ್ಯ: ಮಾಜಿ ಉದ್ಯೋಗಿ ಸೇರಿ ಇಬ್ಬರ ವಶ, ವಿಚಾರಣೆ

ಬಾಲಕಿಯ ಮೇಲೆ ಸಾಮೂಹಿಕ ಅತ್ಯಾಚಾರ

ಪ್ರಜಾವಾಣಿ ವಾರ್ತೆ

ಜೈಪುರ: ಜೋಧಪುರದ ಸರ್ಕಾರಿ ಆಸ್ಪತ್ರೆಯ ಆವರಣದಲ್ಲಿ 15 ವರ್ಷದ ಬಾಲಕಿ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿದ ಪ್ರಕರಣವು ವರದಿಯಾಗಿದೆ ಎಂದು ಪೊಲೀಸರು ತಿಳಿಸಿದರು.

ಪ್ರಕರಣದ ಸಂಬಂಧ ಆಸ್ಪತ್ರೆಯಲ್ಲಿ ಉದ್ಯೋಗಿಯಾಗಿದ್ದ ವ್ಯಕ್ತಿಯೂ ಸೇರಿ ಇಬ್ಬರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ ಎಂದು ಹೇಳಿದರು.

ಬಾಲಕಿಯು ಭಾನುವಾರ ರಾತ್ರಿ (ಆಗಸ್ಟ್ 25) ಮಹಾತ್ಮ ಗಾಂಧಿ ಆಸ್ಪತ್ರೆ ಆವರಣದಲ್ಲಿ ಒಬ್ಬಳೇ ಓಡಾಡುತ್ತಿದ್ದ ಸಂದರ್ಭದಲ್ಲಿ ದುಷ್ಕರ್ಮಿಗಳು ಆಕೆಯೊಂದಿಗೆ ಮಾತುಕತೆ ಆರಂಭಿಸಿದ್ದಾರೆ. ಬಳಿಕ ಆಸ್ಪತ್ರೆ ತ್ಯಾಜ್ಯ ಬಿಸಾಡುವ ಜಾಗಕ್ಕೆ ಆಕೆಯನ್ನು ಕರೆದುಕೊಂಡು ಹೋಗಿ ಅತ್ಯಾಚಾರ ಎಸಗಿದ್ದಾರೆ ಎಂದು ತಿಳಿಸಿದರು.

ಕುಟುಂಬಸ್ಥರೊಂದಿಗೆ ಕೋಪ ಗೊಂಡು ಬಾಲಕಿ ಭಾನುವಾರ ಸಂಜೆ ಮನೆ ಬಿಟ್ಟು ಬಂದಿದ್ದಳು. ಬಳಿಕ ಪೋಷಕರು ನಾಪತ್ತೆ ಪ್ರಕರಣ ದಾಖಲಿಸಿದ್ದರು ಎಂದರು.

ಸೋಮವಾರ ಆಸ್ಪತ್ರೆ ಆವರಣದಲ್ಲಿ ಬಾಲಕಿ ಪತ್ತೆಯಾಗಿದ್ದಳು. ಆಕೆಯ ಬಟ್ಟೆ ಹರಿದಿತ್ತು, ತಲೆಗೂದಲು ಹರಡಿತ್ತು. ನಂತರ ಆಕೆಯನ್ನು ಪೊಲೀಸ್ ಠಾಣೆಗೆ ಕರೆದೊಯ್ದು ವಿಚಾರಿಸಿದಾಗ, ಅತ್ಯಾಚಾರ ನಡೆದ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಿದಳು. ಈ ಸಂಬಂಧ ಇಬ್ಬರು ಯುವಕರ ಮೇಲೆ ಅತ್ಯಾಚಾರ ಮತ್ತು ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ' ಎಂದು ಮಾಹಿತಿ ನೀಡಿದರು.

ನರ್ಸಿಂಗ್ ವಿದ್ಯಾರ್ಥಿನಿಯ ಮೇಲೆ ಬಲಾತ್ಕಾರ

ಮುಂಬೈ: ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯಲ್ಲಿ ಆಟೊ ಚಾಲಕನೊಬ್ಬ ನರ್ಸಿಂಗ್ ವಿದ್ಯಾರ್ಥಿನಿಗೆ, ಅಮಲು ಬರಿಸುವ ಅಂಶ ಮಿಶ್ರಣ ಮಾಡಿದ್ದ ನೀರು ಕುಡಿಸಿ, ಅತ್ಯಾಚಾರ ಎಸಗಿದ್ದಾನೆ.

ವಿದ್ಯಾರ್ಥಿನಿ ಮೇಲಿನ ಈ ಕೃತ್ಯಕ್ಕೆ ನರ್ಸಿಂಗ್ ವಿದ್ಯಾರ್ಥಿಗಳು ತೀವ್ರವಾಗಿ ಆಕ್ರೋಶ ವ್ಯಕ್ತಪಡಿಸಿ-ದ್ದು, ತಪ್ಪಿತಸ್ಥನ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಪ್ರತಿಭಟನೆ ನಡೆಸಿಸಿದ್ದಾರೆ.

ರಾಜ್ಯದ ಠಾಣೆ ಜಿಲ್ಲೆಯ ಬದ್ಲಾಪುರದಲ್ಲಿ ಇಬ್ಬರು ನರ್ಸರಿ ವಿದ್ಯಾರ್ಥಿನಿಯರ ಮೇಲೆ ಇತ್ತೀಚೆಗೆ ಲೈಂಗಿಕ ದೌರ್ಜನ್ಯ ನಡೆದಿದ್ದು, ಅದಕ್ಕೆ ತೀವ್ರ ಆಕ್ರೋಶ ವ್ಯಕ್ತವಾ-ಗಿತ್ತು. ಈ ಕೃತ್ಯ ನಡೆದ ನಂತರ ಮಹಾರಾಷ್ಟ್ರ ಸರ್ಕಾರ ಇರಿಸುಮುರಿಸಿಗೆ ಒಳಗಾಗಿತ್ತು. ಅದರ ಬೆನ್ನಲ್ಲೇ ಮತ್ತೊಂದು ಕೃತ್ಯ ನಡೆದಿದೆ.

ವರದಿ ಪ್ರಕಾರ, ನರ್ಸಿಂಗ್ ವಿದ್ಯಾರ್ಥಿನಿ ತನ್ನ ಮನೆಗೆ ತೆರಳಲು ಆಟೊ ಏರಿದ್ದಳು. ಮಾರ್ಗದಲ್ಲಿ ಅಮಲು ಬರಿಸುವ ಅಂಶ ಮಿಶ್ರಣ ಮಾಡಿದ್ದ ನೀರನ್ನು ಆಟೊ ಚಾಲಕ ನೀಡಿದ್ದ. ಬಳಿಕ ಪ್ರಜ್ಞೆ ತಪ್ಪಿದ್ದ ವಿದ್ಯಾರ್ಥಿನಿಯನ್ನು ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಕೃತ್ಯ ಎಸಗಿ, ಅಲ್ಲೇ ಬಿಟ್ಟು ಪರಾರಿಯಾಗಿದ್ದ.

ವಿದ್ಯಾರ್ಥಿನಿಯನ್ನು ಸದ್ಯ ಆಸ್ಪತ್ರೆಗೆ ದಾಖಲಿಸಲಾಗಿದೆ. 'ಆರೋಪಿಯ ಪತ್ತೆಗೆ ಮಹಿಳಾ ಅಧಿಕಾರಿಯ ನೇತೃತ್ವದಲ್ಲಿ 11 ಸದಸ್ಯರ ತಂಡವನ್ನು ರಚಿಸಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಧನಂಜಯ್ ಕುಲಕರ್ಣಿ ಅವರು ತಿಳಿಸಿದ್ದಾರೆ.

ತನಿಖೆಯ ಭಾಗವಾಗಿ ಪೊಲೀಸರು ಸಿ.ಸಿ.ಟಿ.ವಿ ಕ್ಯಾಮೆರಾದ ದೃಶ್ಯಗಳನ್ನು ವಶಕ್ಕೆ ಪಡೆದಿದ್ದಾರೆ.

ಸುಪ್ರಿಯಾ ಸುಳೆ ಖಂಡನೆ: ನರ್ಸರಿ ವಿದ್ಯಾರ್ಥಿಗಳ ಮೇಲೆ ದೌರ್ಜನ್ಯ ಎಸಗಿದ್ದವನ ವಿರುದ್ಧ ಕ್ರಮಕ್ಕೆ ಆಗ್ರಹಪಡಿಸಿದ ಪೋಷಕರ ಮೇಲೆ ಪೊಲೀಸರು ಲಾಠಿ ಪ್ರಹಾರ ನಡೆಸುತ್ತಿದ್ದರೆ, ಇತ್ತ ಅತ್ಯಾಚಾರಿಗಳು ನಿರ್ಭಯವಾಗಿ ಕೃತ್ಯ ಎಸಗುತ್ತಿದ್ದಾರೆ ಎಂದು ಸಂಸದೆ ಸುಪ್ರಿಯಾ ಸುಳೆ ಟೀಕಿಸಿದ್ದಾರೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯು ಪೂರ್ಣವಾಗಿ ಕುಸಿದಿದೆ. ಇಂಥ ಕೃತ್ಯಗಳು ನಡೆದ ಬಳಿಕ ಪ್ರತಿಕ್ರಿಯಿಸುವ ಬದಲಿಗೆ, ಕಡಿವಾಣ ಹಾಕಲು ಕಠಿಣ ಮತ್ತು ಸ್ಪಷ್ಟ ನೀತಿ ರೂಪಿಸಲು ಸರ್ಕಾರ ಮುಂದಾಗಬೇಕು ಎಂದು ಎನ್‌ಸಿಪಿ (ಎಸ್‌ಪಿ) ಕಾರ್ಯಾಧ್ಯಕ್ಷೆಯೂ ಆದ ಅವರು ಒತ್ತಾಯಿಸಿದ್ದಾರೆ.

ಬಾಲಕಿ ಮೇಲೆ ತಂದೆಯಿಂದ ಹಲವು ಬಾರಿ ಅತ್ಯಾಚಾರ

ಠಾಣೆ (ಪಿಟಿಐ): ಹದಿನಾರು ವರ್ಷದ ಬಾಲಕಿ ಮೇಲೆ ಆಕೆಯ 54 ವರ್ಷ ವಯಸ್ಸಿನ ತಂದೆಯೇ ಹಲವು ಬಾರಿ ಅತ್ಯಾಚಾರ ಎಸಗಿದ್ದು, ಈ ಬಗ್ಗೆ ಪ್ರಕರಣ ದಾಖಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಹಾರಾಷ್ಟ್ರದ ಠಾಣೆ ಜಿಲ್ಲೆಯ ಬದ್ಲಾಪುರ ಪಟ್ಟಣದಲ್ಲಿ ಈ ಕೃತ್ಯ ನಡೆದಿದೆ.

ಆರೋಪಿಯು ಸದ್ಯ ತಲೆಮರೆಸಿಕೊಂಡಿದ್ದು, ಆತನ ಪತ್ತೆಗೆ ಶೋಧ ನಡೆದಿದೆ. ತಂದೆಯ ಕೃತ್ಯದಿಂದ ಭೀತಳಾಗಿದ್ದ ಬಾಲಕಿ ಮನೆಯಿಂದ ಓಡಿಹೋಗಿದ್ದು, ನಂತರ ವಾಪಾಸಾಗಿದ್ದಳು ಎಂದು ತಿಳಿಸಿದ್ದಾರೆ.

ಬದ್ಲಾಪುರ ಪಟ್ಟಣದ ಪೂರ್ವ ಠಾಣೆಗೆ ಸೋಮವಾರ ಬಂದ ಬಾಲಕಿಯು ತನ್ನ ತಂದೆಯ ವಿರುದ್ಧ ದೂರು ನೀಡಿದ್ದಾಳೆ. ಆ ಪ್ರಕಾರ ಪೊಲೀಸರು ಅತ್ಯಾಚಾರ, ಹಲ್ಲೆ ಸೇರಿದಂತೆ ವಿವಿಧ ಸೆಕ್ಷನ್‌ಗಳಡಿ ಪ್ರಕರಣ ದಾಖಲಿಸಿದ್ದಾರೆ. ಅಲ್ಲದೆ, ಪೋಕ್ಸೊ ಕಾಯ್ದೆಯಡಿಯೂ ಪ್ರಕರಣ ದಾಖಲಿಸಲಾಗಿದೆ.

ಬದ್ಲಾಪುರದಲ್ಲೇ ಈಚೆಗೆ ಇಬ್ಬರು ಎಲ್‌ಕೆಜಿ ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ನಡೆದಿದ್ದು, ತೀವ್ರ ಚರ್ಚೆಗೆ ಒಳಪಟ್ಟಿತ್ತು. ಮಹಾರಾಷ್ಟ್ರ ಸರ್ಕಾರ ಇದರ ತನಿಖೆಗೆ ವಿಶೇಷ ತನಿಖಾ ತಂಡ ರಚಿಸಿದೆ.

ಉತ್ತರಪ್ರದೇಶ: ನೇಣು ಬಿಗಿದ ಸ್ಥಿತಿಯಲ್ಲಿ ದಲಿತ ಬಾಲಕಿಯರ ಶವ ಪತ್ತೆ

ಲಖನೌ: ಉತ್ತರಪ್ರದೇಶದ ಫರೂಖಬಾದ್ ಜಿಲ್ಲೆಯಲ್ಲಿ ದಲಿತ ಬಾಲಕಿಯರಿಬ್ಬರ ಶವಗಳು ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿವೆ.

'ಭಗವತಿಪುರ ಗ್ರಾಮದಲ್ಲಿನ ಮಾವಿನ ಮರದಲ್ಲಿ ಬಾಲಕಿಯರ ಶವಗಳು ಪತ್ತೆಯಾಗಿದ್ದವು. 15ರಿಂದ 17 ವಯಸ್ಸಿನ ಬಾಲಕಿಯರು ಗೆಳತಿಯರಾಗಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಸೋಮವಾರ ರಾತ್ರಿ ಸ್ಥಳೀಯ ದೇವಸ್ಥಾನವೊಂದರಲ್ಲಿ ನಡೆಯುತ್ತಿದ್ದ ಕೃಷ್ಣ ಜನ್ಮಾಷ್ಟಮಿ ಆಚರಣೆಗೆ ತೆರಳಿದ್ದ ಬಾಲಕಿಯರು ಮನೆಗೆ ವಾಪಾಸಾಗಿರಲಿಲ್ಲ. ಕುಟುಂಬಸ್ಥರು ಹುಡುಕಾಟ ನಡೆಸಿದರೂ ಅವರ ಸುಳಿವು ಪತ್ತೆಯಾಗಿರಲಿಲ್ಲ. ಮಂಗಳವಾರ ಗ್ರಾಮಸ್ಥರೊಬ್ಬರಿಗೆ ಅವರ ಶವಗಳು ಕಂಡುಬಂದಿವೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ. 'ಮೇಲ್ನೋಟಕ್ಕೆ ಇದು ಆತ್ಮಹತ್ಯೆಯಂತೆ ಕಂಡುಬರುತ್ತಿದ್ದು, ಮರಣೋತ್ತರ ಪರೀಕ್ಷೆಯ ವರದಿ ಬಂದ ಬಳಿಕ ಖಚಿತವಾಗಿ ತಿಳಿಸಲಾಗುವುದು' ಎಂದು ಪೊಲೀಸ್ ಅಧಿಕಾರಿಗಳು ಹೇಳಿದ್ದಾರೆ.

'ಶವಗಳ ಬಳಿ ಯುವಕನೊಬ್ಬನ ಮೊಬೈಲ್ ಮತ್ತು ಮೃತಪಟ್ಟಿರುವ ಒಬ್ಬ ಬಾಲಕಿಯ ಜೇಬಿನಲ್ಲಿ ಸಿಮ್ ಕಾರ್ಡ್ ಪತ್ತೆಯಾಗಿದೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಬಾಲಕಿಯರನ್ನು ಕೊಲೆ ಮಾಡಿ, ಬಳಿಕ ಅವರ ಮೃತದೇ-ಹಗಳನ್ನು ಮರಕ್ಕೆ ನೇತುಹಾಕಲಾಗಿದೆ' ಎಂದು ಕುಟುಂಬಸ್ಥರು ಆರೋಪಿಸಿದ್ದಾರೆ.

ತ್ವರಿತ ತನಿಖೆಗೆ ಒತ್ತಾಯ

ನವದೆಹಲಿ: ದೇಶದ ಬೇರೆ ಬೇರೆ ರಾಜ್ಯಗಳಿಂದ ವರದಿಯಾಗಿರುವ ಅತ್ಯಾಚಾರ ಪ್ರಕರಣಗಳ ವಿಚಾರಣೆಯನ್ನು ತ್ವರಿತವಾಗಿ ನಡೆಸಬೇಕು ಎಂದು ಮಹಿಳಾ ಹಕ್ಕುಗಳ ಪರ ಸಂಘಟನೆಗಳು ಸೇರಿದಂತೆ ಹಲವು ಸಂಘಟನೆಗಳು ಒತ್ತಾಯಿಸಿವೆ. ಕೆಲವು ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಅತ್ಯಾಚಾರ ಪ್ರಕರಣ-ಗಳನ್ನು ರಾಜಕೀಯಕ್ಕೆ ಬಳಸಿಕೊಳ್ಳಲು ಯತ್ನಿಸುತ್ತಿದ್ದಾರೆ ಎಂದು ಅವು ಟೀಕಿಸಿವೆ. ಅಖಿಲ ಭಾರತ ದಲಿತ ಮಹಿಳಾ ಅಧಿಕಾರ ಮಂಚ್, ಅಖಿಲ ಭಾರತ ಪ್ರಜಾತಾಂತ್ರಿಕ ಮಹಿಳಾ ಸಂಘಟನೆ, ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ ಸೇರಿದಂತೆ ಒಟ್ಟು 35 ಸಂಘಟನೆಗಳು ಜಂಟಿಯಾಗಿ ಹೇಳಿಕೆ ಬಿಡುಗಡೆ ಮಾಡಿವೆ.

ಸಿನಿಮಾ ಕಲಾವಿದರ ಸಂಘಕ್ಕೆ ಸಾಮೂಹಿಕ ರಾಜೀನಾಮೆ

ಮೋಹನ್ ಲಾಲ್

ಕೊಚ್ಚಿ (ಪಿಟಿಐ): ಚಿತ್ರನಟರಿಂದ ಲೈಂಗಿಕ ದೌರ್ಜನ್ಯ ಕುರಿತಂತೆ ನ್ಯಾಯಮೂರ್ತಿ ಹೇಮಾ ಸಮಿತಿಯ ವರದಿ ಬಹಿರಂಗಗೊಂಡ ಹಿಂದೆಯೇ, ಮಲಯಾಳ ಸಿನಿಮಾ ಕಲಾವಿದರ ಸಂಘಕ್ಕೆ (ಅಮ್ಮ) ಹಿರಿಯ ನಟ ಮೋಹನ್‌ಲಾಲ್, ಇತರ ಪದಾಧಿಕಾರಿಗಳು ಮಂಗಳವಾರ ಸಾಮೂಹಿಕವಾಗಿ ರಾಜೀನಾಮೆ ನೀಡಿದ್ದಾರೆ.

ನಟರಿಂದ ತಮ್ಮ ಮೇಲೆ ಲೈಂಗಿಕ ದೌರ್ಜನ್ಯ ನಡೆದಿದೆ ಎಂದು ಅನೇಕ ಕಲಾವಿದೆಯರು ಕಳೆದ ಕೆಲವು ದಿನಗಳಿಂದ ಆರೋಪ ಮಾಡಿದ್ದಾರೆ. ಕೆಲವು ಬಂಗಾಳಿ ನಟಿಯರೂ ಆರೋಪಕ್ಕೆ ದನಿಗೂಡಿಸಿದ್ದಾರೆ.

ನಿರ್ದೇಶಕ ರಂಜಿತ್, ನಟರಾದ ಸಿದ್ದೀಕ್, ಮುಕೇಶ್ ಅವರ ವಿರುದ್ಧವೂ ಅರೋಪಗಳು ಕೇಳಿಬಂದಿವೆ. ಮಲಯಾಳ ಚಿತ್ರರಂಗದಲ್ಲಿ ಕಾರ್ಯ-ಸ್ಥಳದಲ್ಲಿ ಕಲಾವಿದೆಯರ ಮೇಲೆ ಲೈಂಗಿಕ ದೌರ್ಜನ್ಯ, ಕಿರುಕುಳ ನಡೆಯುತ್ತಿದೆ ಎಂಬ ಅಂಶಗಳನ್ನು ನ್ಯಾಯಮೂರ್ತಿ ಹೇಮಾ ಸಮಿತಿ ವರದಿ ಉಲ್ಲೇಖಿಸಿತ್ತು.

ಮಲಯಾಳ ಚಿತ್ರರಂಗದಲ್ಲಿ ಪ್ರಭಾವಿ ಯಾಗಿರುವ 'ಅಮ್ಮ' ಕುರಿತು ಹೇಳಿಕೆ ನೀಡಿದ್ದು, ಅಧ್ಯಕ್ಷ ಮೋಹನ್‌ಲಾಲ್ ಸೇರಿ ಎಲ್ಲ ಪದಾಧಿಕಾರಿಗಳು ಸಾಮೂಹಿಕ ರಾಜೀನಾಮೆ ನೀಡಿದ್ದಾಗಿ ತಿಳಿಸಿದೆ.

ಮೋಹನ್‌ಲಾಲ್ ಅವರು ಪದಾಧಿಕಾರಿಗಳ ಜೊತೆಗೆ ಆನ್‌ಲೈನ್‌ನಲ್ಲಿ ಸಭೆ ನಡೆಸಿದ್ದರು. 'ನೈತಿಕ ಹೊಣೆ ಹೊತ್ತು ಈ ತೀರ್ಮಾನ ಕೈಗೊಳ್ಳಲಾಯಿತು' ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ನ್ಯಾಯಮೂರ್ತಿ ಹೇಮಾ ಸಮಿತಿ ವರದಿ ಬಹಿರಂಗವಾದ ಬಳಿಕ ಸಂಘದ ಪ್ರಧಾನ ಕಾರ್ಯದರ್ಶಿ ಸಿದ್ದೀಕ್ ವಿರುದ್ಧ ಸಾಮಾಜಿಕ ಜಾಲತಾಣ, ದೃಶ್ಯ, ಮುದ್ರಣ ಮಾಧ್ಯಮದಲ್ಲಿ ಲೈಂಗಿಕ ದೌರ್ಜನ್ಯ ಆರೋಪ ವ್ಯಕ್ತವಾಗಿತ್ತು.

'ಸಾಮಾನ್ಯ ಸಭೆ ನಡೆಯಬೇಕಿದೆ. ಆ ಬಳಿಕ ಎರಡು ತಿಂಗಳಲ್ಲಿ ಹೊಸ ಸಮಿತಿ ಅಸ್ತಿತ್ವಕ್ಕೆ ಬರಲಿದೆ. ಅಲ್ಲಿಯವರೆಗೂ ಹಾಲಿ ಸಮಿತಿಯೇ ಹಂಗಾಮಿಯಾಗಿ ಕಾರ್ಯನಿರ್ವಹಿಸ-ಲಿದೆ. ಸಂಘಟನೆ ಬಲಪಡಿಸುವ ಹೊಸ ಸಮಿತಿಯು ಅಸ್ತಿತ್ವಕ್ಕೆ ಬರಲಿದೆ' ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ಅನೇಕ ನಟರು, ಮುಖ್ಯವಾಗಿ ಮಹಿಳೆಯರು ಈ ನಿರ್ಧಾರವನ್ನು ಸ್ವಾಗತಿಸಿದ್ದಾರೆ. ನಟಿ ಶ್ವೇತಾ ಮೆನನ್, 'ಕಾರ್ಯಕಾರಿ ಸಮಿತಿಯ ತೀರ್ಮಾನ ಸ್ವಾಗತಿಸುತ್ತೇನೆ. ಪೃಥ್ವಿರಾಜ್ ಅವರಂತಹ ಯುವ ನಟರು ಸಂಘಟನೆ ಮುನ್ನಡೆಸಲು ಸಮರ್ಥರಿದ್ದಾರೆ' ಎಂದು ಹೇಳಿದ್ದಾರೆ.

ಮೋಹನ್‌ಲಾಲ್ ಅವರಂತಹ ನಟರೂ ಈ ಬೆಳವಣಿಗೆಯ ಒತ್ತಡ ಎದುರಿಸಬೇಕಿರುವುದು ಬೇಸರದ ವಿಷಯ ಎಂದು ಅಭಿಪ್ರಾಯಪಟ್ಟಿದ್ದಾರೆ.

'ಅಮ್ಮ ಸಂಘಟನೆ ಉತ್ತಮವಾಗಿದೆ. ಆದರೆ, ಕೆಲ ಪದಾಧಿಕಾರಿಗಳು ಸಮಸ್ಯೆ-ಯಾಗಿದ್ದಾರೆ. ಹೊಸ ಸಮಿತಿಯು ಮಹಿಳಾ ಕಲಾವಿದರೆಯ ನೋವುಗಳಿಗೆ ದನಿಯಾಗಲಿ' ಎಂದು ಆಶಿಸಿದ್ದಾರೆ. ಡಬ್ಬಿಂಗ್ ಕಲಾವಿದೆ ಭಾಗ್ಯಲಕ್ಷ್ಮಿ ಕೂಡ ರಾಜೀನಾಮೆ ನಿರ್ಧಾರವನ್ನು ಸ್ವಾಗತಿಸಿದ್ದಾರೆ.

ಹೇಮಾ ಸಮಿತಿ ವರದಿ ಬಳಿಕ ಆರೋಪಗಳ ತನಿಖೆಗೆ ಏಳು ಸದಸ್ಯರ ವಿಶೇಷ ತನಿಖಾ ತಂಡವನ್ನು ಸರ್ಕಾರ ರಚಿಸಿದೆ. ಆ ಬಳಿಕ ಇನ್ನಷ್ಟು ನಟರು, ನಿರ್ದೇಶಕರ ವಿರುದ್ಧವೂ ಆರೋಪಗಳು ಕೇಳಿಬಂದಿವೆ.

ಹೈದರಾಬಾದ್: ರೋಗಿಯಿಂದ ವೈದ್ಯೆ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಆಂಧ್ರಪ್ರದೇಶದ ತಿರುಪತಿಯಲ್ಲಿನ ಶ್ರೀ ವೆಂಕಟೇಶ್ವರ ವೈದ್ಯಕೀಯ ವಿಜ್ಞಾನ ಸಂಸ್ಥೆ ಆಸ್ಪತ್ರೆ ಯಲ್ಲಿ ರೋಗಿಯೊಬ್ಬರು, ಕಿರಿಯ ವೈದ್ಯೆಯ ಮೇಲೆ ಹಲ್ಲೆ ನಡೆಸಿದ್ದಾರೆ.

ಭಾನುವಾರ ಈ ಘಟನೆ ನಡೆದಿದೆ. ವೈದ್ಯೆಯ ಜುಟ್ಟು ಹಿಡಿದು ಜೋರಾಗಿ ಎಳೆದು ಆಸ್ಪತ್ರೆಯ ಮಂಚದ ಕಬ್ಬಿಣದ ಸರಳಿಗೆ ಹೊಡೆಸಿರುವ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲೂ ದಾಖಲಾಗಿದೆ.

ಸ್ಥಳದಲ್ಲಿದ್ದ ಇತರೆ ಕರ್ತವ್ಯನಿರತ ವೈದ್ಯರು ರಕ್ಷಿಸಿದ್ದಾರೆ. ವಿಜಯನಗರಂ ಜಿಲ್ಲೆ ಬೊಬ್ಬಿಲಿಯ ಬಂಗಾರರಾಜು ಆರೋಪಿ. ಈತ ಕುಟುಂಬದೊಂದಿಗೆ ಯಾತ್ರೆಗೆ ಬಂದಿದ್ದ.

ಆರೋಪಿಯು ಅಪಸ್ಮಾರದಿಂದ ಬಳಲುತ್ತಿದ್ದ, ಸಮಸ್ಯೆ ಉಂಟಾದ್ದರಿಂದ ಅಶ್ವಿನಿ ಆಸ್ಪತ್ರೆಗೆ ಸೇರಿಸಿ, ಬಳಿಕ ವೆಂಕಟೇಶ್ವರ ವೈದ್ಯಕೀಯ ವಿಜ್ಞಾನ ಸಂಸ್ಥೆಗೆ ಸೇರಿಸಲಾಗಿತ್ತು. ಚಿಕಿತ್ಸೆ ನೀಡುವಾಗಲೇ ಆತ ಹಲ್ಲೆ ನಡೆಸಿದ್ದು, ವೈದ್ಯೆಗೆ ಅಲ್ಪಪ್ರಮಾಣದಲ್ಲಿ ಪೆಟ್ಟಾಗಿದೆ.

ವೈದ್ಯರು ಮತ್ತು ಇತರೆ ಸಿಬ್ಬಂದಿ ಪ್ರತಿಭಟಿಸಿದ್ದು, ಸುರಕ್ಷೆ ಕುರಿತಂತೆ ಆಡಳಿತ ಮಂಡಳಿಯಿಂದ ರಕ್ಷಣೆ ದೊರೆತ ಬಳಿಕ ಸೇವೆ ಮುಂದುವರಿಸಿದ್ದಾರೆ. ಪ್ರಕರಣ ದಾಖಲಾಗಿದೆ.

ಶಿವಾಜಿ ಪ್ರತಿಮೆ ಕುಸಿತ ರಾಜಕೀಯ ವಾಕ್ಸಮರ

ಪ್ರಜಾವಾಣಿ ವಾರ್ತೆ

ಮುಂಬೈ: ಮರಾಠ ರಾಜ ಛತ್ರಪತಿ ಶಿವಾಜಿ ಮಹಾರಾಜ ಅವರ ಬೃಹತ್ ಪ್ರತಿಮೆ ಕುಸಿದುಬಿದ್ದ ವಿಚಾರವು ಮಹಾರಾಷ್ಟ್ರದಲ್ಲಿ ರಾಜಕೀಯ ವಾಕ್ಸಮರಕ್ಕೆ ಕಾರಣವಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ವಿರೋಧ ಪಕ್ಷಗಳ ಒಕ್ಕೂಟ ಮಹಾ ವಿಕಾಸ ಆಘಾಡಿ (ಎಂವಿಎ) ಒತ್ತಾಯಿಸಿದೆ.

ಮಹಾರಾಷ್ಟ್ರದ ಸಿಂಧುದುರ್ಗ ಜಿಲ್ಲೆಯಲ್ಲಿದ್ದ ಛತ್ರಪತಿ ಶಿವಾಜಿ ಮಹಾರಾಜರ 35 ಅಡಿ ಎತ್ತರದ ಪ್ರತಿಮೆ ಸೋಮವಾರ ಕುಸಿದಿದೆ. ಇದನ್ನು ಪ್ರಧಾನಿ ನರೇಂದ್ರ ಮೋದಿ ಅವರು 2023ರ ಡಿಸೆಂಬರ್ 4ರಂದು ಅನಾವರಣ ಮಾಡಿದ್ದರು.

ಈ ಬೆನ್ನಲ್ಲೇ ಮಹಾ ವಿಕಾಸ ಆಘಾಡಿಯು, ಮುಖ್ಯಮಂತ್ರಿ ಏಕನಾಥ ಶಿಂದೆ ಮತ್ತು ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರ ವಿರುದ್ಧ ಹರಿಹಾಯ್ದಿದೆ.

'ಪ್ರಧಾನಿ ನರೇಂದ್ರ ಮೋದಿ ಅವರಿಂದ ಉದ್ಘಾಟನೆಗೊಂಡ ಅಯೋಧ್ಯೆಯ ರಾಮಮಂದಿರ, ನೂತನ ಸಂಸತ್, ಸಮೃದ್ಧಿ ಕಾರಿಡಾರ್, ಅಟಲ್ ಸೇತುವೆ ಇತ್ತಿತರ ಕಟ್ಟಡಗಳಲ್ಲೂ ಸಮಸ್ಯೆ ಕಂಡುಬಂದಿದೆ' ಎಂದು ವಾಗ್ದಾಳಿ ನಡೆಸಿದೆ.

ಮಹಾರಾಷ್ಟ್ರ ಕಾಂಗ್ರೆಸ್ ಅಧ್ಯಕ್ಷ ನಾನಾ ಪಟೋಲೆ ಅವರು, 'ಪ್ರತಿಮೆ ನಿರ್ಮಾಣಕ್ಕೆ ₹2.36 ಕೋಟಿ ವ್ಯಯಿಸಲಾಗಿದೆ. ಅನುಭವವೇ ಇಲ್ಲದ ಶಿಲ್ಪಿ ಜಯದೀಪ್ ಆಪ್ಟೆ ಅವರಿಗೆ ನಿರ್ಮಾಣದ ಹೊಣೆ ನೀಡಲಾಗಿತ್ತು' ಎಂದು ಆರೋಪಿಸಿದರು.

ಇಬ್ಬರ ವಿರುದ್ಧ ಎಫ್‌ಐಆರ್

ಪ್ರತಿಮೆ ನಿರ್ಮಾಣದ ಗುತ್ತಿಗೆದಾರ, ವಿನ್ಯಾಸಕ ಹಾಗೂ ಕಲಾವಿದರೇ ಈ ದುರ್ಘಟನೆಗೆ ಕಾರಣ ಎಂದು ಆರೋಪಿಸಿ ಲೋಕೋಪಯೋಗಿ ಇಲಾಖೆಯ ಸಹಾಯಕ ಎಂಜಿನಿಯರ್ ಒಬ್ಬರು ಮಾಲ್ವನ್ ಠಾಣೆಗೆ ಸೋಮವಾರ ದೂರು ನೀಡಿದ್ದರು. ದೂರನ್ನು ಆಧರಿಸಿ ಗುತ್ತಿಗೆದಾರ ಜಯದೀಪ್ ಆಪ್ಟೆ ಹಾಗೂ ಪ್ರತಿಮೆಯ ವಿನ್ಯಾಸಕಾರ ಚೇತನ್ ಪಾಟೀಲ್ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ಜಮ್ಮು–ಕಾಶ್ಮೀರ ವಿಧಾನಸಭಾ ಚುನಾವಣೆ

ಬಿಜೆಪಿ 2ನೇ ಪಟ್ಟಿ ಬಿಡುಗಡೆ

ಪ್ರಜಾ ಮತ

ಜನತಂತ್ರದ ಹಬ್ಬ

ನವದೆಹಲಿ (ಪಿಟಿಐ): ಜಮ್ಮು ಮತ್ತು ಕಾಶ್ಮೀರ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸುವ 29 ಅಭ್ಯರ್ಥಿಗಳ ಎರಡನೇ ಪಟ್ಟಿಯನ್ನು ಬಿಜೆಪಿ ಮಂಗಳವಾರ ಬಿಡುಗಡೆ ಮಾಡಿದೆ. ಇದರೊಂದಿಗೆ ಪಕ್ಷವು 45 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸಿದೆ.

ನಗರೋಟ ಕ್ಷೇತ್ರದಲ್ಲಿ ದೇವೇಂದ್ರ ಸಿಂಗ್ ರಾಣಾ ಮತ್ತು ಬಿಲ್ಲಾವರ್ ಕ್ಷೇತ್ರದಿಂದ ಸತೀಶ್ ಶರ್ಮಾ ಅವರನ್ನು ಕಣಕ್ಕಿಳಿಸಿದೆ. 2014ರ ಚುನಾವಣೆಯಲ್ಲಿ ಮಾಜಿ ಮುಖ್ಯಮಂತ್ರಿ ನಿರ್ಮಲ್ ಸಿಂಗ್ ಅವರು ಈ ಕ್ಷೇತ್ರವನ್ನು ಪ್ರತಿ-ನಿಧಿಸಿದ್ದರು.

ನೂತನ ಪಟ್ಟಿಯು ಎರಡನೇ ಮತ್ತು ಮೂರನೇ ಹಂತದ ಚುನಾವಣೆಗೆ ಸ್ಪರ್ಧಿಸುವ, ಕ್ರಮವಾಗಿ 10 ಮತ್ತು 19 ಅಭ್ಯರ್ಥಿಗಳ ಹೆಸರುಗಳನ್ನು ಒಳಗೊಂಡಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಮೂರು ಹಂತದಲ್ಲಿ, ಸೆಪ್ಟೆಂಬರ್ 18, 25 ಹಾಗೂ ಅಕ್ಟೋಬರ್ 1ರಂದು ಚುನಾವಣೆ ನಡೆಯಲಿದೆ.

ಗಾಂದರ್‌ಬಲ್‌ನಿಂದ ಒಮರ್ ಸ್ಪರ್ಧೆ

ಒಮರ್ ಅಬ್ದುಲ್ಲಾ

ಶ್ರೀನಗರ (ಪಿಟಿಐ): ನ್ಯಾಷನಲ್ ಕಾನ್ಫರೆನ್ಸ್ (ಎನ್‌ಸಿ) ಉಪಾಧ್ಯಕ್ಷ ಒಮರ್ ಅಬ್ದುಲ್ಲಾ ಅವರು ಗಾಂದರ್‌ಬಲ್ ಕ್ಷೇತ್ರದಿಂದ ಜಮ್ಮು ಮತ್ತು ಕಾಶ್ಮೀರ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಲಿದ್ದಾರೆ ಎಂದು ಪಕ್ಷವು ಮಂಗಳವಾರ ತಿಳಿಸಿದೆ. ಇದಕ್ಕೂ ಮುನ್ನ ಅಬ್ದುಲ್ಲಾ ಅವರು ಈ ಕ್ಷೇತ್ರದಿಂದ ಸ್ಪರ್ಧಿಸುವುದಿಲ್ಲ ಎಂದು ಹೇಳಿದ್ದರು.

ಪಕ್ಷವು ಬುಧವಾರ ಅಬ್ದುಲ್ಲಾ ಸೇರಿದಂತೆ 32 ಅಭ್ಯರ್ಥಿಗಳನ್ನು ಒಳಗೊಂಡ ಪಟ್ಟಿಯನ್ನು ಬಿಡುಗಡೆ ಮಾಡಿದೆ. ಒಮರ್ ಅಬ್ದುಲ್ಲಾ ಅವರು ಗಾಂದರ್‌ಬಲ್ ಕ್ಷೇತ್ರವನ್ನು 2009ರಿಂದ 2014ರವರೆಗೆ ಪ್ರತಿನಿಧಿಸಿದ್ದರು.

ಬಿಎಸ್‌ಪಿ ಅಧ್ಯಕ್ಷರಾಗಿ ಮಾಯಾವತಿ ಮರು ಆಯ್ಕೆ

ಲಖನೌ (ಪಿಟಿಐ): ಬಹುಜನ ಸಮಾಜವಾದಿ ಪಕ್ಷದ (ಬಿಎಸ್‌ಪಿ) ರಾಷ್ಟ್ರೀಯ ಅಧ್ಯಕ್ಷರಾಗಿ ಮಾಯಾವತಿ ಅವರು ಮರು ಆಯ್ಕೆಯಾಗಿದ್ದಾರೆ.

'ಬಿಎಸ್‌ಪಿಯ ಕೇಂದ್ರ ಕಾರ್ಯಕಾರಿ ಸಮಿತಿ, ರಾಷ್ಟ್ರೀಯ ಮತ್ತು ರಾಜ್ಯ ಘಟಕದ ಹಿರಿಯ ಪದಾಧಿಕಾರಿಗಳು ಹಾಗೂ ಪ್ರತಿನಿಧಿಗಳ ವಿಶೇಷ ಸಭೆಯಲ್ಲಿ ಈ ನಿರ್ಧಾರವನ್ನು ಕೈಗೊಳ್ಳಲಾಗಿದೆ' ಎಂದು ಪಕ್ಷ ತಿಳಿಸಿದೆ.

'ಸಕ್ರಿಯ ರಾಜಕೀಯದಿಂದ ನಿವೃತ್ತಿಯಾಗುವ ಪ್ರಶ್ನೆಯೇ ಇಲ್ಲ' ಎಂದು ಮಾಯಾವತಿ ಅವರು ಎರಡು ದಿನಗಳ ಹಿಂದೆ ಸಾಮಾಜಿಕ ಜಾಲತಾಣದ ಮೂಲಕ ತಿಳಿಸಿದ್ದರು.

ಕಲುಷಿತ ಆಹಾರ ಸೇವಿಸಿ ಅಸ್ವಸ್ಥರಾದವರಿಗೆ ಮಥುರಾದ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಯಿತು –ಪಿಟಿಐ ಚಿತ್ರ

ಕಲುಷಿತ ಆಹಾರ ಸೇವನೆ 120 ಮಂದಿ ಆಸ್ಪತ್ರೆಗೆ

ಮಥುರಾ (ಪಿಟಿಐ): ಹುರುಳಿ ಹಿಟ್ಟಿನಿಂದ ಮಾಡಿದ ತಿನಿಸು ಸೇವಿಸಿದ-ವರಲ್ಲಿ 120ಕ್ಕೂ ಹೆಚ್ಚು ಮಂದಿ ಅಸ್ವಸ್ಥ-ರಾಗಿದ್ದು, ಅವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದರು.

ಕೃಷ್ಣ ಜನ್ಮಾಷ್ಟಮಿ ಸಂದರ್ಭದಲ್ಲಿ ಸೋಮವಾರ ರಾತ್ರಿಯವರೆಗೆ ಉಪವಾಸ ಇದ್ದ ಭಕ್ತರು, ನಂತರ ಮಥುರಾದ ದೇಗುಲದ ಹೊರಗಿನ ಎರಡು ಅಂಗಡಿಗಳಲ್ಲಿ ಪೂರಿಗಳು ಹಾಗೂ ಪಕೋಡಗಳನ್ನು ಸೇವಿಸಿದರು. ಹುರುಳಿ ಹಿಟ್ಟಿನಿಂದ ಆ ತಿನಿಸುಗಳನ್ನು ಮಾಡಲಾಗಿತ್ತು. ತಿಂದ ಸ್ವಲ್ಪ ಸಮಯದ ನಂತರ ವಾಂತಿ, ತಲೆಸುತ್ತುವಿಕೆ ಶುರುವಾಯಿತು. ಜಿಲ್ಲಾ ಆಹಾರ ಮತ್ತು ಔಷಧ ಆಡಳಿತ ಇಲಾಖೆಯ ಅಧಿಕಾರಿಗಳ ತಂಡವು ದಾಳಿ ಮಾಡಿ, ಹಾಳಾಗಿದ್ದ ಹಿಟ್ಟನ್ನು ಬಳಸಿ ಮಾಡಿದ್ದ ತಿನಿಸುಗಳನ್ನು ಪರಿಶೀಲಿಸಿತು. ಎರಡೂ ಅಂಗಡಿಗಳಿಗೆ ಬೀಗ ಜಡಿದು, ಮೊಹರು ಹಾಕಿತು.

'ಪಕೋಡ ತಿಂದೆ. ಸ್ವಲ್ಪ ಹೊತ್ತಿನ ನಂತರ ಹೊಟ್ಟೆಯಲ್ಲಿ ಉರಿ ಶುರುವಾಯಿತು. ವಾಂತಿ ಮಾಡತೊಡಗಿದೆ' ಎಂದು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಯುವತಿ ಪ್ರಿಯಾಂಕಾ ಪ್ರತಿಕ್ರಿಯಿಸಿದರು.

ಮಹೇಶ್ ಎಂಬ ಮತ್ತೊಬ್ಬರು ತಮ್ಮ ಪತ್ನಿಯು ಪೂರಿ ತಿಂದ ನಂತರ ನಿತ್ರಾಣ ಗೊಂಡಿದ್ದು, ಕ್ರಮೇಣ ಪ್ರಜ್ಞಾಹೀನ ಸ್ಥಿತಿ ತಲುಪಿದ್ದನ್ನು ಹೇಳಿಕೊಂಡರು.

ಅಭಿನವ್ ಮಿಂಚು, ಲಯನ್ಸ್ ಗರ್ಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರನ್ ಸುಗ್ಗಿ ಕಾಣುತ್ತಿರುವ ಮಧ್ಯಮ ಕ್ರಮಾಂಕದ ಬ್ಯಾಟರ್ ಅಭಿನವ್ ಮನೋಹರ್ ಮತ್ತೊಮ್ಮೆ ಮಿಂಚಿನ ಅರ್ಧ ಶತಕ (ಔಟಾಗದೇ 76, 34ಎ) ಬಾರಿಸಿ ಶಿವಮೊಗ್ಗ ಲಯನ್ಸ್ ತಂಡ, ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿ ಪಂದ್ಯದಲ್ಲಿ ಗುಲ್ಬರ್ಗ ಮಿಸ್ಟಿಕ್ಸ್ ತಂಡವನ್ನು ಸೋಲಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು.

ಅವರ ಆಟದಲ್ಲಿ ಎರಡು ಬೌಂಡರಿಗಳ ಜೊತೆ 9 ಭರ್ಜರಿ ಸಿಕ್ಸರ್ ಗಳಿದ್ದವು. ಚಿನ್ನಸ್ವಾಮಿ ಕ್ರೀಡಾಂಗಣ ದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಮೊದಲು ಆಡಲು ಕಳಿಸಲ್ಪಟ್ಟ ಗುಲ್ಬರ್ಗ ತಂಡ 20 ಓವರುಗಳಲ್ಲಿ 5 ವಿಕೆಟ್‌ಗೆ 206 ರನ್‌ಗಳ ದೊಡ್ಡ ಮೊತ್ತವನ್ನೇ ಕಲೆಹಾಕಿತ್ತು. ಆದರೆ ಸೇರಿಗೆ ಸವ್ವಾಸೇರು ಎನ್ನುವಂತೆ ಆಡಿದ ಶಿವಮೊಗ್ಗ ಲಯನ್ಸ್ ಇನ್ನೂ ಐದು ಎಸೆತಗಳು ಉಳಿದಿರುವಂತೆ 4 ವಿಕೆಟ್‌ಗೆ 207 ರನ್ ಹೊಡೆದು ಸತತ ಮೂರನೇ ಗೆಲುವು ದಾಖಲಿಸಿತು.

ಮಿಸ್ಟಿಕ್ಸ್ ತಂಡಕ್ಕೆ ಆರಂಭ ಆಟಗಾರ ಹಾಗೂ ನಾಯಕ ದೇವದತ್ತ ಪಡಿಕ್ಕಲ್ (50, 35ಎ, 4x8, 6x1) ಮತ್ತು ಆರ್. ಸ್ಮರಣ್ (63, 30ಎ, 4x1, 6x7) ಅವರ ಅರ್ಧ ಶತಕಗಳು ಆಸರೆಯಾದವು. ಸ್ಮರಣ್ ಮೊದಲು ನಾಲ್ಕನೇ ವಿಕೆಟ್‌ಗೆ ವೈಶಾಖ ವಿಜಯಕುಮಾರ್ (38) ಜೊತೆ 32 ಎಸೆತಗಳಲ್ಲಿ 62 ರನ್ ಸೇರಿಸಿದರು. ನಂತರ ಐದನೇ ವಿಕೆಟ್‌ಗೆ ಪ್ರವೀಣ್ ದುಬೆ (ಔಟಾಗದೇ 24, 12ಎ) ಅವರೊಂದಿಗೆ ಕೇವಲ 26 ಎಸೆತಗಳಲ್ಲಿ 54 ರನ್ ಪೇರಿಸಿದರು.

ಮಿಂಚಿನ ಅರ್ಧಶತಕ ಬಾರಿಸಿದ ಅಭಿನವ್ ಮನೋಹರ್

ಆದರೆ ಈ ಮೊತ್ತವನ್ನು ಬೆನ್ನಟ್ಟಲು ಶಿವಮೊಗ್ಗ ತಂಡಕ್ಕೆ ನಿಹಾಲ್ ಅವರ ಭರ್ಜರಿ ಆಟ ನೆರವಾಯಿತು. ನಾಯಕ ನಿಹಾಲ್ ಉಳ್ಳಾಲ್ 32 ರನ್ ಮತ್ತು ರೋಹನ್ ನವೀನ್ ಅಜೇಯ 36 ರನ್‌ಗಳ (14 ಎಸೆತ, 4x3, 6x3) ಕೊಡುಗೆ ಯಿತ್ತರು. ಅಭಿನವ್ ಮತ್ತು ರೋಹನ್ ಮುರಿಯದ ಐದನೇ ವಿಕೆಟ್‌ಗೆ ಬರೇ 27 ಎಸೆತಗಳಲ್ಲಿ 74 ರನ್ ಜೊತೆಯಾಟವಾಡಿ ತಂಡವನ್ನು ಅಂತಿಮ ಓವರ್‌ನ ಮೊದಲ ಎಸೆತದಲ್ಲೇ ಗುರಿತಲುಪಿಸಿದರು.

ಸಂಕ್ಷಿಪ್ತ ಸ್ಕೋರು: ಗುಲ್ಬರ್ಗ ಮಿಸ್ಟಿಕ್ಸ್: 20 ಓವರುಗಳಲ್ಲಿ 5 ವಿಕೆಟ್‌ಗೆ 206 (ದೇವದತ್ತ ಪಡಿಕ್ಕಲ್ 50, ಸ್ಮರಣ್ ಆರ್. 63, ವೈಶಾಖ ವಿಜಯಕುಮಾರ್ 38, ಪ್ರವೀಣ್ ದುಬೆ ಔಟಾಗದೇ 28; ಡಿ. ಅಶೋಕ್ 24ಕ್ಕೆ2); **ಶಿವಮೊಗ್ಗ ಲಯನ್ಸ್:** 19.1 ಓವರುಗಳಲ್ಲಿ 4 ವಿಕೆಟ್‌ಗೆ 207 (ನಿಹಾಲ್ ಉಳ್ಳಾಲ್ 32, ಅಭಿನವ್ ಮನೋಹರ್ ಔಟಾಗದೇ 76, ರೋಹನ್ ನವೀನ್ ಔಟಾಗದೇ 36). **ಪಂದ್ಯದ ಆಟಗಾರ:** ಅಭಿನವ್ ಮನೋಹರ್.

ಮೈಸೂರು ವಾರಿಯರ್ಸ್: 20 ಓವರ್‌ಗಳಲ್ಲಿ 6ಕ್ಕೆ 191 (ಎಸ್.ಯು. ಕಾರ್ತಿಕ್ 29, ಕೋದಂಡ ಅಜಿತ್ ಕಾರ್ತಿಕ್ 30, ಕರುಣ್ ನಾಯರ್ ಔಟಾಗದೇ 80; ಎಲ್.ಆರ್. ಕುಮಾರ್ 37ಕ್ಕೆ 2, ಮಾಧವ್ ಬಜಾಜ್ 34ಕ್ಕೆ 2). **ಹುಬ್ಬಳ್ಳಿ ಟೈಗರ್ಸ್:** 18.4 ಓವರ್‌ಗಳಲ್ಲಿ 117 (ಮೊಹಮ್ಮದ್ ತಹಾ 33; ಸ್ಮಯನ್ ಶ್ರೀವಾಸ್ತವ 21ಕ್ಕೆ 2, ಜಗದೀಶ್ ಸುಚಿತ್ 12ಕ್ಕೆ 2, ಧನುಷ್ ಗೌಡ 26ಕ್ಕೆ 2, ಮನೋಜ್ ಭಾಂಡಗೆ 5ಕ್ಕೆ 2). ಫಲಿತಾಂಶ: ಮೈಸೂರು ವಾರಿಯರ್ಸ್‌ಗೆ 74 ರನ್‌ಗಳ ಜಯ. **ಪಂದ್ಯದ ಆಟಗಾರ:** ಕರುಣ್ ನಾಯರ್

ತಂಡಗಳು	ಪಂದ್ಯ	ಗೆಲುವು	ಸೋಲು	ಅಂಕ	ನೆಟ್ ರನ್‌ರೇಟ್
ಬೆಂಗಳೂರು ಬ್ಲಾಸ್ಟರ್ಸ್	8	6	2	12	+1.046
ಹುಬ್ಬಳ್ಳಿ ಟೈಗರ್ಸ್	9	6	3	12	-0.537
ಮೈಸೂರು ವಾರಿಯರ್ಸ್	9	5	4	10	+0.692
ಗುಲ್ಬರ್ಗ ಮಿಸ್ಟಿಕ್ಸ್	9	4	4	8	+0.030
ಶಿವಮೊಗ್ಗ ಲಯನ್ಸ್	9	3	6	6	-0.846
ಮಂಗಳೂರು ಡ್ರ್ಯಾಗನ್ಸ್	8	1	6	3	-0.635

ಡುರಾಂಡ್ ಕಪ್ ಫೈನಲ್‌ಗೆ ಮೋಹನ್ ಬಾಗನ್

ಕೋಲ್ಕತ್ತ (ಪಿಟಿಐ): ಟೈಬ್ರೇಕರ್‌ನಲ್ಲಿ ಗೋಲ್‌ಕೀಪರ್ ವಿಶಾಲ್ ಕೈತ್ ಅವರ ಎರಡು ಅಮೋಘ ತಡೆಗಳಿಂದ ಹಾಲಿ ಚಾಂಪಿಯನ್ ಮೋಹನ್ ಬಾಗನ್ ತಂಡ ಡುರಾಂಡ್ ಕಪ್ ಸೆಮಿಫೈನಲ್ ಪಂದ್ಯದಲ್ಲಿ ಮಂಗಳವಾರ ಬೆಂಗಳೂರು ಎಫ್‌ಸಿ ವಿರುದ್ಧ 4–3 ಗೋಲುಗಳಿಂದ (ನಿಗದಿ ಅವಧಿ 2–2) ಜಯಗಳಿಸಿತು.

ಕೋಲ್ಕತ್ತದ ತಂಡ ಶನಿವಾರ (ಆ. 31) ನಡೆಯುವ ಫೈನಲ್‌ನಲ್ಲಿ ನಾರ್ತ್‌ಈಸ್ಟ್ ಯುನೈಟೆಡ್ ಎಫ್‌ಸಿ ತಂಡವನ್ನು ಎದುರಿಸಲಿದೆ. ಈಸ್ಟ್ ಬೆಂಗಾಲ್ ಫೈನಲ್ ತಲುಪುತ್ತಿರುವುದು ಇದು 30ನೇ ಸಲ. 17 ಸಲ ಆ ತಂಡ ಚಾಂಪಿಯನ್ ಕಿರೀಟ ಧರಿಸಿದೆ.

ಟೈಬ್ರೇಕರ್‌ನಲ್ಲಿ ಕೋಲ್ಕತ್ತದ ತಂಡ 0–2 ಗೋಲುಗಳಿಂದ ಹಿಂದಿತ್ತು. ಈ ಹಂತದಲ್ಲಿ ಕೈತ್, ಬಿಎಫ್‌ಸಿಯ ಹಾಲಿಚರಣ್ ನಾರ್ಜರಿ ಮತ್ತು ಅಲೆಕ್ಸಾಂಡರ್ ಜೊವಾವಿಕ್ ಅವರ ಎರಡು ಗೋಲು ಯತ್ನಗಳನ್ನು ತಡೆದು ತಂಡ ಅಮೋಘ ರೀತಿಯಲ್ಲಿ ಗೆಲ್ಲಲು ನೆರವಾದರು.

ಕಳೆದ ವಾರ ಪಂಜಾಬ್ ಎಫ್‌ಸಿ ವಿರುದ್ಧ ಗೆಲುವಿನಲ್ಲೂ ಕೈತ್ ಅವರ ಪಾಲು ಇತ್ತು.

ಟೆನಿಸ್: ಜೊಕೊವಿಚ್ ಶುಭಾರಂಭ

ನ್ಯೂಯಾರ್ಕ್ (ಎಪಿ): ದಾಖಲೆಯ 25ನೇ ಗ್ರ್ಯಾನ್‌ಸ್ಲಾಮ್ ಕಿರೀಟವನ್ನು ಎದುರು ನೋಡುತ್ತಿರುವ ಸರ್ಬಿಯಾದ ಟೆನಿಸ್ ತಾರೆ ನೊವಾಕ್ ಜೊಕೊವಿಚ್ ಅವರು ಅಮೆರಿಕ ಓಪನ್‌ನಲ್ಲಿ ಶುಭಾರಂಭ ಮಾಡಿದರು.

ಎರಡನೇ ಶ್ರೇಯಾಂಕದ ಜೊಕೊವಿಚ್ ಸೋಮವಾರ ತಡರಾತ್ರಿ ನಡೆದ ಆರಂಭಿಕ ಸುತ್ತಿನ ಪಂದ್ಯದಲ್ಲಿ 6-2, 6-2, 6-4ರ ನೇರ ಸೆಟ್‌ಗಳಿಂದ ಮೊಲ್ಡೊವಾದ ರಾಡ್ ಆಲ್ಬೋಟ್ ಅವರನ್ನು ಹಿಮ್ಮೆಟ್ಟಿಸಿ 64ರ ಘಟ್ಟಕ್ಕೆ ಮುನ್ನಡೆದರು. ಈ ಮೂಲಕ ನ್ಯೂಯಾರ್ಕ್‌ನ ಅರ್ಥರ್ ಆ್ಯಷ್ ಕೋರ್ಟ್‌ನಲ್ಲಿ 89ನೇ ಪಂದ್ಯವನ್ನು ಗೆದ್ದು, ಟೆನಿಸ್ ದಂತಕತೆ ರೋಜರ್ ಫೆಡರರ್ (ಸ್ವಿಟ್ಜರ್ಲೆಂಡ್) ಅವರ ದಾಖಲೆಯನ್ನು ಸರಿಗಟ್ಟಿದರು.

ಅಮೆರಿಕ ಓಪನ್‌ನಲ್ಲಿ ನಾಲ್ಕು ಬಾರಿ ಚಾಂಪಿಯನ್ ಆಗಿರುವ ಜೊಕೊವಿಚ್, ಇಲ್ಲಿ 89 ಪಂದ್ಯಗಳನ್ನು ಗೆದ್ದರೆ, 13 ಪಂದ್ಯಗಳಲ್ಲಿ ಸೋತಿದ್ದಾರೆ. 2004ರಿಂದ 2008ರ ಅವಧಿಯಲ್ಲಿ ಸತತ ಐದು ಬಾರಿ ಚಾಂಪಿಯನ್ ಆಗಿರುವ ಫೆಡರರ್ 89 ಪಂದ್ಯಗಳನ್ನು ಗೆದ್ದಿದ್ದರೆ, 14 ಪಂದ್ಯಗಳನ್ನು ಸೋತಿದ್ದರು. ಅಮೆರಿಕದ ಜಿಮ್ಮಿ ಕಾನರ್ಸ್ (98–17) ಮಾತ್ರ ಇವರಿಬ್ಬರಿಗಿಂತ ಹೆಚ್ಚು ಪಂದ್ಯ ಗೆದ್ದ ದಾಖಲೆ ಹೊಂದಿದ್ದಾರೆ.

ನಾಲ್ಕನೇ ಶ್ರೇಯಾಂಕದ ಜರ್ಮನಿಯ ಅಲೆಕ್ಸಾಂಡರ್ ಜ್ವರೇವ್ 6-2, 6-7 (5), 6-3, 6-2ರಿಂದ ಜರ್ಮನಿಯ ಮ್ಯಾಕ್ಸಿಮಿಲನ್ ಮಾರ್ಟೆರರ್ ವಿರುದ್ಧ ಗೆದ್ದು ಎರಡನೇ ಸುತ್ತು ಪ್ರವೇಶಿಸಿದರು. ಆರನೇ ಶ್ರೇಯಾಂಕದ ಆ್ಯಂಡ್ರೆ



ಸರ್ಬಿಯಾದ ನೊವಾಕ್ ಜೊಕೊವಿಚ್ ಆಟದ ವೈಖರಿ –ಎಎಫ್‌ಪಿ ಚಿತ್ರ

ರುಬ್ಲೆವ್ 6-3, 7-6(3), 7-5ರ ನೇರ ಸೆಟ್‌ಗಳಿಂದ ಬ್ರೆಜಿಲ್‌ನ ಥಿಯಾಗೊ ಸೆಬೊತ್ ವೈಲ್ಡ್ ಅವರನ್ನು ಮಣಿಸಿ ಮುನ್ನಡೆದರು.

15ನೇ ಶ್ರೇಯಾಂಕದ ಹೋಲ್ಗರ್ ರೂನ್ ಮೊದಲ ಸುತ್ತಿನಲ್ಲೇ ನಿರಾಸೆ ಅನುಭವಿಸಿದರು. ಅಮೆರಿಕದ ಬ್ರ್ಯಾಂಡನ್ ನಕಾಶಿಮಾ ಅವರು 6-2, 6-1, 6-4ರಿಂದ ಡೆನ್ಮಾರ್ಕ್ ಆಟಗಾರನಿಗೆ ಆಘಾತ ನೀಡಿದರು.

ಸಬಲೆಂಕಾ ಮುನ್ನಡೆ: ಮಹಿಳೆಯರ ಸಿಂಗಲ್ಸ್‌ನಲ್ಲಿ ಎರಡನೇ ಶ್ರೇಯಾಂಕದ ಅರಿನಾ ಸಬಲೆಂಕಾ (ಬೆಲಾರಸ್) ಶುಭಾರಂಭ ಮಾಡಿದರು. ಅವರು 6-3, 6-3ರಿಂದ ಆಸ್ಟ್ರೇಲಿಯಾದ ಪ್ರಿಸ್ಸಿಲ್ಲಾ ಹಾನ್ ಅವರನ್ನು ಹಿಮ್ಮೆಟ್ಟಿಸಿದರು. ಹಾಲಿ ಚಾಂಪಿಯನ್, ಮೂರನೇ ಶ್ರೇಯಾಂಕದ ಕೊಕೊ ಗಾಫ್ (ಅಮೆರಿಕ) ಆರಂಭಿಕ ಸುತ್ತಿನಲ್ಲಿ ನಿರಾಯಾಸ ಗೆಲುವು ಸಾಧಿಸಿದರು. ಅವರು 6-2, 6-0ರಿಂದ ಫ್ರಾನ್ಸ್‌ನ ವರ್ವಾರಾ ಗ್ರಾಚೆವಾ ಅವರನ್ನು ಸೋಲಿಸಿದರು.

ಮೊದಲ ಸುತ್ತಿನಲ್ಲೇ ನಗಾಲ್‌ಗೆ ನಿರಾಸೆ

ನ್ಯೂಯಾರ್ಕ್ (ಪಿಟಿಐ): ಭಾರತದ ಅಗ್ರಮಾನ್ಯ ಸಿಂಗಲ್ಸ್ ಆಟಗಾರ ಸುಮಿತ್ ನಗಾಲ್ ಅವರು ಮೊದಲ ಸುತ್ತಿನಲ್ಲೇ ನಿರಾಸೆ ಅನುಭವಿಸಿದರು.

ಭಾರತದ 27 ವರ್ಷ ವಯಸ್ಸಿನ ಆಟಗಾರ ನಗಾಲ್ 1-6, 3-6, 6-7(8) ರಿಂದ ನೆದರ್ಲೆಂಡ್ಸ್‌ನ ಟ್ಯಾಲನ್ ಗ್ರೀಕ್ಸ್‌ಪೂರ್ ವಿರುದ್ಧ ಸೋಲು ಅನುಭವಿಸಿದರು. ಎರಡು ಗಂಟೆ 20 ನಿಮಿಷ ನಡೆದ ಹೋರಾಟದಲ್ಲಿ ಡಚ್ ಆಟಗಾರ ಮೇಲುಗೈ ಸಾಧಿಸಿದರು. ಪಂದ್ಯದಲ್ಲಿ ಸೋತರೂ 2019ರ ನಂತರ ಋತುವಿನ ಎಲ್ಲಾ ಗ್ರ್ಯಾನ್‌ಸ್ಲಾಮ್ ಟೂರ್ನಿಗಳ ಸಿಂಗಲ್ಸ್ ಮುಖ್ಯಸುತ್ತಿನಲ್ಲಿ ಆಡಿದ ಭಾರತದ ಮೊದಲ ಆಟಗಾರ ಹಿರಿಮೆಗೆ ನಗಾಲ್ ಪಾತ್ರವಾದರು. ಐದು ವರ್ಷಗಳ ಹಿಂದೆ ಪ್ರಜ್ನೇಶ್ ಗುಣೇಶ್ವರನ್ ಈ ಸಾಧನೆ ಮಾಡಿದ್ದರು.

ಸಿಂಕ್ವೆಫೀಲ್ಡ್ ಚೆಸ್: ಪ್ರಜ್ಞಾನಂದ, ಗುಕೇಶ್ ಪಂದ್ಯಗಳು ಡ್ರಾ

ಮುನ್ನಡೆ ಹೆಚ್ಚಿಸಿಕೊಂಡ ಅಲಿರೇಜಾ

ಸೇಂಟ್ ಲೂಯಿ (ಅಮೆರಿಕ), (ಪಿಟಿಐ): ಗ್ರ್ಯಾಂಡ್‌ಮಾಸ್ಟರ್ ಡಿ.ಗುಕೇಶ್ ಸಿಂಕ್ವೆಫೀಲ್ಡ್ ಚೆಸ್ ಚಾಂಪಿಯನ್‌ಷಿಪ್‌ನ ಏಳನೇ ಸುತ್ತಿನ ಪಂದ್ಯವನ್ನೂ ಡ್ರಾ ಮಾಡಿಕೊಂಡರು. ಅಗ್ರ ಶ್ರೇಯಾಂಕ ಪಡೆದ ಸ್ಥಳೀಯ ಆಟಗಾರ ಫ್ಯಾಬಿಯಾನೊ ಕರುವಾನ ಜೊತೆ ಅವರು ಪಾಯಿಂಟ್ ಹಂಚಿಕೊಳ್ಳುವ ಒಪ್ಪಂದಕ್ಕೆ ಸೋಮವಾರ ಸಹಿ ಮಾಡಿದರು.

ವಿಶ್ವ ಚಾಂಪಿಯನ್ ಡಿಂಗ್ ಲಿರೆನ್ (ಚೀನಾ) ಅವರನ್ನು ಸೋಲಿಸುವ ಮೂಲಕ ಫ್ರಾನ್ಸ್‌ನ ಅಲಿರೇಜಾ ಫಿರೋಜ್ ತಮ್ಮ ಅಗ್ರಸ್ಥಾನದ ಅಂತರ ವನ್ನು ಸೋಮವಾರ ಒಂದು ಪಾಯಿಂಟ್‌ಗೆ ಹೆಚ್ಚಿಸಿದರು. ಇನ್ನು ಎರಡು ಸುತ್ತಿನ ಪಂದ್ಯಗಳು ಬಾಕಿಯಿವೆ. ಭಾರತದ ಇನ್ನೊಬ್ಬ ಆಟಗಾರ ಆರ್. ಪ್ರಜ್ಞಾನಂದ ಅವರು ಏಳನೇ ಸುತ್ತಿನಲ್ಲಿ ಇಯಾನ್ ನಿಪೊಮ್‌ನಿಯಾಷಿ ಜೊತೆ ಬೇಗನೇ, ಕೇವಲ 19 ನಡೆಗಳಲ್ಲಿ ಡ್ರಾ ಮಾಡಿಕೊಂಡರು. ಪ್ರಜ್ಞಾನಂದ ಮತ್ತು ಗುಕೇಶ್ ಈ ಟೂರ್ನಿಯಲ್ಲಿ ಎಲ್ಲ ಏಳೂ ಪಂದ್ಯಗಳನ್ನು ಡ್ರಾ ಮಾಡಿದಂತಾಗಿದೆ.

ಅಲಿರೇಜಾ ಐದು ಪಾಯಿಂಟ್ಸ್ ಸಂಗ್ರಹಿಸಿ ಅಗ್ರಸ್ಥಾನದಲ್ಲಿದ್ದಾರೆ. ಕರುವಾನ ನಾಲ್ಕು ಪಾಯಿಂಟ್ಸ್ ಕಲೆಹಾಕಿದ್ದು ಎರಡನೇ ಸ್ಥಾನದಲ್ಲಿದ್ದಾರೆ. ಐವರು– ಅಮೆರಿಕದ ವೆಸ್ಲಿ ಸೊ, ಉಜ್ಬೇಕಿಸ್ತಾನದ ನಾಡಿರ್ಬೆಕ್ ಅಬ್ದು-ಸತ್ತಾರೋವ್, ಫ್ರಾನ್ಸ್‌ನ ಮ್ಯಾಕ್ಸಿಂ ವೇಷಿಯರ್ ಲಗ್ರಾವ್, ಭಾರತ ಡಿ.ಗುಕೇಶ್ ಮತ್ತು ಪ್ರಜ್ಞಾನಂದ ತಲಾ 3.5 ಪಾಯಿಂಟ್ಸ್ ಸಂಗ್ರಹಿಸಿ ಮೂರನೇ ಸ್ಥಾನ ಹಂಚಿಕೊಂಡಿದ್ದಾರೆ.

ಲಿರೆನ್ ಮತ್ತು ರಷ್ಯಾದ ಇಯಾನ್ ನಿಪೊಮ್‌ನಿಯಾಷಿ ತಲಾ ಮೂರು ಪಾಯಿಂಟ್ಸ್ ಪಡೆದಿದ್ದರೆ, ಡಚ್ ಆಟಗಾರ ಅನಿಶ್ ಗಿರಿ (2.5) ಕೊನೆಯ ಸ್ಥಾನದಲ್ಲಿದ್ದಾರೆ.

ಅಬ್ದುಸತ್ತಾರೋವ್ ಅವರು ಅಮೆರಿಕದ ವೆಸ್ಲಿ ಸೊ ಅವರ ಯಶಸ್ಸಿನ ಓಟಕ್ಕೆ ತೆರೆಯೆಳೆದು ಪೂರ್ಣ ಪಾಯಿಂಟ್ ಪಡೆದರು. ವೇಷಿಯರ್ ಲಗ್ರಾವ್ ಮತ್ತು ನೆದರ್ಲೆಂಡ್ಸ್‌ನ ಅನಿಶ್ ಗಿರಿ ನಡುವಣ ಪಂದ್ಯ ಡ್ರಾ ಆಯಿತು.

ಕಾರ್ತಿಕ್‌ಗೆ ರಾಷ್ಟ್ರೀಯ ಚೆಸ್ ಕಿರೀಟ

ಪ್ರಜಾವಾಣಿ ವಾರ್ತೆ

ಗುರುಗ್ರಾಮ: ಅಗ್ರ ಶ್ರೇಯಾಂಕದ ಸೂರ್ಯಶೇಖರ ಗಂಗೂಲಿ ಅವರನ್ನು ಹಿಂದೆಹಾಕಿದ ಗ್ರ್ಯಾಂಡ್‌ಮಾಸ್ಟರ್ ಕಾರ್ತಿಕ್ ವೆಂಕಟರಾಮನ್ ಅವರು ಮಂಗಳವಾರ ಮುಕ್ತಾಯಗೊಂಡ 61ನೇ ರಾಷ್ಟ್ರೀಯ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡರು. ಕಳೆದ ವರ್ಷ ನವದೆಹಲಿಯಲ್ಲಿ ನಡೆದ ಕೂಟದಲ್ಲೂ ಆಂಧ್ರ ಪ್ರದೇಶದ ಆಟಗಾರ ಚಾಂಪಿಯನ್ ಆಗಿದ್ದರು.

24 ವರ್ಷ ವಯಸ್ಸಿನ ಕಾರ್ತಿಕ್, ಸೂರ್ಯಶೇಖರ ಗಂಗೂಲಿ ಮತ್ತು ರೈಲ್ವೇಸ್‌ನ ನೀಲಾಶ್ ಸಹಾ ಅವರು 11 ಸುತ್ತುಗಳ ನಂತರ ತಲಾ 9 ಪಾಯಿಂಟ್ಸ್ ಸಂಗ್ರಹಿಸಿದ್ದರು. ಆದರೆ ಟೈಬ್ರೇಕ್ ಆಧಾರದಲ್ಲಿ ಕ್ರಮವಾಗಿ ಮೊದಲ ಮೂರು ಸ್ಥಾನಗಳನ್ನು ಪಡೆದರು.ಕಾರ್ತಿಕ್ ₹6ಲಕ್ಷ ನಗದು ಬಹುಮಾನ ಪಡೆದರೆ, ಗಂಗೂಲಿ ಮತ್ತು ಐಎಂ ನೀಲಾಶ್ ಕ್ರಮವಾಗಿ ₹5ಲಕ್ಷ, ಮತ್ತು ₹4 ಲಕ್ಷ ನಗದು ಬಹುಮಾನ ಜೇಬಿಗಿಳಿಸಿದರು.

ಸ್ನೂಕರ್: ಕ್ರಿಸ್ಟಿಯನ್ ರಿಕ್ಟರ್‌ಗೆ ಕಿರೀಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜರ್ಮನಿಯ ಕ್ರಿಸ್ಟಿಯನ್ ರಿಕ್ಟರ್ ಅವರು ಐಬಿಎಸ್‌ಎಫ್ ವಿಶ್ವ 17 ವರ್ಷದೊಳಗಿನವರ ಸ್ನೂಕರ್ ಚಾಂಪಿಯನ್‌ಷಿಪ್‌ನ ಕಿರೀಟ ಮುಡಿಗೇರಿಸಿಕೊಂಡರು.

ಕರ್ನಾಟಕ ರಾಜ್ಯ ಬಿಲಿಯಡ್ಸ್ ಸಂಸ್ಥೆಯಲ್ಲಿ ಮಂಗಳವಾರ ನಡೆದ ಫೈನಲ್‌ನಲ್ಲಿ 4-1ರಿಂದ (78 (44)-20, 71 (67)-22, 14-78, 68-16, 82-21) ಥಾಯ್ಲೆಂಡ್‌ನ ಲೊಮ್‌ನಾ ಇಸ್ಸಾರಂಗ್‌ಕುನ್ ಅವರನ್ನು ಸೋಲಿಸಿದರು.

ಮಹಿಳೆಯರ 21 ವರ್ಷದೊಳಗಿನವರ ವಿಭಾಗದ ಸೆಮಿಫೈನಲ್ ಪಂದ್ಯಗಳಲ್ಲಿ ಭಾರತದ ನತಾಶಾ ಚೇತನ್ 3-0ಯಿಂದ (62-57, 69 (31)-29, 56-50) ಹಾಂಗ್‌ಕಾಂಗ್‌ನ ಚಾನ್ ವಾಯ್ ಲಾಮ್ ಅವರನ್ನು ಸೋಲಿಸಿ ಫೈನಲ್ ಪ್ರವೇಶಿಸಿದರು.

ಮತ್ತೊಂದು ಪಂದ್ಯದಲ್ಲಿ ಥಾಯ್ಲೆಂಡ್‌ನ ನರುಚಾ ಫೀಮ್‌ಫುಲ್ 3-0ಯಿಂದ (76-17, 65-48 (34), 57-7) ಭಾರತದ ಆರ್.ಟಿ.ಮೋಹಿತಾ ಅವರನ್ನು ಹಿಮ್ಮೆಟ್ಟಿಸಿದರು.



ಪುರುಷರ 21 ವರ್ಷದೊಳಗಿನವರ ವಿಭಾಗದ ಪಂದ್ಯದಲ್ಲಿ ಭಾರತದ ರಾಹುಲ್ ವಿಲಿಯಮ್ಸ್ 3–0ಯಿಂದ (71-54, 79-67, 79-61)ಯಿಂದ ಸ್ವದೇಶದ ಜುಬಿನ್ ಜಹೀರ್ ಅವರನ್ನು ಸೋಲಿಸಿದರು.

ಭಾರತದ ರಣವೀರ್ ದುಗ್ಗಲ್ 3–1ರಿಂದ (65-7, 56-74 (67), 72-26,78-0) ಜರ್ಮನಿಯ ಪೌಲ್ ಆರ್ಥರ್ ಜೆರೋಚ್ ಅವರನ್ನು ಮಣಿಸಿದರು.

ಭಾರತದ ಶಾಮ್ ಅಲ್ವಿನ್ 3-2ರಿಂದ (57-49, 54-38, 25-71, 8-56, 45-25) ಒಮನ್‌ನ ಮುತಾಸಿಮ್ ಅಲ್ ಸಾದಿ ಅವರನ್ನು; ಭಾರತದ ಜಬೇಜ್ ನವೀನ್ ಕುಮಾರ್ 3-2ರಿಂದ (30-60, 85 (62)-0, 51-9, 52-56, 74-17) ಇರಾನ್‌ನ ಪರ್ಹಮ್ ಅವರನ್ನು ಮಣಿಸಿದರು.

ಪ್ಯಾರಾ ಕ್ರೀಡಾಪಟುಗಳ ಹಬ್ಬಕ್ಕೆ ಬೆಳಕಿನ ನಗರಿ ಪ್ಯಾರಿಸ್ ಸಜ್ಜು • ಭಾರತದ 84 ಮಂದಿ ಕಣಕ್ಕೆ

ದಾಖಲೆ ಪದಕಗಳ ನಿರೀಕ್ಷೆಯಲ್ಲಿ ಭಾರತ

ಪ್ಯಾರಿಸ್			
84 ಪ್ಯಾರಾಲಿಂಪಿಕ್ಸ್‌ನಲ್ಲಿ ಭಾಗವಹಿಸುತ್ತಿರುವ ಭಾರತದ ಕ್ರೀಡಾಪಟುಗಳು	**95** ಭಾರತ ತಂಡದಲ್ಲಿರುವ ಅಧಿಕಾರಿಗಳು, ವೈಯಕ್ತಿಕ ಕೋಚ್ ಮತ್ತು ನೆರವು ಸಿಬ್ಬಂದಿ	**12** ಭಾರತದ ಪ್ಯಾರಾ ಕ್ರೀಡಾಪಟುಗಳು ಸ್ಪರ್ಧಿಸುತ್ತಿರುವ ಕ್ರೀಡೆಗಳು	**4,400** ಪ್ಯಾರಾಲಿಂಪಿಕ್ಸ್‌ನಲ್ಲಿ ಭಾಗವಹಿಸಲಿರುವ ಒಟ್ಟು ಕ್ರೀಡಾಪಟುಗಳು (169 ದೇಶ)

ಟೋಕಿಯೊ			
19 ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತ ತಂಡ ಗೆದ್ದರುವ ಒಟ್ಟು ಪದಕಗಳು	**54** ನಾಲ್ಕು ವರ್ಷಗಳ ಹಿಂದೆ ಸ್ಪರ್ಧಿಸಿದ್ದ ಭಾರತದ ಒಟ್ಟು ಕ್ರೀಡಾಪಟುಗಳು	**9** ಭಾರತದ ಪ್ಯಾರಾ ಕ್ರೀಡಾಪಟುಗಳು ಸ್ಪರ್ಧಿಸಿದ್ದ ಕ್ರೀಡೆಗಳು	**4,403** ಕ್ರೀಡಾಕೂಟದಲ್ಲಿ ಭಾಗವಹಿಸಿದ್ದ ಒಟ್ಟು ಕ್ರೀಡಾಪಟುಗಳು (162 ದೇಶ)

ಪ್ಯಾರಿಸ್ (ಪಿಟಿಐ): ಪ್ಯಾರಾ ಕ್ರೀಡಾಪಟುಗಳ ವಿಶ್ವದ ಅತಿ ದೊಡ್ಡ ಹಬ್ಬಕ್ಕೆ ಫ್ರಾನ್ಸ್‌ನ ರಾಜಧಾನಿ ಸಜ್ಜಾಗಿದೆ. ಪ್ಯಾರಿಸ್‌ನಲ್ಲಿ ಬುಧವಾರ ಆರಂಭವಾಗುವ ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತದ 84 ಮಂದಿ ಪದಕದ ಕನಸಿನೊಂದಿಗೆ ಸ್ಪರ್ಧಾಕಣಕ್ಕೆ ಇಳಿಯಲು ತಯಾರಾಗಿದ್ದಾರೆ.

ಪ್ಯಾರಾಲಿಂಪಿಕ್ಸ್ ಇತಿಹಾಸದಲ್ಲಿ ಭಾರತದಿಂದ ಹಿಂದೆಂದೂ ಇಷ್ಟೊಂದು ಸಂಖ್ಯೆಯ ಕ್ರೀಡಾಪಟುಗಳು ಭಾಗವಹಿಸಿರಲಿಲ್ಲ. ಯುವ ಅಥ್ಲೀಟ್‌ಗಳೊಂದಿಗೆ ಅನುಭವಿಗಳ ಸಮ್ಮಿಶ್ರಣದ ತಂಡವು 'ಬೆಳಕಿನ ನಗರಿ'ಯಲ್ಲಿ ಪದಕಗಳಿಕೆಯಲ್ಲಿ ದಾಖಲೆ ಬರೆಯುವ ಹುಮ್ಮಸ್ಸಿನಲ್ಲಿದೆ.

2020ರ ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತ ತಂಡವು ಐದು ಚಿನ್ನ ಸೇರಿದಂತೆ 19 ಪದಕಗಳನ್ನು ಗೆದ್ದಿತ್ತು. ಪದಕ ಪಟ್ಟಿಯಲ್ಲಿ 24ನೇ ಸ್ಥಾನ ಪಡೆದಿತ್ತು. ಇದು ಭಾರತದ ಈವರೆಗಿನ ಸರ್ವಶ್ರೇಷ್ಠ ಸಾಧನೆಯಾಗಿದೆ. ಆದರೆ, ಈ ಬಾರಿ 25 ಪದಕಗಳ ಗುರಿಯನ್ನು ಭಾರತ ಹೊಂದಿದೆ. ಅದರಲ್ಲಿ ಎರಡಂಕಿ ಸಂಖ್ಯೆಯ ಚಿನ್ನದ ಪದಕ ವಿಶ್ವಾಸವನ್ನು ಹೊಂದಲಾಗಿದೆ.

ಏಷ್ಯನ್ ಕ್ರೀಡಾಕೂಟ ಮತ್ತು ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಪ್ಯಾರಾ ಕ್ರೀಡಾಪಟುಗಳ ಅಸಾಧಾರಣ ಪ್ರದರ್ಶನವು ಸಹಜವಾಗಿ ಪ್ಯಾರಾಲಿಂಪಿಕ್ಸ್‌ನಲ್ಲಿ ಪದಕಗಳ ನಿರೀಕ್ಷೆಯನ್ನು ಹೆಚ್ಚಿಸಿದೆ. ಚೀನಾದ ಹಾಂಗ್‌ಝೌನಲ್ಲಿ ಕಳೆದ ವರ್ಷ ನಡೆದ

ಭಾರತದ ಪ್ಯಾರಾ ಶೂಟರ್ ಅವನಿ ಲೇಖರಾ –ಪಿಟಿಐ ಚಿತ್ರ

ಏಷ್ಯನ್ ಗೇಮ್ಸ್‌ನಲ್ಲಿ ಭಾರತವು 29 ಚಿನ್ನ ಸೇರಿದಂತೆ ದಾಖಲೆಯ 111 ಪದಕಗಳನ್ನು ಗೆದ್ದಿತ್ತು. ಮೇ ತಿಂಗಳಿನಲ್ಲಿ ನಡೆದ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಅರ್ಧ ಡಜನ್ ಚಿನ್ನ ಸೇರಿದಂತೆ 17 ಪದಕಗಳನ್ನು ಗಳಿಸಿ, ಒಟ್ಟಾರೆ ಅಂಕಪಟ್ಟಿಯಲ್ಲಿ ಆರನೇ ಸ್ಥಾನ ಗಳಿಸಿತ್ತು.

ಜಾವೆಲಿನ್ ಥ್ರೋನಲ್ಲಿ ವಿಶ್ವದಾಖಲೆ ಹೊಂದಿರುವ ಸುಮಿತ್ ಅಂಟಿಲ್ (ಎಫ್64) ಮತ್ತು ರೈಫಲ್ ಶೂಟರ್ ಅವನಿ ಲೇಖರಾ (10ಮೀ ಏರ್ ರೈಫಲ್ ಸ್ಟ್ಯಾಂಡಿಂಗ್ ಎಸ್‌ಎಚ್1) ಅವರಂತಹ ತಾರೆಗಳನ್ನು ಸೇರಿದಂತೆ ಏಷ್ಯನ್ ಗೇಮ್ಸ್‌ನಲ್ಲಿ ಪದಕ ವಿಜೇತರು ಪ್ಯಾರಾಲಿಂಪಿಕ್ಸ್ ತಂಡದಲ್ಲಿದ್ದಾರೆ. ಶೀತಲ್ ದೇವಿ (ಪ್ಯಾರಾ ಆರ್ಚರಿ), ಹೊಕಾಟೊ ಸೆಮಾ (ಶಾಟ್‌ಪಟ್) ಮತ್ತು ನಾರಾಯಣ ಕೊಂಗನಪಲ್ಲೆ (ರೋವರ್) ಅವರ ಮೇಲೆ ನಿರೀಕ್ಷೆ ಹೆಚ್ಚಿದೆ.

ಭಾರತವು ಈ ಬಾರಿ ಒಟ್ಟು 12 ಕ್ರೀಡೆಗಳಲ್ಲಿ ಸ್ಪರ್ಧಿಸುತ್ತಿದೆ. ಟೋಕಿಯೊದಲ್ಲಿ 54 ಸದಸ್ಯರ ತಂಡವು ಒಂಬತ್ತು ಕ್ರೀಡೆಗಳಲ್ಲಿ ಮಾತ್ರ ಸ್ಪರ್ಧಿಸಿತ್ತು. ಟೋಕಿಯೊದಲ್ಲಿ ಚಿನ್ನ ಗೆದ್ದ ಶೂಟರ್ ಮನೀಶ್ ನರ್ವಾಲ್ ಮತ್ತು ಬ್ಯಾಡ್ಮಿಂಟನ್ ತಾರೆ ಕೃಷ್ಣಾ ನಗಾರ್ ಕೂಡ ತಂಡದಲ್ಲಿದ್ದು, ಚಾಂಪಿಯನ್ ಪಟ್ಟವನ್ನು ಉಳಿಸಿಕೊಳ್ಳಲು ಹೋರಾಟ ನಡೆಸಲಿದ್ದಾರೆ.

17 ವರ್ಷದವನಾಗಿದ್ದಾಗ ಅಪಘಾತಕ್ಕೀಡಾಗಿ ಎಡಗಾಲು ತುಂಡಾಗಿದ್ದ 26 ವರ್ಷ ವಯಸ್ಸಿನ ಅಂಟಿಲ್ ಟೋಕಿಯೊದಲ್ಲಿ ಮತ್ತು ಹಾಂಗ್‌ಝೌನಲ್ಲಿ ಚಾಂಪಿಯನ್ ಆಗಿದ್ದರು. ಅಲ್ಲದೆ, ಕಳೆದ ಮೇನಲ್ಲಿ ನಡೆದ ಪ್ಯಾರಾ ವಿಶ್ವ ಚಾಂಪಿಯನ್‌ಷಿಪ್‌ನಲ್ಲೂ ಚಿನ್ನ ಗೆದ್ದಿದ್ದರು. 73.29 ಮೀಟರ್ ದೂರ ಜಾವೆಲಿನ್ ಎಸೆದು ವಿಶ್ವದಾಖಲೆ ಹೊಂದಿರುವ ಅವರು ಟೂರ್ನಿಯಲ್ಲಿ 75 ಮೀಟರ್ ಗುರಿಯನ್ನು ದಾಟುವ ಪ್ರಯತ್ನದಲ್ಲಿದ್ದಾರೆ.

ಟೋಕಿಯೊದಲ್ಲಿ ಒಂದು ಚಿನ್ನ ಮತ್ತು ಕಂಚಿನೊಂದಿಗೆ ಅತ್ಯುತ್ತಮ ಪ್ರದರ್ಶನ ನೀಡಿದ್ದ 22 ವರ್ಷ ವಯಸ್ಸಿನ ಶೂಟರ್ ಲೇಖರಾ ಈ ಬಾರಿಯೂ ನಿಖರ ಗುರಿಯಿಡುವ ಛಲದಲ್ಲಿದ್ದಾರೆ. ಪ್ಯಾರಾಲಿಂಪಿಕ್ಸ್‌ನ ಒಂದೇ ಕೂಟದಲ್ಲಿ ಜೋಡಿ ಪದಕಗಳನ್ನು ಗೆದ್ದ ಮೊದಲ ಭಾರತದ ಮಹಿಳೆ ಎಂಬ ಹಿರಿಮೆಗೆ ಅವರು ಪಾತ್ರರಾಗಿದ್ದರು.

ಫೆಬ್ರುವರಿಯಲ್ಲಿ ಥಾಯ್ಲೆಂಡ್‌ನಲ್ಲಿ ನಡೆದ ವಿಶ್ವ ಪ್ಯಾರಾ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದ ಕೃಷ್ಣಾ ನಗರ್ (ಪುರುಷರ ಸಿಂಗಲ್ಸ್ ಎಸ್‌ಎಚ್ 6), ಟೋಕಿಯೊದಲ್ಲಿ ಬೆಳ್ಳಿ ಗೆದ್ದ ಬ್ಯಾಡ್ಮಿಂಟನ್‌ಪಟು, ಕನ್ನಡಿಗ ಸುಹಾಸ್ ಯತಿರಾಜ್ (ಪುರುಷರ ಸಿಂಗಲ್ಸ್ ಎಸ್‌ಎಲ್ 4 ಮತ್ತು ಮಿಶ್ರ ಡಬಲ್ಸ್ ಎಸ್‌ಎಲ್ 3-ಎಸ್‌ಯು5) ಅವರೂ ಉತ್ತಮ ಪ್ರದರ್ಶನದ ವಿಶ್ವಾಸದಲ್ಲಿದ್ದಾರೆ.

ಕೈಗಳಿಲ್ಲದೆ ಕಾಲುಗಳಲ್ಲಿ ಬಿಲ್ಲುಗಳನ್ನು ಪ್ರಯೋಗ ಮಾಡುವ 17 ವರ್ಷ ವಯಸ್ಸಿನ ಪ್ಯಾರಾ ಆರ್ಚರಿಪಟು ಶೀತಲ್ ಅವರು ಏಷ್ಯನ್ ಪ್ಯಾರಾ ಗೇಮ್ಸ್‌ನಲ್ಲಿ ದಾಖಲೆ ಮೂರು ಪದಕಗಳನ್ನು ಗೆದ್ದಿದ್ದರು. ಮಹಿಳೆಯರ ವೈಯಕ್ತಿಕ ಕಾಂಪೌಂಡ್ ಮತ್ತು ಮಿಶ್ರ ಡಬಲ್ಸ್‌ನಲ್ಲಿ ಚಿನ್ನ ಗೆದ್ದರೆ, ಮಹಿಳೆಯರ ಡಬಲ್ಸ್‌ನಲ್ಲಿ ಬೆಳ್ಳಿ ಜಯಿಸಿದ್ದರು. ಅವರ ಮೇಲೆಯೂ ನಿರೀಕ್ಷೆಯ ಭಾರ ಹೆಚ್ಚಿದೆ.

ಧ್ವಜಧಾರಿಗಳು: ಬುಧವಾರ ನಡೆಯುವ ಉದ್ಘಾಟನಾ ಸಮಾರಂಭದಲ್ಲಿ ಸುಮಿತ್ ಅಂಟಿಲ್ ಮತ್ತು ಏಷ್ಯನ್ ಪ್ಯಾರಾ ಕ್ರೀಡಾಕೂಟದ ಎಫ್34 ವಿಭಾಗದಲ್ಲಿ ಬೆಳ್ಳಿ ಗೆದ್ದ ಶಾಟ್‌ಪುಟ್ ಅಥ್ಲೀಟ್ ಭಾಗ್ಯಶ್ರೀ ಜಾಧವ್ ಭಾರತದ ಧ್ವಜಧಾರಿಯಾಗಲಿದ್ದಾರೆ. ಸೆಪ್ಟೆಂಬರ್ 8ರಂದು ಸ್ಟೇಡ್ ಡಿ ಫ್ರಾನ್ಸ್‌ನಲ್ಲಿ ಸಮಾರೋಪ ನಡೆಯಲಿದೆ.

549 ಪದಕಗಳಿಗೆ ಸ್ಪರ್ಧೆ: 11 ದಿನ ನಡೆಯುವ ಪ್ಯಾರಾಲಿಂಪಿಕ್ಸ್‌ನಲ್ಲಿ 169 ದೇಶಗಳಿಂದ 4400ಕ್ಕೂ ಅಧಿಕ ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ. 22 ಕ್ರೀಡೆಗಳಲ್ಲಿ ಒಟ್ಟು 549 ಪದಕಗಳಿಗಾಗಿ ಸ್ಪರ್ಧೆ ನಡೆಯಲಿದೆ. ಸ್ಕ್ವಾರ್ ಪ್ಲೇಸ್ ಡೆ ಲಾ ಕಾಂಕ್ರೇರ್ಡ್‌ನಲ್ಲಿ ಉದ್ಘಾಟನಾ ಸಮಾರಂಭ ನಡೆಯಲಿದೆ.

ಆಯ್ಕೆಯಲ್ಲಿ ಅನುಭವಕ್ಕೆ ಆದ್ಯತೆ

ಟಿ20 ವಿಶ್ವಕಪ್‌ಗೆ ಭಾರತ ತಂಡ: ಹರ್ಮನ್‌ಪ್ರೀತ್ ನಾಯಕಿ

ನವದೆಹಲಿ (ಪಿಟಿಐ): ಮಹಿಳಾ ಟಿ20 ವಿಶ್ವಕಪ್ ಟೂರ್ನಿಗೆ ಹರ್ಮನ್‌ಪ್ರೀತ್ ಕೌರ್ ನಾಯಕತ್ವದಲ್ಲಿ ಅನುಭವಿ ಆಟಗಾರ್ತಿಯರ ಭಾರತ ತಂಡವನ್ನು ಮಂಗಳವಾರ ಆಯ್ಕೆ ಮಾಡಲಾಗಿದೆ. ಈ ತಂಡ ಮೊದಲ ಸಲ ಐಸಿಸಿ ಟ್ರೋಫಿಯನ್ನು ಗೆಲ್ಲಿಸಿಕೊಡಬಹುದೆಂಬ ವಿಶ್ವಾಸವನ್ನು ಆಯ್ಕೆ ಸಮಿತಿ ಹೊಂದಿದೆ.

ಶ್ರೇಯಾಂಕಾ ಪಾಟೀಲ

ಉಮಾ ಚೆಟ್ರಿ ಅವರನ್ನುಳಿದು, ಜುಲೈನಲ್ಲಿ ನಡೆದ ಏಷ್ಯಾ ಕಪ್‌ನಲ್ಲಿ ಆಡಿದ ತಂಡವನ್ನೇ ವಿಶ್ವಕಪ್‌ಗೂ ಉಳಿಸಿಕೊಳ್ಳಲಾಗಿದೆ. ವಿಶ್ವಕಪ್ ಟೂರ್ನಿ ಅಕ್ಟೋಬರ್ 3ರಿಂದ ಯುಎಇನಲ್ಲಿ ನಡೆಯಲಿದೆ.

ವಿದ್ಯಾರ್ಥಿ ಚಳವಳಿಯಿಂದ ಬಾಂಗ್ಲಾ ದೇಶದಲ್ಲಿ ಅಶಾಂತಿಯ ವಾತಾವರಣ ತಲೆದೋರಿದ ಕಾರಣ ವಿಶ್ವಕಪ್ ಆತಿಥ್ಯವನ್ನು ಆ ದೇಶದ ಬದಲು ಯುಎಇಗೆ ಸ್ಥಳಾಂತರಿಸಲಾಗಿತ್ತು.

ಫಿಟ್ನೆಸ್ ಷರತ್ತಿಗೆ ಒಳಪಟ್ಟು, ಕರ್ನಾಟಕದ ಸ್ಪಿನ್ನರ್ ಶ್ರೇಯಾಂಕಾ ಪಾಟೀಲ ಮತ್ತು ಅಗ್ರ ಕ್ರಮಾಂಕದ ಬ್ಯಾಟರ್ ಯಷ್ತಿಕಾ ಭಾಟಿಯಾ ಅವರನ್ನು ತಂಡಕ್ಕೆ ಸೇರ್ಪಡೆ ಮಾಡಿಕೊಳ್ಳಲಾಗಿದೆ. ಏಷ್ಯಾ ಕಪ್ ವೇಳೆ ಪಾಕಿಸ್ತಾನ ವಿರುದ್ಧ ಪಂದ್ಯದಲ್ಲಿ ಶ್ರೇಯಾಂಕಾ ಅವರು ಬೆರಳಿನ ಮೂಳೆ ಮುರಿತಕ್ಕೆ ಒಳಗಾದರೆ, ಭಾಟಿಯಾ ಅವರು ಮೊಣಕಾಲಿನ ನೋವಿನಿಂದ ಚೇತರಿಸಿಕೊಳ್ಳುತ್ತಿದ್ದಾರೆ.

'ಈ ಬಾರಿ ಫೈನಲ್ ಗೆಲ್ಲುವ ವಿಶ್ವಾಸ'



ನವದೆಹಲಿ: ಭಾರತ ಈ ಬಾರಿ ಐಸಿಸಿ ಟಿ20 ವಿಶ್ವಕಪ್ ಗೆಲ್ಲುವ ಮೂಲಕ ಮೊದಲ ಜಾಗತಿಕ ಮಟ್ಟದ ಟೂರ್ನಿಯಲ್ಲಿ ಚಾಂಪಿಯನ್ ಕಿರೀಟ ಧರಿಸಲಿದೆ ಎಂಬ ವಿಶ್ವಾಸವನ್ನು ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ವ್ಯಕ್ತಪಡಿಸಿದರು.

ಯುಎಇಯ ಹವಾಮಾನ ತಂಡಕ್ಕೆ ಅನುಕೂಲವಾಗಲಿದೆ ಎಂಬ ಅನಿಸಿಕೆ ಅವರದು.

'ವಿಶ್ವಕಪ್‌ನಂತಹ ದೊಡ್ಡ ಟೂರ್ನಿಯಲ್ಲಿ ಆಡುವಾಗ ನಾವು ಉತ್ತಮ ಸಾಧನೆ ತೋರಲು ಬಯಸುತ್ತೇವೆ. ಈ ಹಿಂದೆಯೂ ನಾವು ಚೆನ್ನಾಗಿಯೇ ಆಡಿದ್ದೇವೆ. ಈ ಬಾರಿ ಫೈನಲ್ 'ಗುಮ್ಮ' ತೊಡೆದುಹಾಕುವ ವಿಶ್ವಾಸವಿದೆ' ಎಂದು 35 ವರ್ಷ ವಯಸ್ಸಿನ ಆಟಗಾರ್ತಿ ಪಿಟಿಐ ವಿಡಿಯೋಸ್‌ಗೆ ತಿಳಿಸಿದರು.

ಎರಡು ಅಭ್ಯಾಸ ಪಂದ್ಯ: ಭಾರತ ತಂಡ ದುಬೈನಲ್ಲಿ ನಡೆಯಲಿರುವ ಟಿ20 ಮಹಿಳಾ ವಿಶ್ವಕಪ್‌ಗೆ ಮೊದಲು ವೆಸ್ಟ್ ಇಂಡೀಸ್ ಮತ್ತು ದಕ್ಷಿಣ ಆಫ್ರಿಕಾ ವಿರುದ್ಧ ಅಭ್ಯಾಸ ಪಂದ್ಯಗಳನ್ನು ಆಡಲಿದೆ.

ಸೆಪ್ಟೆಂಬರ್ 29 ರಂದು ಹರ್ಮನ್‌ಪ್ರೀತ್ ಬಳಗ, ವೆಸ್ಟ್ ಇಂಡೀಸ್ ಎದುರು ಆಡಲಿದೆ. ಅಕ್ಟೋಬರ್ 1ರಂದು ದಕ್ಷಿಣ ಆಫ್ರಿಕಾವನ್ನು ಎದುರಿಸಲಿದೆ ಎಂದು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಮಂಗಳವಾರ ಪ್ರಕಟಿಸಿದೆ.

'ಎ' ಗುಂಪು	ಭಾರತದ ಪಂದ್ಯಗಳು
ಅ. 4	ನ್ಯೂಜಿಲೆಂಡ್ ವಿರುದ್ಧ
ಅ. 6	ಪಾಕಿಸ್ತಾನ ವಿರುದ್ಧ
ಅ. 9	ಶ್ರೀಲಂಕಾ ವಿರುದ್ಧ
ಅ. 13	ಆಸ್ಟ್ರೇಲಿಯಾ ವಿರುದ್ಧ

2018ರಲ್ಲಿ ಕೌರ್ ಮೊದಲ ಬಾರಿ ಭಾರತ ತಂಡದ ನಾಯಕಿಯಾಗಿದ್ದರು.

ಭಾರತಕ್ಕೆ ಇರುವ ದೊಡ್ಡ ಸವಾಲು ಎಂದರೆ ಆಸ್ಟ್ರೇಲಿಯಾವನ್ನು ಸೋಲಿಸುವುದು. ಈ ಎರಡೂ ತಂಡಗಳು ಒಂದೇ ಗುಂಪಿನಲ್ಲಿವೆ. ಇದೇ ಗುಂಪಿನಲ್ಲಿ ಪಾಕಿಸ್ತಾನ ಮತ್ತು ಏಷ್ಯಾ ಕಪ್ ಚಾಂಪಿಯನ್ ಶ್ರೀಲಂಕಾ ಕೂಡ ಇವೆ. ಅಕ್ಟೋಬರ್ 4ರಂದು ನ್ಯೂಜಿಲೆಂಡ್ ವಿರುದ್ಧ ಆಡುವ ಮೂಲಕ ತನ್ನ ಮೊದಲ ಪಂದ್ಯವನ್ನು ಅಭಿಯಾನವನ್ನು ಆರಂಭಿಸಲಿದೆ.

ಭಾರತ ಮಹಿಳಾ ತಂಡ: ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂದಾನ (ಉಪನಾಯಕಿ), ಶಫಾಲಿ ವರ್ಮಾ, ದೀಪ್ತಿ ಶರ್ಮಾ, ಜೆಮಿಮಾ ರಾಡ್ರಿಗಸ್, ರಿಚಾ ಘೋಷ್ (ವಿಕೆಟ್ ಕೀಪರ್), ಯಷ್ತಿಕಾ ಭಾಟಿಯಾ (ವಿಕೆಟ್ ಕೀಪರ್), ಪೂಜಾ ವಸ್ತ್ರಾಕರ್, ಅರುಂಧತಿ ರೆಡ್ಡಿ, ರೇಣುಕಾ ಸಿಂಗ್ ಠಾಕೂರ್, ದಯಾಳನ್ ಹೇಮಲತಾ, ಆಶಾ ಶೋಭನಾ, ರಾಧಾ ಯಾದವ್, ಶ್ರೇಯಾಂಕಾ ಪಾಟೀಲ, ಸಂಜನಾ ಸಜೀವನ್.

ಐಸಿಸಿ ಅಧ್ಯಕ್ಷರಾಗಿ ಜಯ್ ಶಾ ಅವಿರೋಧ ಆಯ್ಕೆ

ದುಬೈ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಕಾರ್ಯದರ್ಶಿ ಜಯ್ ಶಾ ಅವರು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ)ನ ಮುಂದಿನ ಅಧ್ಯಕ್ಷರಾಗಿ ಡಿಸೆಂಬರ್ 1ರಂದು ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಅವರು ವಿಶ್ವ ಕ್ರಿಕೆಟ್ ಆಡಳಿತದ ಈ ಮೇರು ಹುದ್ದೆಗೆ ಮಂಗಳವಾರ ಅವಿರೋಧವಾಗಿ ಆಯ್ಕೆಯಾದರು.

35 ವರ್ಷ ವಯಸ್ಸಿನ ಶಾ ಅವರು 2019ರಿಂದ ಬಿಸಿಸಿಐ ಕಾರ್ಯದರ್ಶಿಯಾಗಿದ್ದಾರೆ. ಅವರು ನ್ಯೂಜಿಲೆಂಡ್‌ನ ಗ್ರೆಗ್ ಬಾರ್ಕ್ಲೆ ಅವರ ಸ್ಥಾನ ತುಂಬಲಿದ್ದಾರೆ. 62 ವರ್ಷ ವಯಸ್ಸಿನ ಬಾರ್ಕ್ಲೆ ಎರಡು ಅವಧಿಗೆ ಅಧ್ಯಕ್ಷರಾಗಿದ್ದರು. ಈ ಹುದ್ದೆಯ ಅವಧಿ ಎರಡು ವರ್ಷ.

ಐಸಿಸಿ ಅಧ್ಯಕ್ಷ ಸ್ಥಾನಕ್ಕೆ ಏರಿದ ಭಾರತದ ಐದನೇ

ಮತ್ತು ಅತಿ ಕಿರಿಯ ಆಡಳಿತಗಾರ ಎಂಬ ಹಿರಿಮೆಯೂ ಅವರದಾಗಲಿದೆ. ಈ ಹಿಂದೆ ದಿ.ಜಗಮೋಹನ್ ದಾಲ್ಮಿಯಾ (1997 – 2000), ಶರದ್ ಪವಾರ್ (2010–2012), ಎನ್.ಶ್ರೀನಿವಾಸನ್ (2014–2015) ಮತ್ತು ಶಶಾಂಕ್ ಮನೋಹರ್ (2015–2020) ಅವರು ಈ ಪ್ರತಿಷ್ಠಿತ ಹುದ್ದೆ ನಿರ್ವಹಿಸಿದ್ದರು.

ಕೇಂದ್ರ ಗೃಹ ಸಚಿವ ಅಮಿತ್ ಶಾ ಪುತ್ರರಾಗಿರುವ ಜಯ್ ಶಾ ಅವರು ಮುಂದಿನ ತಿಂಗಳ ಕೊನೆಯ ವಾರ ಅಥವಾ ಅಕ್ಟೋಬರ್‌ನಲ್ಲಿ ನಡೆಯುವ ಬಿಸಿಸಿಐ ವಾರ್ಷಿಕ ಮಹಾಸಭೆಯಲ್ಲಿ ಕಾರ್ಯದರ್ಶಿ ಸ್ಥಾನ ತ್ಯಜಿಸುವ ಸಾಧ್ಯತೆಯಿದೆ. ಅವರು ಹಾಲಿ ಏಷ್ಯನ್ ಕ್ರಿಕೆಟ್ ಸಮಿತಿ ಮುಖ್ಯಸ್ಥ ಕೂಡ.

ಕ್ರಿಕೆಟ್ ಆಟವನ್ನು ಜಾಗತಿಕ ಮಟ್ಟದಲ್ಲಿ ವಿಸ್ತರಿಸುವ ಬದ್ಧತೆಯನ್ನು ಅವರು ಈ ವೇಳೆ ಒತ್ತಿಹೇಳಿದರು. 'ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಅಧ್ಯಕ್ಷನಾಗಿ ಆಯ್ಕೆಯಾಗಿರುವುದು ನನ್ನನ್ನು ವಿನೀತನನ್ನಾಗಿ ಮಾಡಿದೆ' ಎಂದು ಅವರು ಐಸಿಸಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

'ಕ್ರಿಕೆಟ್ ಆಟವನ್ನು ವಿಶ್ವದಾದ್ಯಂತ ಬೆಳೆಸಲು ಸಾಧ್ಯವಾಗುವಂತೆ ಐಸಿಸಿ ತಂಡದೊಂದಿಗೆ ಮತ್ತು ನಮ್ಮ ಸದಸ್ಯ ರಾಷ್ಟ್ರಗಳ ಜೊತೆ ನಿಕಟವಾಗಿ ಕಾರ್ಯ ನಿರ್ವಹಿಸಲು ನಾನು ಬದ್ಧನಾಗಿದ್ದೇನೆ. ಕ್ರಿಕೆಟ್ ಆಟ ಹಿಂದೆಂಗಿಂತ ಹೆಚ್ಚು ಜನಪ್ರಿಯವಾಗಬೇಕು' ಎಂದು ಹೇಳಿಕೆ ತಿಳಿಸಿದೆ.

ನಾಮಪತ್ರ ಸಲ್ಲಿಸಲು ಮಂಗಳವಾರ ಕೊನೆಯ ದಿನವಾಗಿದ್ದು, ಶಾ ಒಬ್ಬರೇ ಕಣದಲ್ಲಿದ್ದರು. ಶಾ ಅವರ ಮುಂದಿರುವ ತಕ್ಷಣದ ಸವಾಲು ಪಾಕಿಸ್ತಾನದಲ್ಲಿ ಐಸಿಸಿ ಚಾಂಪಿಯನ್ಸ್ ಟ್ರೋಫಿ ನಡೆಸುವುದು. ಅವರು ಹೈಬ್ರಿಡ್ ಮಾದರಿಯ ಸಮರ್ಥಕ ಕೂಡ. ಏಷ್ಯಾ ಕಪ್‌ನಂತೆ ಚಾಂಪಿಯನ್ಸ್ ಟ್ರೋಫಿ ಕೂಡ ಅದೇ ಮಾದರಿಯಲ್ಲಿ ನಡೆಯಬಹುದು ಎನ್ನಲಾಗುತ್ತಿದೆ.

ದುಲೀಪ್ ಟ್ರೋಫಿ: ಮೊದಲ ಪಂದ್ಯಕ್ಕೆ ಸಿರಾಜ್ ಅಲಭ್ಯ

ಮುಂಬೈ (ಪಿಟಿಐ): ಭಾರತ ತಂಡದ ವೇಗದ ಬೌಲರ್ ಮೊಹಮ್ಮದ್ ಸಿರಾಜ್ ಅವರು ಅನಾರೋಗ್ಯದ ಕಾರಣ ದುಲೀಪ್ ಟ್ರೋಫಿಯ ಮೊದಲ ಸುತ್ತಿನ ಪಂದ್ಯಗಳಿಗೆ ಅಲಭ್ಯರಾಗಿದ್ದಾರೆ. ಬಿಸಿಸಿಐ ರಾಷ್ಟ್ರೀಯ ಆಯ್ಕೆಸಮಿತಿಯು ಅನುಭವಿ ಆಲ್‌ರೌಂಡರ್ ರವೀಂದ್ರ ಜಡೇಜ ಅವರ ವಿಶ್ರಾಂತಿಯ ಅವಧಿಯನ್ನು ವಿಸ್ತರಿಸಿದೆ.

ಹೀಗಾಗಿ ಭಾಗವಹಿಸುವ ತಂಡಗಳಲ್ಲಿ ಮಂಗಳವಾರ ಅಲ್ಪ ಬದಲಾವಣೆಗಳನ್ನು ಮಾಡಲಾಗಿದೆ. ಸೆಪ್ಟೆಂಬರ್ 5 ರಿಂದ 8ರವರೆಗೆ ಮೊದಲ ಸುತ್ತಿನಲ್ಲಿ ಎರಡು ಪಂದ್ಯಗಳು ನಡೆಯಲಿವೆ. ಭಾರತ 'ಎ' ಮತ್ತು ಭಾರತ 'ಬಿ' ನಡುವಣ ಪಂದ್ಯ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿದೆ. ಅನಂತಪುರದ ಗ್ರಾಮೀಣಾಭಿವೃದ್ಧಿ ಟ್ರಸ್ಟ್ ಕ್ರೀಡಾಂಗಣದಲ್ಲಿ ನಡೆಯುವ ಪಂದ್ಯದಲ್ಲಿ ಭಾರತ 'ಸಿ' ತಂಡವು, ಭಾರತ 'ಡಿ' ತಂಡವನ್ನು ಎದುರಿಸಲಿದೆ. ಸಿರಾಜ್ ಮತ್ತು ಉಮ್ರಾನ್ ಮಲಿಕ್ ಅವರು ಮೊದಲ ಸುತ್ತಿನಲ್ಲಿ ಆಡುತ್ತಿಲ್ಲ. ಅವರ ಬದಲು ನವದೀಪ್ ಸೈನಿ ಮತ್ತು ಗೌರವ್ ಯಾದವ್ ಅವಕಾಶ ಪಡೆದಿದ್ದಾರೆ. ಸೈನಿ ಭಾರತ 'ಬಿ' ತಂಡದಲ್ಲಿ ಮತ್ತು ಯಾದವ್, ಭಾರತ 'ಸಿ' ತಂಡದಲ್ಲಿ ಕ್ರಮವಾಗಿ ಸಿರಾಜ್ ಮತ್ತು ಉಮ್ರಾನ್ ಬದಲು ಆಡಲಿದ್ದಾರೆ ಎಂದು ಬಿಸಿಸಿಐ ಪ್ರಕಟಣೆಯಲ್ಲಿ ತಿಳಿಸಿದೆ.ಭಾರತ 'ಬಿ' ತಂಡದಲ್ಲಿದ್ದ ಜಡೇಜ ಅವರಿಗೆ ವಿಶ್ರಾಂತಿ ನೀಡಲಾಗಿದೆ.

ವಿಶ್ವ ಅಥ್ಲೆಟಿಕ್ಸ್: ಫೈನಲ್‌ಗೆ ಮಿಶ್ರ ರಿಲೆ ತಂಡ

ಲಿಮಾ (ಪಿಟಿಐ): ಜಯ್ ಕುಮಾರ್, ನೀರೂ ಪಾಠಕ್, ರಿಹಾನ್ ಚೌಧರಿ ಮತ್ತು ಸಾಂಡ್ರಾಮೋಳ್ ಸಾಬು ಅವರನ್ನೊಳಗೊಂಡ ಭಾರತದ 4x400 ಮೀ. ಮಿಶ್ರ ರಿಲೇ ತಂಡ, ವಿಶ್ವ 20 ವರ್ಷದೊಳಗಿನವರ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಮಂಗಳವಾರ ಫೈನಲ್ ತಲುಪಿದೆ.

ಕಣದಲ್ಲಿದ್ದ ಒಟ್ಟು 20 ತಂಡಗಳಲ್ಲಿ ಭಾರತ ತಂಡ ಮೂರನೇ ಸ್ಥಾನ ಪಡೆದು ಅಂತಿಮ ಹಂತಕ್ಕೆ ಅರ್ಹತೆ ಪಡೆಯಿತು. ತಂಡ 3ನಿ.22.54 ಸೆ.ಗಳಲ್ಲಿ ಗುರಿಲುಪಿತು. ಆಸ್ಟ್ರೇಲಿಯಾ ತಂಡ (3:21.10) ಮೊದಲ ಸ್ಥಾನ ಗಳಿಸಿದರೆ, ಪೋಲೆಂಡ್ ತಂಡ (3:21.92) ಎರಡನೇ ಸ್ಥಾನ ಗಳಿಸಿದೆ.

HONDA
Scooter ಅಂದ್ರೆ ACTIVA

HDFC BANK Credit Card
5% ಕ್ಯಾಶ್‌ಬ್ಯಾಕ್ ₹5000## ವರೆಗೆ

IDFC FIRST Bank
ಕಡಿಮೆ ಬಡ್ಡಿ ದರ @7.99%**
ಕಡಿಮೆ EMI ₹2351**

Smart KEY
Smart SAFE
Smart UNLOCK
Smart START
Smart FIND
With H-Smart Technology

ವೀಡಿಯೊ ಆನಂದಿಸಲು, QR ಕೋಡ್ ಸ್ಕ್ಯಾನ್ ಮಾಡಿ.
ACTIVA OVER 3.25 CRORE* HAPPY CUSTOMERS
ಡೀಲರ್ ವಿವರಗಳಿಗಾಗಿ QR ಕೋಡ್ ಸ್ಕ್ಯಾನ್ ಮಾಡಿ
ಹೆಚ್ಚಿನ ಮಾಹಿತಿಗಾಗಿ 7230032200 ಮಿಸ್ ಕಾಲ್ ನೀಡಿ
BOOK ONLINE NOW! www.honda2wheelersindia.com
CLICK BOOK RELAX

^ನಿಯಮ ಮತ್ತು ಷರತ್ತುಗಳು ಅನ್ವಯ. ##ಪೈನ್ ಲ್ಯಾಬ್ಸ್ ಮಶೀನ್‌ಗಳ ಮೂಲಕ HDFC ಬ್ಯಾಂಕ್ ಕ್ರೆಡಿಟ್ ಕಾರ್ಡ್‌ಗಳನ್ನು ಬಳಸಿ ಮಾಡಿದ EMI ವಹಿವಾಟುಗಳಿಗೆ ಮಾತ್ರ ಎಲ್ಲ Honda ಟೂ-ವೀಲರ್ ಮಾಡೆಲ್‌ಗಳ ಮೇಲೆ ಕ್ಯಾಶ್‌ಬ್ಯಾಕ್ ಕೊಡುಗೆ ಲಭ್ಯವಿರುತ್ತದೆ. ##ಗ್ರಾಹಕರು ರೂ. 5000 ವರೆಗೆ 5% ಇನ್‌ಸ್ಟಂಟ್ ಕ್ಯಾಶ್‌ಬ್ಯಾಕ್ ಅನ್ನು ಪಡೆಯಬಹುದಾಗಿದೆ. ##ಕೊಡುಗೆ ಅವಧಿಯಲ್ಲಿ ಪ್ರತಿ ಕಾರ್ಡ್/ಆರ್ಡರ್‌ಗೆ ಮಾಡಿದ ಒಂದು ವಹಿವಾಟಿನ ಮೇಲೆ ಮಾನ್ಯವಾಗಿದೆ. ##2024 ಆಗಸ್ಟ್ 31ರ ವರೆಗೆ ಕ್ಯಾಶ್‌ಬ್ಯಾಕ್ ಕೊಡುಗೆ ಮಾನ್ಯವಾಗಿದೆ. ##ಆಯ್ದ ಔಟ್‌ಲೆಟ್‌ಗಳಲ್ಲಿ ಮಾತ್ರ ಸ್ಕೀಮ್ ಲಭ್ಯವಿದೆ. **ಹಣಕಾಸು ಯೋಜನೆ ಮತ್ತು ಕ್ರೆಡಿಟ್ ಸೌಲಭ್ಯವು IDFC ಫಸ್ಟ್ ಬ್ಯಾಂಕ್‌ನ ("ಬ್ಯಾಂಕ್") ವಿವೇಚನೆಯ ಮೇರೆಗೆ ಸೀಮಿತ ಅವಧಿಗೆ ಮಾತ್ರ ಲಭ್ಯವಿದೆ. ಚಿತ್ರದಲ್ಲಿ ತೋರಿಸಿದ ಉತ್ಪನ್ನವು ಮಾರ್ಕೆಟ್‌ನಲ್ಲಿರುವ ನಿಜವಾದ ಉತ್ಪನ್ನಕ್ಕಿಂತ ವಿಭಿನ್ನವಾಗಿರಬಹುದು. ಚಿತ್ರದಲ್ಲಿ ತೋರಿಸಿದ ಅಕ್ಸೆಸರಿಗಳು ಪ್ರಮಾಣಿತ ಸಲಕರಣೆಯ ಭಾಗವಲ್ಲ. *ಮೂಲ: HMSI ಆಂತರಿಕ ಡೇಟಾ ಆಧಾರದಲ್ಲಿ 2001 ಜೂನ್ ಇಂದ 2024 ಜೂನ್‌ವರೆಗಿನ ಬ್ರ್ಯಾಂಡ್ Activaದ ಸಂಚಿತ ಮಾರಾಟ ಅಂಕಿಅಂಶ.

Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) – 122050, India; **Website:** www.honda2wheelersindia.com; **Customer Care:** customercare@honda.hmsi.in

Honda Exclusive Authorised Dealerships: Ananda Honda - **BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; Anekal Honda - **ANEKAL:** 080-27830234, 9880417779; City Honda - **ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397, 080-43333330; Haiku Honda - **DOMLUR:** 49656565, 9342432156; **INDIRANAGAR:** 9342432157; Dhruvdesh Honda - **MEKHRI CIRCLE:** 40500700, 9343968413; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; Planet Honda - **RAJAJINAGAR:** 08068898888, 9980927735; **PEENYA:** 08068898888, 9980927730; **SUNKADAKATTE:** 08068898888, 9980927728; **BASAWESHWAR NAGAR:** 08068898888, 9980927726; Raja Honda - **KORAMANGALA:** 08067329000,9035310055; Prime Honda - **VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; Silicon Honda - **RV ROAD:** 9844502222, 9844726973; **BANSHANKARI:** 9844502444, 8722279009; **R.R. NAGAR:** 9964388333, 9071175200; **MONOTYPE:** 7353744400, **JAYANAGAR:** 8722801626; Saphire Honda - **JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; VFM Honda - **KR PURAM:** 9071858885, 9071858881; **HENNUR ROAD:** 9108989817, 9108989818; Tansi Honda - **HOODI:** 7259030091, 9741410101; **MARTHAHALLI:** 7259030100, 7259030093; **VARTHUR RD:** 8105597877, 9686573013; **GUNJUR:** 9606450642, 9606450643; Turbo Honda - **DODDABALLAPURA:** 7022620885; **NELAMANAGALA:** 080-27722333, 7022008894; Wings Honda - **HOSKOTE:** 7676907272; **MALUR:** 7676155600; **TC PALYA:** 9590815959; Sri Kausthub Honda - **KOLAR:** 9900018515, 9606567111; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; Namma Honda - **CHIKKABALLAPUR:** 9606060610, 9611996114; **CHINTAMANI:** 9606060620, 9611996115; **BAGEPALLI:** 9611596112, 9611596110; Shankar Honda - **GOWRIBIDANUR:** 9900007422/33; **SIDLAGHATTA:** 9611596113; Century Honda - **TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; Shantinath Honda - **TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; Honey Honda - **PAVAGADA:** 9535941215; Annapoorna Honda - **MADHUGIRI:** 9886627429; Vignesh Honda - **TIPTUR:** 9886711161; **TURUVEKERE:** 9448214014; Sri Srinivasa Honda - **CHIKKANAYAKANAHALLI:** 8722522221; Prestige Honda - **RAMNAGARA:** 9606490030, 9606036040; **KANAKAPURA:** 9606036053, 9606036054; **CHANNAPATNA:** 9606490034, 9035717953; ART Honda - **BIDADI:** 9945966771, 9164871007; Springs Honda - **KENGERI:** 9513771114; Nideesh Honda - **DEVANAHALLI:** 9108871999, 9686608579; **VIJAYAPURA:** 9108871999, 7899870207.

For Bulk/Institutional enquiries, please write us at: institutionalsales@honda2wheelersindia.com